prajavani.net prajavani
ಮಂಗಳವಾರ, ಮಾರ್ಚ್ 17, 2026
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಬಲೆಂಕಾಗೆ ಕಿರೀಟ

ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ (ಬೆಲರೂಸ್) ಅವರು ಭಾನುವಾರ ಫೈನಲ್‌ನಲ್ಲಿ ಎಲೆನಾ ರಿಬಾಕಿನಾ ಅವರನ್ನು ಮಣಿಸಿ ಇಂಡಿಯನ್ಸ್ ವೆಲ್ಸ್ ಟೆನಿಸ್ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದರು



ಮಣ್ಣಿನ ಮಡಕೆ ವ್ಯಾಪಾರಿ

ಬೇಸಿಗೆ ಆರಂಭವಾಗಿದ್ದು, ತಣ್ಣನೆಯ ನೀರು ಕುಡಿಯಲು ಜನರು ಮಣ್ಣಿನ ಮಡಕೆ ಮೊರೆ ಹೋಗುತ್ತಿದ್ದಾರೆ. ಬೆಂಗಳೂರಿನ ಬೀದಿಯೊಂದರಲ್ಲಿ ಮಡಕೆ ವ್ಯಾಪಾರಿಯೊಬ್ಬರು ಸಾಗಿದರು...



ವಿವೇಕಾ ವಿದ್ಯಾ ಸಂಸ್ಥೆ (ರಿ.)
ಶ್ರೀ ಎಂ. ಶ್ರೀನಿವಾಸ್ ಎಜುಕೇಷನಲ್ ಅಂಡ್ ಚಾರಿಟೇಬಲ್ ಟ್ರಸ್ಟ್ (ರಿ.)

ಹನಕೆರೆ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ – 571404



2026–2027ನೇ ಸಾಲಿನ ಶಾಲಾ ದಾಖಲಾತಿ ಪ್ರಾರಂಭವಾಗಿದೆ.

ಎಂ. ಶ್ರೀನಿವಾಸ್ ಸಮೂಹ ಶಿಕ್ಷಣ ಸಂಸ್ಥೆಗಳು ಕನ್ನಡ ಮಾಧ್ಯಮ

ಎಂ ಶ್ರೀನಿವಾಸ್ ಮಕ್ಕಳ ಮನೆ
ಪೂರ್ವ ಪ್ರಾಥಮಿಕ (ಪ್ರಿಕೆಜಿ, ಎಲ್‌ಕೆಜಿ, ಯುಕೆಜಿ)

ವಿವೇಕ ಹಿರಿಯ ಪ್ರಾಥಮಿಕ ಶಾಲೆ
1 ರಿಂದ 7ನೇ ತರಗತಿ

ವಿವೇಕ ಪ್ರೌಢಶಾಲೆ
8 ರಿಂದ 10ನೇ ತರಗತಿ

ಎಂ ಶ್ರೀನಿವಾಸ್ ವಿದ್ಯಾರ್ಥಿ ನಿಲಯ
5 ರಿಂದ 10ನೇ ತರಗತಿ

M Srinivas international public school English medium
2026 - 27 Admission Open now

ನುರಿತ, ಉತ್ಸಾಹಿ ಮತ್ತು ಅನುಭವಿ ಬೋಧಕ ವರ್ಗ
ಕ್ರೀಡೆ ಮತ್ತು ಕಲೆಗಳ ಮೂಲ ಕೌಶಲ್ಯಗಳ ತರಬೇತಿ



ಸುಸಜ್ಜಿತ ಕ್ರೀಡಾಂಗಣ ಮತ್ತು ಗ್ರಂಥಾಲಯಗಳ ವ್ಯವಸ್ಥೆ
ವಿಶೇಷ ಕಾಳಜಿಯ ಮೂಲಕ ಮಕ್ಕಳ ಕಲಿಕೆಗೆ ಒತ್ತು



ಶಾಲಾ ವಾಹನ ಮತ್ತು ವಸತಿ ನಿಲಯ ಸೌಲಭ್ಯ
ಮಾಹೆವಾರು ನಿಯಮಿತ ಪೋಷಕರ ಸಭೆ ಆಯೋಜನೆ



* 1 ರಿಂದ 7 ನೇ ತರಗತಿ ಸರ್ಕಾರದ ಅನುದಾನಕ್ಕೆ ಒಳಪಟ್ಟಿದೆ. * ಉಚಿತ ಗುಣಾತ್ಮಕ ಶಿಕ್ಷಣ. * ಉಚಿತ ಪಠ್ಯಪುಸ್ತಕ ವಿತರಣೆ.
* ಕ್ಷೀರ ಭಾಗ್ಯ ಯೋಜನೆ * ಮಧ್ಯಾಹ್ನದ ಬಿಸಿ ಊಟ ವಿತರಣೆ. * ವಾರದ ಆರು ದಿನದಲ್ಲಿ ಪೌಷ್ಟಿಕಾಂಶ ಮೊಟ್ಟೆ/ಬಾಳೆಹಣ್ಣು ವಿತರಣೆ.

ಉಚಿತ ವಿದ್ಯಾಭ್ಯಾಸ ಕನ್ನಡ ಮಾಧ್ಯಮದವರಿಗೆ

ಐಟಿಐ ಕಾಲೇಜಿನಲ್ಲಿ ಪ್ರವೇಶ ಪ್ರಾರಂಭವಾಗಿದೆ! ಈಗಲೇ ವಿಚಾರಿಸಿ (SSLC ಉತ್ತೀರ್ಣರು ಅರ್ಹರು).

ನಾವು ಶಿಕ್ಷಕರನ್ನು ನೇಮಿಸಿಕೊಳ್ಳುತ್ತಿದ್ದೇವೆ (ಅರ್ಹತೆ TGT / PGT)

1 ರಿಂದ 7 ನೇ ತರಗತಿ: ಯಾವುದೇ ಪದವಿ, ಡಿ.ಎಡ್, ಬಿ.ಎಡ್

8 ರಿಂದ 10 ನೇ ತರಗತಿ: ಯಾವುದೇ ಪದವಿ, ಬಿ.ಎಡ್ ಜೊತೆಗೆ ಸ್ನಾತಕೋತ್ತರ ಪದವಿ

vvshs1997@gmail.com
ಹನಕೆರೆ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ - 571404
+91 96636 09416 / +91 98441 36279 / +91 91083 98531 / +91 73535 61231



prajavani.net | prajavani
ಮಂಗಳವಾರ, ಮಾರ್ಚ್ 17, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 76 | ಪುಟ 18
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 75,502 | ನಿಫ್ಟಿ 23,408 | ಚಿನ್ನ (Std. 10g) ₹1,63,950 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,69,800 (ಬೆಂಗಳೂರು)

ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಮಾರ್ಚ್ 18ರಿಂದ (ಬುಧವಾರ) ಆರಂಭವಾಗಲಿದ್ದು ಏಪ್ರಿಲ್ 2ರವರೆಗೆ ನಡೆಯಲಿದೆ.

ಒಟ್ಟು 9,02,889 ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿ ಕೊಂಡಿದ್ದು, 2,871 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ. ಪರೀಕ್ಷೆಯನ್ನು ಸುಗಮವಾಗಿ ನಡೆಸಲು ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು ಎಲ್ಲ ರೀತಿಯ ಸಿದ್ಧತೆ ಮಾಡಿಕೊಂಡಿದೆ. ಮುಂಜಾಗ್ರತಾ ಕ್ರಮವಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳ 200 ಮೀಟರ್ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 1.15ರವರೆಗೆ ಪರೀಕ್ಷೆ ನಡೆಯಲಿದೆ. ▸9

ಎತ್ತಿನಹೊಳೆಗೆ ಷರತ್ತುಬದ್ಧ ಅನುಮತಿ

ನವದೆಹಲಿ: ಎತ್ತಿನಹೊಳೆ ಯೋಜನೆಗೆ ಹಾಸನ ಹಾಗೂ ತುಮಕೂರು ಜಿಲ್ಲೆಗಳ 277 ಎಕರೆ (111 ಹೆಕ್ಟೇರ್) ಕಾಡು ಬಳಸಲು ಕೇಂದ್ರ ಪರಿಸರ ಸಚಿವಾಲಯದ ಅರಣ್ಯ ಸಲಹಾ ಸಮಿತಿ ಷರತ್ತುಬದ್ಧ ಅನುಮತಿ ನೀಡಿದೆ. ▸7

ಮಾತೃತ್ವ: 5 ವರ್ಷ ಇಚ್ಛಿಸಿದ ಶಾಲೆ

ವಿಧಾನಪರಿಷತ್‌ನಲ್ಲಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆರಿಗೆ ರಜೆ ನಂತರ ಕರ್ತವ್ಯಕ್ಕೆ ಮರಳುವ ಶಿಕ್ಷಕಿಯರು ಮಕ್ಕಳ ಪಾಲನೆಗಾಗಿ ತಾವು ಇಚ್ಛಿಸಿದ ಶಾಲೆಯಲ್ಲೇ ಐದು ವರ್ಷ ಕೆಲಸ ಮಾಡುವ ಅವಕಾಶವನ್ನು ಶಿಕ್ಷಣ ಇಲಾಖೆ ಕಲ್ಪಿಸಲಿದೆ.



ಮಧು ಬಂಗಾರಪ್ಪ

ಬಿಜೆಪಿಯ ವೈ.ಎಂ.ಸತೀಶ್ ಅವರು ವಿಧಾನಪರಿಷತ್‌ನಲ್ಲಿ ಸೋಮವಾರ ಕೇಳಿದ ಪ್ರಶ್ನೆಗೆ ಉತ್ತರಿಸಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಈ ವಿಷಯ ಘೋಷಿಸಿದರು.

'ಮಗುವಿನ ವಯಸ್ಸು ಐದು ವರ್ಷ ಪೂರ್ಣಗೊಳ್ಳುವವರೆಗೆ ಅದರ ಲಾಲನೆ–ಪಾಲನೆಗೆ ಹೆಚ್ಚಿನ ಸಮಯ ನೀಡಬೇಕಾಗುತ್ತದೆ. ಇಲಾಖೆಯ ಮಹಿಳಾ ನೌಕರರು ಮತ್ತು ಅವರ ಮಕ್ಕಳ ಆರೈಕೆ, ಪೋಷಣೆ, ಆರೋಗ್ಯ, ವಿಶ್ರಾಂತಿಯ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಇಂತಹ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

ಕರ್ನಾಟಕದಲ್ಲಿ ಮಹಿಳಾ ಸರ್ಕಾರಿ ನೌಕರರಿಗೆ 180 ದಿನಗಳ ವೇತನ ಸಹಿತ ಹೆರಿಗೆ ರಜೆ ನೀಡಲಾಗಿದೆ. ಈ ಸೌಲಭ್ಯ ಎರಡು ಮಕ್ಕಳಿಗೆ ಅನ್ವಯಿಸುತ್ತದೆ. ಜತೆಗೆ, ಆರು ತಿಂಗಳ ಶಿಶುಪಾಲನಾ ರಜೆಯನ್ನು ಸರ್ಕಾರಿ ಉದ್ಯೋಗದಲ್ಲಿದ್ದ ಮಹಿಳೆಯರು ತಮ್ಮ ಮಕ್ಕಳಿಗೆ 18 ವರ್ಷ ತುಂಬುವುದರ ಒಳಗೆ ಪಡೆಯಬಹುದು. ಶಿಕ್ಷಕಿಯರು ಹೆರಿಗೆ ರಜೆಯ ಜತೆಗೆ, ಶಿಶುಪಾಲನಾ ರಜೆಯನ್ನೂ ಸಂಯೋಜಿಸಿಕೊಂಡು ರಜೆ ತೆಗೆದುಕೊಳ್ಳಬಹುದು. ಎರಡೂ ರಜೆಗಳ ಅವಧಿ ಮುಗಿದ ನಂತರ ಮತ್ತೆ ನಾಲ್ಕು ವರ್ಷ ತಮಗೆ ಅನುಕೂಲವಾಗುವ ಶಾಲೆಗಳಿಗೆ ಸ್ಥಳ ನಿಯೋಜನೆ ಮಾಡಿಸಿಕೊಳ್ಳಬಹುದು. ಒಂದೇ ಶಾಲೆಗೆ ಹೆಚ್ಚಿನ ಶಿಕ್ಷಕಿಯರು ಬೇಡಿಕೆ ಸಲ್ಲಿಸಿದರೆ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಆದೇಶ ನೀಡಲಾಗುವುದು ಎಂದರು.

15 ದಿನಗಳ ಒಳಗೆ ರಜೆ ಮಂಜೂರು: ಹೆರಿಗೆ ಮತ್ತು ಶಿಶುಪಾಲನೆ ರಜೆಗೆ ಶಿಕ್ಷಕಿಯರು ಅರ್ಜಿ ಸಲ್ಲಿಸಿದ 15 ದಿನಗಳ ಒಳಗೆ ಕ್ಷೇತ್ರ ಶಿಕ್ಷಣಾಧಿಕಾರಿಯು ಅನುಮೋದನೆ ನೀಡಬೇಕು. ನಿಗದಿತ ಅವಧಿಯ ಒಳಗೆ ರಜೆ ಮಂಜೂರು ಮಾಡದೇ ಇದ್ದರೆ ಮೇಲಧಿಕಾರಿಗೆ ದೂರು ನೀಡಬಹುದು. ಇಂತಹ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಅತಿಥಿ ಶಿಕ್ಷಕರ ಬಳಕೆ: ಶಿಕ್ಷಕಿಯರು ಸುದೀರ್ಘ ಅವಧಿ ಹೆರಿಗೆ, ಶಿಶುಪಾಲನಾ ರಜೆ ಪಡೆದಾಗ ಅವರ ಬದಲಿಗೆ ಅರ್ಹ, ಪ್ರತಿಭಾವಂತ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು. ಮಕ್ಕಳ ಕಲಿಕೆಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗುವುದು ಎಂದು ಮಧು ಬಂಗಾರಪ್ಪ ಭರವಸೆ ನೀಡಿದರು.

'ಅತಿಥಿ'ಗಳಿಗೆ ಪರ್ಯಾಯ ಕೆಲಸ

ಹಲವು ವರ್ಷ ಕೆಲಸ ಮಾಡಿ ಯುಜಿಸಿ ಅರ್ಹತೆ ಇಲ್ಲವೆಂಬ ಕಾರಣಕ್ಕೆ ಕೆಲಸ ಕಳೆದುಕೊಂಡ ಅತಿಥಿ ಉಪನ್ಯಾಸಕರಿಗೆ 2026–27ನೇ ಶೈಕ್ಷಣಿಕ ಸಾಲಿನಿಂದಲೇ ಪರ್ಯಾಯ ಕೆಲಸ ನೀಡಲು ಚಿಂತನೆ ನಡೆದಿದೆ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಹೇಳಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ ಅವರು ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದರು. ಇದಕ್ಕೆ ಉತ್ತರಿಸಿದ ಸಚಿವರು, 'ಪ್ರಥಮ ದರ್ಜೆ ಕಾಲೇಜುಗಳಲ್ಲಿ ಬೋಧಕರಾಗಿ ಕೆಲಸ ಮಾಡುವ ಎಲ್ಲರೂ ಸ್ನಾತಕೋತ್ತರ ಪದವಿಯ ಜತೆಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಇಲ್ಲವೇ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆ-ಸೆಟ್) ತೇರ್ಗಡೆಯಾಗಿರಬೇಕು, ಪಿಎಚ್‌.ಡಿ ಪಡೆದಿರಬೇಕು ಎನ್ನುವುದು ಯುಜಿಸಿ ನಿಯಮ. ಕೋರ್ಟ್ ಸಹ ನಿಯಮವನ್ನು ಎತ್ತಿಹಿಡಿದ ಕಾರಣ ಅರ್ಹತೆ ಇಲ್ಲದ ಸುಮಾರು 5,000 ಅತಿಥಿ ಉಪನ್ಯಾಸಕರನ್ನು ಕೈಬಿಡಲಾಗಿತ್ತು' ಎಂದರು.

'ಅರ್ಹತೆ ಇದ್ದವರು ಸಿಗದೇ ಇದ್ದಾಗ ನೇಮಕಾತಿ ಮಾಡಿಕೊಳ್ಳಲು ಕೋರ್ಟ್ ಅವಕಾಶ ನೀಡಿದೆ. ಆದರೆ, ಪ್ರತಿಬಾರಿಯೂ ಸರ್ಕಾರ ಅನುಮತಿ ಪಡೆದುಕೊಳ್ಳಬೇಕು. ಎರಡು ದಶಕ ಅತಿಥಿ ಉಪನ್ಯಾಸಕಾರಿ ಬೋಧನೆ ಮಾಡಿದ ಅವರ ಸೇವೆಯನ್ನು ಸಹಾನುಭೂತಿ, ಮಾನವೀಯ ನೆಲೆಯಲ್ಲಿ ಪರಿಗಣಿಸಿ, ಗೌರವಯುತವಾದ ಪರ್ಯಾಯ ಕೆಲಸಗಳಿಗೆ ಬಳಸಿಕೊಳ್ಳಲಾಗುವುದು. ಈ ಕುರಿತು ಶೀಘ್ರ ನಿರ್ಧಾರ ಪ್ರಕಟಿಸಲಾಗುವುದು ಎಂದು ಹೇಳಿದರು.

ಲಿಖಿತ ಪ್ರಶ್ನೆಗೆ ಉತ್ತರಿಸದ ಸಚಿವರು, ಅಧಿಕಾರಿಗಳ ನಡೆಗೆ ಕಿಡಿ

ಸಭಾಧ್ಯಕ್ಷ ಖಾದರ್ ಸಭಾತ್ಯಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರ ಲಿಖಿತ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರ ಮಂಡಿಸಲು ವಿಫಲರಾದ ಸಚಿವರು, ಅಧಿಕಾರಿಗಳ ನಡೆಯ ವಿರುದ್ಧ ಅಸಮಾಧಾನಗೊಂಡ ಸಭಾಧ್ಯಕ್ಷ ಯು.ಟಿ. ಖಾದರ್, ಸಭಾತ್ಯಾಗ ಮಾಡಿದ ಪ್ರಸಂಗ ವಿಧಾನಸಭೆಯಲ್ಲಿ ಸೋಮವಾರ ನಡೆಯಿತು.

ಪ್ರಶ್ನೋತ್ತರ ಕಲಾಪದ ಬಳಿಕ ಲಿಖಿತ ರೂಪದಲ್ಲಿರುವ ಉತ್ತರಗಳನ್ನು ಮಂಡಿಸಿದ ಗೃಹ ಸಚಿವ ಜಿ. ಪರಮೇಶ್ವರ, '230 ಪ್ರಶ್ನೆಗಳ ಪೈಕಿ 84 ಪ್ರಶ್ನೆಗಳಿಗೆ ಉತ್ತರ ಮಂಡಿಸಲಾಗಿದೆ' ಎಂದರು.

ಈ ವೇಳೆ ಮಧ್ಯಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಸಚಿವರ ಪೈಕಿ, ಶೇ 15ರಷ್ಟು ಜನ ಮಾತ್ರ ಸದನದಲ್ಲಿದ್ದಾರೆ. ಕಲಾಪದಲ್ಲಿ ಯಾರೂ ಭಾಗವಹಿಸುವುದಿಲ್ಲ' ಎಂದರು.

'ನೀವು (ಸಭಾಧ್ಯಕ್ಷರು) ನಾಲ್ಕು ಬಾರಿ ಎಚ್ಚರಿಕೆ ನೀಡಿದ್ದೀರಿ. ಐದನೇ ಬಾರಿ ಎಚ್ಚರಿಕೆ ನೀಡಿ. ನೀವು ಹೇಳಿದರೂ ಯಾರೂ ಎಚ್ಚೆತ್ತುಕೊಂಡಿಲ್ಲ. ದೇವರ ತರಹ ಬರುತ್ತಾರೆ, ದೇವರ ತರಹವೇ ಮನೆಗೆ ಹೋಗುತ್ತಾರೆ. ಸರ್ಕಾರ ಸತ್ತು ಹೋಗಿದೆ. ತಿಥಿ ಮಾಡಿ, ಆ ಊಟಕ್ಕೆ ಹೋಗಬೇಕು' ಎಂದು ಅಶೋಕ ಆಕ್ರೋಶದಿಂದ ಹೇಳಿದರು. ▸6

> **ಕಲಾಪ ನಡೆಸುವುದು ಮಂತ್ರಿಗಳಿಗಾಗಿ ಅಲ್ಲ. ಶಾಸಕರ ಸಮಸ್ಯೆಗಳಿಗೆ. ಪ್ರಶ್ನೆಗಳಿಗೆ ಸರ್ಕಾರ ಉತ್ತರ ಕೊಡುವುದಿಲ್ಲವೆಂದರೆ ಹೇಗೆ? ಹೀಗಾದರೆ ಶಾಸಕರು ಸದನಕ್ಕೆ ಯಾಕೆ ಬರಬೇಕು?**
> **ಯು.ಟಿ. ಖಾದರ್,** ಸಭಾಧ್ಯಕ್ಷ

> **ವಿಧಾನಸಭೆಯ ಇತಿಹಾಸದಲ್ಲಿ ಇಂಥ ಘಟನೆ 2–3 ಬಾರಿ ನಡೆದಿರಬಹುದು. ಇದರ ಗಾಂಭೀರ್ಯ ನಮಗೆ ಅರ್ಥವಾಗಿದೆ. ಮುಂದೆ ಹೀಗಾಗದಂತೆ ನೋಡಿಕೊಳ್ಳುತ್ತೇವೆ**
> **ಜಿ. ಪರಮೇಶ್ವರ,** ಗೃಹ ಸಚಿವ

'ಅಧಿಕಾರಿಗಳ ಅಮಾನತಿಗೆ ಸಿ.ಎಂ ಸೂಚನೆ'

'ಶಾಸಕರ ಲಿಖಿತ ಪ್ರಶ್ನೆಗಳಿಗೆ ಉತ್ತರ ನೀಡದೇ ಪ್ರಶ್ನೆಗಳನ್ನು ಉಳಿಸಿಕೊಂಡಿದ್ದರೆ, ಅಂತಹ ಅಧಿಕಾರಿಗಳನ್ನು ಅಮಾನತುಗೊಳಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ವಿಧಾನಸಭೆಗೆ ತಿಳಿಸಿದರು.

ಲಿಖಿತ ಪ್ರಶ್ನೆಗಳಿಗೆ ಉತ್ತರ ಸಿಗದ ಕಾರಣ ಅಸಮಾಧಾನಗೊಂಡ ಸಭಾಧ್ಯಕ್ಷ ಯು.ಟಿ.ಖಾದರ್ ಹೊರ ನಡೆದ ಘಟನೆಯ ಬಳಿಕ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಈ ಸಭೆಯಲ್ಲಿ ವಿರೋಧಪಕ್ಷದ ನಾಯಕ ಆರ್.ಅಶೋಕ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಪಾಲ್ಗೊಂಡಿದ್ದರು.

ಬಳಿಕ ಕಲಾಪ ಶುರುವಾದಾಗ ಸರ್ಕಾರದ ಪರವಾಗಿ ಪರಮೇಶ್ವರ ಉತ್ತರ ನೀಡಿದರು. 'ಈ ವಿಷಯವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದೆ. ಯಾವ ಇಲಾಖೆಗಳು ಉತ್ತರ ನೀಡಲು ವಿಫಲವಾಗಿವೆಯೋ, ಆ ಇಲಾಖೆಗಳ ಕಾರ್ಯದರ್ಶಿಗಳನ್ನು ಕರೆಯಿಸಿ ಸೂಚನೆ ನೀಡಿ, ನೋಟಿಸ್ ಜಾರಿ ಮಾಡಬೇಕು, ಇನ್ನು ಮುಂದೆ ಈ ರೀತಿ ಆಗಬಾರದು ಎಂದೂ ಮುಖ್ಯಮಂತ್ರಿಯವರು ಕಟ್ಟುನಿಟ್ಟಿನ ಸಂದೇಶ ನೀಡಿದ್ದಾರೆ' ಎಂದು ಹೇಳಿದರು.

ಚಿನಕುರುಳಿ — ಪ್ರಕಾಶ್ ಶೆಟ್ಟಿ



ನುಗಡೋಣಿ, ಹೆನ್ರಿ ಮೆಂಡೋನ್ಸಾಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕನ್ನಡದ ಸಾಹಿತಿ ಅಮರೇಶ ನುಗಡೋಣಿ ಅವರ 'ದಡ ಸೇರಿಸು ತಂದೆ' ಸಣ್ಣ ಕಥೆಗಳ ಸಂಕಲನ ಮತ್ತು ಮಂಗಳೂರಿನ ಕೊಂಕಣಿ ಸಾಹಿತಿ ಎಚ್‌.ಎಂ. ಪೆರ್ನಾಲ್ (ಹೆನ್ರಿ ಮೆಂಡೋನ್ಸಾ) ಅವರ 'ಕೊಂಕಣಿ ಕಾವ್ಯೆಂ: ರುಪಾಂ ಆನಿ ರೂಪಕಾಂ' ಸಾಹಿತ್ಯ ವಿಮರ್ಶೆ ಕೃತಿ ಕೇಂದ್ರ ಸಾಹಿತ್ಯ ಅಕಾಡೆಮಿಯ 2025ನೇ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿವೆ.

ಸಾಹಿತ್ಯ ಅಕಾಡೆಮಿಯು 24 ಭಾಷೆಗಳಿಗೆ ವಾರ್ಷಿಕ ಪ್ರಶಸ್ತಿಯನ್ನು ಪ್ರಕಟಿಸಿದೆ.



ನುಗಡೋಣಿ



ಪೆರ್ನಾಲ್

ಪ್ರಶಸ್ತಿಯು ₹1 ಲಕ್ಷ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ಮಾರ್ಚ್ 31ರಂದು ನವದೆಹಲಿಯಲ್ಲಿ ನಡೆಯಲಿದೆ. ಕನ್ನಡದ ಆಯ್ಕೆ ಸಮಿತಿಯಲ್ಲಿ ಹಿರಿಯ ಸಾಹಿತಿ ಸಿದ್ಧಲಿಂಗ ಪಟ್ಟಣಶೆಟ್ಟಿ, ಜಯಲಲಿತಾ ಹಾಗೂ ಸಹನಾ ಕಾಂತಬೈಲು ಇದ್ದರು.

ಬೆಂಕಿ ಅವಘಡ: 10 ಮಂದಿ ಸಾವು

ಕಟಕ್ ಆಸ್ಪತ್ರೆಯಲ್ಲಿ ದುರಂತ: ಪ್ರಧಾನಿಯಿಂದ ಪರಿಹಾರ

ಭುವನೇಶ್ವರ (ಒಡಿಶಾ) (ಪಿಟಿಐ): 'ಇಲ್ಲಿನ ಸರ್ಕಾರಿ ಸ್ವಾಮ್ಯದ ಎಸ್‌ಸಿಬಿ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ (ಐಸಿಯು) ಬೆಂಕಿ ಅವಘಡ ಸಂಭವಿಸಿ 10 ಮಂದಿ ಮೃತಪಟ್ಟಿದ್ದಾರೆ' ಎಂದು ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ತಿಳಿಸಿದ್ದಾರೆ.

ದುರಂತದ ಸಂದರ್ಭದಲ್ಲಿ ರೋಗಿಗಳನ್ನು ಕಾಪಾಡುವ ವೇಳೆ 11 ಮಂದಿ ಆಸ್ಪತ್ರೆ ಸಿಬ್ಬಂದಿಗೆ ಕೂಡ ಸುಟ್ಟ ಗಾಯಗಳಾಗಿವೆ ಎಂದು ಆಸ್ಪತ್ರೆಗೆ ಭೇಟಿ ನೀಡಿದ ಅವರು ಹೇಳಿದ್ದಾರೆ. ▸12

ನ್ಯಾಯಾಂಗ ತನಿಖೆಗೆ ಆದೇಶ

ಪ್ರಕರಣದ ಕುರಿತಂತೆ ನ್ಯಾಯಾಂಗ ತನಿಖೆಗೆ ಆದೇಶಿಸಿರುವ ಮೋಹನ್ ಚರಣ್ ಮಾಝಿ, ಘಟನೆ ಕುರಿತು ತಕ್ಷಣವೇ ವರದಿ ನೀಡುವಂತೆ ಅಗ್ನಿಶಾಮಕ ಸೇವೆಯ ಮಹಾ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

'ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಕಲೆಹಾಕುವಂತೆ ತಿಳಿಸಿದ್ದೇನೆ. ನ್ಯಾಯಾಂಗ ತನಿಖೆಯಲ್ಲಿ ತಪ್ಪಿತಸ್ಥರು ಎಂದು ಕಂಡುಬಂದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಈ ವೇಳೆ ಎಚ್ಚರಿಕೆ ನೀಡಿದ್ದಾರೆ.

ಅಗ್ನಿ ಅವಘಡ ತಡೆಯಲು ₹720 ಕೋಟಿ: 'ಸರ್ಕಾರಿ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗಳಲ್ಲಿ ಅಗ್ನಿ ಅನಾಹುತ ಎದುರಿಸುವ ನಿಟ್ಟಿನಲ್ಲಿ ಅಗ್ನಿಶಾಮಕ ಉಪಕರಣಗಳ ಅಳವಡಿಕೆಗೆ ಕಳೆದೆರಡು ವರ್ಷಗಳ ಬಜೆಟ್‌ನಲ್ಲಿ ₹720 ಕೋಟಿ ಅನುದಾನ ನೀಡಲಾಗಿದೆ' ಎಂದು ತಿಳಿಸಿದ್ದಾರೆ.

ಮಂಗಳೂರಿಗೆ ಬರಲಿದೆ ಎಲ್‌ಪಿಜಿ ಹೊತ್ತ 'ಶಿವಾಲಿಕ್'

ಪ್ರಜಾವಾಣಿ ವಾರ್ತೆ

ಮಂಗಳೂರು: ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹೊತ್ತ ಶಿವಾಲಿಕ್ ಹಡಗು, ಹೊರ್ಮುಜ್ ಜಲಸಂಧಿಯ ಮೂಲಕ ಸಾಗಿ ಬಂದಿದ್ದು, ಗುಜರಾತಿನ ಮುಂದ್ರಾ ಬಂದರನ್ನು ಸೋಮವಾರ ತಲುಪಿದೆ. ಆ ಹಡಗು ಭಾಗಶಃ ಎಲ್‌ಪಿಜಿಯನ್ನು ಮುಂದ್ರಾ ಬಂದರಿನಲ್ಲಿ ಇಳಿಸಿ, ಸುಮಾರು 26 ಸಾವಿರ ಟನ್ ಎಲ್‌ಪಿಜಿಯೊಂದಿಗೆ ಇಲ್ಲಿನ ನವಮಂಗಳೂರು ಬಂದರಿಗೆ ಬರಲಿದೆ.

'ಶಿವಾಲಿಕ್' ಹಡಗು ಇಂಡಿಯನ್ ಆಯಿಲ್ ಕಾರ್ಪೊರೇಷನ್‌ಗೆ ಎಲ್‌ಪಿಜಿಯನ್ನು ಸಾಗಿಸುತ್ತಿದೆ. 46 ಸಾವಿರ ಟನ್ ಎಲ್‌ಪಿಜಿ ಹೊತ್ತ ಈ ಹಡಗು ಮುಂದ್ರಾ ಬಂದರಿನಲ್ಲಿ 20 ಸಾವಿರ ಟನ್ ಎಲ್‌ಪಿಜಿಯನ್ನು ಇಳಿಸಲಿದೆ' ಎಂದು ಮೂಲಗಳು ತಿಳಿಸಿವೆ.

'ಗುಜರಾತ್‌ನ ಮುಂದ್ರಾ ಬಂದರಿನಲ್ಲಿ 20 ಸಾವಿರ ಟನ್ ಎಲ್‌ಪಿಜಿಯನ್ನು ಖಾಲಿ ಮಾಡಲು ಕನಿಷ್ಠ ಒಂದು ದಿನವಾದರೂ ಬೇಕು. ಅಲ್ಲಿಂದ ಹಡಗು ನವಮಂಗಳೂರು ಬಂದರನ್ನು ತಲುಪಲು ಮೂರು– ನಾಲ್ಕು ದಿನಗಳಾದರೂ ಬೇಕು' ಎಂದು ನವಮಂಗಳೂರು ಬಂದರು ಪ್ರಾಧಿಕಾರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ವಿಜ್ಞಾನ ಉತ್ಸವ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವಿಜ್ಞಾನ ವೇದಿಕೆ ಹಾಗೂ ಪಿಎಂ ಉಷಾ ಸಹಯೋಗದೊಂದಿಗೆ ಜ್ಞಾನಭಾರತಿ ಆವರಣದಲ್ಲಿ ಇದೇ 17 ಮತ್ತು 18ರಂದು ವಿಜ್ಞಾನ ಉತ್ಸವ-2026 ಆಯೋಜಿಸಲಾಗಿದೆ.

ಎರಡು ದಿನಗಳ ಈ ಉತ್ಸವದಲ್ಲಿ ವಿಶ್ವವಿದ್ಯಾಲಯದಲ್ಲಿರುವ ಆರು ಸ್ನಾತಕೋತ್ತರ ವಿಜ್ಞಾನ ವಿಭಾಗಗಳಲ್ಲಿ ರಾಷ್ಟ್ರ ಮಟ್ಟದ ವಿಚಾರ ಸಂಕಿರಣಗಳು ನಡೆಯಲಿವೆ. ವಿಜ್ಞಾನಿಗಳು ಮತ್ತು ವಿಷಯ ತಜ್ಞರು ಉಪನ್ಯಾಸ ನೀಡಲಿದ್ದಾರೆ. ಅಲ್ಲದೆ ಸಂಶೋಧನೆ, ವಿಜ್ಞಾನ ಕ್ಷೇತ್ರದ ಹೊಸ ಅನ್ವೇಷಣೆಗಳ ಕುರಿತು ಚರ್ಚೆಗಳು ನಡೆಯಲಿವೆ.

ವಿಜ್ಞಾನಿಗಳು ಮತ್ತು ಸಂಶೋಧಕರೊಂದಿಗೆ ಸಂವಾದ ನಡೆಸಲು ಅವಕಾಶ ಇದೆ. ವಿಜ್ಞಾನ ವಿಭಾಗಗಳಲ್ಲಿ ವಿಜ್ಞಾನ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ. ವಿದ್ಯಾರ್ಥಿಗಳು ಮತ್ತು ಸಂಶೋಧಕರು ರೂಪಿಸಿರುವ ವಿಜ್ಞಾನದ ಮಾದರಿಗಳು, ಸಂಶೋಧನಾ ಪೋಸ್ಟರ್‌ಗಳು ಹಾಗೂ ಹೊಸ ವೈಜ್ಞಾನಿಕ ಯೋಜನೆಗಳ ಮಾಹಿತಿ ಲಭ್ಯವಾಗಲಿವೆ.

ವಿಜ್ಞಾನ ವಿಭಾಗಗಳಲ್ಲಿರುವ ಸಂಗ್ರಹಾಲಯಗಳ ವೀಕ್ಷಣೆಗೆ ಮುಕ್ತ ಅವಕಾಶವಿದ್ದು ಸಸ್ಯವಿಜ್ಞಾನ, ಪ್ರಾಣಿವಿಜ್ಞಾನ ಮತ್ತು ಭೂವಿಜ್ಞಾನ ವಿಭಾಗಗಳ ಸಂಗ್ರಹಾಲಯಗಳಲ್ಲಿ ಜೀವ ವೈವಿಧ್ಯ ಸಂಗ್ರಹಗಳು, ವಿವಿಧ ಜೀವಿಗಳ ಮಾದರಿಗಳು ಹಾಗೂ ಭೂವೈಜ್ಞಾನಿಕ ಪ್ರದರ್ಶನಗಳನ್ನು ನೋಡುವ ಅವಕಾಶ ವಿದ್ಯಾರ್ಥಿಗಳಿಗೆ ಲಭ್ಯವಾಗಲಿದೆ.

ಉತ್ಸವವು ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಬೆಳೆಸುವ ಕಾರ್ಯಕ್ರಮವಾಗಿದೆ. ಸಂಶೋಧನೆ ಹಾಗೂ ನಾವೀನ್ಯತೆ ಉತ್ತೇಜಿಸಲಿದ್ದು ಶಾಲಾ, ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಹೆಚ್ಚೆಚ್ಚು ಭಾಗವಹಿಸಬೇಕು ಎಂದು ಕುಲಪತಿ ಎಸ್‌.ಎಂ.ಜಯಕರ ಮನವಿ ಮಾಡಿದ್ದಾರೆ.

ವಿವಿಧ ಸ್ಪರ್ಧೆಗಳಿಗೆ ವೇದಿಕೆ

ವಿಜ್ಞಾನ ಉತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ವಿಜ್ಞಾನ ಮಾದರಿ ಸ್ಪರ್ಧೆ, ವಿಜ್ಞಾನ ಪೋಸ್ಟರ್ ಪ್ರಸ್ತುತಿ, ರಸಪ್ರಶ್ನೆ, ಪ್ರಬಂಧ, ಪಿಕ್ ಆ್ಯಂಡ್ ಸ್ಪೀಕ್ ಸ್ಪರ್ಧೆಗಳು ನಡೆಯಲಿದ್ದು, ಈ ಸ್ಪರ್ಧೆಗಳಲ್ಲಿ ಭಾಗವಹಿಸುವ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಪ್ರತಿ ಸ್ಪರ್ಧೆಗೆ ₹100 ಮತ್ತು ಇತರ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ₹200 ಶುಲ್ಕ ನಿಗದಿಪಡಿಸಲಾಗಿದೆ.

ಮಾರ್ಚ್ 17 ಮತ್ತು 18ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಡೆಯಲಿರುವ ಈ ಉತ್ಸವದಲ್ಲಿ ಭಾಗವಹಿಸಲು ಎಲ್ಲರಿಗೂ ಮುಕ್ತ ಅವಕಾಶ ಇದೆ. ಯಾವುದೇ ಪ್ರವೇಶ ಶುಲ್ಕವಿಲ್ಲ. ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಜನರು ಭಾಗವಹಿಸಬಹುದು.



‘ಲಾಲ್‌ಬಾಗ್ ವಾಕ್ಸ್’ಗೆ ತಜ್ಞರ ಕೊರತೆ

ಸಾವಿರಕ್ಕೂ ಹೆಚ್ಚು ಪ್ರವಾಸಿಗರನ್ನು ಸೆಳೆದ ‘ಕಬ್ಬನ್ ವಾಕ್ಸ್’
ಆರು ತಿಂಗಳ ಹಿಂದೆ ಆರಂಭವಾಗಿದ್ದ ಯೋಜನೆ

• ಖಲೀಲಅಹ್ಮದ ಶೇಖ

ಬೆಂಗಳೂರು: ‘ಸಸ್ಯಕಾಶಿ’ ಲಾಲ್‌ಬಾಗ್‌ನಲ್ಲಿ ಇರುವ ಸಸ್ಯ ಪ್ರಭೇದಗಳು, ಜೀವವೈವಿಧ್ಯಗಳು, ಐತಿಹಾಸಿಕ ಸ್ಥಳಗಳನ್ನು ಸಾರ್ವಜನಿಕರಿಗೆ ಪರಿಚಯಿಸುವ ಉದ್ದೇಶದಿಂದ ತೋಟಗಾರಿಕೆ ಇಲಾಖೆ ರೂಪಿಸಿದ್ದ ‘ಲಾಲ್‌ಬಾಗ್ ವಾಕ್ಸ್’ ಮಾರ್ಗದರ್ಶಿ ನಡಿಗೆ ಪ್ರವಾಸ ಪರಿಸರ ತಜ್ಞರ ಕೊರತೆಯಿಂದ ಇದುವರೆಗೂ ಪ್ರಾರಂಭವಾಗಿಲ್ಲ.

‘ಸಿಲಿಕಾನ್ ಸಿಟಿ’ಯ ವಾಯುವಿಹಾರಿಗಳು ಮತ್ತು ಪ್ರೇಮಿಗಳ ಸ್ವರ್ಗ ಕಬ್ಬನ್ ಉದ್ಯಾನದಲ್ಲಿ ಸುಮಾರು ಆರು ತಿಂಗಳ ಹಿಂದೆಯೇ ಪ್ರಾರಂಭವಾಗಿರುವ ‘ಕಬ್ಬನ್ ವಾಕ್ಸ್’ ಮಾರ್ಗದರ್ಶಿ ನಡಿಗೆ ಪ್ರವಾಸ ನಗರದ ಸಾವಿರಾರು ಪ್ರವಾಸಿಗರನ್ನು ಸೆಳೆದಿದೆ. ಇದೇ ರೀತಿಯ ನಡಿಗೆಯನ್ನು ಲಾಲ್‌ಬಾಗ್‌ನಲ್ಲಿ ಪ್ರಾರಂಭಿಸಲು ತೋಟಗಾರಿಕೆ ಇಲಾಖೆ ಸಿದ್ಧತೆ ನಡೆಸಿತ್ತು. ಆದರೆ, ಫಲಪುಷ್ಪ ಪ್ರದರ್ಶನದ ಸಿದ್ಧತೆ ಇತರೆ ಕಾರಣಗಳಿಂದ ಇದನ್ನು ಮುಂದೂಡಲಾಗಿತ್ತು. ನಂತರ ಈ ನಡಿಗೆ ಪ್ರಾರಂಭಿಸಲು ಪರಿಸರ ತಜ್ಞರು ಸಿಗದ ಕಾರಣದಿಂದ ವಿಳಂಬ ಮಾಡುತ್ತಿದೆ.

‘ಲಾಲ್‌ಬಾಗ್‌ನಲ್ಲಿ ನೂರಾರು ವರ್ಷಗಳಿಂದ ಬೆಳೆದು ನಿಂತಿರುವ ಸಾವಿರಾರು ಸಸ್ಯ ಪ್ರಭೇದಗಳ ಮೂಲ ಹೆಸರು, ಉಗಮ ಸ್ಥಾನ, ದೇಶ, ಬೆಳವಣಿಗೆ, ಬೆಳೆಯುವ ಹವಾಗುಣ, ಹೂ-ಹಣ್ಣು ಮತ್ತು ಎಲೆಗಳು ಬಿಡುವ ಕಾಲ, ಅದರ ವೈಜ್ಞಾನಿಕ ಹೆಸರು ಸಹಿತ ಎಲ್ಲ ಮಾಹಿತಿಗಳನ್ನು ಮಾರ್ಗದರ್ಶಿ ನಡಿಗೆ ಪ್ರವಾಸದಲ್ಲಿ ನೀಡುವ ಉದ್ದೇಶ ಇದೆ. ಇದಕ್ಕೆ ಪರಿಸರ ತಜ್ಞರನ್ನು ಮಾರ್ಗದರ್ಶಕರನ್ನಾಗಿ ನೇಮಿಸಿಕೊಳ್ಳುವ ಸಿದ್ಧತೆ ನಡೆದಿದೆ. ಆದರೆ, ಈ ನಡಿಗೆಯಲ್ಲಿ ಲಾಲ್‌ಬಾಗ್‌ನ ಜೀವವೈವಿಧ್ಯ, ಸಸ್ಯ ಪ್ರಭೇದಗಳ ಮಾಹಿತಿ ಇರುವ ತಜ್ಞರು ಸಿಗದ ಕಾರಣ ಇನ್ನೂ ಪ್ರಾರಂಭವಾಗಿಲ್ಲ’ ಎಂದು ತೋಟಗಾರಿಕೆ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.



ಸಾಂದರ್ಭಿಕ ಚಿತ್ರ

‘ದಿ ನ್ಯಾಚುರಲಿಸ್ಟ್ ಸ್ಕೂಲ್ ಮತ್ತು ಬೆಂಗಳೂರು ವಾಕ್ಸ್ ಸಹಯೋಗದಲ್ಲಿ ತೋಟಗಾರಿಕೆ ಇಲಾಖೆಯು ಪ್ರತಿ ಭಾನುವಾರ ಬೆಳಿಗ್ಗೆ 7.30ರಿಂದ 9 ಗಂಟೆಯವರೆಗೆ ‘ಕಬ್ಬನ್ ವಾಕ್ಸ್’ ನಡಿಗೆ ಪ್ರವಾಸ ಆಯೋಜಿಸುತ್ತಿದೆ. ಉದ್ಯಾನದ ಇತಿಹಾಸ, ಇಲ್ಲಿನ ಸಸ್ಯ ಪ್ರಭೇದಗಳು ಹಾಗೂ ಜೀವವೈವಿಧ್ಯಗಳ ಕುರಿತು ಪರಿಸರ ತಜ್ಞರು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಮಾಹಿತಿ ನೀಡುತ್ತಿದ್ದಾರೆ. ನೋಂದಣಿ ಮಾಡಿಕೊಳ್ಳುವ ಬಹುತೇಕ ಮಂದಿ ಇಂಗ್ಲಿಷ್ ಭಾಷೆಗೆ ಆದ್ಯತೆ ನೀಡುತ್ತಿದ್ದಾರೆ’ ಎಂದು ವಿವರಿಸಿದರು.

‘ಇದುವರೆಗೂ ಕಬ್ಬನ್ ವಾಕ್‌ಗೆ 47 ಗುಂಪುಗಳಲ್ಲಿ 1,212 ಮಂದಿ ಭೇಟಿ ನೀಡಿದ್ದು, 2.27 ಲಕ್ಷ ನೋಂದಣಿ ಶುಲ್ಕ ಸಂಗ್ರಹವಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಕಬ್ಬನ್ ವಾಕ್ಸ್ ಮಾರ್ಗದರ್ಶಿ ನಡಿಗೆ ಪ್ರವಾಸದ ಬಗ್ಗೆ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಮಾರ್ಗದರ್ಶಕರು ಮಾಹಿತಿ ಹಂಚಿಕೊಳ್ಳುವ ಅವಕಾಶ ಇದೆ. ಇಂಗ್ಲಿಷ್ ಬ್ಯಾಚ್‌ನ ಎಲ್ಲ ಸ್ಲಾಟ್‌ಗಳು ಭರ್ತಿ ಆಗುತ್ತಿವೆ. ಆದರೆ, ಕನ್ನಡ ಬ್ಯಾಚ್‌ನ ಸ್ಲಾಟ್‌ಗಳು ಭರ್ತಿ ಆಗುತ್ತಿಲ್ಲ’ ಎಂದು ಹೇಳಿದರು.

ಅಂಕಿ ಅಂಶಗಳು

1,212 ಕಬ್ಬನ್ ವಾಕ್ಸ್‌ಗೆ ಭೇಟಿ ನೀಡಿದವರ ಸಂಖ್ಯೆ

₹2,27,300 ಸಂಗ್ರಹವಾದ ನೋಂದಣಿ ಶುಲ್ಕ

₹200 ಪ್ರವೇಶ ಶುಲ್ಕ ವಯಸ್ಕರಿಗೆ

₹94,000 ಮಾರ್ಗದರ್ಶಕರಿಗೆ ನೀಡಿದ ಗೌರವಧನ

₹1,33,300 ತೋಟಗಾರಿಕೆ ಇಲಾಖೆಗೆ ಬಂದ ಆದಾಯ

₹50 ಮಕ್ಕಳಿಗೆ

https://walk.cubbonpark.in
ನೋಂದಣಿ ಮಾಡಿಕೊಳ್ಳಲು ಈ ಮೇಲಿನ ವೆಬ್‌ಸೈಟ್‌ಗೆ ಭೇಟಿ ನೀಡಿ

‘ಶೀಘ್ರದಲ್ಲೇ ಪ್ರಾರಂಭ’

ಕಬ್ಬನ್ ಹಾಗೂ ಲಾಲ್‌ಬಾಗ್ ಉದ್ಯಾನದಲ್ಲಿ ಸಸ್ಯ ಪ್ರಭೇದಗಳು, ಜೀವವೈವಿಧ್ಯಗಳು ಹಾಗೂ ಇಲ್ಲಿನ ಐತಿಹಾಸಿಕ ಸ್ಥಳಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರುವ ಹಾಗೂ ಈ ಮಾಹಿತಿಯನ್ನು ಆಕರ್ಷಕವಾಗಿ ನಿರೂಪಣೆ ಮಾಡುವ ಪರಿಸರ ತಜ್ಞರನ್ನು ನೇಮಿಸಿಕೊಂಡು ಶೀಘ್ರದಲ್ಲಿಯೇ ಲಾಲ್‌ಬಾಗ್ ವಾಕ್ಸ್ ಪ್ರಾರಂಭಿಸಲಾಗುವುದು ಎಂದು ತೋಟಗಾರಿಕೆ ಇಲಾಖೆ ಹೆಚ್ಚುವರಿ ನಿರ್ದೇಶಕ ಎಂ. ಜಗದೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ಸಿ.ಎಂ ಸ್ಥಾನಕ್ಕೆ ದಲಿತ ಶಾಸಕರು ದನಿ ಎತ್ತಿ: ಒಕ್ಕೊರಲಿನ ಆಗ್ರಹ



ದಲಿತ ಚಿಂತಕರ ಚಾವಡಿ ಆಯೋಜಿಸಿದ್ದ ವಿಚಾರಸಂಕಿರಣ ಆರಂಭಕ್ಕೂ ಮುನ್ನ ಬಿ.ಟಿ.ಲಲಿತಾ ನಾಯ್ಕ್, ಇಂದಿರಾ ಕೃಷ್ಣಪ್ಪ, ಎಂ.ವೆಂಕಟಸ್ವಾಮಿ ಅವರು ಅಂಬೇಡ್ಕರ್ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಬದಲಾವಣೆ ಕುರಿತು ಚರ್ಚೆ ನಡೆಯುತ್ತಿದ್ದು, ತಮ್ಮವರು ಈ ಸ್ಥಾನಕ್ಕೇರಲು ದಲಿತ ಶಾಸಕರು ಒಕ್ಕೊರಲಿನ ದನಿ ಎತ್ತಬೇಕು. ಈಗ ಸಿಗದಿದ್ದರೆ ಮುಂದೆ ಇನ್ನೂ ಕಷ್ಟವಾಗಲಿದೆ ಎನ್ನುವುದನ್ನು ಅರಿತು ಸ್ವಾಭಿಮಾನದ ತೀರ್ಮಾನ ಕೈಗೊಳ್ಳಬೇಕು’ ಎಂದು ದಲಿತ ಚಿಂತಕರ ಚಾವಡಿ ಒತ್ತಾಯಿಸಿದೆ.

ನಗರದಲ್ಲಿ ಸೋಮವಾರ ಆಯೋಜಿಸಿದ್ದ ‘ಆಳುವ ವರ್ಗವಾಗಲು ದಲಿತ ಜನಾಂಗಗಳು ಎದುರಿಸುತ್ತಿರುವ ಇಂದಿನ ಸವಾಲುಗಳು ಹಾಗೂ ಪರಿಹಾರದ ಮುಂದಿನ ಮಾರ್ಗ’ ಕುರಿತ ವಿಚಾರಸಂಕಿರಣದಲ್ಲಿ ಈ ಆಗ್ರಹ ಮಾಡಲಾಯಿತು.

‘ದಲಿತ ಶಾಸಕರ ಮೌನವು ಸಮುದಾಯವನ್ನು ರಾಜಕಾರಣದ ಬಲಿಪಶುಗಳನ್ನಾಗಿಸಲಾಗುತ್ತಿದೆ. ನಮ್ಮ ಶಾಸಕರ ಅಸಹಾಯಕ ಸ್ಥಿತಿ ಖಂಡಿಸುತ್ತೇವೆ’ ಎಂದು ಸಭೆಯಲ್ಲಿ ಮಾತನಾಡಿದ ಪ್ರಮುಖರು ಹೇಳಿದರು.

ವಿಚಾರ ಸಂಕಿರಣ ಉದ್ಘಾಟಿಸಿದ ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯ್ಕ್, ‘ರಾಜ್ಯದ ಚುಕ್ಕಾಣಿ ಹಿಡಿಯಬಲ್ಲ ಸಾಮರ್ಥ್ಯ ಇರುವ ದಲಿತ ನಾಯಕರು ಹಲವರು ಇದ್ದರೂ ಅವಕಾಶ ವಂಚಿತರಾಗುತ್ತಲೇ ಇದ್ದಾರೆ’ ಎಂದು ಹೇಳಿದರು.

ಸಾಮಾಜಿಕ ಪರಿವರ್ತನಾ ಜನಾಂದೋಲನದ ವೈ.ಮರಿಸ್ವಾಮಿ ಮಾತನಾಡಿ, ‘ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಯಾವ ಪಕ್ಷವೂ ದಲಿತರಿಗೆ ಈ ಸ್ಥಾನ ನೀಡಿಲ್ಲ. ಬಿಜೆಪಿ, ಜೆಡಿಎಸ್‌ನಲ್ಲಿ ದಲಿತ ನಾಯಕರಿದ್ದರೂ ರಾಜ್ಯ ನಾಯಕರ ಸ್ಥಾನ ನೀಡಿಲ್ಲ. ಕಾಂಗ್ರೆಸ್ ಪಕ್ಷ ತಿದ್ದಿಕೊಂಡು ಸಾಮಾಜಿಕ ನ್ಯಾಯದ ಮಾತಿಗೆ ಬೆಲೆ ಬರುವಂತೆ ನಡೆದುಕೊಳ್ಳಬೇಕು’ ಎಂದು ಹೇಳಿದರು.

ಬರಹಗಾರ್ತಿ ಇಂದಿರಾ ಕೃಷ್ಣಪ್ಪ ಅಧ್ಯಕ್ಷತೆ ವಹಿಸಿದ್ದರು. ನೇತ್ರ ತಜ್ಞ ಎಚ್‌.ಆರ್‌. ಸುರೇಂದ್ರ, ಗಾಯಕ ಬಾನಂದೂರು ಕೆಂಪಯ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನೌಕರರ ಸಂಘಟನೆಗಳ ಡಿ.ಶಿವಶಂಕರ್ ಮಾತನಾಡಿದರು.

> **ಕಾನ್ಶಿರಾಂ ಅವರಿಗೆ ಭಾರತ ರತ್ನ ನೀಡಬೇಕು ಎಂದು ರಾಹುಲ್ ಗಾಂಧಿ ಒತ್ತಾಯಿಸಿದ್ದಾರೆ. ಇದು ಸ್ವಾಗತಾರ್ಹ. ಮಲ್ಲಿಕಾರ್ಜುನ ಖರ್ಗೆ ಮುಂದಿನ ಪ್ರಧಾನಿ ಎಂದು ಅವರು ಘೋಷಿಸಲಿ**
> **ಎಂ.ವೆಂಕಟಸ್ವಾಮಿ,** ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ



ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ನೇಮಕಗೊಂಡಿರುವ ಎಂ.ಜಯಗೋಪಾಲಗೌಡ ಅವರಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ನೇಮಕ ಆದೇಶ ಪತ್ರ ನೀಡಿದರು

ಬಿಡಿಎ ಸದಸ್ಯರಾಗಿ ಜಯಗೋಪಾಲಗೌಡ ನೇಮಕ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ(ಬಿಡಿಎ)ಸದಸ್ಯರಾಗಿ ಎಂ.ಜಯಗೋಪಾಲಗೌಡ ಅವರನ್ನು ನೇಮಕ ಮಾಡಲಾಗಿದೆ.

ಸಕ್ರಿಯ ಕಾಂಗ್ರೆಸ್ ಕಾರ್ಯಕರ್ತರಾಗಿ ಗುರುತಿಸಿಕೊಂಡಿರುವ ಜಯಗೋಪಾಲಗೌಡ ಬ್ಯಾಟರಾಯನಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಥಣಿಸಂದ್ರ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದರು.

‘ಪಕ್ಷ ನಿಷ್ಠೆ ಇರುವವರಿಂದ ಬಿಜೆಪಿ ಬೆಳವಣಿಗೆ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ‘ನಿಷ್ಠೆ, ಪ್ರಾಮಾಣಿಕತೆ, ವಿಶ್ವಾಸದಿಂದ ಎಲ್ಲರನ್ನೂ ಒಗ್ಗೂಡಿಸಿಕೊಂಡು ಪಕ್ಷ ಕಟ್ಟಲು ನೂತನ ಮಂಡಲದ ಅಧ್ಯಕ್ಷರು, ಪದಾಧಿಕಾರಿಗಳು ಮುಂದಾಗಬೇಕು’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಯಶವಂತಪುರ ವಿಧಾನ ಸಭಾ ಕ್ಷೇತ್ರದ ಗ್ರಾಮಾಂತರ ಮಂಡಲದ ಅಧ್ಯಕ್ಷ ಆರ್‌.ಪಿ.ಪ್ರಕಾಶ್, ನಗರ ಮಂಡಲ ಅಧ್ಯಕ್ಷ ಜಯರಾಮೇಗೌಡ ಅವರನ್ನು ಅಭಿನಂದಿಸಿ ಮಾತನಾಡಿ, ‘ಎಲ್ಲಿ ಸಂಘಟನೆ ಇರುತ್ತದೆಯೋ ಅಲ್ಲಿ ಪಕ್ಷ ತಳಮಟ್ಟದಿಂದ ಬೆಳೆಯಲು ಸಾಧ್ಯವಾಗುತ್ತದೆ’ ಎಂದರು.

ಆರ್‌.ಪಿ.ಪ್ರಕಾಶ್, ಜಯರಾಮೇಗೌಡ , ಸಹಕಾರ ಮಹಾಮಂಡಲದ ನಿರ್ದೇಶಕ ಸಿ.ಎಂ.ಮಾರೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಸಚಿವರ ಜೊತೆ ಸಿ.ಎಂ ‘ಔತಣ’ ಸಭೆ

ಬೆಂಗಳೂರು: ತಮ್ಮ ಸರ್ಕಾರಿ ನಿವಾಸ ‘ಕಾವೇರಿ’ಯಲ್ಲಿ ಆಯ್ದ ಸಚಿವರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ರಾತ್ರಿ ‘ಔತಣಕೂಟ’ ಸಭೆ ನಡೆಸಿದರು.

ಎಂ.ಬಿ. ಪಾಟೀಲ, ಎಚ್‌.ಸಿ. ಮಹದೇವಪ್ಪ, ಕೆ.ಎಚ್‌. ಮುನಿಯಪ್ಪ, ರಾಮಲಿಂಗಾ ರೆಡ್ಡಿ, ಎಸ್‌.ಎಸ್‌. ಮಲ್ಲಿಕಾರ್ಜುನ್, ಸತೀಶ ಜಾರಕಿಹೊಳಿ, ಎನ್‌. ಚಲುವರಾಯಸ್ವಾಮಿ, ಜಮೀರ್ ಅಹಮದ್ ಖಾನ್, ಈಶ್ವರ ಖಂಡ್ರೆ, ಪ್ರಿಯಾಂಕ್ ಖರ್ಗೆ, ಬೈರತಿ ಸುರೇಶ್, ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ಎನ್‌.ಎಸ್‌. ಬೋಸರಾಜು ಅವರು ಸಭೆಯಲ್ಲಿದ್ದರು.

ಪಕ್ಷ ಸಂಘಟನೆ, ಪ್ರಸಕ್ತ ರಾಜಕೀಯ ವಿದ್ಯಮಾನ, ಒಳ ಮೀಸಲಾತಿಯ ಗೊಂದಲ ಮುಂತಾದ ವಿಷಯಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು ಎಂದು ಗೊತ್ತಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡಾ ಸಿದ್ದರಾಮಯ್ಯ ಅವರ ಕೊಠಡಿಗೆ ತೆರಳಿ ಕೆಲಹೊತ್ತು ಸಮಾಲೋಚನೆ ನಡೆಸಿದರು.

ಒಳ ಮೀಸಲಾತಿ ಚರ್ಚೆ

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ವಿಷಯದ ಕುರಿತ ಗೊಂದಲಕ್ಕೆ ಪರಿಹಾರ ಕಂಡುಕೊಳ್ಳುವ ಭಾಗವಾಗಿ ದಲಿತ ಬಲಗೈ ಸಮುದಾಯದ ಸಚಿವರು, ಶಾಸಕರ ಜೊತೆ ವಿಧಾನಸಭೆಯ ತಮ್ಮ ಕೊಠಡಿಯಲ್ಲಿ ಮುಖ್ಯಮಂತ್ರಿ ಪ್ರತ್ಯೇಕವಾಗಿ ಚರ್ಚೆ ನಡೆಸಿದರು.

ಸಚಿವರಾದ ಜಿ. ಪರಮೇಶ್ವರ, ಎಚ್‌.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಶಾಸಕರಾದ ಪಿ.ಎಂ. ನರೇಂದ್ರ ಸ್ವಾಮಿ, ನಯನಾ ಮೋಟಮ್ಮ ಸೇರಿದಂತೆ ಹಲವರು ಸಭೆಯಲ್ಲಿದ್ದರು. ಎಲ್ಲರಿಂದ ಮುಖ್ಯಮಂತ್ರಿ ಅಭಿಪ್ರಾಯ ಪಡೆದರು ಎಂದು ಮೂಲಗಳು ತಿಳಿಸಿವೆ. ಈ ವಿಷಯದ ಕುರಿತು ಚರ್ಚಿಸಿ, ನಿರ್ಣಯ ತೆಗೆದುಕೊಳ್ಳಲು ಇದೇ 27ರಂದು ಸಚಿವ ಸಂಪುಟದ ವಿಶೇಷ ಸಭೆ ನಡೆಯಲಿದೆ.

ಶಾಲಾ ದಾಖಲಾತಿ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಗುರುಜ್ಞಾನ ಕೇಂದ್ರ ವಿದ್ಯಾಲಯದಲ್ಲಿ 2026–27ನೇ ಸಾಲಿನ ದಾಖಲಾತಿ ಪ್ರಾರಂಭವಾಗಿದ್ದು, ಅರ್ಜಿ ಆಹ್ವಾನಿಸಲಾಗಿದೆ.

ಪೋಷಕರಿಲ್ಲದ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ (ಶಾಲೆ ಮತ್ತು ವಿದ್ಯಾರ್ಥಿನಿಲಯ) ಅವಕಾಶವಿದೆ. 5ರಿಂದ 9ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಲು ಬಯಸುವ ಗ್ರಾಮೀಣ ಪ್ರದೇಶದ ಬಡ ಕುಟುಂಬದ ವಿದ್ಯಾರ್ಥಿಗಳ ಪೋಷಕರು ಬೆಳಿಗ್ಗೆ 9.30ರಿಂದ ಸಂಜೆ 4.30ರವರೆಗೆ ಕಚೇರಿಯನ್ನು ಸಂಪರ್ಕಿಸಬಹುದು. ಆಸಕ್ತರು ಏಪ್ರಿಲ್ 15ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಜಗದ್ಗುರು ಡಾ. ನಿಶ್ಚಲಾನಂದನಾಥ ಸ್ವಾಮೀಜಿ, ಪೀಠಾಧ್ಯಕ್ಷರು, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು–560060.
ಮಾಹಿತಿಗೆ: 81477 57754

ಸಮಗ್ರ ಯೋಜನೆ ರೂಪಿಸುವಂತೆ ತುಷಾರ್ ಗಿರಿನಾಥ್ ಸೂಚನೆ
ಮೇಲ್ಸೇತುವೆ ಕೆಳಭಾಗ ಸೌಂದರ್ಯೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿನ ಮೇಲ್ಸೇತುವೆಗಳ ಕೆಳಭಾಗದ ಸ್ಥಳಗಳನ್ನು ಸೌಂದರ್ಯೀಕರಣಗೊಳಿಸಲು ಸಮಗ್ರ ಯೋಜನೆ ರೂಪಿಸುವಂತೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರು ನಗರ ಪಾಲಿಕೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೇಲ್ಸೇತುವೆಗಳ ಕೆಳಭಾಗದ ಜಾಗವನ್ನು ಅಭಿವೃದ್ಧಿಪಡಿಸಿ ಸಸಿ ನೆಡುವುದು, ತ್ಯಾಜ್ಯ ವರ್ಗಾವಣೆ ಘಟಕ ಸ್ಥಾಪನೆ ಹಾಗೂ ಪಾರ್ಕಿಂಗ್ ವ್ಯವಸ್ಥೆ ಕುರಿತಂತೆ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದರು.

‘ಮೇಲ್ಸೇತುವೆಗಳ ಕೆಳಭಾಗದ ಪ್ರದೇಶಗಳು ಅಭಿವೃದ್ಧಿಯಾಗದೆ ನಗರದ ಸೌಂದರ್ಯಕ್ಕೆ ಧಕ್ಕೆಯುಂಟಾಗುತ್ತಿದೆ. ಪಾಲಿಕೆ ಹಾಗೂ ಬಿಡಿಎ ವತಿಯಿಂದ ನಿರ್ಮಿಸಲಾದ ಮೇಲ್ಸೇತುವೆಗಳ ಕೆಳಭಾಗದಲ್ಲಿ ಎಲ್ಲೆಲ್ಲಿ ಸೌಂದರ್ಯೀಕರಣ ಮತ್ತು ಅಭಿವೃದ್ಧಿ ಮಾಡಬಹುದೆಂಬುದರ ಪಟ್ಟಿ ಸಿದ್ಧಪಡಿಸಿ, ಸಮಗ್ರ ಯೋಜನೆ ರೂಪಿಸಬೇಕು’ ಎಂದರು.

ಜಿಬಿಎ ವ್ಯಾಪ್ತಿಯಲ್ಲಿ ಪಾಲಿಕೆ, ಮೆಟ್ರೊ, ಜಲಮಂಡಳಿ ಹಾಗೂ ಬಿಡಿಎ ವತಿಯಿಂದ ಸಸಿಗಳನ್ನು ನೆಟ್ಟು ಅವುಗಳ ಸಮರ್ಪಕ ಪೋಷಣೆಗೆ ಕ್ರಮವಹಿಸಬೇಕು. ಪ್ರತಿ ಇಲಾಖೆಗಳಿಗೆ ನಿಗದಿಪಡಿಸಿರುವ ಗುರಿಗಳನ್ನು ಸಾಧಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.

ಜಲಮಂಡಳಿ ತನ್ನ ಎಸ್‌ಟಿಪಿ ಘಟಕಗಳ ಸುತ್ತಲೂ ಸಸಿ ನೆಡುವ ಯೋಜನೆ ರೂಪಿಸಬೇಕು. ರಸ್ತೆ ಬದಿ ಹಾಗೂ ಕೆರೆಗಳ ಸುತ್ತಲೂ ಬಿದಿರು ಸಸಿಗಳನ್ನು ನೆಟ್ಟು ಪೋಷಿಸಬೇಕು. ವೃಕ್ಷವನ ನಿರ್ಮಾಣ ಮಾಡಲು ಸ್ಥಳ ಗುರುತಿಸಿ, ಅದಕ್ಕೆ ತಗಲುವ ವೆಚ್ಚದ ಕುರಿತು ವರದಿ ನೀಡಬೇಕು ಎಂದು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಐದು ನಗರ ಪಾಲಿಕೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆಯ ಕುರಿತು ಸಮಗ್ರ ಪರಿಶೀಲನೆ ನಡೆಸಿ, ನಿಯಮಾವಳಿಯನ್ನು ರೂಪಿಸಬೇಕು. ರಸ್ತೆ ಬದಿಯಲ್ಲಿರುವ ಖಾಲಿ ಜಾಗಗಳು ಅಥವಾ ಖಾಸಗಿ ನಿವೇಶನಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವ ಸಾಧ್ಯತೆ ಕುರಿತು ಪರಿಶೀಲಿಸಬೇಕು ಎಂದರು.

ವಾಹನ ಟೋಯಿಂಗ್ ಮಾಡುವ ಸಲುವಾಗಿಯೇ ಪ್ರತ್ಯೇಕ ಅಧಿಕಾರಿಗಳನ್ನು ನಿಯೋಜಿಸಿ, ಅನಾಥ ವಾಹನಗಳನ್ನು ತೆರವುಗೊಳಿಸಲು ನಿರ್ದೇಶನ ನೀಡಿದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿ, ‘ರಸ್ತೆ ಬದಿಗಳಲ್ಲಿ ಅನಧಿಕೃತ ಪಾರ್ಕಿಂಗ್ ಹೆಚ್ಚಾಗುತ್ತಿದೆ. ಈ ಕಾರಣದಿಂದ ವಿಶೇಷ ಅಭಿಯಾನ ನಡೆಸಿ ಅನಧಿಕೃತ ಪಾರ್ಕಿಂಗ್ ವಿರುದ್ಧ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು’ ಎಂದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಡಾ. ಕೆ. ಹರೀಶ್ ಕುಮಾರ್, ಆರ್. ರಾಮಚಂದ್ರನ್, ಕಾರ್ಯದರ್ಶಿ ದೀಪಾ ಚೋಳನ್, ಬಿಡಿಎ ಆಯುಕ್ತ ಮಣಿವಣ್ಣನ್, ನಗರ ಪಾಲಿಕೆಗಳ ಆಯುಕ್ತರಾದ ರಾಜೇಂದ್ರ ಚೋಳನ್, ರಮೇಶ್ ಡಿ.ಎಸ್., ರಮೇಶ್ ಕೆ.ಎನ್., ಡಾ. ರಾಜೇಂದ್ರ ಕೆ.ವಿ., ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಸಂಸ್ಥೆಯ ಸಿಇಒ ಕರೀಗೌಡ, ನಗರ ಜಿಲ್ಲಾಧಿಕಾರಿ ಜಗದೀಶ್, ಜಲಮಂಡಳಿ ಅಧ್ಯಕ್ಷ ರಾಮಪ್ರಸಾತ್ ಮನೋಹರ್, ಮೆಟ್ರೊ ವ್ಯವಸ್ಥಾಪಕ ನಿರ್ದೇಶಕ ರವಿಶಂಕರ್, ಸಂಚಾರ ಪೊಲೀಸ್ ವಿಭಾಗದ ಜಂಟಿ ಕಮಿಷನರ್ ಕಾರ್ತಿಕ್ ರೆಡ್ಡಿ ಉಪಸ್ಥಿತರಿದ್ದರು.

ಕೇಂದ್ರ ನಗರ ಪಾಲಿಕೆ: ಬೃಹತ್ ಸ್ವಚ್ಛತಾ ಅಭಿಯಾನ

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಾಡುವುದು, ತ್ಯಾಜ್ಯಮುಕ್ತ ನಗರಪಾಲಿಕೆ ರೂಪಿಸಲು ಹಾಗೂ ಸ್ವಚ್ಛ ಸರ್ವೇಕ್ಷಣ 2025-26ರ ಶ್ರೇಯಾಂಕ ಪಟ್ಟಿಯಲ್ಲಿ ರಾಷ್ಟ್ರ ಮಟ್ಟದಲ್ಲಿ ಉತ್ತಮ ಸ್ಥಾನಗಳಿಸಲು ‘ಬೃಹತ್ ಸ್ವಚ್ಛತಾ ಅಭಿಯಾನ’ವನ್ನು ಮಂಗಳವಾರದಿಂದ ಹಮ್ಮಿಕೊಳ್ಳಲಾಗಿದೆ.

ಬಸ್ ತಂಗುದಾಣ, ಬೆಸ್ಕಾಂನ ವಿದ್ಯುತ್ ಪರಿವರ್ತಕಗಳ (ಟಿಸಿ) ಸುತ್ತಮುತ್ತ ಸ್ವಚ್ಛತೆ ಕಾಪಾಡುವುದು, ಖಾಲಿ ನಿವೇಶನಗಳಲ್ಲಿನ ತ್ಯಾಜ್ಯ ತೆರವು, ದೇವಸ್ಥಾನಗಳ ಸುತ್ತಮುತ್ತ ಸ್ವಚ್ಛತೆ, ಪುರಾತನ/ ಐತಿಹಾಸಿಕ ಸ್ಥಳ, ಉದ್ಯಾನ ಹಾಗೂ ಆಟದ ಮೈದಾನಗಳಲ್ಲಿನ ಕಸ ತೆರವು, ಪಾದಚಾರಿ ಮೇಲ್ಸೇತುವೆಗಳು ಹಾಗೂ ಅಂಡರ್ ಪಾಸ್‌ಗಳು, ಬೃಹತ್ ನೀರುಗಾಲುವೆ, ಕೆರೆ, ಸಾರ್ವಜನಿಕ ಶೌಚಾಲಯ, ಮಾರುಕಟ್ಟೆ, ರಸ್ತೆ ವಿಭಜಕ, ಸರ್ಕಾರಿ ಶಾಲಾ- ಕಾಲೇಜುಗಳ ಸುತ್ತಮುತ್ತ ಸ್ವಚ್ಛಗೊಳಿಸಲಾಗುತ್ತದೆ ಎಂದು ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ಒಟ್ಟಾಗಿ ಬಾಳಿದ್ದೇವೆ ಎಂಬುದು ಸಕಾರಣವಲ್ಲ: ಕೋರ್ಟ್ ಅಭಿಮತ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಪತ್ನಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿ ಆತ್ಮಹತ್ಯೆಗೆ ಪ್ರಚೋದಿಸಿದ ಆರೋಪದಲ್ಲಿ ಪತಿ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣವೊಂದನ್ನು ರದ್ದುಗೊಳಿಸಲು ಹೈಕೋರ್ಟ್ ಸ್ಪಷ್ಟವಾಗಿ ನಿರಾಕರಿಸಿದೆ.

ಈ ಸಂಬಂಧ ಆರ್‌.ಟಿ.ನಗರದ ಎಂ.ಆರ್‌.ಪಾಳ್ಯ ನಿವಾಸಿ ಎಸ್‌. ಮಣಿಕಂಠನ್ (35), ‘ನನ್ನ ವಿರುದ್ಧ ನಗರದ 7ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ವಜಾಗೊಳಿಸಿದೆ.

ಅರ್ಜಿದಾರರ ಪರ ವಕೀಲರು ವಾದಿಸಿ, ‘ಮಣಿಕಂಠನ್ ಮತ್ತು ಮೃತ ಪತ್ನಿ 15 ವರ್ಷ ಒಟ್ಟಾಗಿ ಜೀವನ ನಡೆಸಿದ್ದವರು. ಪತ್ನಿ ಆತ್ಮಹತ್ಯೆಗೆ ಯತ್ನಿಸಿದ ತಕ್ಷಣವೇ ಆಕೆಯನ್ನು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದ್ದರಿಂದ, ಪ್ರಕರಣ ರದ್ದುಗೊಳಿಸಿ’ ಎಂದು ಕೋರಿದ್ದರು.

ಇದನ್ನು ತಳ್ಳಿ ಹಾಕಿರುವ ಪೀಠ, ‘ದಂಪತಿ ಒಟ್ಟಾಗಿ ವೈವಾಹಿಕ ಜೀವನ ನಡೆಸಿದ್ದಾರೆ ಎಂಬುದಷ್ಟೇ ಆರೋಪಿ ವಿರುದ್ಧದ ಪ್ರಕರಣ ರದ್ದುಪಡಿಸಲು ಸಕಾರಣ ಎನಿಸುವುದಿಲ್ಲ. ಅರ್ಜಿದಾರರ ವಿರುದ್ಧ ಪ್ರಕರಣ ಮುಂದುವರೆಸಲು ದೋಷಾರೋಪ ಪಟ್ಟಿಯಲ್ಲಿ ಸಾಕಷ್ಟು ಪ್ರಾಥಮಿಕ ಸಾಕ್ಷ್ಯಾಧಾರಗಳಿವೆ. ಆದ್ದರಿಂದ, ನ್ಯಾಯಿಕ ವಿಚಾರಣೆ ಎದುರಿಸುವುದು ಅನಿವಾರ್ಯ’ ಎಂದಿತು.

ಮನೆಗೆ ಬಣ್ಣ ಬಳಿಯುವ ವಿಚಾರಕ್ಕೆ ಮಣಿಕಂಠನ್ ಅವರು ಬಿ.ಎ.ವರ್ಷಾ ನಡುವೆ ಗಲಾಟೆ ನಡೆದಿತ್ತು. ಈ ವೇಳೆ ಮಣಿಕಂಠನ್ ಮಕ್ಕಳ ಎದುರಿನಲ್ಲಿ ಪತ್ನಿಯ ಮೇಲೆ ದೈಹಿಕ ಹಲ್ಲೆ ನಡೆಸಿ ಮನೆ ಬಿಟ್ಟು ಹೋಗುವಂತೆ ಕೂಗಾಡಿದ್ದರು. ಈ ಘಟನೆ ಬಳಿಕ ತಕ್ಷಣವೇ ಕೊಠಡಿಯೊಳಗೆ ಹೋಗಿದ್ದ ಪತ್ನಿ, ಒಳಗಿನಿಂದ ಬಾಗಿಲ ಚಿಲಕ ಹಾಕಿಕೊಂಡು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

‘ನೈಸ್ ಯೋಜನೆ: ವರದಿ ಬಳಿಕ ಕ್ರಮ’

ವಿಧಾನಸಭೆಯಲ್ಲಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ (ನೈಸ್) ಯೋಜನೆಗೆ ಸಂಬಂಧಿಸಿದಂತೆ, ಗೃಹ ಸಚಿವ ಜಿ. ಪರಮೇಶ್ವರ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ಅಂತಿಮ ವರದಿ ಸಲ್ಲಿಸಿದ ನಂತರ ಸರ್ಕಾರ ಮುಂದಿನ ಕ್ರಮ ಕೈಗೊಳ್ಳಲಿದೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಉಚ್ಚಾಟಿತ ಸದಸ್ಯ ಎಸ್.ಟಿ. ಸೋಮಶೇಖರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ನೈಸ್ ರಸ್ತೆ ಹಾದು ಹೋಗುವ ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪೆರಿಫೆರಲ್ ರಸ್ತೆಯಲ್ಲಿ 37 ಮತ್ತು ಎಕ್ಸ್‌ಪ್ರೆಸ್ ವೇನಲ್ಲಿ ಐದು ಕೆಳ-ಮೇಲ್ಸೇತುವೆಗಳಿವೆ. ಈ ಕೆಳ-ಮೇಲ್ಸೇತುವೆಗಳನ್ನು ವಿಸ್ತರಿಸಬೇಕಾದ ಅಗತ್ಯವಿದೆ. ಈ ಸಂಬಂಧ ಎರಡು ಸಭೆ ಕೂಡಾ ಮಾಡಲಾಗಿದೆ. ಈ ಸಂಬಂಧ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ನೀಡುವಂತೆ ನೈಸ್ ಸಂಸ್ಥೆಗೆ ಎರಡು ಬಾರಿ ಪತ್ರ ಬರೆಯಲಾಗಿದೆ. ಈವರೆಗೂ ಪ್ರತಿಕ್ರಿಯೆ ಬಂದಿಲ್ಲ’ ಎಂದರು. ‘ಈ ಯೋಜನೆಯ ಬಗ್ಗೆ ಹಲವು ಆರೋಪಗಳು ಕೇಳಿಬಂದ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವ ಸಂಪುಟ ಉಪ ಸಮಿತಿ ರಚಿಸಿದ್ದಾರೆ. ಸಮಿತಿ ವರದಿ ಸಲ್ಲಿಸಿದ ಬಳಿಕ ಅಲ್ಲಿನ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಬಹುದು’ ಎಂದು ತಿಳಿಸಿದರು.

ಎಸ್.ಟಿ. ಸೋಮಶೇಖರ್ ಮಾತನಾಡಿ, ‘ನೈಸ್ ರಸ್ತೆ ಸಂಬಂಧ ಭೂಸ್ವಾಧೀನವಾಗಿ ಸುಮಾರು 35 ವರ್ಷಗಳೇ ಆಗಿವೆ. ಜಮೀನು ನೀಡಿದ ರೈತರಿಗೆ ಈವರೆಗೂ ಪರಿಹಾರ ಕೊಟ್ಟಿಲ್ಲ. ಈ ರಸ್ತೆಯಲ್ಲಿ ದಿನಕ್ಕೆ ₹ 10 ಕೋಟಿ ಟೋಲ್ ಶುಲ್ಕ ಸಂಗ್ರಹಿಸಲಾಗುತ್ತಿದೆ’ ಎಂದರು.



ನೈಸ್ ರಸ್ತೆ

‘ನನ್ನ ಕ್ಷೇತ್ರದಲ್ಲಿ (ಯಶವಂತಪುರ) ಹಾದು ಹೋಗುವ ಈ ರಸ್ತೆಯಲ್ಲಿ ಎಂಟು ಮೇಲ್ಸೇತುವೆಗಳು ಕಿರಿದಾಗಿದ್ದು, ವಾಹನ ಸಂಚಾರ ದಟ್ಟಣೆ, ಅಪಘಾತಗಳು ಹೆಚ್ಚಾಗಿವೆ. ವಿಸ್ತರಿಸುವಂತೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಈ ಹಿಂದೆ ಟಿ.ಬಿ. ಜಯಚಂದ್ರ ನೇತೃತ್ವದ ಸದನ ಸಮಿತಿ ವರದಿ ನೀಡಿದ್ದರೂ ಏನೂ ಪ್ರಯೋಜವಾಗಿಲ್ಲ. ನೈಸ್ ಕಂಪನಿ ಮಾಲೀಕ ಸರ್ಕಾರ ಹೇಳಿದರೂ ಕೇಳುವುದಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಕಂಪನಿಯ ಗುತ್ತಿಗೆ ರದ್ದುಪಡಿಸಿ’

‘ಈಗ 1,700 ಎಕರೆಯಲ್ಲಿ ಬಡಾವಣೆ ನಿರ್ಮಿಸಲು ಮುಂದಾಗಿದ್ದಾರೆ. ರೈತರಿಗೆ ಪರಿಹಾರ ಸಿಗದೆ ಸಮಸ್ಯೆಯಾಗಿದೆ. ಬಿಜೆಪಿ ಸರ್ಕಾರ ಇದ್ದಾಗಲೂ ಏನೂ ಮಾಡಿಲ್ಲ. ಸಚಿವರ ಪತ್ರಗಳಿಗೆ ಕಿಮ್ಮತ್ತಿಲ್ಲ. ಏನಾದರೂ ಕ್ರಮ ಕೈಗೊಂಡರೆ ತಡೆಯಾಜ್ಞೆ ತರುತ್ತಾರೆ. ಹೀಗಾಗಿ ನೈಸ್ ಕಂಪನಿಯ ಗುತ್ತಿಗೆ ರದ್ದುಪಡಿಸಬೇಕು’ ಎಂದು ಸೋಮಶೇಖರ್ ಆಗ್ರಹಿಸಿದರು.

‘ನೈಸ್ ರಸ್ತೆ ಹಾದು ಹೋಗುವ ಮಾರ್ಗದಲ್ಲಿ ಏಳು ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ಸಚಿವ ಸಂಪುಟ ಉಪ ಸಮಿತಿ ಒಂದೇ ಒಂದು ಸಭೆ ಮಾಡಲು ಹೆದರುವ ಸ್ಥಿತಿ ಇದೆ. ಈಗಾಗಲೇ ಕಂಪನಿಯ 30 ವರ್ಷದ ಗುತ್ತಿಗೆ ಅವಧಿ ಮುಗಿದಿದೆ. 1 ಎಕರೆ ಜಮೀನಿನ ಬೆಲೆ ₹ 7 ಕೋಟಿಯಿಂದ ₹ 8 ಕೋಟಿ ಆಗಿದೆ. ಹೀಗಾಗಿ, ಗುತ್ತಿಗೆ ನವೀಕರಿಸದೆ ರದ್ದು ಮಾಡಬೇಕು’ ಎಂದೂ ಒತ್ತಾಯಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಸತೀಶ ಜಾರಕಿಹೊಳಿ, ‘ಸಂಬಂಧಿಸಿದ ಶಾಸಕರನ್ನು ಸಚಿವ ಸಂಪುಟ ಉಪ ಸಮಿತಿ ಸಭೆಗೆ ಆಹ್ವಾನಿಸಿ ಅಭಿಪ್ರಾಯ ಪಡೆಯಲಾಗುವುದು’ ಎಂದು ಭರವಸೆ ನೀಡಿದರು.

‘ನಕಲಿ ಹಕ್ಕುಪತ್ರ: ತಪ್ಪಿತಸ್ಥರ ವಿರುದ್ಧ ಕ್ರಮ’

ಬೆಂಗಳೂರು: ‘ವಸತಿ ಯೋಜನೆಯಡಿ ನಕಲಿ ಹಕ್ಕು ಪತ್ರ ನೀಡಿದ ಏಳು ಪ್ರಕರಣಗಳಲ್ಲಿ ದೂರು ದಾಖಲಾಗಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಮುನಿರತ್ನ, ‘ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ರಾಜ ರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿ 2023-24ರಿಂದ 2025-26ರವರೆಗೆ ಕೇವಲ ₹ 24.65 ಲಕ್ಷ ವೆಚ್ಚ ಮಾಡಲಾಗಿದೆ. ನನ್ನ ಕ್ಷೇತ್ರದ ಕೊಳಗೇರಿ ಪ್ರದೇಶದಲ್ಲಿ 5 ಸಾವಿರ ಮನೆಗಳಿವೆ. 460 ಮನೆಗಳನ್ನು ತೆರವು ಮಾಡಲಾಗಿದ್ದು, ಅಲ್ಲಿ ಹೊಸ ಮನೆಗಳ ನಿರ್ಮಾಣ ಕಾಮಗಾರಿ ಸ್ಥಗಿತವಾಗಿದೆ’ ಎಂದರು.

‘ಮಂಡಳಿಗೆ ಸರ್ಕಾರ ಸಕಾಲಕ್ಕೆ ಹಣ ಕೊಟ್ಟಿಲ್ಲ. ಗುತ್ತಿಗೆದಾರರಿಗೆ ಬಿಲ್ ನೀಡದ ಕಾರಣ ಕಾಮಗಾರಿ ಪ್ರಗತಿ ಕುಂಠಿತವಾಗಿದೆ. 460 ಫಲಾನುಭವಿಗಳು ತಲಾ ₹10 ಸಾವಿರ ಪಾವತಿಸಿದ್ದು, ಉಳಿದ ತಲಾ ₹ 90 ಸಾವಿರ ಪಾವತಿಸಲು ಬಾಕಿಯಿದೆ. ಹೀಗಾಗಿ ಕಾಮಗಾರಿ ಸ್ಥಗಿತವಾಗಿದೆ ಎಂದು ಆರ್‌ಟಿಐ ಅಡಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಫಲಾನುಭವಿಗಳು ತಮ್ಮ ಪಾತ್ರೆಗಳನ್ನು ಮಾರಾಟ ಮಾಡಿದರೂ ₹ 10 ಸಾವಿರ ಸಿಗುವುದಿಲ್ಲ. ₹ 90 ಸಾವಿರ ಎಲ್ಲಿಂದ ತರುತ್ತಾರೆ’ ಎಂದು ಪ್ರಶ್ನಿಸಿದರು.



ಮುನಿರತ್ನ

ಅದಕ್ಕೆ ಜಮೀರ್, ‘ಈ ಹಿಂದೆ ನಿಮ್ಮದೇ ಪಕ್ಷದ ನೇತೃತ್ವದ ಸರ್ಕಾರ ಇದ್ದಾಗ ಹೆಚ್ಚು ಅನುದಾನ ಏಕೆ ತೆಗೆದುಕೊಳ್ಳಲಿಲ್ಲ? ಸರ್ಕಾರ ಕೊಳೆಗೇರಿ ಅಭಿವೃದ್ಧಿಗೆ ₹ 50 ಕೋಟಿ ನೀಡಿದೆ. ಇಡೀ ರಾಜ್ಯದಲ್ಲಿ 2,800 ಕೊಳೆಗೇರಿಗಳಿವೆ. ಬೆಂಗಳೂರಿನಲ್ಲಿ 480 ಇವೆ. ವಸತಿ ಯೋಜನೆಯಡಿ ಒಂದು ಮನೆಗೆ ₹ 7.50 ಲಕ್ಷ ವೆಚ್ಚವಾಗುತ್ತದೆ. ಈ ಪೈಕಿ, ಫಲಾನುಭವಿ ₹ 4.50 ಲಕ್ಷ ಕೊಡಬೇಕಿತ್ತು. ನಾನು ವಸತಿ ಸಚಿವನಾದ ಬಳಿಕ, ಈ ಮೊತ್ತ ಪಾವತಿಸುವುದು ಹೊರೆಯಾಗುತ್ತಿದೆ ಎಂದು ಅರಿತು, ಮುಖ್ಯಮಂತ್ರಿಗೆ ಮನವಿ ಮಾಡಿ ಕಡಿಮೆ ಮಾಡಿಸಿದೆ. ಯಾವುದೇ ಪಕ್ಷ ನೋಡದೆ ನಮ್ಮ ಸರ್ಕಾರ ಸುಮಾರು 80 ಸಾವಿರ ಮನೆಗಳನ್ನು ಹಂಚಿಕೆ ಮಾಡಿದೆ’ ಎಂದರು.

‘ಸಿಎಂ, ಡಿಸಿಎಂ ಭಾವಚಿತ್ರ ಇರುವ ಹಕ್ಕುಪತ್ರ’

‘ವಸತಿ ಸಚಿವರು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯ ಭಾವಚಿತ್ರ ಮತ್ತು ಸಹಿ ಹಾಕಿದ ನಕಲಿ ಹಕ್ಕುಪತ್ರಗಳನ್ನು ಏಳು ಮಂದಿ ಫಲಾನುಭವಿಗಳಿಗೆ ನೀಡಲಾಗಿದೆ’ ಎಂದು ಮುನಿರತ್ನ ದೂರಿದರು.

ಅಂತಹ ನಕಲಿ ಹಕ್ಕು ಪತ್ರಗಳನ್ನು ಪ್ರದರ್ಶಿಸಿದ ಅವರು, ‘ಇದಕ್ಕೆ ಯಾರು ಹೊಣೆ. ಹೀಗಾದಲ್ಲಿ, ಯಾರ ವಿರುದ್ಧ ತನಿಖೆಗೆ ಆಗ್ರಹಿಸಬೇಕು’ ಎಂದೂ ಪ್ರಶ್ನಿಸಿದರು.

ಸುದ್ದಿ 2 ನಿಮಿಷ

ಆದಾಯ ಕೊಡುವ ಬೆಂಗಳೂರಿನ ಅಭಿವೃದ್ಧಿ ಇಲ್ಲ: ಆರ್.ಅಶೋಕ

ಬೆಂಗಳೂರು: ‘ಬೆಂಗಳೂರು ರಾಜ್ಯದ ಶೇ 65ರಷ್ಟು ಆದಾಯ ಕೊಡುವ ನಗರ. ಇದೊಂದು ರೀತಿ ಹಾಲು ಕೊಡುವ ಹಸು ಇದ್ದಂತೆ. ಈ ಸರ್ಕಾರದಲ್ಲಿ ಹಾಲು ಕೊಡುವ ಹಸುವಿಗೆ ಮೇವಿಲ್ಲ. ಆದಾಯ ಕೊಡುವ ಬೆಂಗಳೂರಿನ ಅಭಿವೃದ್ಧಿ ಇಲ್ಲ ಎಂಬ ಸ್ಥಿತಿಗೆ ತಂದಿಟ್ಟಿದ್ದಾರೆ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಹೇಳಿದರು.

ಬೆಂಗಳೂರಿನ ಸಮಸ್ಯೆಯ ಕುರಿತು ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ‘ಕಳೆದ ಎರಡು–ಮೂರು ವರ್ಷಗಳಿಂದ ಬ್ರ್ಯಾಂಡ್ ಬೆಂಗಳೂರು ಹೆಸರಿನ ಜಪ ಆಗುತ್ತಿದೆಯೇ ಹೊರತು, ಬ್ರ್ಯಾಂಡೂ ಇಲ್ಲ ಬೆಂಗಳೂರೂ ಇಲ್ಲ. ಸಂಚಾರ ದಟ್ಟಣೆ ಸಮಸ್ಯೆ, ಕಸದ ಸಮಸ್ಯೆ ಸೇರಿ ಹಲವು ಸಮಸ್ಯೆಗಳ ಆಗರವಾಗಿದೆ’ ಎಂದು ದೂರಿದರು.

‘ಬೆಂಗಳೂರನ್ನು 5 ಭಾಗವಾಗಿ ವಿಭಜಿಸಿದರು. ಎಲ್ಲ ಪಾಲಿಕೆಗಳು ₹500 ಕೋಟಿಯಿಂದ ₹600 ಕೋಟಿ ಅನುದಾನ ಕೇಳುತ್ತಿವೆ. ಅನುದಾನ ಕೊಡಲು ಸರ್ಕಾರದ ಬಳಿ ಹಣವಿಲ್ಲ. ಈಗ ಬಾಂಡ್ ಮೂಲಕ ₹40 ಸಾವಿರ ಕೋಟಿ ಸಂಗ್ರಹಿಸಲು ಹೊರಟಿದ್ದಾರೆ. ಬಿಬಿಎಂಪಿ ಇದ್ದಾಗ ಬರುತ್ತಿದ್ದ ಆದಾಯ ₹4,600 ಕೋಟಿ. ಬಾಂಡ್ ಮೂಲಕ ಸಂಗ್ರಹಿಸುವ ದೊಡ್ಡ ಮೊತ್ತ ತೀರಿಸುವವರು ಯಾರು? ಇದು ಬೆಂಗಳೂರಿಗರ ಮೇಲೆ ಚಪ್ಪಡಿ ಎಳೆಯುವ ಕೆಲಸ’ ಎಂದು ಟೀಕಿಸಿದರು.



‘ಕಸದ ಸಮಸ್ಯೆಯ ಬಗ್ಗೆ ಪ್ರಶ್ನಿಸಿದರೆ ನಮ್ಮ ಮನೆ ಮುಂದೆ, ನಮ್ಮ ಪಕ್ಷದ ಕಚೇರಿ ಮುಂದೆ ಕಸ ಸುರಿಯುವುದಾಗಿ ಡಿ.ಕೆ.ಶಿವಕುಮಾರ್ ಧಮ್ಕಿ ಹಾಕುತ್ತಾರೆ. ಇದೊಂದು ರೀತಿ ರಾಜಕೀಯ ವಿರೋಧಿಗಳಿಗೆ ಧಮ್ಕಿ ಹಾಕುವ ಸರ್ಕಾರವಾಗಿದೆ’ ಎಂದರು. ವಿಷಯವನ್ನು ನಿಯಮ 69ರಡಿ ಪ್ರಸ್ತಾಪಕ್ಕೆ ಅವಕಾಶ ನೀಡುವುದಾಗಿ ಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ವಿಶ್ವವಿದ್ಯಾಲಯಗಳ ಸ್ಥಿತಿಗತಿ ಸಚಿವ ಸುಧಾಕರ್ ಬೇಸರ


ಬೆಂಗಳೂರು: ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳ ಸ್ಥಿತಿಗತಿಗಳ ಬಗ್ಗೆ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅಸಮಾಧಾನ ವ್ಯಕ್ತಪಡಿಸಿದರು. ಸರ್ಕಾರಿ ವಿಶ್ವವಿದ್ಯಾಲಯಗಳ ಶಿಕ್ಷಣದ ಗುಣಮಟ್ಟ, ಭ್ರಷ್ಟಾಚಾರದ ಆರೋಪಗಳು, ದುರ್ಬಲ ಆಡಳಿತ ಮತ್ತು ಸಿಬ್ಬಂದಿ ಕೊರತೆ ಬಗ್ಗೆ ಕೇಳಿದ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ‘ವಿಶ್ವವಿದ್ಯಾಲಯಗಳ ಭ್ರಷ್ಟ ಆಡಳಿತಕ್ಕೆ ಸದನದಲ್ಲಿ ಉತ್ತರ ಕೊಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ವಿಶ್ವವಿದ್ಯಾಲಯಗಳ ಸುಧಾರಣೆಗೆ ಕ್ರಮ ಕೈಗೊಂಡಿದ್ದು, ಎಲ್ಲರೂ ಪಕ್ಷಭೇದ ಮರೆತು ಕೈಜೋಡಿಸಬೇಕು’ ಎಂದರು.

ಮೂರು ವಿಶ್ವವಿದ್ಯಾಲಯಗಳ ವಿರುದ್ಧ ಬಂದಿರುವ ಆರೋಪಗಳ ತನಿಖೆಗೆ ಸರ್ಕಾರ ಸಮಿತಿಗಳನ್ನು ರಚಿಸಿದೆ. ಅಂಕಪಟ್ಟಿ ಮುದ್ರಣವನ್ನು ನಿಷೇಧಿಸಿದ್ದರೂ ಒಂದು ವಿಶ್ವವಿದ್ಯಾಲಯವು ಅಂಕಪಟ್ಟಿ ಮುದ್ರಣಕ್ಕೆ ₹11 ಕೋಟಿ ರೂಪಾಯಿ ಖರ್ಚು ಮಾಡಿದೆ. ಆದೇಶದ ಪ್ರಕಾರ ದಾಖಲೆಗಳನ್ನು ಎನ್‌ಎಡಿ ಮತ್ತು ಡಿಜಿಲಾಕರ್ ಮೂಲಕ ನೀಡಬೇಕು. ವಿದೇಶದಲ್ಲಿ ಉನ್ನತ ವಿದ್ಯಾಭ್ಯಾಸಕ್ಕೆ ಅಗತ್ಯವಿದ್ದಲ್ಲಿ ಮಾತ್ರ ಕನಿಷ್ಠ ಭದ್ರತಾ ವೈಶಿಷ್ಟ್ಯಗಳೊಂದಿಗೆ ಪ್ರಮಾಣಪತ್ರಗಳನ್ನು ಮುದ್ರಿಸಲು ಅವಕಾಶ ಇದೆ ಎಂದು ಹೇಳಿದರು.

ಎಸ್‌ಎಸ್‌ಇಗೆ ಸಮಿತಿ: ರಾಜ್ಯದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿ ಆಯ್ಕೆ ಪರೀಕ್ಷೆಗಳನ್ನು (ಎಸ್‌ಎಸ್‌ಇ) ಬರೆಯಲು ಸಹಾಯವಾಗುವಂತೆ ರಾಜ್ಯ ಉನ್ನತ ಶಿಕ್ಷಣ ಇಲಾಖೆ ಸಮಿತಿಯನ್ನು ರಚಿಸಿದೆ. ಈ ಸಮಿತಿಗೆ ತಿಮ್ಮೇಗೌಡ ಅವರು ಅಧ್ಯಕ್ಷರಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಚಿಟಿಕೆ ಸುದ್ದಿ

ಕಿರು ಅರಣ್ಯಕ್ಕೆ ಬೆಂಕಿ



ರಾಜರಾಜೇಶ್ವರಿನಗರ: ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಹೊಂದಿಕೊಂಡಂತಿರುವ ಭಾರತೀಯ ಸಾಂಖ್ಯಿಕ ಸಂಸ್ಥೆಯ ಪಕ್ಕದ ಕಿರು ಅರಣ್ಯಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದು, ಹಲವು ಮರಗಳು ಸುಟ್ಟು ಹೋಗಿವೆ.

‘ಸೋಮವಾರ ಬೆಂಕಿ ಬಿದ್ದಿದ್ದನ್ನು ಗಮನಿಸಿದ ಸ್ಥಳೀಯರು ಜಿಬಿಎಗೆ ಮಾಹಿತಿ ನೀಡಿದ್ದರು. ಬಿಜಿಎ ಅರಣ್ಯ ವಿಭಾಗ ಎಚ್ಚೆತ್ತುಕೊಳ್ಳುವ ಹೊತ್ತಿಗೆ ಮರಗಳು ಬೆಂಕಿಗೆ ಆಹುತಿಯಾಗಿದ್ದವು’ ಎಂದು ಸ್ಥಳೀಯರು ತಿಳಿಸಿದರು.

‘ಈ ಕಿರು ಅರಣ್ಯ ವ್ಯಾಪ್ತಿಯಲ್ಲಿ ಆಗಾಗ ಬೆಂಕಿ ಹಚ್ಚಿ ಮರಗಳನ್ನು ಸುಟ್ಟು ಹಾಕುವುದು ನಡೆಯುತ್ತಿದ್ದರೂ ತಡೆಗಟ್ಟುವ ಕೆಲಸ ಆಗುತ್ತಿಲ್ಲ. ಮುನ್ನೆಚ್ಚರಿಕೆ ಕ್ರಮಗಳನ್ನು ಅಧಿಕಾರಿಗಳು ಕೈಗೊಳ್ಳುತ್ತಿಲ್ಲ. ಬೇಸಿಗೆ ಇರುವುದರಿಂದ ಈ ಬಗ್ಗೆ ಗಮನ ಹರಿಸಬೇಕು’ ಎಂದು ಸ್ಥಳೀಯರಾದ ರಾಜಶೇಖರ್ ಹೇಳಿದರು.

ನೋಟು ಮುದ್ರಣದ ಹೆಸರಲ್ಲಿ ವಂಚನೆ 7 ಮಂದಿ ಬಂಧನ

ಗೋಕಾಕ (ಬೆಳಗಾವಿ ಜಿಲ್ಲೆ): ಕಪ್ಪು ಬಣ್ಣದ ಕಾಗದ ಬಳಸಿ ನೋಟು ಮುದ್ರಿಸಬಹುದು ಎಂದು ನಂಬಿಸಿ ಜನರನ್ನು ವಂಚಿಸುತ್ತಿದ್ದ ಜಾಲವೊಂದನ್ನು ಭೇದಿಸಿರುವ ಜಿಲ್ಲಾ ಪೊಲೀಸರು, ಮಹಾರಾಷ್ಟ್ರದ ಇಬ್ಬರು ಪೊಲೀಸ್ ಕಾನ್‌ಸ್ಟೆಬಲ್‌ಗಳೂ ಸೇರಿದಂತೆ ಏಳು ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಅವರು, ‘ನೋಟು ತಯಾರಿಸುವ ಯಂತ್ರಗಳನ್ನು ಹಾಗೂ ನೀವು ಕೊಡುವ ಹಣದ ನಾಲ್ಕು ಪಟ್ಟು ಕಪ್ಪು ಕಾಗದವನ್ನು ಕೊಡುತ್ತೇವೆ ಎಂದು ಆರೋಪಿಗಳು ವಂಚಿಸುತ್ತಿದ್ದರು’ ಎಂದರು.



ಗೋಕಾಕದ ಪರಶುರಾಮ ಬಡಕರಿ, ಇಮ್ರಾನ್ ಜುನೇದಿ, ಮೆಹಬೂಬ ದೇಸಾಯಿ, ಮಹಾರಾಷ್ಟ್ರದ ಜಯಶ್ರೀ ಕಾಂಬಳೆ, ಮನಿಷಾ ಗಾಯಕವಾಡ, ಉಜ್ವಲಾ ಬಿಲಾನೆ, ಕಾನ್‌ಸ್ಟೆಬಲ್ ಅನಂತ ನರವಾಡೆ ಹಾಗೂ ಹೆಡ್ ಕಾನ್‌ಸ್ಟೆಬಲ್ ದಿಲದಾರ್ ಶೇಖ್ ಆರೋಪಿಗಳು. ಈ ಪೈಕಿ ಮೆಹಬೂಬ ದೇಸಾಯಿ ಪರಾರಿಯಾಗಿದ್ದು, ಉಳಿದ ಏಳು ಜನರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

12 ಮಹಿಳೆಯರಿಗೆ ಸ್ಪಂದನಾ ಪ್ರಶಸ್ತಿ

ಆನೇಕಲ್: ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕಿಯರಿಗೆ ಮಹಿಳಾ ದಿನಾಚರಣೆ ಪ್ರಯುಕ್ತ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ಸ್ಪಂದನಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಗಿರಿಜಾ ಲೋಕೇಶ್, ಅಕ್ಷತಾ ಪಾಂಡವಪುರ, ವೈಜಯಂತಿ ಕಾಶಿ (ಸಿನಿಮಾ), ಶರ್ಮಿತಾ ಶೆಟ್ಟಿ, ಪ್ರತಿಮಾ ಭಟ್ (ಪತ್ರಿಕೋದ್ಯಮ), ಮಾನಸಿ ಸುಧೀರ್ (ಕಲೆ), ಛಾಯಾ ನಂಜಪ್ಪ (ಕೃಷಿ), ಡಾ.ಗ್ಲೋರಿ ಅಲೆಕ್ಸಾಂಡರ್, ಡಾ.ಆಶಾ ವಿಜಯ್ (ಆರೋಗ್ಯ), ಬಿ.ಎನ್.ಉಷಾ, ವಿಜಯಲಕ್ಷ್ಮಿ (ಕ್ರೀಡೆ) ಮತ್ತು ಸಿ.ಎನ್.ರಾಧಿಕಾ (ಉದ್ಯಮ) ಅವರಿಗೆ ‘ಅಲಯನ್ಸ್ ಸ್ಪಂದನಾ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಇಸ್ರೊ ವಿಜ್ಞಾನಿ ಶಿವಾಜಿ ಕೊಣಂದೂರ್, ಅಲಯನ್ಸ್ ವಿಶ್ವವಿದ್ಯಾಲಯದ ಸಹ ಕುಲಪತಿ ಅಭಯ್ ಚೆಬ್ಬಿ, ಏಕಲವ್ಯ ಪ್ರಶಸ್ತಿ ಪುರಸ್ಕೃತ ವೇಟ್ ಲಿಫ್ಟರ್ ಉಷಾ.ಬಿ.ಎನ್. ಉಪಸ್ಥಿತರಿದ್ದರು.

‘ಸಹಕಾರ ರಂಗಕ್ಕೆ ಅನನ್ಯ ಕೊಡುಗೆ ನೀಡಿದ್ದ ಪಾಟೀಲ’

ಬೆಂಗಳೂ2ರು: ಸಹಕಾರ ಕ್ಷೇತ್ರಕ್ಕೆ ಅನನ್ಯ ಕೊಡುಗೆಗಳನ್ನು ನೀಡಿ ಸಹಕಾರಿ ಚಳವಳಿಯನ್ನು ಬಲಪಡಿಸುವಲ್ಲಿ ಕೆ.ಎಚ್. ಪಾಟೀಲರು ಪ್ರಮುಖ ಪಾತ್ರ ವಹಿಸಿದ್ದರು ಎಂದು ಶ್ರೀ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಂ.ಆರ್. ವೆಂಕಟೇಶ್ ಹೇಳಿದರು.

ಕೆ.ಎಚ್. ಪಾಟೀಲರ 101ನೇ ಜಯಂತ್ಯುತ್ಸವದ ಪ್ರಯುಕ್ತ ಶ್ರೀ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ನಿರ್ದೇಶಕ ಮಂಡಳಿಯು ಪಾಟೀಲರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿತು. ನಂತರ ಬಿಬಿಎಂಪಿ ಸರ್ಕಾರಿ ಆಸ್ಪತ್ರೆಯ ಬಾಣಂತಿಯರಿಗೆ ಹಣ್ಣು, ಹಾಲಿನ ಕಿಟ್ ವಿತರಿಸಿ ಅವರು ಮಾತನಾಡಿದರು. ರೈತಾಪಿ ವರ್ಗದ ಏಳಿಗೆಗಾಗಿ ಹಗಲು–ರಾತ್ರಿ ಕೆಲಸ ಮಾಡಿದ್ದರು. ಸಹಕಾರ ಚಳವಳಿಯ ಜೊತೆಗೆ ಮುತ್ಸದ್ದಿ ರಾಜಕಾರಣಿಯೂ ಆಗಿದ್ದರು ಎಂದು ನೆನಪು ಮಾಡಿಕೊಂಡರು.

ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯಿಂದ ಯುಪಿಎಸ್‌ಸಿ ಸಾಧಕರಿಗೆ ಸನ್ಮಾನ

‘ಪರೀಕ್ಷೆ ತಯಾರಿಗೆ ದೆಹಲಿಯಲ್ಲಿ ಸೌಲಭ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಲೋಕಸೇವಾ ಆಯೋಗದ(ಯುಪಿಎಸ್‌ಸಿ) ನಾಗರಿಕ ಸೇವಾ ಪರೀಕ್ಷೆ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ನವದೆಹಲಿಗೆ ಹೋಗುವ ಕನ್ನಡಿಗರಿಗೆ ವಿದ್ಯಾರ್ಥಿನಿಲಯ ಸಹಿತ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು’ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ನಗರದ ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯಲ್ಲಿ ತರಬೇತಿ ಪಡೆದು 2025-26ನೇ ಸಾಲಿನ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಆಯ್ಕೆಯಾದ ರಾಜ್ಯದ 19 ಸಾಧಕರಿಗೆ ಪುರಭವನದಲ್ಲಿ ಸೋಮವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕೆಂದರೆ ತಯಾರಿಗೆ ಒತ್ತು ನೀಡಲೇಬೇಕು. ನವದೆಹಲಿಗೆ ಹೋಗಿ ತರಬೇತಿ ಪಡೆಯುವುದು ದುಬಾರಿ ಆಗುವುದರಿಂದ ಹಲವರು ಪ್ರಯತ್ನವನ್ನೇ ಮಾಡುವುದಿಲ್ಲ. ಈ ಕಾರಣದಿಂದ ಓದಲು ಬಯಸುವವರಿಗೆ ಸೌಲಭ್ಯಗಳನ್ನು ಒದಗಿಸುವ ಕುರಿತು ಮುಖ್ಯಮಂತ್ರಿಯವರ ಜತೆ ಚರ್ಚಿಸುತ್ತೇನೆ’ ಎಂದರು.

‘ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ವಿವಿಧ ಇಲಾಖೆಗಳಲ್ಲಿ ಅಧಿಕಾರಿಗಳಾಗುವವರು ಹುದ್ದೆಯನ್ನು ದರ್ಪಕ್ಕೆ ಬಳಸಬಾರದು. ಅಧಿಕಾರಿಗಳು ಒಳ್ಳೆಯ ಕೆಲಸ ಮಾಡಿ ಸಮಾಜದಲ್ಲಿ ಬದಲಾವಣೆ ತರಲು ಅವಕಾಶ ಇರುವುದರಿಂದ ಇದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಹೀಗೆ ಒಳ್ಳೆಯ ಕೆಲಸ ಮಾಡಿದ ಅಧಿಕಾರಿಗಳನ್ನು ನನ್ನ ರಾಜಕೀಯ ಜೀವನದಲ್ಲಿ ಕಂಡಿದ್ದೇನೆ’ ಎಂದು ತಿಳಿಸಿದರು.



ಬೆಂಗಳೂರಿನ ಪುರಭವನದಲ್ಲಿ ಸೋಮವಾರ ಇಂಡಿಯಾ ಫಾರ್ ಐಎಎಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯುಪಿಎಸ್‌ಸಿ–ಸಿಎಸ್‌ಇ ಸಾಧಕರನ್ನು ಸನ್ಮಾನಿಸಲಾಯಿತು. ನಿರ್ದೇಶಕರಾದ ಪ್ರಶಾಂತ್ ಶ್ರೀನಿವಾಸ್, ನಯನ್ ಕುಮಾರ್, ಉಪಾಧ್ಯಕ್ಷ ಗಾ.ನಂ. ಶ್ರೀಕಂಠಯ್ಯ, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಅಕಾಡೆಮಿ ಅಧ್ಯಕ್ಷ ಸಿ.ಎಸ್. ಕೇದಾರ್, ಸಹ ಸಂಸ್ಥಾಪಕ ಪಿ.ಸಿ. ಶ್ರೀನಿವಾಸ್, ಬಾಬು ಸಂದೀಪ್ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಇಂಡಿಯಾ ಫಾರ್ ಐಎಎಸ್ ಅಕಾಡೆಮಿ ಅಧ್ಯಕ್ಷ ಸಿ.ಎಸ್.ಕೇದಾರ್ ಮಾತನಾಡಿ, ‘ದೆಹಲಿಯಲ್ಲಿ ಕ್ಯಾಬಿನೆಟ್ ಕಾರ್ಯದರ್ಶಿಯಾಗಿದ್ದಾಗ ಅಲ್ಲಿಗೆ ತಯಾರಿಗೆ ಬರುತ್ತಿದ್ದ ಕನ್ನಡಿಗರನ್ನು ನೋಡಿ ಅಕಾಡೆಮಿ ಸ್ಥಾಪಿಸಿದೆವು. 5 ವರ್ಷದಲ್ಲಿ ಹಲವರು ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಸಹಕಾರಿಯಾಗಿದೆ. ಈ ವರ್ಷ 22 ಅಭ್ಯರ್ಥಿಗಳು ಆಯ್ಕೆಯಾಗಿದ್ದು, ಕನ್ನಡಿಗರೇ 19 ಮಂದಿ ಇದ್ದಾರೆ. ಕನ್ನಡಿಗರು ಮೊದಲ 10 ರ‍್ಯಾಂಕ್ ಒಳಗೆ ಆಯ್ಕೆಯಾಗುವುದು ಕಡಿಮೆ ಇದ್ದು, ಇದಕ್ಕಾಗಿ ವಿಶೇಷ ಗಮನ ನೀಡುತ್ತೇವೆ’ ಎಂದರು.

ಅಕಾಡೆಮಿ ಉಪಾಧ್ಯಕ್ಷ ಗಾ.ನಂ. ಶ್ರೀಕಂಠಯ್ಯ, ಸಿಇಒ ಪಿ.ಸಿ.ಶ್ರೀನಿವಾಸ್, ನಿರ್ದೇಶಕರಾದ ನಯನಕುಮಾರ್, ನವೀನ್, ಬಾಬು ಸಂದೀಪ್, ಪ್ರಕಾಶ್ ಶ್ರೀನಿವಾಸ್ ಉಪಸ್ಥಿತರಿದ್ದರು.

ನಗರದಲ್ಲಿ ತುಂತುರು ಮಳೆ



ಬೆಂಗಳೂರು: ನಗರದಲ್ಲಿ ಕೆಲವು ಭಾಗಗಳಲ್ಲಿ ಸೋಮವಾರ ತಡರಾತ್ರಿ ತುಂತುರು ಮಳೆಯಾಯಿತು. ಕಳೆದ 15 ದಿನದಿಂದ ನಗರದಲ್ಲಿ ಬಿಸಿಲು ಹೆಚ್ಚಾಗಿ ಉಷ್ಣಾಂಶ ಅಧಿಕವಾಗಿತ್ತು. ಸೋಮವಾರ ಬೆಳಿಗ್ಗೆಯಿಂದ ಮೋಡಕವಿದ ವಾತಾವರಣವಿತ್ತು. ರಾತ್ರಿ 10ರ ನಂತರ ಗಾಳಿಯೊಂದಿಗೆ ತುಂತುರು ಮಳೆ ಆರಂಭವಾಯಿತು. ತಡರಾತ್ರಿವರೆಗೂ ಗುಡುಗು ಸಹಿತ ತುಂತುರು ಮಳೆಯಾಯಿತು. ಮೈಸೂರು ರಸ್ತೆ, ನಾಯಂಡಹಳ್ಳಿ, ವಿಜಯನಗರ, ದೀಪಾಂಜಲಿನಗರ, ಹೊಸಕೆರೆಹಳ್ಳಿ, ರಾಜರಾಜೇಶ್ವರಿ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಳೆಯಾಯಿತು.

ಮಳೆ: ಬೆಂಗಳೂರಿನಲ್ಲಿ ಮಂಗಳವಾರದಿಂದ ಮೂರು ದಿನ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಹೈದರಾಬಾದ್ ರೇಸ್

ವ್ಯಾಸ ಗೆಲ್ಲುವ ನಿರೀಕ್ಷೆ

ಒಣ್ಣುಒಣ್ಣುಒಣ್ಣು ಪ್ಲೇಟ್ ರೇಸ್ ಮೊದಲನೇ ಡಿವಿಜನ್ ಮಂಗಳವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವ್ಯಾಸ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3:00ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡಿಲಿಜೆನ್ಸ್ 4, ಲಾ ಕ್ವಿಂಟಾ 5, ರೆಡ್ ಹಾಟ್ ಪಂಚ್ 6
2ನೇ ರೇಸ್: ಕ್ರಿಮ್‌ಸನ್ ರೋಸ್ 1, ಡ್ರೀಮ್ ಟು ಫ್ಲೈ 7, ನಾಟಿ ಸೆನೊರಿಟ 3
3ನೇ ರೇಸ್: ವ್ಯಾಸ 9, ಡೆಕಾಯ್ 2, ಲಕ್ಕಿ ಜೋನ್ 13
4ನೇ ರೇಸ್: ಭೈರವ 4, ಕ್ಲಾರಾ 2, ರೈವಲ್ 3
5ನೇ ರೇಸ್: ಫ್ಯೂಗೊ 2, ನಾಟಿ ಸರ್ಕ್ಯೂಟ್ 2, ಡಿವೈನ್ ಟೈಗರ್ 1
6ನೇ ರೇಸ್: ನಾರ್ದರನ್ ವೇವ್ಸ್ 5, ಚೆರಿ ಷೆವಾಲಿಯರ್ 1, ಅರಬೆಸ್ಕಾ 6
7ನೇ ರೇಸ್: ಅಥಾರಿಟೇರಿಯನ್ 1, ಅಮೆರಿಕನ್ ಫ್ಲೇಮ್ 3, ಕ್ಯಾಚ್ ಮಿ ಇಫ್ ಯು ಕ್ಯಾನ್ 2

ಉತ್ತಮ ಬೆಟ್: ಭೈರವ

ಜಾಕ್‌ಪಾಟ್	1ನೇ ಟ್ರಬಲ್	3ನೇ ಟ್ರಬಲ್
3,4,5,6,7	2,3,4	5,6,7

ಸೋನಿಯಾಗೆ ದೇವೇಗೌಡ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ ಅಧಿವೇಶನದಲ್ಲಿ ವಿಪಕ್ಷಗಳಿಂದ, ಅದರಲ್ಲಿಯೂ ಕಾಂಗ್ರೆಸ್ ಸದಸ್ಯರಿಂದ ಕಲಾಪಕ್ಕೆ ತೀವ್ರ ಅಡ್ಡಿ ಉಂಟಾಗುತ್ತಿದ್ದು, ಈ ಬಗ್ಗೆ ತಿಳಿವಳಿಕೆ ಹೇಳಬೇಕು ಎಂದು ಒತ್ತಾಯಿಸಿ ರಾಜ್ಯಸಭೆ ಸದಸ್ಯ ಎಚ್.ಡಿ. ದೇವೇಗೌಡ ಅವರು ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.

‘ಬಜೆಟ್ ಅಧಿವೇಶನದ ವೇಳೆ ಪ್ರತಿಪಕ್ಷಗಳ ಸದಸ್ಯರು ನಿರಂತರವಾಗಿ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದು, ಅದರಲ್ಲಿಯೂ ಕಾಂಗ್ರೆಸ್ ಸಂಸದರು ಸಂಸತ್ತಿನ ಒಳಗೆ ಹಾಗೂ ಆವರಣದಲ್ಲಿ ಘೋಷಣೆ ಕೂಗುವುದು, ಫಲಕ ಪ್ರದರ್ಶನ ಮಾಡುವುದು, ನಿರ್ದಿಷ್ಟವಾಗಿ ಹೆಸರು ಕೂಗುವುದು, ಧರಣಿ ನಡೆಸಿ ಕಲಾಪ ಸ್ಥಗಿತ ಆಗುವಂತೆ ಮಾಡುತ್ತಿದ್ದಾರೆ.



ದೇವೆಗೌಡ

ಇದು ಸಂಸತ್ತಿನ ಘನತೆ ಕುಗ್ಗಿಸುತ್ತಿದೆ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಮೂಲ ತತ್ವಗಳಿಗೆ ಧಕ್ಕೆ ಉಂಟು ಮಾಡುತ್ತದೆ’ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

‘ವಿರೋಧ ಪಕ್ಷದ ನಾಯಕನ ಕರ್ತವ್ಯ ಸುಲಭವಲ್ಲ ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅವರ ಎದುರು ಬೆಟ್ಟದಷ್ಟು ಸವಾಲುಗಳು ಇರುತ್ತವೆ. ಜನರ ಸಂಕಷ್ಟಗಳ ಬಗ್ಗೆ ಕಾಲ ಕಾಲಕ್ಕೆ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಹಾಗಿದ್ದರೂ ಪ್ರತಿಭಟನೆ ಮಾಡುವ ಸಂದರ್ಭ ಬಂದರೆ ಅದಕ್ಕೆ ತನ್ನದೇ ಆದ ರೀತಿ–ನೀತಿ ಇರುತ್ತದೆ’ ಎಂದು ಅವರು ಹೇಳಿದ್ದಾರೆ.

101ನೇ ಜಯಂತ್ಯುತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

‘ಕೆ.ಎಚ್. ಪಾಟೀಲ ಅಪರೂಪದ ರಾಜಕಾರಣಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾನ್ಯ ಹಳ್ಳಿಯಲ್ಲಿ ಹುಟ್ಟಿ ಸಹಕಾರಿ ಧುರೀಣರಾಗಿ ಬೆಳೆದ ಕೆ.ಎಚ್. ಪಾಟೀಲರು ಅಪರೂಪದ ರಾಜಕಾರಣಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕೆ.ಎಚ್. ಪಾಟೀಲರ 101ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

ಹುಲಕೋಟಿಯಂಥ ಗ್ರಾಮದಲ್ಲಿ ಹುಟ್ಟಿ ಪಂಚಾಯಿತಿ ಸದಸ್ಯರಾಗಿ, ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿ, ಸಚಿವರಾಗಿ ಕಾರ್ಯನಿರ್ವಹಿಸಿದ್ದ ಕೆ.ಎಚ್. ಪಾಟೀಲ ಅವರು ಸಹಕಾರಿ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು. ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆ ಮಾತಿನಂತೆ ಸಹಕಾರಿ ಕ್ಷೇತ್ರದಲ್ಲಿ ಇವರು ಮಾಡದಿರುವ ಕೆಲಸವಿಲ್ಲ ಎಂದು ಬಣ್ಣಿಸಿದರು.

ಸಹಕಾರಿ ಕ್ಷೇತ್ರ ಮಾತ್ರವಲ್ಲದೆ, ರಾಜಕೀಯ ಕ್ಷೇತ್ರದಲ್ಲಿಯೂ ತೊಡಗಿಸಿಕೊಂಡಿದ್ದರು. ದೇವರಾಜ ಅರಸು, ವೀರೇಂದ್ರ ಪಾಟೀಲ ಹಾಗೂ ಬಂಗಾರಪ್ಪ ಅವರ ಸಂಪುಟದಲ್ಲಿ ಸಚಿವರಾಗಿದ್ದರು ಎಂದು ನೆನಪು ಮಾಡಿಕೊಂಡರು.



ಬಿ.ಎಸ್. ಪರಮಶಿವಯ್ಯ, ಯಲ್ಲಪ್ಪ ರೆಡ್ಡಿ ಅವರಿಗೆ ಕೆ.ಎಚ್. ಪಾಟೀಲ ಪ್ರಶಸ್ತಿಯನ್ನು ಸಿದ್ದರಾಮಯ್ಯ ಪ್ರದಾನ ಮಾಡಿದರು. ಬಸವರಾಜ ಹೊರಟ್ಟಿ, ಎಚ್.ಕೆ. ಪಾಟೀಲ, ವೀರಪ್ಪ ಮೊಯಿಲಿ, ಯು.ಟಿ. ಖಾದರ್, ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು.

ಪಾಟೀಲರು ಕಡಿಮೆ ಓದಿದ್ದರೂ ಅಪಾರವಾದ ಜನಪರ ಕಾಳಜಿಯನ್ನು ಹೊಂದಿದ್ದರು. ಬಡವರು, ದಲಿತರು, ಅಲ್ಪಸಂಖ್ಯಾತರಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಶಕ್ತಿ ತುಂಬಿದ್ದರು. ಅವರ ದಾರಿಯಲ್ಲಿ ಅವರ ಪುತ್ರ ಎಚ್.ಕೆ. ಪಾಟೀಲರು ನಡೆಯುತ್ತಿದ್ದಾರೆ ಎಂದರು.

ಸಾಧಕರಾದ ಯಲ್ಲಪ್ಪ ರೆಡ್ಡಿ, ಬಿ.ಎಸ್. ಪರಮಶಿವಯ್ಯ ಅವರಿಗೆ ಕೆ.ಎಚ್. ಪಾಟೀಲ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನ ಸಭೆಯ ಅಧ್ಯಕ್ಷ ಯು.ಟಿ. ಖಾದರ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನ ಸಭೆಯ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಸಚಿವರಾದ ಕೆ. ಎಚ್.ಮುನಿಯಪ್ಪ, ಎಚ್.ಕೆ.ಪಾಟೀಲ, ರಾಮಲಿಂಗಾರೆಡ್ಡಿ, ಎನ್.ಎಸ್ ಬೋಸರಾಜು, ಶರಣ ಪ್ರಕಾಶ್ ಪಾಟೀಲ, ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಶಾಸಕರು ಉಪಸ್ಥಿತರಿದ್ದರು.

ನಾಗರಿಕರಿಗೆ ಸಿಗದ ಮತದಾರರ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ನಗರ ಪಾಲಿಕೆಗಳ ವಾರ್ಡ್‌ವಾರು ಮತದಾರರ ಪರಿಷ್ಕೃತ ಕರಡು ಪಟ್ಟಿ ನಾಗರಿಕರಿಗೆ ಸಿಗುತ್ತಿಲ್ಲ. ಆನ್‌ಲೈನ್‌ನಲ್ಲಿ ಎಲ್ಲವೂ ಲಭ್ಯ ಎಂದು ಜಿಲ್ಲಾ ಚುನಾವಣಾಧಿಕಾರಿ ಮಹೇಶ್ವರ್ ರಾವ್ ಅವರು ಹೇಳಿದ್ದರೂ, ಅಲ್ಲಿ ಮಾಹಿತಿಯೇ ಇಲ್ಲ.

ಜಿಬಿಎ ವೆಬ್‌ಸೈಟ್‌ನಲ್ಲಿ (https://gba.karnataka.gov.in/electoral2026/) ಮತದಾರರ ಪಟ್ಟಿಯನ್ನು ಹುಡುಕಲು ಸಾಧ್ಯ ಆಗುತ್ತಿಲ್ಲ. ಮತದಾರರ ಗುರುತಿನ ಚೀಟಿ (ಎಪಿಕ್) ಸಂಖ್ಯೆ, ಮತದಾರರ ಹೆಸರು ಹಾಗೂ ಮತಗಟ್ಟೆವಾರು ಮತದಾರರ ಪಟ್ಟಿಯನ್ನು ಪರಿಶೀಲಿಸಿಕೊಳ್ಳಬಹುದು ಎಂದು ಜಿಬಿಎ ಹೇಳಿತ್ತು.

ಈ ಮೂರೂ ಆಯ್ಕೆಗಳು ವೆಬ್‌ಸೈಟ್‌ನಲ್ಲಿ ಲಭ್ಯವಿವೆ. ಇದರಲ್ಲಿ ಎಪಿಕ್ ಹಾಗೂ ಮತದಾರರ ಹೆಸರಿನಲ್ಲಿ ಮತದಾರರ ಪಟ್ಟಿಯನ್ನು ಹುಡುಕಲು ಸಾಧ್ಯವಾಗುತ್ತಿಲ್ಲ. ಈ ಆಯ್ಕೆ ಮೇಲೆ ಕ್ಲಿಕ್ ಮಾಡಿದರೆ, ಆ ಪುಟ ತೆರೆದುಕೊಳ್ಳುವುದಿಲ್ಲ. ಇನ್ನು ಮತಗಟ್ಟೆವಾರು ಮತದಾರರು ತಮ್ಮ ಹೆಸರನ್ನು ಪರಿಶೀಲಿಸಲು ಮುಂದಾದರೆ, ನಗರ ಪಾಲಿಕೆ, ವಾರ್ಡ್ ಸಂಖ್ಯೆ, ಮತಗಟ್ಟೆ ವಿವರ ಬರುತ್ತದೆ. ಮತಗಟ್ಟೆ ಸಂಖ್ಯೆ ಗೊತ್ತಿದ್ದರೆ ಅದನ್ನು ಹುಡುಕಿ, ಆ ಪಟ್ಟಿಯಲ್ಲಿರುವ ಸಾವಿರಾರು ಹೆಸರುಗಳಲ್ಲಿ ತಮ್ಮ ಹೆಸರನ್ನು ಮತದಾರರು ಹುಡುಕಬೇಕು. ‘ಮತಗಟ್ಟೆ ಸಂಖ್ಯೆ ಎಲ್ಲರಿಗೂ ಗೊತ್ತಿರುವುದಿಲ್ಲ. ಎಪಿಕ್ ಸಂಖ್ಯೆ ಹಾಗೂ ಮತದಾರರ ಹೆಸರಿನಿಂದ ಮತಪಟ್ಟಿಯಲ್ಲಿ ನಮ್ಮ ಹೆಸರಿದೆಯೇ ಎಂದು ಹುಡುಕುವುದು ಸಾಧ್ಯ ಆಗುತ್ತಿಲ್ಲ. ದೂರು ಸಲ್ಲಿಸಿದರೂ ಪ್ರಯೋಜನವಾಗಿಲ್ಲ’ ಎಂದು ಗಂಗಾನಗರ ನಿವಾಸಿ ಸುಬ್ರಹ್ಮಣ್ಯ ದೂರಿದರು.



ಅವಧಿ ವಿಸ್ತರಣೆ

ಐದು ನಗರ ಪಾಲಿಕೆಗಳ ವಾರ್ಡ್‌ವಾರು ಮತದಾರರ ಪರಿಷ್ಕೃತ ಕರಡು ಪಟ್ಟಿಗೆ ನಾಗರಿಕರು ದೂರು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿಯನ್ನು ಮಾರ್ಚ್ 20ರವರೆಗೆ ವಿಸ್ತರಿಸಲಾಗಿದೆ ಎಂದು ಜಿಬಿಎ ಪ್ರಕಟಣೆ ತಿಳಿಸಿದೆ.

ಮತದಾರರ ಪರಿಷ್ಕೃತ ಕರಡು ಪಟ್ಟಿಯ ಕುರಿತು ದೂರು ಮತ್ತು ಆಕ್ಷೇಪಣೆಗಳಿದ್ದಲ್ಲಿ ಮಾರ್ಚ್ 10ರಿಂದ ಮಾರ್ಚ್ 16ರವರೆಗೆ ಸಲ್ಲಿಸಲು ಅವಕಾಶ ನೀಡಲಾಗಿತ್ತು. ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯಲ್ಲಿ ದೂರು ಮತ್ತು ಆಕ್ಷೇಪಣೆ ಅವಧಿಯನ್ನು ವಿಸ್ತರಿಸಲು ಒಕ್ಕೊರಲಿನಿಂದ ಮನವಿ ಮಾಡಿದ್ದರು. ಹೀಗಾಗಿ, ರಾಜ್ಯ ಚುನಾವಣಾ ಆಯೋಗಕ್ಕೆ ಅವಧಿಯನ್ನು ವಿಸ್ತರಿಸಲು ಕೋರಿ ಪ್ರಸ್ತಾವ ಸಲ್ಲಿಸಲಾಗಿತ್ತು. ಪ್ರಸ್ತಾವವನ್ನು ಆಯೋಗ ಪರಿಗಣಿಸಿದೆ. ಅದರಂತೆ, ದೂರು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ತಿಳಿಸಲಾಗಿದೆ.

ಷೋಕಾಸ್ ನೋಟಿಸ್‌ಗೆ ಗರಂ

ಪ್ರಜಾವಾಣಿ ವಾರ್ತೆ

ಋತುಚಕ್ರ ರಜೆ

ಬೆಂಗಳೂರು: ‘ರಾಜ್ಯದಲ್ಲಿನ ಮಹಿಳಾ ನೌಕರರಿಗೆ ಅವರ ಋತುಚಕ್ರದ ಸಮಯದಲ್ಲಿ ಒಂದು ದಿನದ ವೇತನ ಸಹಿತ ರಜೆ ನೀಡುವ ಆದೇಶವನ್ನು ಇನ್ನೂ ಯಾಕೆ ಅನುಷ್ಠಾನಕ್ಕೆ ತಂದಿಲ್ಲ ಎಂದು ಉದ್ಯೋಗದಾತರಿಗೆ ಷೋಕಾಸ್ ನೋಟಿಸ್ ನೀಡಕೂಡದು’ ಎಂದು ಹೈಕೋರ್ಟ್ ಸರ್ಕಾರಕ್ಕೆ ಮೌಖಿಕವಾಗಿ ಎಚ್ಚರಿಸಿದೆ.

ರಾಜ್ಯ ಕಾರ್ಮಿಕ ಇಲಾಖೆ 2025ರ ನವೆಂಬರ್ 20ರಂದು ಹೊರಡಿಸಿರುವ ಅಧಿಸೂಚನೆ ಪ್ರಶ್ನಿಸಿ, ‘ಬೆಂಗಳೂರು ಹೋಟೆಲ್‌ಗಳ ಸಂಘ’ದ ಅಧ್ಯಕ್ಷ ಎಚ್.ಎಸ್.ಸುಬ್ರಹ್ಮಣ್ಯ ಸೇರಿದಂತೆ ಇತರರು ಸಲ್ಲಿಸಿರುವ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗ್ಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಬಿ.ಕೆ.ಪ್ರಶಾಂತ್, ‘ಋತುಚಕ್ರದ ರಜೆ ನೀತಿಯು ಹೋಟೆಲ್ ಉದ್ಯಮದಾರರ ಹಿತಾಸಕ್ತಿಗೆ ವಿರುದ್ಧವಾಗಿದೆ. ಅಧಿಸೂಚನೆಯ ಮುಂದುವರಿದ ಭಾಗವಾಗಿ ಸರ್ಕಾರ ಉದ್ಯೋಗದಾತರಿಗೆ ಷೋಕಾಸ್ ನೋಟಿಸ್ ನೀಡುತ್ತಿದೆ. ಇದರಿಂದ ತೀವ್ರ ಸಮಸ್ಯೆಯಾಗುತ್ತಿದೆ’ ಎಂದು ಹೇಳಿದರು.

‘ಮಹಿಳೆಯರಿಗೆ ರಕ್ಷಣೆ ನೀಡುವುದಕ್ಕೆ ನಮ್ಮ ಆಕ್ಷೇಪವೇನೂ ಇಲ್ಲ. ಆದರೆ, ಉದ್ಯಮದ ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟುಕೊಳ್ಳದೇ ಅಧಿಸೂಚನೆ ಜಾರಿಗೊಳಿಸಲು ಮುಂದಾಗಿದೆ. ಕೆಲಸಗಾರರು ಮತ್ತು ಉದ್ಯೋಗದಾತರ ನಡುವೆ ಸಮಾನತೆಯನ್ನು ಕಾಪಾಡುವಲ್ಲಿ ಸರ್ಕಾರ ವಿಫಲವಾಗಿದೆ’ ಎಂದು ದೂರಿದರು.

ಮಧ್ಯಂತರ ಅರ್ಜಿದಾರರಾಗಿರುವ, ಬೆಂಗಳೂರು ಮಹಿಳಾ ವಕೀಲರ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್, ‘ಅಧಿಸೂಚನೆಯಲ್ಲಿ ಉದ್ಯೋಗದಾತರಿಗೆ ಸಮಸ್ಯೆ ಆಗುವಂತಹ ಯಾವುದೇ ಅಂಶಗಳಿಲ್ಲ. ಮಾಹಿತಿಯ ಪ್ರಕಾರ, ಯಾವುದೇ ಉದ್ಯೋಗದಾತರಿಗೆ ಷೋಕಾಸ್ ನೋಟಿಸ್ ಜಾರಿಯಾಗಿಲ್ಲ’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಪ್ರಕರಣ ವಿಚಾರಣೆಯ ಹಂತದಲ್ಲಿರುವಾಗ ಉದ್ಯೋಗದಾತರಿಗೆ ಷೋಕಾಸ್ ನೋಟಿಸ್ ನೀಡುತ್ತಿರುವುದೇಕೆ? ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು. ಹೀಗಾದರೆ, ಷೋಕಾಸ್ ನೋಟಿಸ್‌ಗಳಿಗೆ ತಡೆ ನೀಡಬೇಕಾಗುತ್ತದೆ’ ಎಂದು ಸರ್ಕಾರಕ್ಕೆ ಮೌಖಿಕವಾಗಿ ಎಚ್ಚರಿಸಿತು. ವಾದ-ಪ್ರತಿವಾದ ಆಲಿಸಿ ವಿಚಾರಣೆಯನ್ನು 24ಕ್ಕೆ ಮುಂದೂಡಿತು.

ಹೋಟೆಲ್: ತಿಂಡಿ–ತಿನಿಸು ದರ ಹೆಚ್ಚಳ

ಇಡ್ಲಿ, ವಡೆ, ದೋಸೆ, ಟೀ– ಕಾಫಿಗೆ ₹10ರಿಂದ ₹15 ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜಿನಲ್ಲಿ ವ್ಯತ್ಯಯ ಹಾಗೂ ಅಗತ್ಯ ವಸ್ತುಗಳ ದರ ಹೆಚ್ಚಳ ಮಾಡಿರುವ ಕಾರಣ ಹೋಟೆಲ್‌ಗಳಲ್ಲಿ ತಿಂಡಿ–ತಿನಿಸುಗಳ ದರದಲ್ಲಿ ಶೇಕಡ 10ರಿಂದ 15ರಷ್ಟು ಹೆಚ್ಚಳವಾಗಿದೆ.

ಬೆಂಗಳೂರು ನಗರದಲ್ಲಿ ಇಡ್ಲಿ, ವಡೆ, ದೋಸೆ ಮತ್ತು ಕಾಫಿ–ಟೀ ದರಗಳಲ್ಲಿ ₹10ರಿಂದ ₹15ರವರೆಗೆ ಹೆಚ್ಚಳ ಮಾಡಲಾಗಿದೆ ಎಂದು ಗ್ರಾಹಕರು ಅಳಲು ತೋಡಿಕೊಂಡಿದ್ದಾರೆ.

‘ದಿನಬಳಕೆ ವಸ್ತುಗಳ ದರವೂ ಏರಿಕೆ ಆಗಿದ್ದು, ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಕಾರಣ ತಿಂಡಿ–ತಿನಿಸುಗಳ ದರ ಏರಿಕೆ ಮಾಡಲಾಗುತ್ತಿದೆ. ಇಲ್ಲದಿದ್ದರೆ ಹೆಚ್ಚುವರಿ ಹೊರೆ ನಮ್ಮ ಮೇಲೆಯೇ ಬೀಳಲಿದೆ’ ಎಂದು ಶ್ರೀರಾಮಪುರದ ಹೋಟೆಲ್ ಮಾಲೀಕರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ಬೆಂಗಳೂರು ನಗರದಲ್ಲಿ ಲಕ್ಷಾಂತರ ಜನ ತಿಂಡಿ–ತಿನಿಸುಗಳು ಸೇರಿದಂತೆ ಊಟಕ್ಕಾಗಿ ಹೋಟೆಲ್‌ಗಳನ್ನು ನೆಚ್ಚಿಕೊಂಡಿದ್ದಾರೆ. ಈಗ ಬೆಲೆ ಏರಿಕೆಯು ನಮ್ಮ ಜೇಬಿಗೆ ಕತ್ತರಿ ಬೀಳಲಿದ್ದು, ಹೊರಗಡೆ ಊಟ ಮಾಡುವುದು ದುಬಾರಿಯಾಗಿದೆ’ ಎಂದು ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ವಾಣಿಜ್ಯ ಸಿಲಿಂಡರ್ ನಮಗೆ ಅಗತ್ಯ ಇರುವಷ್ಟು ಸಿಗುತ್ತಿಲ್ಲ. ಕಡಿಮೆ ಪೂರೈಕೆ ಆಗುತ್ತಿದ್ದರೂ ಅದಕ್ಕೆ ದುಪ್ಪಟ್ಟು ಬೆಲೆ ತೆರುತ್ತಿದ್ದೇವೆ. ಕೆಲವು ಸಂದರ್ಭದಲ್ಲಿ ₹ 5,000 ವರೆಗೂ ನೀಡಿ ಎಲ್‌ಪಿಜಿ ಸಿಲಿಂಡರ್ ತೆಗೆದುಕೊಳ್ಳುತ್ತಿದ್ದೇವೆ. ಹಾಗಾಗಿ ತಿಂಡಿ–ತಿನಿಸುಗಳ ದರವನ್ನು ಅನಿವಾರ್ಯವಾಗಿ ಹೆಚ್ಚಳ ಮಾಡಿದ್ದೇವೆ’ ಎಂದು ರಾಜಾಜಿನಗರದ ಪದ್ಮ ಹೋಟೆಲ್ ಮಾಲೀಕ ಮಂಜುನಾಥ್ ತಿಳಿಸಿದರು.

‘ಒಂದು ಸಾವಿರ ಎಲ್‌ಪಿಜಿ ಸಿಲಿಂಡರ್ ಸಾಲದು’



ಅಗತ್ಯ ಸೇವೆ ಅಡಿಯಲ್ಲಿ ಬರುವ ಹೋಟೆಲ್ ಉದ್ಯಮಕ್ಕೆ ಪ್ರತಿನಿತ್ಯ 1 ಸಾವಿರ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪೂರೈಸುವ ಸರ್ಕಾರದ ನಿರ್ಧಾರಕ್ಕೆ ಬೃಹತ್ ಬೆಂಗಳೂರು ಹೋಟೆಲ್‌ಗಳ ಮಾಲೀಕರ ಸಂಘ ಆಕ್ಷೇಪ ವ್ಯಕ್ತಪಡಿಸಿದೆ.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಸುಬ್ರಮಣ್ಯ ಎಸ್.ಹೊಳ್ಳ, ಗೌರವ ಅಧ್ಯಕ್ಷ ಪಿ.ಸಿ. ರಾವ್, ಪ್ರಧಾನ ಕಾರ್ಯದರ್ಶಿ ವೀರೇಂದ್ರ ಕಾಮತ್, ‘ನಮ್ಮ ರಾಜ್ಯದಲ್ಲಿರುವ ಹೋಟೆಲ್‌ಗಳಿಗೆ ನಿತ್ಯ 45 ಸಾವಿರದಿಂದ 50 ಸಾವಿರ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಪೂರೈಕೆ ಮಾಡಬೇಕು. ಆದರೆ, ಸರ್ಕಾರ ನಿತ್ಯ 1 ಸಾವಿರ ಸಿಲಿಂಡರ್‌ಗಳನ್ನು ಪೂರೈಕೆ ಮಾಡುವುದಾಗಿ ಹೇಳುತ್ತಿದೆ. ಇದರಿಂದ ನಮ್ಮ ಉದ್ಯಮ ನಡೆಸುವುದೇ ಕಷ್ಟವಾಗಲಿದೆ’ ಎಂದು ತಿಳಿಸಿದರು.

‘ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ನಾವು ಹೋಟೆಲ್‌ಗಳನ್ನು ಬಂದ್ ಮಾಡದೇ, ಇರುವ ಸಿಲಿಂಡರ್‌ಗಳು ಹಾಗೂ ಎಲೆಕ್ಟ್ರಿಕ್ ಇಂಡಕ್ಷನ್ ಸ್ಟೌಗಳನ್ನು ಬಳಸಿಕೊಂಡು ಗ್ರಾಹಕರಿಗೆ ತಿಂಡಿ–ತಿನಿಸುಗಳನ್ನು ನೀಡುತ್ತಿದ್ದೇವೆ. ಯಾವುದೇ ಕಾರಣಕ್ಕೂ ಹೋಟೆಲ್‌ಗಳನ್ನು ಬಂದ್ ಮಾಡುವುದಿಲ್ಲ’ ಎಂದು ವಿವರಿಸಿದರು.

‘ಹೋಟೆಲ್ ಉದ್ಯಮದ ಅಗತ್ಯಕ್ಕೆ ತಕ್ಕಂತೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪೂರೈಕೆ ಮಾಡುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸಲಾಗುವುದು’ ಎಂದರು.

ಕೆ.ಆರ್. ಸರ್ಕಲ್ ಬಳಿ ಇರುವ ಕೆಂಪಮ್ಮ ಮೆಸ್‌ನಲ್ಲಿ (ಅನ್ನಪೂರ್ಣೇಶ್ವರಿ) ಊಟದ ದರ ₹10 ಹೆಚ್ಚಳ ಮಾಡಲಾಗಿದೆ. ಅಲ್ಲದೇ ಕಟ್ಟಿಗೆಯ ಒಲೆ ಬಳಸಿ ಅನ್ನ, ಸಾಂಬಾರು ಮಾಡಲಾಗುತ್ತಿದೆ. ಚಪಾತಿ ಇನ್ನಿತರ ತಿನಿಸುಗಳಿಗೆ ಸಿಲಿಂಡರ್ ಬಳಕೆಯಾಗುತ್ತಿದೆ. ಇದೇ ರೀತಿ ನಗರದ ಬಹುತೇಕ ಹೋಟೆಲ್‌ಗಳಲ್ಲಿ ದರ ಏರಿಕೆ ಮಾಡಲಾಗಿದೆ.

ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಉಂಟಾಗಿಲ್ಲ. ವಾಣಿಜ್ಯ ಬಳಕೆಯ ಸಿಲಿಂಡರ್‌ಗಳು ಬೇಡಿಕೆಯಷ್ಟು ಸಿಗುತ್ತಿಲ್ಲ. ಇದೇ ಅವಕಾಶವನ್ನು ಬಳಸಿಕೊಂಡು ಇರುವ ವಾಣಿಜ್ಯ ಸಿಲಿಂಡರ್‌ಗಳ ಬೆಲೆಯನ್ನು ಅನಧಿಕೃತವಾಗಿ ಹೆಚ್ಚಳ ಮಾಡಲಾಗಿದೆ. ಹೋಟೆಲ್ ಮಾಲೀಕರು ಈ ಹೆಚ್ಚುವರಿ ವೆಚ್ಚವನ್ನು ಗ್ರಾಹಕರ ಮೇಲೆ ಹಾಕುತ್ತಿದ್ದಾರೆ ಎಂದು ಗ್ರಾಹಕರೊಬ್ಬರು ದೂರಿದರು.

ಸಹಜ ಸ್ಥಿತಿಯತ್ತ ಎಲ್‌ಪಿಜಿ ಸಿಲಿಂಡರ್ ವಿತರಣೆ

ಬೆಂಗಳೂರು: ವಾರದಿಂದ ಎಲ್‌ಪಿಜಿ ಸಿಲಿಂಡರ್ ವಿತರಣೆಯಲ್ಲಿ ಆಗುತ್ತಿದ್ದ ಅಡಚಣೆ ಪ್ರಮಾಣ ತಗ್ಗಿದ್ದು, ಗ್ರಾಹಕರ ಆತಂಕ ನಿಧಾನವಾಗಿ ದೂರವಾಗುತ್ತಿದೆ.

ಈಗಾಗಲೇ ಇಂಡೇನ್ ಹಾಗೂ ಭಾರತ್ ಗ್ಯಾಸ್ ಗ್ರಾಹಕರಿಗೆ ಬುಕ್ಕಿಂಗ್ ಆದ ನಂತರ ನಿಗದಿತ ಅವಧಿಯೊಳಗೆ ಸಿಲಿಂಡರ್ ಸರಬರಾಜು ಮಾಡಲಾಗುತ್ತಿದೆ.

ಸಿಲಿಂಡರ್ ಬುಕ್ಕಿಂಗ್ ನಂತರ ಪಡೆಯಲು ಗ್ರಾಹಕರು ನೇರವಾಗಿ ಗ್ಯಾಸ್ ಏಜೆನ್ಸಿ ಕಚೇರಿಗಳಿಗೆ ತೆರಳುವಂತಹ ಸನ್ನಿವೇಶ ಇತ್ತು. ಈಗ ಸಿಲಿಂಡರ್ ಸರಬರಾಜು ಸಹಜ ಸ್ಥಿತಿಗೆ ಮರಳುತ್ತಿರುವುದರಿಂದ ಕಚೇರಿಗಳಿಗೆ ಬರುವ ಗ್ರಾಹಕರ ಸಂಖ್ಯೆಯೂ ಕಡಿಮೆಯಾಗಿದೆ.

‘ಮೊದಲಿನಂತೆಯೇ ದೂರವಾಣಿ ಮೂಲಕವೇ ಬುಕ್ಕಿಂಗ್ ಪ್ರಕ್ರಿಯೆ ನಡೆದಿದ್ದು, ಗ್ರಾಹಕರಿಗೆ ಸಿಲಿಂಡರ್ ವಿತರಣೆ ಮಾಡಲಾಗುತ್ತಿದೆ’ ಎಂದು ಕಂಪನಿಯೊಂದರ ಪ್ರತಿನಿಧಿ ತಿಳಿಸಿದರು.

‘ಕಳೆದ ವಾರ ಸಿಲಿಂಡರ್ ವಿತರಣೆಯಲ್ಲಿ ವ್ಯತ್ಯಯ ಆಗಿದ್ದು ನಿಜ. ಜಾಗತಿಕವಾಗಿ ಆಗುತ್ತಿರುವ ಗೊಂದಲದಿಂದ ತೊಂದರೆಯಾಗಲಿದೆ ಎಂದುಕೊಂಡು ಸಿಲಿಂಡರ್ ಸಂಗ್ರಹಿಸಿಟ್ಟುಕೊಳ್ಳಲು ಮುಂದಾದೆವು. ಬುಕ್ಕಿಂಗ್ ಕೂಡ ಖಚಿತ ಆಗುತ್ತಿರಲಿಲ್ಲ. ಈಗ ಪರಿಸ್ಥಿತಿ ಸುಧಾರಿಸಿದೆ. ಸಿಲಿಂಡರ್ ನಮಗೆ ತಲುಪಿದೆ’ ಎಂದು ಆರ್.ಆರ್. ನಗರದ ಗ್ರಾಹಕರಾದ ಆರ್.ಲಕ್ಷ್ಮಿ ತಿಳಿಸಿದರು.

ಆದರೆ, ಹಿಂದೂಸ್ಥಾನ್ ಪೆಟ್ರೋಲಿಯಂ(ಎಚ್‌ಪಿ) ಗ್ರಾಹಕರಿಗೆ ಮಾತ್ರ ನಿಗದಿತ ಅವಧಿಯೊಳಗೆ ಸಿಲಿಂಡರ್ ಸರಬರಾಜು ಇನ್ನೂ ಆಗುತ್ತಿಲ್ಲ. ಅಲ್ಲಲ್ಲಿ ವ್ಯತ್ಯಯದ ದೂರು ಕೇಳಿ ಬರುತ್ತಿವೆ. ಕೆಲವರಿಗೆ ಒಂದು ವಾರವಾದರೂ ಸಿಲಿಂಡರ್ ಬಂದಿಲ್ಲ.

‘ನಮ್ಮದು ಹಾಗೂ ನಮ್ಮ ಪಕ್ಕದ ಮನೆಯವರದ್ದು ಎಚ್‌ಪಿ ಏಜೆನ್ಸಿ. ಬುಕ್ಕಿಂಗ್ ಮಾಡಿದರೆ ಈಗಲೂ ತಡವಾಗುತ್ತಿದೆ. ಇನ್ನೂ ಪರಿಸ್ಥಿತಿ ಸುಧಾರಿಸಿದಂತೆ ಕಾಣುತ್ತಿಲ್ಲ’ ಎಂದು ಗ್ರಾಹಕರಾದ ಶ್ರೀನಿಧಿ ಆತ್ರೇಯ ಹೇಳಿದರು.

ಮಾಂಸ ಮಾರಾಟದಲ್ಲಿ ವ್ಯತ್ಯಯ: ವಾಣಿಜ್ಯ ಸಿಲಿಂಡರ್ ಕೊರತೆಯಿಂದ ನಗರದಲ್ಲಿ ಮಾಂಸ ಹಾಗೂ ಮೀನಿನ ಮಾರಾಟದಲ್ಲೂ ವ್ಯತ್ಯಯವಾಗಿದೆ. ಒಂದು ವಾರದಲ್ಲಿ ವಹಿವಾಟಿನಲ್ಲಿ ಶೇ 30ರಷ್ಟು ಕುಸಿತ ಕಂಡು ಬಂದಿದೆ.

‘ವಾಣಿಜ್ಯ ಸಿಲಿಂಡರ್ ಸಮಸ್ಯೆಯಿಂದಾಗಿ ಮಾಂಸದೂಟ ಮಾಡುವವರ ಪ್ರಮಾಣದಲ್ಲಿ ಇಳಿಕೆಯಾದಂತೆ ಕಾಣುತ್ತಿದೆ. ಹೋಟೆಲ್, ರೆಸ್ಟೋರೆಂಟ್‌ಗಳ ಮೆನುಗಳಲ್ಲೂ ಕೊಂಚ ಬದಲಾವಣೆಯಾಗಿದೆ. ಇದರಿಂದ ಮಾಂಸ, ಮೀನು ಖರೀದಿಗೆ ಹೆಚ್ಚಿನ ಮಂದಿ ಬರುತ್ತಿಲ್ಲ’ ಎಂದು ವ್ಯಾಪಾರಸ್ಥರೊಬ್ಬರು ತಿಳಿಸಿದರು.

‘ಪ್ರತಿ ನಿತ್ಯ 80ರಿಂದ 100 ಕೆಜಿವರೆಗೂ ಕೋಳಿ ಮಾಂಸ ಖರೀದಿಸುವವರು ಇದ್ದರು. ಅವರಿಗೆ 10 ಕೆಜಿ ಖರೀದಿಸಿದರೆ ಹೆಚ್ಚು ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಶಿವಾಜಿನಗರದ ರಸೆಲ್ ಮಾರುಕಟ್ಟೆ, ಯಶವಂತಪುರ ಮಾಂಸದ ಮಾರುಕಟ್ಟೆಯಲ್ಲಿ ಮೀನು ಮಾರಾಟವೂ ಕುಸಿದಿದೆ. ಅಲ್ಲಿರುವ 220 ವ್ಯಾಪಾರಸ್ಥರು ನಿತ್ಯ ಸಮುದ್ರ ಮೀನು ಮಾರಾಟ ಮಾಡುತ್ತಿದ್ದರು. 20ರಿಂದ 30 ಕೆಜಿ ಮೀನು ಖರೀದಿಸುತ್ತಿದ್ದವರು ಈಗ 3ರಿಂದ 4 ಕೆಜಿ ಮಾತ್ರ ಖರೀದಿ ಮಾಡುತ್ತಿದ್ದಾರೆ’ ಎಂದು ಮಾಂಸದ ವ್ಯಾಪಾರಿ ಸೈಯದ್ ಖಾನ್ ತಿಳಿಸಿದರು.

ಮೈದಾನದಲ್ಲಿ ಸಿಲಿಂಡರ್

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್



ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಸರಬರಾಜು ವ್ಯವಸ್ಥೆಯಲ್ಲಿ ಸುಧಾರಣೆ ಕಂಡುಬಂದಿದ್ದು, ಗ್ರಾಹಕರಿಗೆ ಸುಗಮವಾಗಿ ಪೂರೈಸಲು ನಗರದ ಶಿವಾಜಿನಗರದ ಮೈದಾನದಲ್ಲಿ ವಿಶೇಷ ವ್ಯವಸ್ಥೆ ಮಾಡಲಾಗಿತ್ತು

ಶೀಘ್ರದಲ್ಲೇ ಹೋಟೆಲ್‌ಗೂ ಸಿಲಿಂಡರ್

ಎಲ್‌ಪಿಜಿ ಸಿಲಿಂಡರ್ ಕೊರತೆ ಇಲ್ಲ: ಸಚಿವ ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎಲ್‌ಪಿಜಿ ಸಿಲಿಂಡರ್ ಕೊರತೆ ಇಲ್ಲ, ನಿಯಮಿತವಾಗಿ ಸರಬರಾಜು ಆಗುತ್ತಿದೆ. ಹೋಟೆಲ್‌ಗಳಿಗೂ ಶೀಘ್ರದಲ್ಲಿಯೇ ಪೂರೈಕೆ ಮಾಡಲಾಗುವುದು ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಎಲ್‌ಪಿಜಿ ಸಿಲಿಂಡರ್ ಸರಬರಾಜಿನ ಸ್ಥಿತಿಗತಿ ಕುರಿತು ಐಒಸಿ, ಎಚ್‌ಪಿಸಿ, ಬಿಪಿಸಿ, ಗೇಲ್ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳಿಗೆ ಅವರು ಮಾಹಿತಿ ನೀಡಿದರು.

ಹಡಗುಗಳ ಮೂಲಕ ಅನಿಲ ಸರಬರಾಜು ಆಗುತ್ತಿದೆ. ಒಂದೆರಡು ವಾರದಲ್ಲಿ ಸಹಜ ಸ್ಥಿತಿಗೆ ಬರಲಿದೆ. ಕೆಲವೆಡೆ ಜನರು ಭಯದಿಂದಾಗಿ ಅಗತ್ಯಕ್ಕಿಂತ ಹೆಚ್ಚು ಬುಕ್ಕಿಂಗ್ ಮಾಡುತ್ತಿರುವುದರಿಂದ ಗೊಂದಲ ಉಂಟಾಗಿದೆ. ಗ್ರಾಹಕರು ಯಾವುದೇ ಗೊಂದಲಕ್ಕೆ ಒಳಗಾಗಬಾರದು ಎಂದು ಹೇಳಿದರು.

ರಾಜ್ಯದಲ್ಲಿ ಒಂದು ದಿನಕ್ಕೆ 850 ಟನ್ ಗ್ಯಾಸ್ ಪೂರೈಕೆ ಆಗುತ್ತಿದೆ. ಬಳಕೆಯ ಪ್ರಮಾಣ ಅಧಿಕವಾಗಿದೆ. ಗ್ರಾಹಕರು ಮಿತವಾಗಿ ಬಳಸಬೇಕು ಎಂದು ಮನವಿ ಮಾಡಿದರು.



ಮುನಿಯಪ್ಪ

ಆಯಾ ರಾಜ್ಯದ ಬಳಕೆ ಆಧಾರದ ಮೇಲೆ ಎಲ್‌ಪಿಜಿ ಸಿಲಿಂಡರ್ ವಿತರಣೆಯನ್ನು ಕೇಂದ್ರದಿಂದ ನಿರ್ಧರಿಸಲಾಗುತ್ತದೆ. ಸಿಲಿಂಡರ್ ಸರಬರಾಜು ಆಗುತ್ತಿದೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಅವರು ಕೇಂದ್ರ ಸರ್ಕಾರ ಮತ್ತು ಸಂಬಂಧಿಸಿದ ಸಂಸ್ಥೆಗಳೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದಾರೆ. ರಾಜ್ಯದ ಅಗತ್ಯವನ್ನು ಪತ್ರಗಳ ಮೂಲಕ ಗಮನಕ್ಕೆ ತರುತ್ತಿದ್ದಾರೆ ಎಂದರು.

ಆಸ್ಪತ್ರೆ, ಹೋಟೆಲ್, ವಾಣಿಜ್ಯ ಬಳಕೆದಾರರಿಗೆ ಯಾವುದೇ ರೀತಿಯ ಸರಬರಾಜು ಸಮಸ್ಯೆ ಇಲ್ಲ. ಅವರಿಗೆ ಅಗತ್ಯವಿರುವಷ್ಟು ಸಿಲಿಂಡರ್ ಒದಗಿಸಲಾಗುತ್ತಿದೆ. ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲಿ 25–30 ದಿನಗಳಿಗೆ ಒಂದು ಸಿಲಿಂಡರ್ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ 45 ದಿನಗಳಿಗೆ ಒಂದು ಸಿಲಿಂಡರ್ ಬಳಕೆಯಾಗುತ್ತದೆ. ಇದಕ್ಕೆ ಅನುಗುಣವಾಗಿ ಸರಬರಾಜು ಆಗುತ್ತಿದೆ ಎಂದರು.

ಇಲಾಖೆಯ ಕಾರ್ಯದರ್ಶಿ ಎಂ. ಕನಗವಲ್ಲಿ, ಆಯುಕ್ತ ರವಿಕುಮಾರ್ ಮತ್ತು ಅನಿಲ ಕಂಪನಿಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಕಟ್ಟಡದಿಂದ ಬಿದ್ದು ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಫೋಟೋ ಶೂಟ್‌ಗೆ ಗೆಳೆಯರ ಜತೆ ಹೋಗಿದ್ದ 15 ವರ್ಷದ ಬಾಲಕನೊಬ್ಬ 40 ಅಡಿ ಎತ್ತರದ ಕಟ್ಟಡದಿಂದ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿದ್ದಾನೆ.

ಉಲ್ಲಾಳು ನಿವಾಸಿ ನಿಶಾಂತ್ (15) ಮೃತ ಬಾಲಕ. ಶನಿವಾರ ಸಂಜೆ ಘಟನೆ ನಡೆದಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಮೂವರು ಸ್ನೇಹಿತರು ಫೋಟೋ ಶೂಟ್ ಮಾಡಲು ಠಾಣಾ ವ್ಯಾಪ್ತಿಯಲ್ಲಿನ ಪಾಳು ಬಿದ್ದ ಕಟ್ಟಡಕ್ಕೆ ಬಂದಿದ್ದರು. ಆ ಕಟ್ಟಡದಲ್ಲಿ ಫೋಟೋ ಶೂಟ್ ಮಾಡುತ್ತಾ ಎರಡನೇ ಮಹಡಿವರೆಗೂ ಹೋಗಿದ್ದಾರೆ. ಈ ವೇಳೆ ಗೋಪುರ ಮಾದರಿ ಇರುವ ಹತ್ತು ಅಡಿ ಎತ್ತರವಿರುವ ಸ್ಥಳದಲ್ಲಿ ನಿಶಾಂತ್ ಹೋಗಿದ್ದು, ಅದರ ಮೇಲೆ ನಿಂತುಕೊಂಡು ಫೋಟೊ ತೆಗೆಯುವಂತೆ ಸ್ನೇಹಿತರಿಗೆ ಹೇಳಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಫೋಟೋ ತೆಗೆಸಿಕೊಂಡ ಬಳಿಕ ಇಳಿಯುವಾಗ ಪ್ಲಾಸ್ಟಿಕ್ ಶೀಟ್ ಮೇಲೆ ಕಾಲು ಇಟ್ಟಿದ್ದು, ನಿಯಂತ್ರಣ ತಪ್ಪಿ ಸುಮಾರು 40 ಅಡಿ ಎತ್ತರದಿಂದ ನಿಶಾಂತ್ ಕೆಳಗೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ. ಗಾಬರಿಗೊಂಡ ಇಬ್ಬರು ಗೆಳೆಯರು ತಮ್ಮ ಸ್ನೇಹಿತರಿಗೆ ಕರೆ ಮಾಡಿ ಸ್ಥಳಕ್ಕೆ ಕರೆಸಿಕೊಂಡು ಸಮೀಪದ ಆಸ್ಪತ್ರೆಗೆ ಕರೆದೊಯ್ದರು. ಪರೀಕ್ಷಿಸಿದ ವೈದ್ಯರು ಮಾರ್ಗ ಮಧ್ಯೆದಲ್ಲಿಯೇ ಮೃತಪಟ್ಟಿದ್ದಾನೆ ಎಂದು ದೃಢಪಡಿಸಿದ್ದಾರೆ.

ಬಾಲಕನ ತಂದೆ ನೀಡಿದ ದೂರಿನ ಅನ್ವಯ ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಯುವಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಹಲಸಹಳ್ಳಿಗೇಟ್ (ಹೊಸಕೋಟೆ): ಹಲಸಹಳ್ಳಿಗೇಟ್ ಬಳಿಯ ಕೋಲಾರ ಮತ್ತು ಹೊಸಕೋಟೆ ರಾಷ್ಟ್ರೀಯ ಹೆದ್ದಾರಿಯ ಪಕ್ಕದ ಅರಣ್ಯ ಪ್ರದೇಶದಲ್ಲಿ ಯುವಕನ ಶವ ಮರಕ್ಕೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಅಪರಾಧ ಸುದ್ದಿ

ಆತ್ಮಹತ್ಯೆ ಮಾಡಿಕೊಂಡ ಯುವಕನನ್ನು ಬೆಂಗಳೂರಿನ ಹಲಸೂರು ನಿವಾಸಿ ಸೋಹೆಲ್(21) ಎಂದು ಗುರುತಿಸಲಾಗಿದೆ. ಟೈಲ್ಸ್ ಕೆಲಸ ಮಾಡುತ್ತಿದ್ದ ಆತ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಎಂದು ತಿಳಿದುಬಂದಿದೆ.

ಅರಣ್ಯಪಾಲಕರು ನೀಡಿದ ಮಾಹಿತಿ ಆಧರಿಸಿ ಸ್ಥಳ ಮಹಜರು ನಡೆಸಿದ ಪೊಲೀಸರು ಮರಣೋತ್ತರ ಪರೀಕ್ಷೆಗಾಗಿ ಶವವನ್ನು ನಗರದ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದ್ದಾರೆ.


ಮೇಲ್ನೋಟಕ್ಕೆ ಆತ್ಮಹತ್ಯೆ ಎಂದು ಕಂಡು ಬರುತ್ತಿದೆ. ತನಿಖೆಯಲ್ಲಿ ನೈಜ ಕಾರಣ ಗೊತ್ತಾಗಲಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸ್ನೇಹಿತನ ಅಪಹರಣ: ನಾಲ್ವರ ಬಂಧನ

ಬೆಂಗಳೂರು: ಪ್ರೇಯಸಿ ಜತೆಗಿದ್ದ ದೃಶ್ಯವನ್ನು ವಿಡಿಯೊ ಮಾಡಿಕೊಂಡಿದ್ದ ಸ್ನೇಹಿತನನ್ನು ಅಪಹರಿಸಿ, ಹಲ್ಲೆ ನಡೆಸಿ ಪರಾರಿಯಾಗಿದ್ದ ನಾಲ್ವರು ಆರೋಪಿಗಳನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಶಬ್ಬೀರ್



ಸಾಜೀದ್



ಸುಬ್ರಹ್ಮಣಿ

ಅಸ್ಸಾಂನ ಸಾಜೀದ್ (23), ಈತನ ಸಹಚರರಾದ ಟಿ.ಸಿ.ಪಾಳ್ಯ ನಿವಾಸಿ ಸುಬ್ರಹ್ಮಣಿ (19), ಆಟೊ ಚಾಲಕ ವಿನ್ಸೆಂಟ್ (21) ಮತ್ತು ಚಿಂಟು(23) ಬಂಧಿತರು. ಇದೇ ಪ್ರಕರಣದಲ್ಲಿ ಬಾಲಕನೊಬ್ಬನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಆರೋಪಿಗಳು ಶಬ್ಬೀರ್ ಎಂಬಾತನನ್ನು ಅಪಹರಣ ಮಾಡಿ ಹಲ್ಲೆ ನಡೆಸಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.

ಅಸ್ಸಾಂನ ಶಬ್ಬೀರ್ ಮತ್ತು ಸಾಜೀದ್ ಸ್ನೇಹಿತರು. ಮೂರು ವರ್ಷಗಳಿಂದ ನಗರದಲ್ಲಿ ಕೆಲಸ ಮಾಡಿಕೊಂಡು, ಟಿ.ಸಿ.ಪಾಳ್ಯದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಶಬ್ಬೀರ್ ಹಣ್ಣಿನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರೆ, ಸಾಜೀದ್, ಬ್ಲಿಂಕಿಟ್‌ನಲ್ಲಿ ಕೆಲಸ ಮಾಡುತ್ತಿದ್ದ. ಈ ಮಧ್ಯೆ ಸಾಜೀದ್, ಯುವತಿಯೊಬ್ಬಳನ್ನು ಪ್ರೀತಿಸುತ್ತಿದ್ದ. ಇತ್ತೀಚೆಗೆ ಕೆ.ಆರ್.ಪುರದಲ್ಲಿ ಆಕೆ ಜತೆ ಆತ್ಮೀಯವಾಗಿ ಮಾತನಾಡುತ್ತಿದ್ದ ದೃಶ್ಯಗಳನ್ನು ಶಬ್ಬೀರ್ ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿದುಕೊಂಡಿದ್ದ. ಈ ವಿಚಾರ ತಿಳಿದ ಆರೋಪಿ, ಅದನ್ನು ಡಿಲೀಟ್ ಮಾಡುವಂತೆ ಹೇಳಿದ್ದಾನೆ. ಆದರೆ, ಶಬ್ಬೀರ್ ಒಪ್ಪಿಕೊಂಡಿಲ್ಲ. ಇದೇ ವಿಚಾರಕ್ಕೆ ಇಬ್ಬರ ನಡುವೆ ಜಗಳ ನಡೆದಿದೆ ಎಂದು ಪೊಲೀಸರು ಹೇಳಿದರು.

ಮಾರ್ಚ್ 15ರಂದು ರಾತ್ರಿ 11 ಗಂಟೆ ಸುಮಾರಿಗೆ ಕೆಲಸ ಮುಗಿಸಿಕೊಂಡು ಲಕ್ಷ್ಮೀ ಸಾಗರ್ ಲೇಔಟ್‌ನಲ್ಲಿ ಸ್ನೇಹಿತರ ಮನೆ ಬಳಿ ಹೋಗುವಾಗ ಆಟೋದಲ್ಲಿ ಬಂದ ಆರೋಪಿಗಳು, ಶಬ್ಬೀರ್‌ನನ್ನು ಅಪಹರಿಸಿದ್ದಾರೆ. ಬಳಿಕ ರಾಮಮೂರ್ತಿ ನಗರದ ಕಡೆ ಕರೆದೊಯ್ದು ಹಲ್ಲೆ ನಡೆಸಿ, ಆತನ ಮೊಬೈಲ್‌ನಲ್ಲಿರುವ ಸಾಜೀದ್ ಮತ್ತು ಆತನ ಪ್ರೇಯಸಿಯ ವಿಡಿಯೊವನ್ನು ಡಿಲೀಟ್ ಮಾಡಿಸಿ, ಬಳಿಕ ಬಿಟ್ಟು ಕಳುಹಿಸಿದ್ದರು. ಈ ಸಂಬಂಧ ಶಬ್ಬೀರ್ ದೂರು ನೀಡಿದ್ದ. ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಎಸ್‌ಐಆರ್ ವಿರೋಧಿ ಸಭೆ: ರಾಜಕೀಯ – ಆರ್ಥಿಕ ವಿಶ್ಲೇಷಕ ಪರಕಾಲ ಪ್ರಭಾಕರ್ ಆತಂಕ

‘ಕೆಂಪುಕೋಟೆಯಲ್ಲಿ ತ್ರಿವರ್ಣ ಧ್ವಜ ಹಾರದಿರಬಹುದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಸಮಾಜದ ರಾಜಕೀಯ ಸ್ವರೂಪವನ್ನು ಸಂಪೂರ್ಣವಾಗಿ ಬದಲಾಯಿಸಲಾಗುತ್ತಿದೆ. ಧಾರ್ಮಿಕ ಸಂಕೇತಗಳು ಸರ್ಕಾರದ ಸಂಕೇತಗಳಾಗುತ್ತಿವೆ. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಕೆಂಪುಕೋಟೆಯಲ್ಲಿ ತ್ರಿವರ್ಣ ಧ್ವಜದ ಬದಲು ಬೇರೆ ಯಾವುದೋ ಬಣ್ಣದ ಧ್ವಜ ಹಾರಬಹುದು’ ಎಂದು ರಾಜಕೀಯ–ಆರ್ಥಿಕ ವಿಶ್ಲೇಷಕ ಪರಕಾಲ ಪ್ರಭಾಕರ್ ಆತಂಕ ವ್ಯಕ್ತಪಡಿಸಿದರು.



ಪ್ರಭಾಕರ್

‘ಎಸ್‌ಐಆರ್ (ವಿಶೇಷ ಸಮಗ್ರ ಪರಿಷ್ಕರಣೆ) ಷಡ್ಯಂತ್ರವನ್ನು ಹಿಮ್ಮೆಟ್ಟಿಸಲು ಅಳವಡಿಸಬೇಕಾದ ಕ್ರಮಗಳೇನು?’ ಕುರಿತು ಸೋಮವಾರ ನಡೆದ ಕರ್ನಾಟಕದ ಸರ್ವ ಸಮುದಾಯಗಳು, ಸರ್ವ ಸಂಘಟನೆಗಳು ಹಾಗೂ ಸರ್ವ ಪಕ್ಷಗಳ ಸಭೆಯಲ್ಲಿ ಅವರು ಮಾತನಾಡಿದರು.

‘ಈ ವರ್ಷ ಆಗಸ್ಟ್ 15ರಂದು ತ್ರಿವರ್ಣಧ್ವಜ ಹಾರಬಹುದು. ಮುಂದಿನ ವರ್ಷ ಹೇಳಲಾಗದು. ಸರ್ಕಾರಿ ಕಾರ್ಯಕ್ರಮಗಳಲ್ಲಿ ವಂದೇ ಮಾತರಂ ಹಾಡಬೇಕು. ಆ ನಂತರ ರಾಷ್ಟ್ರಗೀತೆ ‘ಜನ ಗಣ ಮನ’ ಹಾಡಬೇಕು ಎಂದು ಈಗಾಗಲೇ ಸರ್ಕಾರ ಸುತ್ತೋಲೆ ಹೊರಡಿಸಿದೆ. ಜನ ಗಣ ಮನ ಹಾಡುವುದು ಬೇಡ ಎಂದು ಮುಂದೆ ಹೇಳಲೂಬಹುದು. ಅಪಾಯಕಾರಿ ಪರಿಸ್ಥಿತಿ ನಮ್ಮ ಮುಂದಿದೆ’ ಎಂದು ಹೇಳಿದರು.

‘ನಮ್ಮನ್ನು ಯಾರು ಆಡಳಿತ ಮಾಡಬೇಕು ಎಂಬುದನ್ನು ಇಲ್ಲಿಯವರೆಗೆ ಮತದಾರರು ತಮ್ಮ ಮತಗಳ ಮೂಲಕ ಆಯ್ಕೆ ಮಾಡುತ್ತಿದ್ದರು. ಎಸ್‌ಐಆರ್ ಮೂಲಕ ಇದನ್ನು ತಿರುವು–ಮುರುವು ಮಾಡಲು ಕೇಂದ್ರ ಸರ್ಕಾರ ಹೊರಟಿದೆ. ಯಾರು ಮತ ಚಲಾಯಿಸಬೇಕು. ಯಾರು ಮತದಾರರಾಗಿರಬೇಕು ಎಂಬುದನ್ನು ಸರ್ಕಾರ ನಿರ್ಧರಿಸಲು ಹೊರಟಿದೆ’ ಎಂದು ಆರೋಪಿಸಿದರು.

ಕೇರಳ ಸರ್ಕಾರದಿಂದಲೇ ಗುರುತಿನ ಚೀಟಿ

‘ಕೇರಳದಲ್ಲಿ ಕೆಲವರಿಗೆ ಯಾವುದೇ ದಾಖಲೆ ಇಲ್ಲ. ಅಂಥವರಿಗೆ ರಾಜ್ಯ ಸರ್ಕಾರವೇ ಗುರುತಿನ ಚೀಟಿ ನೀಡಿದ್ದು, ಅದನ್ನು ದಾಖಲೆಯಾಗಿ ಬಳಸಬಹುದು ಎಂದು ಹೇಳಿದೆ. ಎಲ್ಲ ರಾಜ್ಯಗಳಲ್ಲಿ ಈ ರೀತಿ ಮಾಡಬೇಕು’ ಎಂದು ತಮಿಳುನಾಡು ಮತದಾರರ ಹಕ್ಕು ವೇದಿಕೆಯ ಸಮನ್ವಯಕಾರ ಥಾಮಸ್ ಫ್ರಾಂಕೊ ಹೇಳಿದರು.

‘2002–03ರ ಮತಪಟ್ಟಿಯಲ್ಲಿ ಹೆಸರು, ಸಂಖ್ಯೆ, ಮತಗಟ್ಟೆ ಹೆಸರು, ಮತಗಟ್ಟೆ ಸಂಖ್ಯೆ ಎಲ್ಲಿತ್ತು ಎಂಬುದು ಯಾರಿಗೆ ನೆನಪಿರಲು ಸಾಧ್ಯ. ಹಾಗಾಗಿ 2002-03ರ ಪಟ್ಟಿಯನ್ನು ವಿಶೇಷ ಸಮಗ್ರ ಪರಿಷ್ಕರಣೆಗೆ ಜೋಡಿಸಬೇಕಾಗಿಲ್ಲ ಎಂಬುದು ನಿರ್ಧಾರವಾದರೆ ಸಮಸ್ಯೆ ಕಡಿಮೆಯಾಗಲಿದೆ’ ಎಂದರು.

ಎಸ್‌ಐಆರ್ ಅಂದರೆ ಮತದಾರರ ಪಟ್ಟಿಯ ಶುದ್ಧೀಕರಣ ಎಂದು ಹೇಳುತ್ತಿದ್ದಾರೆ. ಸ್ಥಳ ಬದಲಾಯಿಸಿದವರು, ಸ್ಥಳದಲ್ಲಿ ಇಲ್ಲದವರು, ಎರಡೆರಡು ಕಡೆ ಹೆಸರು ಇರುವವರು ಮತ್ತು ಸತ್ತವರ ಹೆಸರು ತೆಗೆಯುವ ಪ್ರಕ್ರಿಯೆ ಎನ್ನುತ್ತಿದ್ದಾರೆ. ಇದು ನಿಜವಾಗಿದ್ದಲ್ಲಿ ಯಾರ ಆಕ್ಷೇಪವೂ ಇರಲಿಲ್ಲ. ಆದರೆ, ಅಲ್ಲಿ ನಡೆಯುತ್ತಿರುವುದೇ ಬೇರೆ. ಇದಕ್ಕೆ ಈಗಾಗಲೇ, ಬಿಹಾರದಲ್ಲಿ ನಡೆದಿರುವ ಎಸ್‌ಐಆರ್ ಸಾಕ್ಷಿಯಾಗಿದೆ. ಎಸ್‌ಐಆರ್ ಪ್ರಕ್ರಿಯೆ ಎಲ್ಲ ರಾಜ್ಯಗಳಲ್ಲಿ ಪೂರ್ಣಗೊಂಡಾಗ ಸುಮಾರು 16.5 ಕೋಟಿ ಜನರು ಪಟ್ಟಿಯಿಂದ ಹೊರಗುಳಿಯಲಿದ್ದಾರೆ. ಅವರು ಅಲ್ಪಸಂಖ್ಯಾತರು, ಆದಿವಾಸಿಗಳು, ವಲಸೆ ಕಾರ್ಮಿಕರು, ಬಡವರು ಆಗಿರುತ್ತಾರೆ. ಇದು ರಕ್ತ ರಹಿತ ರಾಜಕೀಯ ಕಗ್ಗೊಲೆ ಎಂದರು.

ಕ್ಷೇತ್ರಗಳ ಪುನರ್‌ವಿಂಗಡಣೆ ಮೂಲಕ ದಕ್ಷಿಣ ಭಾರತದ ರಾಜ್ಯಗಳ ಅಭಿಪ್ರಾಯಕ್ಕೆ ಬೆಲೆ ಇಲ್ಲದಂತೆ ಮಾಡಲಾಗುತ್ತಿದೆ. ತಮಿಳುನಾಡು, ಆಂಧ್ರ ಪ್ರದೇಶ, ತೆಲಂಗಾಣ, ಕೇರಳ, ಕರ್ನಾಟಕ, ಪುದುಚೇರಿ, ಗೋವಾದಲ್ಲಿ ಒಟ್ಟು 130 ಲೋಕಸಭಾ ಕ್ಷೇತ್ರಗಳಿವೆ. ಪುನರ್‌ವಿಂಗಡಣೆ ಬಳಿಕ 173ಕ್ಕೆ ಏರಲಿವೆ. ಇದೇ ಹೊತ್ತಿನಲ್ಲಿ ಉತ್ತರ ಪ್ರದೇಶ ಒಂದರಲ್ಲೇ 143 ಕ್ಷೇತ್ರಗಳು ಆಗಲಿವೆ. ಉತ್ತರದ ಎರಡೂವರೆ ರಾಜ್ಯಗಳ ಕ್ಷೇತ್ರಗಳು ದಕ್ಷಿಣ ಭಾರತದ ಎಲ್ಲ ರಾಜ್ಯಗಳ ಒಟ್ಟು ಕ್ಷೇತ್ರಗಳಿಗಿಂತ ಹೆಚ್ಚು ಇರಲಿವೆ ಎಂದು ಪರಕಾಲ ಪ್ರಭಾಕರ್ ಅವರು ವಿವರಿಸಿದರು.

ಸಭೆಯಲ್ಲಿ ಹಾಜರಿದ್ದ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್ ಹಾಗೂ ಶಾಸಕ ರಿಜ್ವಾನ್ ಅರ್ಷದ್ ಅವರ ಮೂಲಕ ಮುಖ್ಯಮಂತ್ರಿಯವರಿಗೆ ಹಕ್ಕೊತ್ತಾಯಗಳನ್ನು ಸಲ್ಲಿಸಲಾಯಿತು.

ಬ್ಯಾಂಕ್ ಖಾತೆ ವಿವರ ಮಾರಲು ಯತ್ನ ಐವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಗದಗ: ವಿದ್ಯಾರ್ಥಿಗಳ ಹೆಸರಿನಲ್ಲಿ ಖಾತೆ ತೆರೆದು, ಕಮಿಷನ್ ಆಸೆಗಾಗಿ ಬ್ಯಾಂಕ್ ಖಾತೆ ವಿವರಗಳನ್ನು ಸೈಬರ್ ವಂಚಕರಿಗೆ ಮಾರಲು ಯತ್ನಿಸಿದ್ದ ಐವರು ಆರೋಪಿಗಳನ್ನು ಇಲ್ಲಿನ ಸೈಬರ್ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದು, ಅವರಿಂದ ಮೊಬೈಲ್ ಫೋನ್ ಮತ್ತು ಬ್ಯಾಂಕ್ ಪಾಸ್ ಪುಸ್ತಕಗಳನ್ನು ವಶಪಡಿಸಿಕೊಂಡಿದ್ದಾರೆ.

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ದಸರಹಳ್ಳಿ ತಾಂಡಾದ ವಕದೋತ್ ವಕೀಲ್, ರಾಜಾ ರಖೆನಾಯಕ್, ಗೋವಾದ ಜೀಶಾನ್ ಅನ್ಸಾರಿ, ಆಕಾಶ್ ಹಾಗೂ ಛತ್ತೀಸ್‌ಗಡದ ಸಾಹಿಲ್ ಬಂಧಿತರು.

ವಕದೋತ್ ಮತ್ತು ರಾಜಾ ರಖೆನಾಯಕ್ ಅವರು ಇಲ್ಲಿನ ಮೆಟ್ರಿಕ್ ನಂತರದ ವೃತ್ತಿಪರ ಬಾಲಕರ ವಸತಿ ನಿಲಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡಿಸುವ ಸುಳ್ಳು ಭರವಸೆ ನೀಡಿ ಅವರ ಹೆಸರಿನಲ್ಲಿ ಖಾಸಗಿ ಬ್ಯಾಂಕ್‌ನಲ್ಲಿ ಖಾತೆ ತೆರೆಸಿದ್ದರು.

ಖಾತೆ ತೆರೆಯಲು ಆರಂಭಿಕ ಠೇವಣಿ ₹2 ಸಾವಿರವನ್ನು ಆರೋಪಿಗಳೇ ನೀಡಿದ್ದರು. ನಂತರ, ಅವರಿಂದ ಬ್ಯಾಂಕ್ ಪಾಸ್ ಪುಸ್ತಕ, ಎಟಿಎಂ ಕಾರ್ಡ್, ಇಂಟರ್ನೆಟ್ ಬ್ಯಾಂಕಿಂಗ್ ವಿವರ ಹಾಗೂ ಖಾತೆಗೆ ಲಿಂಕ್ ಇದ್ದ ಮೊಬೈಲ್ ಸಿಮ್ ಕಾರ್ಡ್ ಪಡೆದುಕೊಂಡಿದ್ದರು. ಈ ವಂಚನೆ ಕುರಿತು ಮಾರ್ಚ್ 11ರಂದು ಪ್ರಕರಣ ದಾಖಲಾಗಿತ್ತು.

ಆರೋಪಿಗಳು ಬ್ಯಾಂಕ್ ಖಾತೆ ವಿವರಗಳನ್ನು ಸೈಬರ್ ವಂಚಕರಿಗೆ ಹಸ್ತಾಂತರ ಮಾಡಲು ಗೋವಾಕ್ಕೆ ಹೋಗುತ್ತಿದ್ದಾಗ ಪೊಲೀಸರು ಅವರನ್ನು ಬಂಧಿಸಿದ್ದಾರೆ. ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದಾಗ ಗೋವಾದಲ್ಲಿದ್ದ ವಂಚಕರ ಮಾಹಿತಿ ಸಿಕ್ಕಿದ್ದು, ಅವರನ್ನೂ ಬಂಧಿಸಿ ಕರೆ ತಂದಿದ್ದಾರೆ.

ಆರೋಪಿಗಳಿಂದ 11 ಮೊಬೈಲ್ ಫೋನ್, ಹಾವೇರಿ ಜಿಲ್ಲೆಯಲ್ಲಿ ತೆರೆಯಲಾದ ಖಾತೆಗಳ ಮೂರು ಬ್ಯಾಂಕ್ ಕಿಟ್, ಗದಗ ಜಿಲ್ಲೆಯಲ್ಲಿ ತೆರೆಯಲಾದ ಖಾತೆಗಳಿಗೆ ಸಂಬಂಧಿಸಿದ ಐದು ಬ್ಯಾಂಕ್ ಕಿಟ್ ಪತ್ತೆಯಾಗಿವೆ. ಹಲವು ಕಡೆಗಳಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದಿರುವುದು ಗೊತ್ತಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ ಮೂವರು ಪ್ರಮುಖ ಆರೋಪಿಗಳಿದ್ದು ಅವರನ್ನೂ ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಹಿಂದಿಯಲ್ಲಿ ರೈಲ್ವೆ ಪರೀಕ್ಷೆ: ವಿರೋಧ

ಇಂದು ಬೆಂಗಳೂರು, ಹುಬ್ಬಳ್ಳಿ, ಮೈಸೂರಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಪರೀಕ್ಷಾ ಮಂಡಳಿ ಮಾರ್ಚ್ 17ರಂದು ಸರಕು ರೈಲ್ವೆ ವ್ಯವಸ್ಥಾಪಕ ಹುದ್ದೆಗೆ ಕನ್ನಡದ ಬದಲು ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಪರೀಕ್ಷೆ ನಡೆಸುತ್ತಿರುವುದನ್ನು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆಯು ಬೆಂಗಳೂರು, ಹುಬ್ಬಳ್ಳಿ ಹಾಗೂ ಮೈಸೂರಿನ ರೈಲ್ವೆ ನಿಲ್ದಾಣ ಎದುರು ಪ್ರತಿಭಟನೆ ಹಮ್ಮಿಕೊಂಡಿದೆ.

‘ಮಂಗಳವಾರ ಬೆಳಿಗ್ಗೆ ಪ್ರತಿಭಟನೆ ನಡೆಸುವ ಕುರಿತು ಪೊಲೀಸರಿಗೆ ಮಾಹಿತಿ ನೀಡಲಾಗಿದೆ. ಹೀಗಿದ್ದರೂ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುವಂತೆ ಇಲಾಖೆಯಿಂದ ಸೂಚನೆ ನೀಡಲಾಗಿದೆ. ನಮ್ಮನ್ನು ಬಂಧಿಸಿದರೂ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ಎದುರೇ ಪ್ರತಿಭಟನೆ ನಡೆಸುತ್ತೇವೆ. ಪರೀಕ್ಷೆ ನಡೆಸಲು ಬಿಡುವುದಿಲ್ಲ’ ಎಂದು ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣಗೌಡ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸೋಮಣ್ಣ ಅಸಹಾಯಕತೆ: ‘2008ರಲ್ಲಿ 4,000ಕ್ಕೂ ಹೆಚ್ಚು ‘ಡಿ’ ದರ್ಜೆ ಹುದ್ದೆಗಳ ಭರ್ತಿ ಸಂದರ್ಭದಲ್ಲಿ ಎಲ್ಲ ಹುದ್ದೆಗಳಿಗೆ ಬಿಹಾರದವರನ್ನು ತುಂಬುವ ಹುನ್ನಾರ ನಡೆದಿತ್ತು. ಆಗ ಪ್ರತಿಭಟನೆ ನಡೆಸಿ ತಡೆಯಲಾಗಿತ್ತು. ರೈಲ್ವೆ ಪರೀಕ್ಷೆಗಳನ್ನು ಕನ್ನಡದಲ್ಲೂ ನಡೆಸುವಂತೆ ಹೋರಾಟ ನಡೆಸುತ್ತಲೇ ಬಂದಿದ್ದೇವೆ. ಭರವಸೆ ನೀಡುವ ಅಧಿಕಾರಿಗಳು ನಂತರ ಹಿಂದಿ ಹೇರುವ ಉದ್ದೇಶದಿಂದ ಆ ಭಾಷೆಯಲ್ಲೇ ಪರೀಕ್ಷೆ ನಡೆಸುತ್ತಿದ್ದಾರೆ. ಈ ಕುರಿತು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರನ್ನು ಕೇಳಿದರೆ ಅಸಹಾಯಕತೆ ವ್ಯಕ್ತಪಡಿಸುತ್ತಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಕೇಂದ್ರ ಸಚಿವರು ರಾಜೀನಾಮೆ ನೀಡಲಿ: ‘ಕೇಂದ್ರದಲ್ಲಿ ಎಚ್.ಡಿ.ಕುಮಾರಸ್ವಾಮಿ, ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ಸೋಮಣ್ಣ ಅವರು ಸಚಿವರಾಗಿದ್ದಾರೆ. ಕನ್ನಡಿಗರಿಗೆ ಧಕ್ಕೆಯಾಗುತ್ತಿದೆ ಎಂದರೆ ಅವರು ಸಚಿವ ಸ್ಥಾನ ಬಿಟ್ಟು ಕನ್ನಡಿಗರ ಪರವಾಗಿ ನಿಲ್ಲಬೇಕು. ಸಂಸದರು ಕೂಡ ಈ ಕುರಿತು ಧ್ವನಿ ಎತ್ತುತ್ತಿಲ್ಲ. ಅದೇ ತಮಿಳುನಾಡಿನಲ್ಲಿ ಈ ರೀತಿ ಅನ್ಯಾಯವಾಗಿದ್ದರೆ ಜನಪ್ರತಿನಿಧಿಗಳು ಸುಮ್ಮನೇ ಇರುತ್ತಿರಲಿಲ್ಲ’ ಎಂದು ಹೇಳಿದರು.

ಕರವೇ ನಾರಾಯಣಗೌಡಗೆ ನೋಟಿಸ್

ರೈಲ್ವೆ ಇಲಾಖೆಯ ಪರೀಕ್ಷೆಯಲ್ಲಿ ಕನ್ನಡ ಕಡೆಗಣಿಸಲಾಗುತ್ತಿದೆ ಎಂದು ಆರೋಪಿಸಿ ಪ್ರತಿಭಟನೆಗೆ ಕರೆ ನೀಡಿರುವ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣ ಗೌಡ ಅವರಿಗೆ ಕಾಟನ್‌ಪೇಟೆ ಠಾಣೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

‘ಪೊಲೀಸರಿಂದ ಅನುಮತಿ ಪಡೆದುಕೊಂಡು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಬಹುದು. ಆದೇಶ ಉಲ್ಲಂಘಿಸಿ ರೈಲು ನಿಲ್ದಾಣ ಬಳಿ ಪ್ರತಿಭಟನೆ ನಡೆಸಿದ್ದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ನೋಟಿಸ್‌ನಲ್ಲಿ ಎಚ್ಚರಿಕೆ ನೀಡಿದ್ದಾರೆ.

> **ಕನ್ನಡದ ಮಕ್ಕಳ ಭವಿಷ್ಯ ಆತಂಕದಲ್ಲಿರುವಾಗ ನಾವು ಸುಮ್ಮನೆ ಕೂರುವುದಿಲ್ಲ. ನಮ್ಮನ್ನು ಜೈಲಿಗೆ ಕಳುಹಿಸಿದರೂ ಚಿಂತೆಯಿಲ್ಲ. ಈ ಬಾರಿ ಜೈಲಿನಲ್ಲೇ ಯುಗಾದಿ ಆಚರಿಸುತ್ತೇವೆ**
>
> **ಟಿ.ಎ.ನಾರಾಯಣಗೌಡ,** ಅಧ್ಯಕ್ಷ, ಕರ್ನಾಟಕ ರಕ್ಷಣಾ ವೇದಿಕೆ

ಏಳು ಆರೋಪಿಗಳನ್ನು ಬಂಧಿಸಿದ ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು: ಇಬ್ಬರ ವಿಚಾರಣೆ

ಬ್ಯಾಟ್‌ನಿಂದ ಹೊಡೆದು ಮೆಕ್ಯಾನಿಕ್ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್ ಬ್ಯಾಟ್‌ನಿಂದ ಹೊಡೆದು ಮೆಕ್ಯಾನಿಕ್‌ನನ್ನು ಕೊಲೆ ಮಾಡಿ ಪರಾರಿಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಏಳು ಆರೋಪಿಗಳನ್ನು ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.



ರಶೀದ್ ಪಾಷಾ

ಬಡಾಮಖಾನ್ ರಸ್ತೆಯಲ್ಲಿ ಈ ಪ್ರಕರಣ ನಡೆದಿದ್ದು, ಮೆಕ್ಯಾನಿಕ್ ರಶೀದ್ ಪಾಷಾ (45) ಕೊಲೆಗೀಡಾದ ವ್ಯಕ್ತಿ. ಪ್ರಕರಣದ ಸಂಬಂಧ ಏಳು ಆರೋಪಿಗಳನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಈ ಪೈಕಿ ಪರ್ವೇಜ್, ಅಫ್ರೀದ್, ಮುನಾವರ್ ಎಂಬುವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಶೀದ್ ಪಾಷಾ ಅಂಗಡಿ ಪಕ್ಕದಲ್ಲಿಯೇ ಪರ್ವೇಜ್ ಅಂಗಡಿ ಇದೆ. ಪರ್ವೇಜ್ ಅಂಗಡಿಯ ಛಾವಣಿಗೆ ಕಾಂಕ್ರಿಟ್ ಹಾಕಿಸಿದ್ದ. ಈ ವಿಚಾರಕ್ಕೆ ಇಬ್ಬರ ನಡುವೆ ಜಗಳ ನಡೆದಿದೆ. ಜಗಳ ವಿಕೋಪಕ್ಕೆ ತಿರುಗಿ, ಪರ್ವೇಜ್ ತನ್ನ ಇಬ್ಬರು ಸ್ನೇಹಿತರೊಂದಿಗೆ ಸೇರಿ ಕ್ರಿಕೆಟ್ ಬ್ಯಾಟ್‌ನಿಂದ ರಷೀದ್ ಅವರ ಮೇಲೆ ಹಲ್ಲೆ ನಡೆಸಿದ್ದ. ಈ ವೇಳೆ ತೀವ್ರವಾಗಿ ಗಾಯಗೊಂಡು ಕೆಳಗೆ ಬಿದ್ದಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಘಟನೆ ನಡೆದ ಸಂದರ್ಭದಲ್ಲಿ ರಶೀದ್ ಅವರ ಮಕ್ಕಳು ಸ್ಥಳದಲ್ಲಿಯೇ ಇದ್ದರು ಎಂದು ಪೊಲೀಸರು ತಿಳಿಸಿದರು.

ಆರೋಪಿಗಳು ಕ್ರಿಕೆಟ್ ಬ್ಯಾಟ್‌ನಿಂದ ಹಲ್ಲೆ ನಡೆಸಿರುವ ವಿಡಿಯೊ ಜಾಲತಾಣದಲ್ಲಿ ಹರಿದಾಡಿತ್ತು.

ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡರು. ಈ ಸಂಬಂಧ ಆರೋಪಿಗಳನ್ನು ಬಂಧಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

‘ಆರೋಪಿಗಳು ಹಣ ವಸೂಲು ಮಾಡಲು ಬಂದಿದ್ದರು’ ಎಂದು ಕೆಲವರು ಆರೋಪಿಸಿದ್ದಾರೆ. ಈ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸ್ಥಳದಲ್ಲಿ ಒಂದು ಕೆಎಸ್‌ಆರ್‌ಪಿ ತುಕಡಿಯನ್ನು ನಿಯೋಜಿಸಲಾಗಿದೆ.

ಅನುಮಾನ: ಚಾಕುವಿನಿಂದ ಪತ್ನಿ ಕತ್ತು ಕೊಯ್ದು ಕೊಲೆ

ಕೌಟುಂಬಿಕ ವಿಚಾರಕ್ಕೆ ಸಂಬಂಧಿಸಿದಂತೆ ನಡೆದ ಜಗಳದಲ್ಲಿ ಪತಿಯು ಪತ್ನಿಯ ಕತ್ತು ಕೊಯ್ದು ಕೊಲೆ ಮಾಡಿರುವ ಘಟನೆ ಮೈಕೋ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಬಿಳೇಕಲ್ಲಹಳ್ಳಿ ನಿವಾಸಿ ರಂಗಮ್ಮ(46) ಕೊಲೆಯಾದ ಮಹಿಳೆ. ಕೃತ್ಯ ಎಸಗಿದ ಪತಿ ನಾಗರಾಜ್ (51) ಎಂಬಾತನನ್ನು ಬಂಧಿಸಲಾಗಿದೆ. ಆರೋಪಿ ಭಾನುವಾರ ಬಿಳೇಕಲ್ಲಹಳ್ಳಿಯ ಮನೆಯಲ್ಲಿ ಕೃತ್ಯವೆಸಗಿದ್ದಾನೆ ಎಂದು ಪೊಲೀಸರು ಹೇಳಿದರು.

ದಾವಣಗೆರೆಯ ರಂಗಮ್ಮ ಮತ್ತು ನಾಗರಾಜ್ ಕೆಲ ವರ್ಷಗಳಿಂದ ಬಿಳೇಕಲ್ಲಹಳ್ಳಿಯಲ್ಲಿ ಮಗನ ಜತೆ ವಾಸವಾಗಿದ್ದರು. ರಂಗಮ್ಮ ಮನೆಗೆಲಸ ಮಾಡುತ್ತಿದ್ದರು. ನಾಗರಾಜ್ ಖಾಸಗಿ ಸಂಸ್ಥೆಯಲ್ಲಿ ಭದ್ರತಾ ಸಿಬ್ಬಂದಿ ಕೆಲಸ ಮಾಡಿಕೊಂಡಿದ್ದರು. ಮಗ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದಾರೆ.

‘ಆರೋಪಿಯು ಪತ್ನಿ ರಂಗಮ್ಮನ ಮೇಲೆ ಅನುಮಾನಗೊಂಡು, ಕುಡಿದು ಬಂದು ಮದ್ಯದ ಅಮಲಿನಲ್ಲಿ ಜಗಳವಾಡುತ್ತಿದ್ದ. ಭಾನುವಾರ ರಾತ್ರಿ ಕುಡಿದು ಬಂದ ನಾಗರಾಜ್, ಪತ್ನಿ ಜತೆ ಗಲಾಟೆ ಮಾಡಿದ್ದಾನೆ. ಅದು ವಿಕೋಪಕ್ಕೆ ಹೋದಾಗ, ಅಡುಗೆ ಮನೆಗೆ ಹೋಗಿ ಚಾಕು ತೆಗೆದುಕೊಂಡು ಬಂದು ಪತ್ನಿಯ ಕತ್ತು ಕೊಯ್ದು ಕೊಲೆ ಮಾಡಿದ್ದಾನೆ. ಮನೆಯಲ್ಲಿ ಗಲಾಟೆ ಆಗುತ್ತಿರುವುದನ್ನು ಗಮನಿಸಿದ ಸ್ಥಳೀಯರು ಬಂದು ನೋಡಿದಾಗ ರಂಗಮ್ಮ ಕೊಲೆಯಾಗಿರುವುದು ಗೊತ್ತಾಗಿದೆ. ನಂತರ ರಂಗಮ್ಮ ಅವರ ಪುತ್ರ ಠಾಣೆಗೆ ವಿಷಯ ತಿಳಿಸಿದ್ದಾರೆ’ ಎಂದು ಪೊಲೀಸರು ಹೇಳಿದರು.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ರಂಗಮ್ಮನ ಪುತ್ರನಿಂದ ದೂರು ಪಡೆದು ಪ್ರಕರಣ ದಾಖಲಿಸಿಕೊಂಡು ಆರೋಪಿ ನಾಗರಾಜ್‌ನನ್ನು ಬಂಧಿಸಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಸೋಮವಾರ ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಜಿ.ಪಂ.ಅಧೀನಕ್ಕೆ ಪಿಯು ಆಡಳಿತ ನಿಯಂತ್ರಣ: ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರ ಕಚೇರಿಗಳ ಆಡಳಿತಾತ್ಮಕ ನಿಯಂತ್ರಣವನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಅಧೀನಕ್ಕೆ ವರ್ಗಾಯಿಸುವ ಪ್ರಸ್ತಾವಕ್ಕೆ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ (ಎಐಎಸ್‌ಇಸಿ) ವಿರೋಧ ವ್ಯಕ್ತಪಡಿಸಿದೆ.

ಪಂಚಾಯಿತಿ ವ್ಯಾಪ್ತಿಗೆ ತಳ್ಳುವ ಸರ್ಕಾರದ ನಿರ್ಧಾರ ಶಿಕ್ಷಣ ವಿರೋಧಿ ಆಗಿದೆ. ಶಿಕ್ಷಣದ ಘನತೆ ಮತ್ತು ಸ್ವಾಯತ್ತತೆಯನ್ನು ಹರಾಜು ಹಾಕುವ ಹಂತಕ್ಕೆ ತಲುಪಿದೆ ಎಂದು ಸಮಿತಿ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಟೀಕಿಸಿದ್ದಾರೆ.

ಈ ಪ್ರಸ್ತಾವವನ್ನು ರಾಜ್ಯ ಪದವಿಪೂರ್ವ ಉಪನ್ಯಾಸಕರ ಸಂಘವು ಖಂಡಿಸಿದೆ. ಸಂಘದ ಅಭಿಪ್ರಾಯಕ್ಕೆ ಎಐಎಸ್‌ಇಸಿ ಬೆಂಬಲವಿದೆ. ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಶಾಲಾ ಭಂಜಕ ನೀತಿಯನ್ನು ಸರ್ಕಾರ ಅನುಸರಿಸುತ್ತಿದೆ. ಕೆಪಿಎಸ್ ಮ್ಯಾಗ್ನೆಟ್ ಯೋಜನೆಯ ಹೆಸರಲ್ಲಿ ಗ್ರಾಮೀಣ ಭಾಗದ ಶಿಕ್ಷಣ ವ್ಯವಸ್ಥೆಯನ್ನು ಧ್ವಂಸಗೊಳಿಸುವುದನ್ನು ನಿಲ್ಲಿಸಬೇಕು. ಇಲ್ಲದೇ ಇದ್ದರೆ ಬೀದಿಗಿಳಿದು ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದ್ದಾರೆ.

2000 ವಿಶೇಷ ಬಸ್‌ಗಳ ವ್ಯವಸ್ಥೆ

ಯುಗಾದಿ, ರಂಜಾನ್: ಬೆಂಗಳೂರಿನಿಂದ ವಿವಿಧ ಪ್ರದೇಶಗಳಿಗೆ ಸಂಚಾರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಯುಗಾದಿ ಮತ್ತು ರಂಜಾನ್ ಹಬ್ಬದ ಸಂದರ್ಭದಲ್ಲಿ ಊರಿಗೆ, ಪ್ರವಾಸಕ್ಕೆ ಹೋಗುವವರ ಸಂಖ್ಯೆ ಹೆಚ್ಚಲಿರುವುದರಿಂದ ಕೆಎಸ್‌ಆರ್‌ಟಿಸಿ 2,000 ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಿದೆ. ಮಾರ್ಚ್ 18ರಿಂದ 20ರವರೆಗೆ ಬೆಂಗಳೂರಿನಿಂದ ವಿವಿಧ ಪ್ರದೇಶಗಳಿಗೆ ಹಾಗೂ ವಿವಿಧೆಡೆಯಿಂದ ಬೆಂಗಳೂರಿಗೆ ಮಾರ್ಚ್ 22ರಂದು ವಿಶೇಷ ಬಸ್ ಸಂಚರಿಸಲಿವೆ.

ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣಗಳಿಂದ ಬಸ್‌ಗಳು ಸಂಚರಿಸಲಿವೆ.

ಧರ್ಮಸ್ಥಳ, ಕುಕ್ಕೆ ಸುಬ್ರಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ, ತಿರುಪತಿ, ವಿಜಯವಾಡ, ಹೈದರಾಬಾದ್ ಸೇರಿದಂತೆ ವಿವಿಧೆಡೆ ವಿಶೇಷ ಬಸ್‌ಗಳು ಸಂಚರಿಸಲಿವೆ. ನಿಗಮದ ಕಾರ್ಯಾಚರಣೆ ವ್ಯಾಪ್ತಿಯ ಎಲ್ಲ ತಾಲ್ಲೂಕು, ಜಿಲ್ಲಾ ಬಸ್ ನಿಲ್ದಾಣಗಳಿಂದ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಲಾಗುತ್ತದೆ.

ಪ್ರಯಾಣಿಕರ ಅನುಕೂಲಕ್ಕಾಗಿ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಸೌಲಭ್ಯ ಕಲ್ಪಿಸಲಾಗಿದೆ. ಪ್ರಯಾಣಿಕರು ಬಸ್ ನಿಲ್ದಾಣಗಳಿಗೆ ತೆರಳುವ ಮುನ್ನ ಮುಂಗಡ ಕಾಯ್ದಿರಿಸಿರುವ ಟಿಕೆಟ್‌ಗಳ ಮೇಲೆ ನಮೂದಿಸಲಾಗಿರುವ ಬಸ್ ನಿಲ್ದಾಣ, ಪಿಕ್‌ಅಪ್ ಪಾಯಿಂಟ್ ಮಾಹಿತಿಯನ್ನು ಗಮನಿಸುವಂತೆ ಕೋರಲಾಗಿದೆ.

www.ksrtc.karnataka.gov.in ವೆಬ್‌ಸೈಟ್ ಮೂಲಕ ಇ-ಟಿಕೆಟ್ ಬುಕಿಂಗ್ ಮಾಡಬಹುದು. ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಕಾಯ್ದಿರಿಸಿದಲ್ಲಿ ಶೇ 5ರಷ್ಟು ರಿಯಾಯಿತಿ ಸಿಗಲಿದೆ. ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟ್ ಒಟ್ಟಿಗೆ ಕಾಯ್ದಿರಿಸಿದರೆ ವಾಪಸ್ಸಾಗುವ ದರದಲ್ಲಿ ಶೇ 10 ರಿಯಾಯಿತಿ ದೊರೆಯಲಿದೆ ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

254 ಎಲ್‌ಪಿಜಿ ಸಿಲಿಂಡರ್ ವಶ

ಬೆಂಗಳೂರು: ನಗರ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಅನಧಿಕೃತವಾಗಿ ಸಂಗ್ರಹಿಸಿದ್ದ ಒಟ್ಟು 254 ಎಲ್‌ಪಿಜಿ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ ತಿಳಿಸಿದ್ದಾರೆ.

ಆಹಾರ ಇಲಾಖೆಯ ನಿರೀಕ್ಷಕರು ದಾಳಿ ನಡೆಸಿ, ಬೆಂಗಳೂರು ಉತ್ತರ ತಾಲ್ಲೂಕಿನ ಚೊಕ್ಕಸಂದ್ರದ ವಿನಾಯಕ ಗ್ಯಾಸ್ ಏಜೆನ್ಸಿಯಲ್ಲಿ ಅನಧಿಕೃತವಾಗಿ ಸಂಗ್ರಹಿಸಿ ಇಡಲಾಗಿದ್ದ 45 ಹಾಗೂ ಯಲಹಂಕ ತಾಲ್ಲೂಕಿನ ಚಿಕ್ಕಜಾಲ ಹೋಬಳಿಯ ಅನ್ನಪೂರ್ಣ ಎಂಟರ್‌ಪ್ರೈಸಸ್ ಮಳಿಗೆಯಲ್ಲಿ 209 ಸಿಲಿಂಡರ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಮಳಿಗೆಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಮೀನಿನ ಪೋಟೊ ಹಿಂದೆ ₹39 ಲಕ್ಷದ ಗಾಂಜಾ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಬ್ಯಾಂಕಾಕ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸೋಮವಾರ ಬಂದಿಳಿದ ಪ್ರಯಾಣಿಕರೊಬ್ಬರಿಂದ ₹39.37 ಲಕ್ಷ ಮೌಲ್ಯದ 1.125 ಕೆ.ಜಿ ಹೈಡ್ರೊಪೋನಿಕ್ ಗಾಂಜಾವನ್ನು ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಬ್ಯಾಂಕಾಕ್‌ನಿಂದ ಬಂದಿಳಿದ ಪ್ರಯಾಣಿಕರೊಬ್ಬರ ಬ್ಯಾಗ್ ಪರಿಶೀಲನೆ ವೇಳೆ ಎರಡರಿಂದ ಮೂರು ಅಡಿ ಎತ್ತರದ ಪೋಟೊ ಕಂಡು ಬಂತು. ಮನೆಯ ಗೋಡೆಗೆ ನೇತು ಹಾಕಲು ತಂದಿರುವುದಾಗಿ ಪ್ರಯಾಣಿಕ ಹೇಳಿದರೂ ಕಸ್ಟಮ್ಸ್ ಅಧಿಕಾರಿಗಳು ಒಪ್ಪಲಿಲ್ಲ. ಸುತ್ತಿಗೆ ತರಿಸಿ ಪೋಟೊ ಒಡೆಯುವಂತೆ ಸಿಬ್ಬಂದಿಗೆ ಸೂಚಿಸಿದರು.




ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ವಶಪಡಿಸಿಕೊಂಡ ಗಾಂಜಾವನ್ನು ಅಡಗಿಟ್ಟಿಸಿರುವ ಪೋಟೋ (ಎಡಚಿತ್ರ), ಗಾಂಜಾ ಹೊರತೆಗೆಯುತ್ತಿರುವ ಕಸ್ಟಮ್ಸ್ ಸಿಬ್ಬಂದಿ

ಮೀನಿನ ಚಿತ್ರವಿದ್ದ ದೊಡ್ಡ ಪೋಟೊದ ಅಗಲವಾದ ಲೋಹದ ಚೌಕಟ್ಟು ಮತ್ತು ಹಿಂಬದಿಯ ಸೆರಾಮಿಕ್ ಶೀಟ್ ಅನ್ನು ಸುತ್ತಿಗೆಯಿಂದ ಒಡೆದಾಗ ಎರಡು ಪ್ಲಾಸ್ಟಿಕ್ ಹೊದಿಕೆ ಕಂಡು ಬಂದವು. ಅಧಿಕಾರಿಗಳ ಸಂದೇಹ ಹುಸಿಯಾಗಲಿಲ್ಲ. ಪ್ಯಾಕೆಟ್ ಬಿಚ್ಚಿದಾಗ ಲಕ್ಷಾಂತರ ರೂಪಾಯಿ ಮೌಲ್ಯದ ಹೈಡ್ರೊಪೋನಿಕ್ ಗಾಂಜಾ ಪತ್ತೆಯಾಯಿತು.

ಆರೋಪಿಯನ್ನು ವಶಕ್ಕೆ ಪಡೆದು ಎನ್‌ಡಿಪಿಎಸ್ ಕಾಯ್ದೆ–1985ರಡಿ ಪ್ರಕರಣ ದಾಖಲಿಸಿ, ತನಿಖೆ ಮುಂದುವರಿಸಲಾಗಿದೆ ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬಾವಿಗೆ ಬಿದ್ದ 2 ವರ್ಷದ ಬಾಲೆ ರಕ್ಷಣೆ

ಪ್ರಜಾವಾಣಿ ವಾರ್ತೆ

ಶಿರಸಿ: ಆಟವಾಡುತ್ತಾ ಹೋಗಿ ಆಕಸ್ಮಿಕವಾಗಿ ಬಾವಿಗೆ ಬಿದ್ದು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ ಎರಡು ವರ್ಷದ ಬಾಲಕಿಯನ್ನು ವ್ಯಕ್ತಿಯೊಬ್ಬರು ರಕ್ಷಿಸಿದ ಘಟನೆ ನಗರದ ಕಸ್ತೂರಬಾ ನಗರದಲ್ಲಿ ನಡೆದಿದೆ.

ಇಲ್ಲಿನ ನಿವಾಸಿ ಭುವಿ (2) ಬಾವಿಗೆ ಬಿದ್ದು ಅದೃಷ್ಟವಶಾತ್ ಬದುಕುಳಿದ ಬಾಲಕಿ. ಮನೆಯಲ್ಲಿ ಮಗು ಕಾಣದಿದ್ದಾಗ ಆತಂಕಗೊಂಡ ಅಜ್ಜಿ ಸುತ್ತಮುತ್ತ ಹುಡುಕಾಡಿದ್ದಾರೆ. ಬಾವಿಯ ಹತ್ತಿರ ಹೋದಾಗ ಮಗುವಿನ ಅಳುವಿನ ಶಬ್ದ ಕೇಳಿಬಂದಿದೆ. ಆತಂಕದೊಂದಿಗೆ ಬಾವಿಯೊಳಗೆ ಇಣುಕಿ ನೋಡಿದಾಗ, ಮಗು ನೀರಿಗೆ ಇಳಿಸಲಾಗಿದ್ದ ಪಂಪ್‌ಸೆಟ್ ಪುಟ್‌ಬಾಲ್ ಪೈಪ್ ಅನ್ನು ಗಟ್ಟಿಯಾಗಿ ಹಿಡಿದುಕೊಂಡು ಅಳುತ್ತಿರುವುದು ಕಂಡುಬಂದಿದೆ.

ಹತ್ತಿರದಲ್ಲೇ ವಾಸವಿರುವ ಫಯಾಜ್ ಚೌಟಿ ಎಂಬವರು ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದರು. ಆ ಸಮಯದಲ್ಲಿ ಬೆಂಗಳೂರಿಗೆ ಹೊರಡುವ ಸಿದ್ಧತೆಯಲ್ಲಿದ್ದ ಅವರು, ಘಟನೆಯ ತೀವ್ರತೆ ಕಂಡು ಕ್ಷಣಾರ್ಧವೂ ತಡಮಾಡದೆ ಬಾವಿಗೆ ಇಳಿಯಲು ಸಿದ್ಧರಾದರು. ಜನರ ಸಹಾಯದೊಂದಿಗೆ ಬಾವಿಗಿಳಿದು, ಸುರಕ್ಷಿತವಾಗಿ ಬಾಲೆಯನ್ನು ಮೇಲಕ್ಕೆತ್ತಿ ತರುವಲ್ಲಿ ಯಶಸ್ವಿಯಾದರು.



ಬಾವಿಗೆ ಬಿದ್ದಿದ್ದ ಬಾಲಕಿಯನ್ನು ಫಯಾಜ್ ಚೌಟಿ ಮೇಲಕ್ಕೆ ಕರೆ ತಂದರು

ಡಿವೈಎಸ್‌ಪಿ: 5 ದಿನದಲ್ಲಿ ಜ್ಯೇಷ್ಠತಾ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಿವೈಎಸ್‌ಪಿ (ಸಿವಿಲ್) ವೃಂದದ ಮುಂಬಡ್ತಿಯ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಏಪ್ರಿಲ್ 21ರೊಳಗೆ ಪ್ರಕಟಿಸಲಾಗುವುದು' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಜಿ.ಎಸ್. ಶ್ರೀನಿವಾಸ್ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿದರು.

'ಕೆಎಟಿ ಆದೇಶದ ಕಾರಣದಿಂದ ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಅಧಿಕಾರಿ ಚಿನ್ನ ಮಾರಯ್ಯ ಅವರ ಸಲಹಾ ಸಮಿತಿ ನೀಡಿರುವ ವರದಿ ಆಧರಿಸಿ, ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಲಾಗುತ್ತದೆ. ಅದರಂತೆಯೇ ಮುಂಬಡ್ತಿಗೆ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಪರಮೇಶ್ವರ ಹೇಳಿದರು.

'ಡಿವೈಎಸ್‌ಪಿ ಹುದ್ದೆಗಳಿಗೆ ಸಂಬಂಧಿಸಿದಂತೆ ಖಾಲಿ ಹುದ್ದೆಗಳ ರಿಜಿಸ್ಟರ್‌ನಲ್ಲಿ ತಪ್ಪುಗಳಾಗಿವೆ. ಜ್ಯೇಷ್ಠತಾ ಪಟ್ಟಿಯಲ್ಲೂ ಲೋಪಗಳಿವೆ. ನೇರ ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳ ಅನುಪಾತದಲ್ಲಿ ವ್ಯತ್ಯಾಸಗಳಾಗಿವೆ. ಹೊಸದಾಗಿ ನೇಮಕ ಆದವರು 35 ಮಂದಿ. ಆದರೆ, ಇಲಾಖೆಯಿಂದ 396 ಮಂದಿಯ ಪಟ್ಟಿಯನ್ನು ಮುಂಬಡ್ತಿಗೆ ಸಿದ್ಧಪಡಿಸಲಾಗಿದೆ. ಈ ಪಟ್ಟಿಯಲ್ಲಿ ಹಲವರು ಹೆಸರು ಪುನರಾವರ್ತನೆಗೊಂಡಿವೆ. ಇನ್ನು ಕೆಲವರ ಮೊದಲ ಮತ್ತು ಕೊನೆಯ ಹೆಸರುಗಳನ್ನು ಪ್ರತ್ಯೇಕಗೊಳಿಸಿ ಉಲ್ಲೇಖಿಸಲಾಗಿದೆ. ಎರವಲು ಸೇವೆ ಮೇಲೆ ಇರುವವರ ಹೆಸರೂ ಪಟ್ಟಿಯಲ್ಲಿದೆ' ಎಂದು ಶ್ರೀನಿವಾಸ್ ಆಕ್ಷೇಪ ವ್ಯಕ್ತಪಡಿಸಿದರು.

ಬನ್ನೇರುಘಟ್ಟ: ಹೊಸ ಅತಿಥಿಗಳ ಕಲರವ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾವೇರಿ ಮತ್ತು ಕೋಕಿಲಾ ಎಂಬ ಎರಡು ಜೀಬ್ರಾಗಳು ಹೆಣ್ಣುಮರಿಗಳಿಗೆ ಜನ್ಮ ನೀಡಿವೆ.

ತಾಯಿ ಮತ್ತು ಮರಿಗಳು ಆರೋಗ್ಯದಿಂದ ಇದ್ದು, ಉದ್ಯಾನದ ಸಿಬ್ಬಂದಿ ಅತ್ಯಂತ ಜತನದಿಂದ ನೋಡಿಕೊಳ್ಳುತ್ತಿದ್ದಾರೆ. ಮರಿ ಜೀಬ್ರಾಗಳ ತುಂಟತನದಿಂದ ಉದ್ಯಾನದಲ್ಲಿ ಸಂಭ್ರಮ ಮನೆಮಾಡಿದೆ.

ಜ.17ರಂದು ಕೋಕಿಲಾ ಮತ್ತು ಜ.28ರಂದು ಕಾವೇರಿ ಹೆಸರಿನ ಜೀಬ್ರಾಗಳು ಮರಿಗಳಿಗೆ ಜನ್ಮ ನೀಡಿದ್ದು, ಇದರಿಂದಾಗಿ ಉದ್ಯಾನದಲ್ಲಿ ಜೀಬ್ರಾಗಳ ಸಂಖ್ಯೆ ಒಂಬತ್ತಕ್ಕೆ ಏರಿದೆ.

ತಾಯಿ ಮತ್ತು ಮರಿ ಜೀಬ್ರಾಗಳ ಆರೋಗ್ಯದ ಬಗ್ಗೆ ಉದ್ಯಾನದ ವೈದ್ಯಾಧಿಕಾರಿಗಳು ಮತ್ತು ಅಧಿಕಾರಿಗಳು ನಿಗಾ ವಹಿಸಿದ್ದಾರೆ ಎಂದು ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದರು.



ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಈಚೆಗೆ ಜನಿಸಿದ ಮರಿಯೊಂದಿಗೆ ಜೀಬ್ರಾ

ನಗರದಲ್ಲಿ ಇಂದು

ಪುನೀತ್ ರಾಜ್‌ಕುಮಾರ್ ಜನ್ಮ ದಿನದ ಸಂಭ್ರಮ, ಸಾಂಸ್ಕೃತಿಕ ಕಾರ್ಯಕ್ರಮಗಳು. ರಕ್ತದಾನ ಶಿಬಿರ: ಅತಿಥಿಗಳು: ಎಸ್.ಟಿ. ಸೋಮಶೇಖರ್, ಲತಾ ವಿ., ಹಾಸನ್ ರಘು, ದಿಲೀಪ್ ಕುಮಾರ್, ಆಯೋಜನೆ: ಅಪ್ಪು ಅಭಿಮಾನಿಗಳ ಸಂಘ, ಸ್ಥಳ: ಸುಣಕಲ್ ಪಾಳ್ಯ, ಉತ್ತರಹಳ್ಳಿ ಮುಖ್ಯರಸ್ತೆ, ಕೆಂಗೇರಿ, ಬೆಳಿಗ್ಗೆ 8ರಿಂದ

ಬೆಂಗಳೂರು ವಿಶ್ವವಿದ್ಯಾಲಯ ವಿಜ್ಞಾನ ಉತ್ಸವ: ಅತಿಥಿಗಳು: ಎಸ್.ಆರ್. ನಿರಂಜನ, ಶಿವಪ್ರಸಾದ್ ಎಸ್.ಎಂ., ಅಧ್ಯಕ್ಷತೆ: ಎಸ್.ಎಂ. ಜಯಕರ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಎಚ್.ಎನ್. ಸಭಾಂಗಣ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 9.30

'ಕವಿ ದ.ರಾ. ಬೇಂದ್ರೆ–ಒಂದು ಪಕ್ಷಿನೋಟ' ವಿಶೇಷ ಉಪನ್ಯಾಸ: ಸಂಪನ್ಮೂಲ ವ್ಯಕ್ತಿ: ಶಿವರಾಜ್ ಬ್ಯಾಡರಹಳ್ಳಿ, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 10

ನಿರಂಜನರ ಜನ್ಮ ಶತಮಾನೋತ್ಸವ ಸಮಾರಂಭ: ಅತಿಥಿ: ಜಿ. ರಾಮಕೃಷ್ಣ, ಉಪಸ್ಥಿತಿ: ಆನಂದಪ್ಪ ಐ., ಎನ್. ಗಾಯತ್ರಿ, ಅಧ್ಯಕ್ಷತೆ: ಸಿದ್ದನಗೌಡ ಪಾಟೀಲ, ಆಯೋಜನೆ: ಹೊಸತು ತಿಂಗಳ ಪತ್ರಿಕೆ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10.30

'ಊರುಭಂಗ' ನಾಟಕ ಪ್ರದರ್ಶನ: ನಿರ್ದೇಶನ: ಛಾಯಾಭಾರ್ಗವಿ ಎಸ್.ಎಚ್., ಆಯೋಜನೆ: ಟೆಂಟ್ ಸಿನಿಮಾ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಆಮಿಷ: ಪೊಲೀಸರ ವಶಕ್ಕೆ ಬಂಧಿತರು

ಬಿಡದಿ ರೆಸಾರ್ಟ್‌ನಲ್ಲಿ ತಂಗಿದ್ದ ಒಡಿಶಾ ಕೈ ಶಾಸಕರ ಖರೀದಿಗೆ ಯತ್ನ

ಪ್ರಜಾವಾಣಿ ವಾರ್ತೆ


ಬೀರೇಂದ್ರ ಪ್ರಸಾದ್


ಅಜಿತ್ ಕುಮಾರ್


ಸಿಮಾಚಲ್ ಮೊಕುದ್


ಸುರೇಶ್

ರಾಮನಗರ: ಬಿಡದಿ ಬಳಿಯ ವಂಡರ್‌ಲಾ ರೆಸಾರ್ಟ್‌ನಲ್ಲಿ ಬೀಡು ಬಿಟ್ಟಿದ್ದ ಒಡಿಶಾ ಕಾಂಗ್ರೆಸ್ ಶಾಸಕರಿಗೆ ಲಂಚದ ಆಮಿಷವೊಡ್ಡಿದ ಆರೋಪದ ಮೇಲೆ ಬಂಧಿಸಲಾದ ನಾಲ್ವರು ಆರೋಪಿಗಳನ್ನು ಸೋಮವಾರ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯದ ಎದುರು ಹಾಜರುಪಡಿಸಲಾಯಿತು. ನ್ಯಾಯಾಲಯ ನಾಲ್ವರೂ ಆರೋಪಿಗಳನ್ನು ಎರಡು ದಿನ ಪೊಲೀಸರ ವಶಕ್ಕೆ ನೀಡಿದೆ.

ಆರೋಪಿಗಳಾದ ಒಡಿಶಾದ ಬೀರೇಂದ್ರ ಪ್ರಸಾದ್, ಅಜಿತ್ ಕುಮಾರ್ ಸಾಹು, ಸಿಮಾಚಲ್ ಮೊಕುದ್ ಹಾಗೂ ಬೆಂಗಳೂರಿನ ಸುರೇಶ್ ಅವರನ್ನು ನ್ಯಾಯಾಧೀಶ ಎಂ.ಎಚ್. ಅಣ್ಣಯ್ಯನವರ ವಿಚಾರಣೆಗಾಗಿ ಎರಡು ದಿನ ಪೊಲೀಸರ ವಶಕ್ಕೆ ಒಪ್ಪಿಸಿ ಆದೇಶಿಸಿದರು.

ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ ವಾಸವಿ ಅಂಗಡಿ, 'ಬಂಧಿತರ ಹಿನ್ನೆಲೆ, ರಾಜ್ಯಕ್ಕೆ ಬಂದಿದ್ದ ಉದ್ದೇಶ, ಮೊಬೈಲ್ ಕರೆಗಳ ವಿವರ ಪರಿಶೀಲನೆ ಸೇರಿ ಹಲವು ಆಯಾಮಗಳಲ್ಲಿ ತನಿಖೆ ನಡೆಸಲು ಐದು ದಿನ ಪೊಲೀಸರ ವಶಕ್ಕೆ ನೀಡಬೇಕು' ಎಂದು ಮನವಿ ಮಾಡಿದರು.

'ಇದು ರಾಜಕೀಯ ಪ್ರೇರಿತ ಪ್ರಕರಣ. ಕಂಪನಿ ಕೆಲಸಕ್ಕಾಗಿ ಹೋಟೆಲ್‌ನಲ್ಲಿ ತಂಗಿದ್ದವರ ಮೇಲೆ ಲಂಚದ ಆಮಿಷ ಆರೋಪ ಹೊರಿಸಿ ಬಂಧಿಸಲಾಗಿದೆ. ಬಂಧಿತ ಸುರೇಶ್ ಒಡಿಶಾದ ಉಕ್ಕು ಕಂಪನಿಯಲ್ಲಿ ಸಿಇಒ ಆಗಿದ್ದಾರೆ. ಕಂಪನಿಗಾಗಿ ಜಾಗ ಖರೀದಿಸಲು ಅವರು ಮೂವರು ಸ್ನೇಹಿತರ ಜೊತೆ ಬಂದಿದ್ದರು' ಎಂದು ವಕೀಲರಾದ ರಮೇಶಪ್ಪ ಎನ್.ಜಿ ಮತ್ತು ಕಾಶಿನಾಥ್ ಜೆ.ಡಿ., ಆರೋಪಿಗಳ ಪರ ವಾದ ಮಂಡಿಸಿದರು.

'ರೆಸಾರ್ಟ್‌ನಲ್ಲಿ ಉಪಾಹಾರದ ವೇಳೆ ಎದುರಾದ ಶಾಸಕರನ್ನು ಮಾತನಾಡಿಸಿದ್ದನ್ನು ನೆಪವಾಗಿಸಿ, ಲಂಚದ ಆಮಿಷವೊಡ್ಡಿದ್ದಾರೆಂದು ಕತೆ ಕಟ್ಟಿ ಬಂಧಿಸಿದ್ದಾರೆ. ಅವರ ವಿರುದ್ಧ ಮಾಡಿರುವ ಆರೋಪದಲ್ಲಿ ಹುರುಳಿಲ್ಲ. ಹಾಗಾಗಿ, ನಾಲ್ವರಿಗೂ ಜಾಮೀನು ನೀಡಬೇಕು' ಎಂದು ಕೋರಿದರು.

ಎರಡೂ ಕಡೆಯವರ ವಾದ ಆಲಿಸಿದ ನ್ಯಾಯಾಧೀಶರು ಪ್ರಾಸಿಕ್ಯೂಷನ್ ಪರ ವಕೀಲರ ವಾದವನ್ನು ಮನ್ನಿಸಿ ವಿಚಾರಣೆಗಾಗಿ ಆರೋಪಿಗಳನ್ನು ಪೊಲೀಸರ ವಶಕ್ಕೆ ಒಪ್ಪಿಸಿದರು.

ತನಿಖಾಧಿಕಾರಿಗಳಾದ ಡಿವೈಎಸ್‌ಪಿ ಬಿ.ಎನ್. ಶ್ರೀನಿವಾಸ್ ಹಾಗೂ ಬಿಡದಿ ಇನ್‌ಸ್ಪೆಕ್ಟರ್ ವಿಜಯಕುಮಾರ್ ನೇತೃತ್ವದ ತಂಡವು ಆರೋಪಿಗಳನ್ನು ಕೋರ್ಟ್‌ಗೆ ಹಾಜರುಪಡಿಸಿತ್ತು.

ಒಬ್ಬ ಮಾಜಿ ಸಚಿವರ ಪುತ್ರ

ಬಂಧಿತ ಅಜಿತ್ ಕುಮಾರ್ ಸಾಹು ಒಡಿಶಾದ ಮಾಜಿ ಸಚಿವರೊಬ್ಬರ ಪುತ್ರ ಎಂದು ತಿಳಿದುಬಂದಿದೆ. ಸುರೇಶ್ ಮೂಲತಃ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯವರು. ಒಡಿಶಾದ ಪ್ರಮುಖ ಉಕ್ಕು ಕಂಪನಿಯಲ್ಲಿ ಸಿಇಒ ಆಗಿರುವ ಅವರಿಗೆ ಸಾಹು ಪರಿಚಿತರು. ಉಳಿದಿಬ್ಬರು ಸಾಹು ಅವರ ಸಹಚರರಾಗಿದ್ದಾರೆ. ಸುರೇಶ್ ಮೂಲಕವೇ ಆರೋಪಿಗಳು ರೆಸಾರ್ಟ್‌ನಲ್ಲಿ ಎರಡು ಕೊಠಡಿ ಕಾಯ್ದಿರಿಸಿದ್ದರು.

ಆರೋಪಿಗಳು ತಮ್ಮ ಮೊಬೈಲ್‌ನಲ್ಲಿದ್ದ ಡೇಟಾ ಅಳಿಸಿದ್ದು, ರಿಕವರಿ ಮಾಡಬೇಕಿದೆ. ಹೆಚ್ಚಿನ ವಿಚಾರಣೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಒಡಿಶಾದ ಕಾಂಗ್ರೆಸ್ ಶಾಸಕರಿಗೆ ಲಂಚದ ಆಮಿಷವೊಡ್ಡಿದ ಪ್ರಕರಣವನ್ನು ಎಲ್ಲಾ ಆಯಾಮದಿಂದಲೂ ತನಿಖೆ ನಡೆಸಲಾಗುತ್ತಿದೆ

ಆರ್.ಶ್ರೀನಿವಾಸ್ ಗೌಡ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಮಳೆ: ಸಿಡಿಲಿಗೆ ಇಬ್ಬರು ಬಲಿ

ಪ್ರಜಾವಾಣಿ ವಾರ್ತೆ

ಮೈಸೂರು: ಹಾಸನ ನಗರ ಮತ್ತು ಕೊಡಗು ಜಿಲ್ಲೆ ಕುಶಾಲನಗರದಲ್ಲಿ ಸೋಮವಾರ ಗುಡುಗು ಸಹಿತ ಆಲಿಕಲ್ಲು ಮಳೆಯಾಗಿದೆ. ಮಾವು, ಕಾಫಿ ಬೆಳೆಗೆ ಹಾನಿಯಾಗುವ ಅತಂಕ ಮೂಡಿದೆ.

ಉಳಿದಂತೆ ಸಿಡಿಲು ಬಡಿದು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಎನ್.ಜರಕುಂಟಿ ಗ್ರಾಮದ ಬಾಲಕ ಮಂಜುನಾಥ ಮುದೇಗೌಡ (15), ಬೀದರ್ ಜಿಲ್ಲೆಯ ಚಿಟಗುಪ್ಪ ತಾಲ್ಲೂಕಿನ ಮುತ್ತಂಗಿಯಲ್ಲಿ ಸಿಡಿಲು ಬಡಿದು ರೈತ ವೈಜಿನಾಥ ಶೇರಗರ್ (60) ಮೃತಪಟ್ಟರು. ಅವರ ಪುತ್ರ ಶ್ರೀನಿವಾಸ ಅವರಿಗೆ ಗಂಭೀರ ಗಾಯಗಳಾಗಿವೆ.

ಮೈಸೂರು ಭಾಗದ ಹಾಸನ ಜಿಲ್ಲೆಯಲ್ಲಿ ಒಂದು ತಾಸು ಮಳೆಯಾಯಿತು. ರಿಂಗ್ ರಸ್ತೆ, ಸಾಲಗಾಮೆ ರಸ್ತೆ, ಎಂ.ಜಿ.ರಸ್ತೆ, ಗುಂಡೇಗೌಡನ ಕೊಪ್ಪಲು ಸೇರಿ ಹಲವೆಡೆ ಆಲಿಕಲ್ಲುಗಳ ರಾಶಿ ಕಂಡುಬಂತು.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ಹುಣಸೂರು, ಎಚ್.ಡಿ.ಕೋಟೆ ತಾಲ್ಲೂಕು, ಮಡಿಕೇರಿ, ಚಾಮರಾಜನಗರ, ಹನೂರು, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹಗುರ ಮಳೆಯಾಯಿತು. ಮೈಸೂರು ನಗರ, ಕೊಡಗಿನ ನಾಪೋಕ್ಲು ಹಾಗೂ ವಿರಾಜಪೇಟೆಯಲ್ಲಿ ಸಾಧಾರಣ ಮಳೆಯಾಯಿತು.

ದಾವಣಗೆರೆ ವರದಿ: ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಸೋಮವಾರ ರಾತ್ರಿ ಆಲಿಕಲ್ಲು ಸಹಿತ ಉತ್ತಮ ಮಳೆ ಸುರಿಯಿತು. ಸಂಜೆಯಿಂದಲೇ ಮೋಡಕವಿದ ವಾತಾವರಣ ಇತ್ತು.

ಹರಿಹರ ಹಾಗೂ ದಾವಣಗೆರೆ ತಾಲ್ಲೂಕಿನ ವಿವಿಧೆಡೆ ವರ್ಷಧಾರೆಯಾಯಿತು. ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಹಾಗೂ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು, ಹೊಸದುರ್ಗ, ಚಿಕ್ಕಜಾಜೂರು ಭಾಗದಲ್ಲೂ ಮಳೆ ಸುರಿದಿದೆ.

ಆಲ್ದೂರಲ್ಲಿ ಮಳೆ (ಚಿಕ್ಕಮಗಳೂರು): ಆಲ್ದೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಆಲಿಕಲ್ಲು ಮಳೆಯಾಯಿತು. ಕಡೂರು, ಬೀರೂರಲ್ಲಿ ತುಂತುರು ಮಳೆಯಾಯಿತು.

ರಾಯಚೂರು ಜಿಲ್ಲೆಯ ಕವಿತಾಳ, ಕೊಪ್ಪಳ ಜಿಲ್ಲೆಯ ಕಾರಟಗಿಯಲ್ಲಿ ಆಲಿಕಲ್ಲು ಸಹಿತ ಉತ್ತಮ ಮಳೆಯಾಗಿದೆ. ಕಟಾವು ಮಾಡಿ ಒಣಹಾಕಿದ್ದ ಸಜ್ಜೆ ಬೆಳೆ ರಕ್ಷಿಸಿಕೊಳ್ಳಲು ರೈತರು ಪರದಾಡಿದರು.

ಕಲಬುರಗಿಯಲ್ಲಿ ತುಂತುರು, ಚಿಂಚೋಳಿಯಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದೆ. ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲ್ಲೂಕಿನಲ್ಲೂ ಸಾಧಾರಣ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ, ಉಜಿರೆ, ಬೆಳ್ತಂಗಡಿಯಲ್ಲಿ ರಾತ್ರಿ ಉತ್ತಮ ಮಳೆ ಸುರಿಯಿತು.

ಹೊತ್ತಿ ಉರಿದ ಪವನ ಯಂತ್ರ

ಹುಬ್ಬಳ್ಳಿ/ ವಿಜಯನಗರ (ಹೊಸಪೇಟೆ): ವಿಜಯನಗರ ಜಿಲ್ಲೆಯ ಕೆಲವೆಡೆ ಸೋಮವಾರ ಗುಡುಗು ಸಹಿತ ಮಳೆಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ.

ವಿಜಯನಗರ ಜಿಲ್ಲೆಯ ಹೊಸಪೇಟೆ, ಕೂಡ್ಲಿಗಿ ಮತ್ತು ಹಗರಿ-ಬೊಮ್ಮನಹಳ್ಳಿ ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಗುಡುಗು ಸಹಿತ ಮಳೆ ಸುರಿಯಿತು. ಕೂಡ್ಲಿಗಿ ತಾಲ್ಲೂಕಿನ ಯಂಬ್ಳಿ ಬಳಿ ಸಿಡಿಲು ಬಡಿದ ಪರಿಣಾಮ ಖಾಸಗಿ ಕಂಪನಿಯ ಗಾಳಿಯಂತ್ರವೊಂದು ಹೊತ್ತಿ ಉರಿಯಿತು.

ಬಳ್ಳಾರಿ ವರದಿ: ಬಳ್ಳಾರಿ ನಗರ ಸೇರಿ ಸಂಡೂರು, ಕಂಪ್ಲಿಯಲ್ಲಿಯೂ ಸಾಧಾರಣ ಮಳೆಯಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಕೆಲ ದಿನಗಳ ಹಿಂದೆ 40 ಡಿಗ್ರಿ ಉಷ್ಣಾಂಶ ದಾಖಲಾಗಿತ್ತು. ಭಾನುವಾರ 38.6 ಡಿಗ್ರಿ ದಾಖಲಾಗಿತ್ತು. ಸದ್ಯ ಮಳೆ ಮತ್ತು ಮೋಡ ಕವಿದ ವಾತಾವರಣದ ಕಾರಣ ತಾಪಮಾನ ಇಳಿಕೆಯಾಗಿದೆ.

ವಂಚನೆ: ಮುಕ್ತ ವಿ.ವಿ ಮಾಜಿ ಉಪ ಕುಲಸಚಿವರಿಗೆ ಶಿಕ್ಷೆ

ಮೈಸೂರು: ಕೆಲಸ ಕೊಡಿಸುವುದಾಗಿ ಹಣ ಪಡೆದು ವಂಚಿಸಿದ ಪ್ರಕರಣದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಮಾಜಿ ಉಪ ಕುಲಸಚಿವ ಎಂ.ಕೃಷ್ಣಮೂರ್ತಿ ಹಾಗೂ ಸಿಬ್ಬಂದಿ ಮಂಜುನಾಥ್ ಅವರಿಗೆ ಮೈಸೂರಿನ ಒಂದನೇ ಹೆಚ್ಚುವರಿ ಸಿಜೆಎಂ ನ್ಯಾಯಾಲಯ ಎರಡೂವರೆ ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಕೃಷ್ಣಮೂರ್ತಿ ಅವರು ಉಪ ಕುಲಸಚಿವರಾಗಿದ್ದಾಗ ಮಂಜುನಾಥ್ ಅವರೊಂದಿಗೆ ಸೇರಿಕೊಂಡು ವಿವಿಯಲ್ಲಿ ಎಫ್‌ಡಿಎ ಮತ್ತು ಎಸ್‌ಡಿಎ ಕೆಲಸ ಕೊಡಿಸುವುದಾಗಿ ₹ 8 ಲಕ್ಷ ಪಡೆದಿದ್ದರು. ದೂರು ಆಧರಿಸಿ ಪ್ರಕರಣ ದಾಖಲಿಸಿದ್ದ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಧೀಶರಾದ ಎ.ಜಿ. ಶಿಲ್ಪ ಅವರು ಇಬ್ಬರಿಗೂ ಶಿಕ್ಷೆ ಮತ್ತು ತಲಾ ₹ 40 ಸಾವಿರ ದಂಡ ವಿಧಿಸಿದ್ದಾರೆ. ಸರ್ಕಾರದ ಪರವಾಗಿ ಕೆ.ಪ್ರಕಾಶ ವಾದ ಮಂಡಿಸಿದ್ದರು.

ದ್ವಿತೀಯ ಪಿಯು: ವಿದ್ಯಾರ್ಥಿಗಳಿಗೆ ಹಳೆ ಪಠ್ಯಕ್ರಮದ ಪ್ರಶ್ನೆಪತ್ರಿಕೆ

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ ಜಿಲ್ಲೆ): ಇಲ್ಲಿನ ಬಿಕ್ಕೋಡು ರಸ್ತೆಯ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಸೋಮವಾರ, ದ್ವಿತೀಯ ಪಿಯುಸಿ ಕಂಪ್ಯೂಟರ್ ಸೈನ್ಸ್‌ನ ಹಳೆಯ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ನೀಡಬೇಕಿದ್ದ ಪ್ರಶ್ನೆಪತ್ರಿಕೆಯನ್ನು ನೂತನ ಪಠ್ಯಕ್ರಮ ವಿದ್ಯಾರ್ಥಿಗಳಿಗೆ ನೀಡಲಾಗಿದೆ. 'ನಮಗೆ ಅನ್ಯಾಯವಾಗಿದೆ' ಎಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು.

'ನಮಗೆ ಕೊಟ್ಟಿರುವ ಪ್ರಶ್ನೆ ಪತ್ರಿಕೆ ಹಳೆಯ ಪಠ್ಯಕ್ರಮದ್ದು. ಈ ಬಗ್ಗೆ ಪ್ರಶ್ನಿಸಿದಾಗ ಅರ್ಧ ಗಂಟೆ ಹೆಚ್ಚುವರಿ ಸಮಯ ನೀಡಿ ಪರೀಕ್ಷೆ ಬರೆಸಲಾಯಿತು. 3 ಗಂಟೆಯಲ್ಲಿ ಬರೆಯುವ ಉತ್ತರವನ್ನು ಅರ್ಧ ಗಂಟೆಯಲ್ಲಿ ಬರೆಯುವುದು ಹೇಗೆ ಎಂದು ಪ್ರಶ್ನಿಸಿದರೆ, ಪ್ರಾಂಶುಪಾಲರು ಉಡಾಫೆಯ ಉತ್ತರ ನೀಡಿದ್ದಾರೆ' ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

'ಪ್ರಶ್ನೆಪತ್ರಿಕೆ ಬದಲಾಗಿರುವ ಬಗ್ಗೆ ವಿದ್ಯಾರ್ಥಿಗಳು ತಕ್ಷಣ ತಿಳಿಸಲಿಲ್ಲ. ತಿಳಿಸಿದ ತಕ್ಷಣ ಹೊಸ ಪ್ರಶ್ನೆಪತ್ರಿಕೆ ಕೊಟ್ಟು ಬರೆಯಲು ಹೆಚ್ಚಿನ ಸಮಯ ನೀಡಿದ್ದೇವೆ. ಪ್ರಶ್ನೆಪತ್ರಿಕೆ ಕೊಟ್ಟವರು ಇದನ್ನು ಗಮನಿಸಬೇಕಿತ್ತು. ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಪರೀಕ್ಷೆ ಬರೆಸಲಾಗಿದೆ' ಎಂದು ಪ್ರಾಂಶುಪಾಲರಾದ ವೀಣಾ ತಿಳಿಸಿದರು.

'ಈ ಬಗ್ಗೆ ಮಾಹಿತಿ ಇಲ್ಲ. ಅಧಿಕಾರಿಗಳೊಂದಿಗೆ ಚರ್ಚಿಸಿ, ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗುವುದು' ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಗಣಪತಿ ತಿಳಿಸಿದರು.

ವಾಸ್ತವಿಕ ಚಿತ್ರಣದ ಕಥೆಗಾರ

● ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಕನ್ನಡ ಸಾಹಿತ್ಯದ ಸಮಕಾಲೀನ ಪ್ರವಾಹದಲ್ಲಿ ಗ್ರಾಮೀಣ ಜೀವನದ ವಾಸ್ತವಿಕ ಚಿತ್ರಣವನ್ನು ಕಥೆ, ಕಾದಂಬರಿಗಳ ಮೂಲಕ ಜನಮಾನಸಕ್ಕೆ ತಲುಪಿಸಿದ ಪ್ರಮುಖ ಲೇಖಕರಲ್ಲಿ ಅಮರೇಶ ನುಗಡೋಣಿ ಕೂಡ ಒಬ್ಬರು.

ಸಮಾಜದಲ್ಲಿರುವ ಅಂಚಿನ ಜನರ ವಾಸ್ತವಿಕ ಬದುಕು ಅತ್ಯಂತ ಸರಳ ಭಾಷೆಯಲ್ಲಿ ಕಟ್ಟಿಕೊಡುವ ಚಾಕಚಾಕ್ಯತೆ ಇವರದು. ಈ ಕಾರಣಕ್ಕಾಗಿಯೇ ಇವರ ಸಾಹಿತ್ಯ ಸಾಮಾನ್ಯ ಓದುಗನನ್ನು ಸೂಜಿಗಲ್ಲಿನಂತೆ ಸೆಳೆಯುವ ಗುಣ ಹೊಂದಿದೆ. 'ಮಣ್ಣು ಸೇರಿತು ಬೀಜ', 'ತಮಂಧದ ಕೇಡು', 'ಸವಾರಿ', 'ಒಡಲ ಹಂಗು', 'ಚುಕ್ಕಿ ಮದುವೆ ಪ್ರಸಂಗ', 'ದಡ ಸೇರಿಸು ತಂದೆ' ಇವರ ಪ್ರಮುಖ ಕಥಾ ಸಂಕಲನಗಳು. ಇವುಗಳಲ್ಲಿ ಸಾಮಾಜಿಕ ಸಂಘರ್ಷ ಮತ್ತು ಮಾನವೀಯ ಸಂಬಂಧಗಳ ವಿವಿಧ ಆಯಾಮಗಳನ್ನು ಕಾಣಬಹುದು.

'ದಂಡುಗ', 'ಗೌರಿಯರು' ಕಾದಂಬರಿಗಳು ಸಮಾಜದ ಕೈಗನ್ನಡಿಯಂತಿವೆ. ಇವುಗಳು ಓದುಗರನ್ನು ಆಳ ಚಿಂತನೆಗೆ ಒಳಪಡಿಸುವ ಶಕ್ತಿ ಹೊಂದಿವೆ. ವಿಮರ್ಶೆ, ಸಂಶೋಧನಾ ಕ್ಷೇತ್ರಕ್ಕೂ ಮಹತ್ವದ ಕೊಡುಗೆ ನೀಡಿದ್ದಾರೆ. ಇವರ ಕೆಲವು ಕಥೆಗಳು ರಂಗ ಪ್ರಯೋಗ ಕಂಡಿವೆ. ಸಿನಿಮಾಗಳಾಗಿ ಪ್ರದರ್ಶನ ಕಂಡಿವೆ. ಇವರ ಕಥೆ ಆಧರಿಸಿದ 'ನೀರು ತಂದವರು' ಚಲನಚಿತ್ರ ರಾಜ್ಯಮಟ್ಟದ ಪ್ರಶಸ್ತಿಗೆ ಪಾತ್ರವಾಗಿದೆ. 'ಕನಸೆಂಬೊ ಕುದುರೆಯನೇರಿ', 'ದೈವಕ್ಕೆ ಮೊದಲು ಶರಣೆಂಬೆವು' ಇವರ ಕಥೆ ಆಧರಿಸಿದ ಚಿತ್ರಗಳು.

ಮೃದು ಮತ್ತು ಮಿತಭಾಷಿಯಾಗಿರುವ ಅಮರೇಶ ನುಗಡೋಣಿ ಅವರು ಕಲ್ಯಾಣ ಕರ್ನಾಟಕದ ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ನುಗಡೋಣಿ ಗ್ರಾಮದವರು. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಲೇ ಅನೇಕ ಕಥೆ, ಕಾದಂಬರಿಗಳನ್ನು ಬರೆದಿದ್ದಾರೆ. ಅನೇಕ ವಿದ್ಯಾರ್ಥಿಗಳ ಸಂಶೋಧನಾ ಪ್ರಬಂಧಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ಕಿರಿಯ ಬರಹಗಾರರಿಗೆ ಬೆನ್ನು ತಟ್ಟಿ, ಹುರಿದುಂಬಿಸುವ ಗುಣ ಹೊಂದಿರುವ ಇವರಿಗೆ ಅನೇಕ ಪ್ರಶಸ್ತಿಗಳು ಅರಸಿಕೊಂಡು ಬಂದಿವೆ. ಈಗ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಗೌರವ ಮತ್ತೊಂದು ಗರಿ.

ಮಾಸ್ತಿ, ಯಶವಂತ ಚಿತ್ತಾಲ, ಲಂಕೇಶ್, ವೈದೇಹಿ ನಂತರ ಕಥೆ ವಿಭಾಗದಲ್ಲಿ ನನಗೆ ಪ್ರಶಸ್ತಿ ಬಂದಿರುವುದಕ್ಕೆ ಖುಷಿಯಾಗಿದೆ. ಕಥಾ ಸಾಹಿತ್ಯದಲ್ಲಿ ಸಾಕಷ್ಟು ಶ್ರಮಿಸಿದವರನ್ನು ಗುರುತಿಸಿರುವುದರ ಸಂಕೇತವಿದು. ಇದು ಇಡೀ ಕಥಾ ಸಾಹಿತ್ಯಕ್ಕೆ ಸಂದ ಗೌರವ.

ಅಮರೇಶ ನುಗಡೋಣಿ, ಕಥೆಗಾರ

'ಕೊಂಕಣಿ ವಿಮರ್ಶಾ ಕೃತಿಗೆ ಸಂದ ಮೊದಲ ಪ್ರಶಸ್ತಿ'

ಮಂಗಳೂರು: ಹೆನ್ರಿ ಮೆಂಡೋನ್ಸಾ ಅವರು ಎಚ್.ಎಂ. ಪೆರ್ನಾಲ್ ಎಂದೇ ಪರಿಚಿತರು. ಕೊಂಕಣಿ ಸಾಹಿತ್ಯ ಕ್ಷೇತ್ರದಲ್ಲಿ ಇವರದ್ದು ಅನುಪಮ ಸೇವೆ.

ಉಡುಪಿ ಜಿಲ್ಲೆಯ ಪೆರ್ನಾಲ್‌ನಲ್ಲಿ ಜನಿಸಿರುವ ಇವರು, ಶಿರ್ವದಲ್ಲಿ ಪದವಿ ಹಾಗೂ ಮುಂಬಯಿಯಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆದಿದ್ದಾರೆ. ಇವರು 'ಕಿಟಾಳ್' ಎಂಬ ಕೊಂಕಣಿ ಸಾಹಿತ್ಯಿಕ ವೆಬ್ ಪತ್ರಿಕೆಯನ್ನು ನಡೆಸುತ್ತಿದ್ದು, ತಮ್ಮದೇ ಕಿಟಾಳ್ ಪ್ರಕಾಶನದ ಮೂಲಕ 15ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.

ಈ ವರೆಗೆ ಪೆರ್ನಾಲ್ ಅವರ 4 ಕವನ ಸಂಕಲನ, 850ಕ್ಕೂ ಹೆಚ್ಚು ಕವಿತೆಗಳು, 100 ಹೆಚ್ಚು ಕಥೆಗಳು ಮತ್ತು 2,000 ಕ್ಕೂ ಹೆಚ್ಚು ಲೇಖನಗಳು ಪ್ರಕಟಗೊಂಡಿವೆ.

'ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಈ ವರೆಗೆ ಕೊಂಕಣಿಗೆ 48 ಪ್ರಶಸ್ತಿಗಳು ಸಿಕ್ಕಿವೆ. ಆದರೆ, ಕೊಂಕಣಿಯ ವಿಮರ್ಶಾ ಕೃತಿಗೆ ಅಕಾಡೆಮಿಯ ಪ್ರಶಸ್ತಿ ಲಭಿಸಿದ್ದು ಇದೇ ಮೊದಲು. ಕರ್ನಾಟಕದ ನಾಲ್ವರು ಕೊಂಕಣಿ ಸಾಹಿತಿಗಳು ಮಾತ್ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅವರಲ್ಲಿ ನಾನೂ ಒಬ್ಬ ಎಂಬುದು ಹೆಮ್ಮೆಯ ವಿಚಾರ' ಎಂದು ಅವರು 'ಪ್ರಜಾವಾಣಿಗೆ' ಪ್ರತಿಕ್ರಿಯಿಸಿದರು.



ದಕ್ಷಿಣ ಕನ್ನಡ ಜಿಲ್ಲೆಯ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವ ಪ್ರಯುಕ್ತ ಸೋಮವಾರ ಕುದಿ ಮುಹೂರ್ತದ ಅಂಗವಾಗಿ ಸಂಪ್ರದಾಯದಂತೆ ಬಂದಿದ್ದ ನಂದ್ಯ ಭಗವತಿ ಭದ್ರಕಾಳಿ ಕ್ಷೇತ್ರದ ಬಿಂಬ ಮತ್ತಿತರ ಮೂರ್ತಿಗಳನ್ನು ದೋಣಿಯಲ್ಲಿ ಫಲ್ಗುಣಿ ನದಿ ಮೂಲಕ ತೆಗೆದುಕೊಂಡು ಹೋಗಲಾಯಿತು ಚಿತ್ರ: ಫಕ್ರುದ್ದೀನ್ ಎಚ್.

ಶಿವರಾತ್ರೀಶ್ವರ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಪ್ರಜಾವಾಣಿ ವಾರ್ತೆ


ಮೈಸೂರು: ಇಲ್ಲಿನ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯಿಂದ ನೀಡಲಾಗುವ 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ'ಗೆ ವೀರಶೈವ ಲಿಂಗಾಯತ ಧರ್ಮ, ಸಾಹಿತ್ಯ, ಇತಿಹಾಸ, ಕಲೆ ಹಾಗೂ ಸಂಸ್ಕೃತಿಗೆ ಸಂಬಂಧಿಸಿದ ಕೃತಿ ಆಹ್ವಾನಿಸಲಾಗಿದೆ. ಪ್ರಶಸ್ತಿಯು ಫಲಕ, ₹25 ಸಾವಿರ ನಗದು ಒಳಗೊಂಡಿದೆ.

ಲೇಖಕರು, ಪ್ರಕಾಶಕರು ಮಾ. 31ರ ಒಳಗೆ 'ನಿರ್ದೇಶಕರು, ಪ್ರಕಟಣೆ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಜಗದ್ಗುರು ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570004' ಈ ವಿಳಾಸಕ್ಕೆ ಕೃತಿಗಳನ್ನು ಕಳುಹಿಸಬಹುದು.

ಲಂಚ: ಪಿಡಿಒ ಸೆರೆ

ಹುಣಸೂರು (ಮೈಸೂರು ಜಿಲ್ಲೆ): ನೀರುಗಂಟಿ ಕೆಲಸ ಕಾಯಂಗೆ ₹ 25 ಸಾವಿರ ಲಂಚ ಪಡೆಯುವಾಗ ತಾಲ್ಲೂಕಿನ ಮುಳ್ಳೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಂಜುಳಾ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದರು. ಲೋಕಾಯುಕ್ತ ಇನ್‌ಸ್ಪೆಕ್ಟರ್ ಶಶಿಕುಮಾರ್ ದಾಳಿಯ ನೇತೃತ್ವ ವಹಿಸಿದ್ದರು.

ಪುತ್ತಿಗೆ ರಘುರಾಮ ಹೊಳ್ಳರಿಗೆ ಪ್ರಶಸ್ತಿ


ಪುತ್ತಿಗೆ ರಘುರಾಮ ಹೊಳ್ಳ

ಉಡುಪಿ: ವಿದ್ಯಾಮಾನ್ಯ ತೀರ್ಥ ಶ್ರೀಪಾದರ ಹೆಸರಿನಲ್ಲಿ ಪಲಿಮಾರು ಮಠಾಧೀಶ ವಿದ್ಯಾಧೀಶ ತೀರ್ಥ ಶ್ರೀಪಾದರು ಕೊಡ ಮಾಡುವ 'ಯಕ್ಷವಿದ್ಯಾಮಾನ್ಯ' ಪ್ರಶಸ್ತಿಗೆ ಭಾಗವತರಾದ ಪುತ್ತಿಗೆ ರಘುರಾಮ ಹೊಳ್ಳ ಅವರನ್ನು ಆಯ್ಕೆಮಾಡಲಾಗಿದೆ. ಪ್ರಶಸ್ತಿಯು ₹ 50 ಸಾವಿರ ನಗದು ಒಳಗೊಂಡಿದೆ.

ರಘುರಾಮ ಹೊಳ್ಳ ಅವರು ಧರ್ಮಸ್ಥಳ ಮೇಳದಲ್ಲಿ 34 ವರ್ಷ, ಕದ್ರಿ ಮೇಳದಲ್ಲಿ ಆರು ವರ್ಷ ಭಾಗವತರಾಗಿ ಕಾರ್ಯನಿರ್ವಹಿಸಿದ್ದಾರೆ. ಏಪ್ರಿಲ್ 2 ರಂದು ಬೆಳಿಗ್ಗೆ 10.30ಕ್ಕೆ ಪಲಿಮಾರಿನಲ್ಲಿ ನಡೆಯಲಿರುವ ಶ್ರೀಹನುಮ ಜಯಂತಿ ಮಹೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪಲಿಮಾರು ಮಠದ ದಿವಾನರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ರಾಜಕಾರಣಿಗಳ ಫ್ಲೆಕ್ಸ್, ಕಟೌಟ್ ನಿಷೇಧಿಸಿ’

ಬಿಜೆಪಿಯ ಹಲವು ಶಾಸಕರಿಂದ ಒತ್ತಾಯ
ಯಾರಿಗೂ ತೊಂದರೆ ಆಗದಂತೆ ನಿಯಂತ್ರಿಸಬೇಕು: ಖಾದರ್

ಪ್ರಜಾವಾಣಿ ವಾರ್ತೆ


ಸುರೇಶ್ ಕುಮಾರ್

ಬೆಂಗಳೂರು: ‘ರಾಜಕಾರಣಿಗಳು ಸೇರಿ ವಿವಿಧ ಮುಖಂಡರ ಜನ್ಮದಿನ ಮತ್ತು ಇತರ ಕಾರಣಗಳಿಗೆ ಶುಭಾಶಯ ಕೋರುವ ಫ್ಲೆಕ್ಸ್, ಕಟೌಟ್‌ಗಳ ಹಾವಳಿ ಹೆಚ್ಚಾಗಿದ್ದು, ಇವುಗಳಿಗೆ ಕಡಿವಾಣ ಹಾಕಲು ಯಾವ ಕ್ರಮ ಕೈಗೊಳ್ಳುತ್ತೀರಿ? ಇವುಗಳನ್ನು ನಿಷೇಧಿಸುವುದೇ ಸೂಕ್ತ’ ಎಂದು ಬಿಜೆಪಿಯ ಹಲವು ಶಾಸಕರು ವಿಧಾನಸಭೆಯಲ್ಲಿ ಸೋಮವಾರ ಒತ್ತಾಯಿಸಿದರು.

‘ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು ತಿದ್ದುಪಡಿ ಮಸೂದೆ’ಯ ಕುರಿತ ಚರ್ಚೆಯಲ್ಲಿ ಭಾಗವಹಿಸಿದ್ದ ಬಿಜೆಪಿ ಸದಸ್ಯರು, ನಗರದ ಅಂದ ಕೆಡಿಸುವ, ವಾಹನಗಳ ಚಾಲನೆಗೆ ಎದುರಾಗುವ ಸಮಸ್ಯೆಗಳ ಬಗ್ಗೆ ಸದನದ ಗಮನ ಸೆಳೆದರು.

ಬಿಜೆಪಿಯ ಎಸ್.ಸುರೇಶ್ ಕುಮಾರ್ ಅವರು ವಿಷಯ ಪ್ರಸ್ತಾಪಿಸಿ, ರಾಜಕೀಯ ನಾಯಕರ ಫ್ಲೆಕ್ಸ್, ಕಟೌಟ್‌ಗಳ ಹಾವಳಿ ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ಮತ್ತು ಸರ್ಕಾರದ ನಿಲುವೇನು ಎಂದು ಪ್ರಶ್ನಿಸಿದರು.

‘ದೊಡ್ಡ ನಗರಗಳು ಮಾತ್ರವಲ್ಲ ಹಳ್ಳಿಗಳು ಮತ್ತು ಗ್ರಾಮಾಂತರ ಪ್ರದೇಶದ ರಸ್ತೆಗಳಲ್ಲೂ ಮನ ಬಂದಂತೆ ಫ್ಲೆಕ್ಸ್ ಮತ್ತು ಕಟೌಟ್‌ಗಳನ್ನು ಹಾಕಿರುತ್ತಾರೆ. ಇದರ ತಡೆಗೆ ನಿಯಮ ರೂಪಿಸಬೇಕು. ಅದನ್ನು ಯಾರೇ ಉಲ್ಲಂಘಿಸಿದರೂ ಕ್ರಮ ತೆಗೆದುಕೊಳ್ಳಬೇಕು. ಅನಧಿಕೃತವಾಗಿ ನನ್ನದೇ ಹಾಕಿದ್ದರೂ ಸರಿ ಕ್ರಮ ಕೈಗೊಳ್ಳಿ’ ಎಂದು ಬಿಜೆಪಿಯ ಎಸ್.ಆರ್.ವಿಶ್ವನಾಥ್ ಹೇಳಿದರು.

ಬಿಜೆಪಿಯ ಜ್ಯೋತಿ ಗಣೇಶ್ ಮಾತನಾಡಿ, ರಾಜಕಾರಣಿಗಳಿಗೆ ಸಂಬಂಧಿಸಿದಂತೆ ಫ್ಲೆಕ್ಸ್, ಬ್ಯಾನರ್ ಇತ್ಯಾದಿಗಳನ್ನು ಕಡ್ಡಾಯವಾಗಿ ನಿಷೇಧಿಸಿ. ಆಡಳಿತ ಪಕ್ಷದವರದ್ದು ಹಾಕಿದ್ದರೆ ಒಂದು ವರ್ಷವಾದರೂ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ಹಾಗೇ ಬಿಟ್ಟು ಬಿಡುತ್ತಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಸಭಾಧ್ಯಕ್ಷ ಯು.ಟಿ.ಖಾದರ್ ಮಾತನಾಡಿ, ‘ಇದೊಂದು ಸಾಮಾಜಿಕ ಪಿಡುಗಾಗಿದೆ ನಿಜ. ಆದರೆ, ಫ್ಲೆಕ್ಸ್, ಕಟೌಟ್, ಬ್ಯಾನರ್ ಇತ್ಯಾದಿಗಳನ್ನು ನಿಷೇಧ ಮಾಡುವುದರಿಂದ ದುಡಿಯುವ ಒಂದು ವರ್ಗಕ್ಕೆ ಸಮಸ್ಯೆ ಆಗುತ್ತದೆ. ಯಾರಿಗೂ ತೊಂದರೆ ಆಗದಂತೆ ನಿಯಂತ್ರಣ ಮಾಡಬೇಕು’ ಎಂದು ಸಲಹೆ ನೀಡಿದರು.


ಜಾತ್ರೆಗಳ ಸಂದರ್ಭ ಹಾಕುವ ಫ್ಲೆಕ್ಸ್‌ಗಳಲ್ಲಿ ದೇವರ ಚಿತ್ರ ಚಿಕ್ಕದಾಗಿರುತ್ತದೆ. ರಾಜಕಾರಣಿಗಳ ಚಿತ್ರ ಆಳೆತ್ತರದ್ದಾಗಿರುತ್ತದೆ. ಪ್ಲಾಸ್ಟಿಕ್ ನಿಷೇಧ ಆಗಿದ್ದರೂ, ಪ್ಲಾಸ್ಟಿಕ್ ಬಳಸಿ ಫ್ಲೆಕ್ಸ್ ಮುದ್ರಿಸುತ್ತಾರೆ
ಸುರೇಶ್‌ಗೌಡ, ಬಿಜೆಪಿ


ಪ್ಲಾಸ್ಟಿಕ್‌ನಿಂದ ತಯಾರಿಸಿದ ಫ್ಲೆಕ್ಸ್, ಬಂಟಿಂಗ್, ಬ್ಯಾನರ್‌ಗಳನ್ನು ನಿಷೇಧಿಸಿ, ಎಲ್‌ಇಡಿ ಜಾಹೀರಾತು ಜಾಸ್ತಿ ಮಾಡಬೇಕು
ಕೆ.ಎಂ.ಶಿವಲಿಂಗೇಗೌಡ, ಕಾಂಗ್ರೆಸ್

ಪ್ಲಾಸ್ಟಿಕ್ ಬಳಸಿದರೆ ಕ್ರಿಮಿನಲ್ ಕೇಸ್– ಬೈರತಿ ಸುರೇಶ್



ಬೈರತಿ ಸುರೇಶ್

‘ರಾಜ್ಯದಾದ್ಯಂತ ಪ್ಲಾಸ್ಟಿಕ್ ಫ್ಲೆಕ್ಸ್, ಬಂಟಿಂಗ್ಸ್ ಮತ್ತು ಜಾಹೀರಾತು ಫಲಕಗಳನ್ನು ನಿಷೇಧಿಸಲಾಗಿದ್ದು, ಅನಧಿಕೃತ ಜಾಹೀರಾತುಗಳನ್ನು ಮುಲಾಜಿಲ್ಲದೇ ತೆರವುಗೊಳಿಸಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು’ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

‘ಇನ್ನು ಮುಂದೆ ಇಂತಹ ಫ್ಲೆಕ್ಸ್‌ಗಳನ್ನು ಮುದ್ರಿಸುವ ಹಂತದಲ್ಲೇ ದಂಡ ವಿಧಿಸಲಾಗುತ್ತದೆ. ಫ್ಲೆಕ್ಸ್, ಹೋರ್ಡಿಂಗ್ ಜಾಹೀರಾತುಗಳಿಗೆ ಶುಲ್ಕ ವಿಧಿಸಿ, ಕಟ್ಟುನಿಟ್ಟಾಗಿ ವಸೂಲಿ ಮಾಡಲಾಗುವುದು. ಇದಕ್ಕಾಗಿ ಎಐ, ಡ್ರೋನ್‌ನಂತಹ ತಂತ್ರಜ್ಞಾನದ ನೆರವು ಪಡೆಯಲಾಗುವುದು. ಈ ವಿಚಾರದಲ್ಲಿ ಮುಂದೆ ಯಾರೂ ಮೋಸ ಮಾಡಲು ಸಾಧ್ಯವಿಲ್ಲ’ ಎಂದು ಹೇಳಿದರು.

‘ಜಿಬಿಎ ಮಾದರಿಯಲ್ಲೇ ಇನ್ನು ಮುಂದೆ ಪುರಸಭೆ ಮತ್ತು ನಗರಪಾಲಿಕೆ ವ್ಯಾಪ್ತಿಯಲ್ಲಿ ಜಾಹೀರಾತು ಶುಲ್ಕವನ್ನು ಕಟ್ಟುನಿಟ್ಟಾಗಿ ಸಂಗ್ರಹಿಸಲಾಗುವುದು. ತೆರಿಗೆ ಎನ್ನುವುದರ ಬದಲಿಗೆ ಶುಲ್ಕ ವಸೂಲಿ ಎಂದು ಕಾಯ್ದೆಯಲ್ಲಿ ನಮೂದಿಸಲಾಗುವುದು’ ಎಂದು ಸುರೇಶ್ ತಿಳಿಸಿದರು.

‘3 ಪಟ್ಟು ಹಣ ನೀಡಿ ಸ್ಮಶಾನಕ್ಕೆ ಭೂಮಿ ಖರೀದಿ’


ಕೃಷ್ಣ ಬೈರೇಗೌಡ

ಬೆಂಗಳೂರು: ‘ಸ್ಮಶಾನ ಇಲ್ಲದ ಗ್ರಾಮಗಳಲ್ಲಿ ಈ ಉದ್ದೇಶಕ್ಕಾಗಿ ಮಂಜೂರು ಮಾಡಲು ಸರ್ಕಾರಿ ಜಮೀನು ಇಲ್ಲದೇ ಇದ್ದರೆ ಮಾರ್ಗಸೂಚಿ ದರಕ್ಕಿಂತ ಮೂರು ಪಟ್ಟು ಹಣ ನೀಡಿ ಖಾಸಗಿ ಜಮೀನು ಖರೀದಿಗೆ ಸಿದ್ಧ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಪ್ರಭು ಚೌವ್ಹಾಣ್ ಪ್ರಶ್ನೆಗೆ ಉತ್ತರಿಸಿದ ಅವರು, ‘70 ವರ್ಷಗಳಿಂದ ಎಲ್ಲ ಸರ್ಕಾರಗಳೂ ಇರುವ ಭೂಮಿಯನ್ನೆಲ್ಲಾ ರೈತರಿಗೆ ಹಾಗೂ ವಿವಿಧ ಜನಪರ ಯೋಜನೆಗಳಿಗೆ ಮಂಜೂರು ಮಾಡಿದೆ. ಹೀಗಾಗಿ, ಸ್ಮಶಾನಕ್ಕೂ ಭೂಮಿ ಇಲ್ಲದಂತಾಗಿದೆ’ ಎಂದರು.

‘10 ವರ್ಷಗಳಿಂದ ಎಲ್ಲ ಸರ್ಕಾರಗಳೂ ವಸತಿ ಪ್ರದೇಶಗಳಿಗೆ ಅವಶ್ಯ ಇರುವಷ್ಟು ಸ್ಮಶಾನ ಭೂಮಿ ನೀಡಲು ಪ್ರಯತ್ನಿಸಿದೆ. ಈ ವಿಚಾರದಲ್ಲಿ ಹೈಕೋರ್ಟ್ ಕೂಡಾ ಸರ್ಕಾರದ ಬೆನ್ನುಹತ್ತಿದೆ. ಸರ್ಕಾರಿ ಜಮೀನು ಇದ್ದಲ್ಲಿ ಆ ಭೂಮಿಯನ್ನೇ ಸ್ಮಶಾನಕ್ಕೆ ಕಾಯ್ದಿರಿಸಲಾಗಿದೆ. ಸರ್ಕಾರಿ ಜಮೀನು ಇಲ್ಲದಿದ್ದ ಭಾಗಗಳಲ್ಲಿ ಕಳೆದ ಮೂರು ವರ್ಷದಲ್ಲಿ ₹ 58 ಕೋಟಿ ಕೊಟ್ಟು ಭೂಮಿ ಖರೀದಿಸಲಾಗಿದೆ’ ಎಂದು ವಿವರಿಸಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ವಿವಿಧ ಯೋಜನೆಗಳಡಿ ಸರ್ಕಾರವೇ ಜನರಿಗೆ ಜಮೀನು ಕೊಟ್ಟಿದೆ. ಕೆಲವು ಕಡೆ ಶಾಲೆ, ಆಸ್ಪತ್ರೆ ನಿರ್ಮಾಣಕ್ಕೆ ಜಾಗ ಸಿಗುತ್ತಿಲ್ಲ. ಮುಂದಿನ ಜನಾಂಗದ ಭವಿಷ್ಯದ ದೃಷ್ಟಿಯಿಂದ ಇನ್ನು ಮುಂದೆ ಭೂ ಮಂಜೂರಾತಿ ಮಾಡುವ ಮೊದಲು ಶಾಲೆ, ಆಸ್ಪತ್ರೆ, ಸ್ಮಶಾನ ಇತರೆ ಉದ್ದೇಶಗಳಿಗೆ ಸರ್ಕಾರಿ ಭೂಮಿ ಮೀಸಲಿಡಬೇಕು’ ಎಂದು ಸಲಹೆ ನೀಡಿದರು.

ಅದಕ್ಕೆ ಪ್ರತಿಕ್ರಿಯಿಸಿದ ಕೃಷ್ಣ ಬೈರೇಗೌಡ, ‘ಸ್ಮಶಾನಕ್ಕೆ ಜಾಗ ಸಿಗದೇ ಸರ್ಕಾರವೇ ಜಾಗಕ್ಕಾಗಿ ಭಿಕ್ಷಾಪಾತ್ರೆ ಹಿಡಿದು ಓಡಾಡುವ ಸ್ಥಿತಿ ಬಂದಿದೆ’ ಎಂದರು.

ಸುದ್ದಿ 2 ನಿಮಿಷ

‘ವಕ್ಫ್ ಆಸ್ತಿ 17,969 ಎಕರೆ ಒತ್ತುವರಿ’

ಬೆಂಗಳೂರು: ‘ರಾಜ್ಯ ವಕ್ಫ್ ಮಂಡಳಿ ವ್ಯಾಪ್ತಿಯಲ್ಲಿ 1,12,860 ಎಕರೆ ಆಸ್ತಿ ಇದ್ದು, ಅದರಲ್ಲಿ 17,969 ಎಕರೆ ಒತ್ತುವರಿಯಾಗಿದೆ. ವಕ್ಫ್ ಆಸ್ತಿ ಒತ್ತುವರಿ ಮಾಡಿದವರಲ್ಲಿ ಮುಸ್ಲಿಂ ಸಮುದಾಯದವರೇ ಹೆಚ್ಚು’ ಎಂದು ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ವಿಧಾನ ಸಭೆಯಲ್ಲಿ ಕಾಂಗ್ರೆಸ್‌ನ ಎಂ.ವೈ. ಪಾಟೀಲ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ವಕ್ಫ್ ಆಸ್ತಿಯಲ್ಲಿ ಇನಾಂ ರದ್ದತಿ ಕಾಯ್ದೆಯಡಿ 47,263 ಎಕರೆ ಹಾಗೂ ಭೂ ಸುಧಾರಣೆ ಕಾಯ್ದೆಯಡಿ 23,627 ಎಕರೆ ಕೈಬಿಟ್ಟು ಹೋಗಿದೆ. ಸದ್ಯ 20,054 ಎಕರೆ ಮಾತ್ರ ಇದೆ’ ಎಂದು ವಿವರಿಸಿದರು.

‘ರಾಜ್ಯದ ಬಹಳಷ್ಟು ಕಡೆ ವಕ್ಫ್ ಆಸ್ತಿಗಳು ಒತ್ತುವರಿಯಾಗಿವೆ. ತೆರವುಗೊಳಿಸುವ ಉದ್ದೇಶದಿಂದ ನಮ್ಮ ಸರ್ಕಾರ ವಕ್ಫ್ ಅದಾಲತ್ ನಡೆಸಿದೆ. ಈ ಆಸ್ತಿಯು ಸರ್ಕಾರದ ಆಸ್ತಿಯಲ್ಲ. ಮುಸ್ಲಿಂ ಸಮುದಾಯವರು ತಮ್ಮವರ ಒಳಿತಿಗಾಗಿ ಕೊಟ್ಟಿದ್ದಾರೆ. ವಕ್ಫ್ ಆಸ್ತಿಯ ಖಾಸಗಿ ಒತ್ತುವರಿ ತೆರವಿಗೆ ಮಾತ್ರ ಕ್ರಮ ಕೈಗೊಳ್ಳಲಾಗುತ್ತಿದೆ. ದೇವಸ್ಥಾನ, ಶಾಲೆ ಒತ್ತುವರಿ ತೆರವಿಗೆ ಕೈ ಹಾಕುವುದಿಲ್ಲ’ ಎಂದರು.

ಮಧ್ಯಪ್ರವೇಶಿಸಿ ಮಾತನಾಡಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ಚಿಕ್ಕಬಳ್ಳಾಪುರದಲ್ಲಿ ಸರ್. ಎಂ. ವಿಶ್ವೇಶ್ವರಯ್ಯ ಓದಿದ ಶಾಲೆಯನ್ನೇ ವಕ್ಫ್ ಮಂಡಳಿ ಆಸ್ತಿ ಎಂದು ಮಾಡಿದ್ದಾರೆ. ಈ ಹಿಂದೆ ದೇವಸ್ಥಾನಗಳಿಗೆ ಮಹಾರಾಜರು ಸಾಕಷ್ಟು ಜಮೀನು ಕೊಟ್ಟಿದ್ದರು. ಭೂಸುಧಾರಣೆ ಕಾಯ್ದೆ ಬಂದಾಗ ಉಳುಮೆ ಮಾಡುವ ರೈತರಿಗೆ ಅದನ್ನು ಕೊಡಲಾಗಿದೆ. ವಕ್ಫ್ ಆಸ್ತಿಗಳಲ್ಲಿ ಕೆಲವನ್ನು ಈಗಲೂ ರೈತರು ಉಳುಮೆ ಮಾಡುತ್ತಿದ್ದಾರೆ. ಉಳುಮೆ ಮಾಡುತ್ತಿರುವ ರೈತರಿಗೇ ಜಮೀನು ಬಿಟ್ಟುಕೊಡಬೇಕು. ಹಿಂದೂ, ಮುಸ್ಲಿಂ ಯಾರೇ ಇದ್ದರೂ ಅವರಿಗೆ ಕೊಡಬೇಕು’ ಎಂದರು.

‘ವಿಂಡ್ಸರ್ ಮ್ಯಾನರ್ ಜಾಗವು ವಕ್ಫ್ ಮಂಡಳಿಗೆ ಸೇರಿದೆ. ಅದನ್ನು ಏಕೆ ತೆರವುಗೊಳಿಸಿಲ್ಲ’ ಎಂದೂ ಅಶೋಕ ಪ್ರಶ್ನಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಜಮೀರ್, ‘ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ’ ಎಂದರು.



ಅಹಿಂದ ವರ್ಗಕ್ಕೆ ಸಾಮಾಜಿಕ ಅನ್ಯಾಯ: ಸಿ.ಟಿ. ರವಿ

ಬೆಂಗಳೂರು: ‘ಹಿಂದುಳಿದ ಸಮುದಾಯಗಳ ವಿವಿಧ ಅಭಿವೃದ್ಧಿ ನಿಗಮಗಳಿಗೆ ಶೇ 75ರಷ್ಟು ಅನುದಾನ ಕಡಿತಗೊಳಿಸಿ, ನನ್ನದು ಸಾಮಾಜಿಕ ನ್ಯಾಯ ಎಂದರೆ ಯಾರು ಮೆಚ್ಚುತ್ತಾರೆ. ಇದು ಆತ್ಮವಂಚನೆ ಅಲ್ಲವೇ’ ಬಿಜೆಪಿಯ ಸಿ.ಟಿ.ರವಿ ದೂರಿದರು.

ವಿಧಾನ ಪರಿಷತ್‌ನಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗದ ಮತಬ್ಯಾಂಕ್ ಕ್ರೋಡೀಕರಿಸಿ, ರಾಜಕೀಯ ಲಾಭ ಪಡೆದ ಮುಖ್ಯಮಂತ್ರಿಯವರು ಹಿಂದುಳಿದ ವರ್ಗದವರಿಗೆ ಅನ್ಯಾಯ ಮಾಡಿದ್ದಾರೆ. ಇದು ಸಾಮಾಜಿಕ ಅನ್ಯಾಯ’ ಎಂದು ದೂರಿದರು.

‘ರಾಜಕೀಯವಾಗಿ ಮರುಹುಟ್ಟನ್ನು ಪಡೆಯಬೇಕಾದಾಗ, ತನ್ನ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕಾದಾಗ ಅಹಿಂದ ಎಂಬ ಪದ ಬಳಕೆ ಮಾಡಿದವರು ಸಿದ್ದರಾಮಯ್ಯ. ಅಲ್ಪಸಂಖ್ಯಾತ, ಹಿಂದುಳಿದ, ದಲಿತ– ಇವರನ್ನು ಸಂಘಟಿಸಿ, ರಾಜಕೀಯ ಧ್ರುವೀಕರಣ ಮಾಡುತ್ತೇವೆ ಎಂದರು. ಅದರಲ್ಲಿ ಸಫಲವಾಗಿ, ಅವರಿಗೆ ಅಧಿಕಾರವೂ ಸಿಕ್ಕಿತು. ಅವರ ರಾಜಕೀಯ ಏಳಿಗೆಗೆ ಅಹಿಂದ ವರ್ಗ ಮೆಟ್ಟಿಲಾಯಿತು. ಅಹಿಂದ ವರ್ಗಕ್ಕೂ ಬಜೆಟ್‌ನಲ್ಲಿ ಸಹಾಯ ಸಿಕ್ಕಿಲ್ಲ’ ಎಂದರು.

‘ಮುಖ್ಯಮಂತ್ರಿಯವರು 17 ಬಜೆಟ್ ಮಂಡಿಸಿ ದಾಖಲೆ ಮಾಡಿದ್ದಾರೆ. ಆದರೆ, ಜನರ ಬದುಕು ಹಸನು ಮಾಡವಂತಹ ಯೋಜನೆ ತಂದಿದ್ದಾರಾ ಎಂದು ಕೇಳಿದರೆ ಅದೊಂದು ಶೂನ್ಯ’ ಎಂದರು.

ವಿಧಾನಪರಿಷತ್

ಬಿ.ಇಡಿ ಶುಲ್ಕ ಪರಿಷ್ಕರಣೆ

ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಬಿ.ಇಡಿ ಕಾಲೇಜುಗಳ ಪ್ರವೇಶ ಶುಲ್ಕ ಪರಿಷ್ಕರಣೆಗಾಗಿ ಏಳು ಸದಸ್ಯರನ್ನೊಳಗೊಂಡ ಸಮಿತಿ ರಚಿಸಲಾಗಿದ್ದು, ವರದಿ ಆಧರಿಸಿ ಶುಲ್ಕ ಪರಿಷ್ಕರಣೆಯ ನಿರ್ಧಾರ ಕೈಗೊಳ್ಳಲಾಗುವುದು.

ಕಾಂಗ್ರೆಸ್‌ನ ಮಧು ಮಾದೇಗೌಡ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಕೆಲ ವರ್ಷಗಳಿಂದ ಬಿ.ಇಡಿ ಕಾಲೇಜುಗಳ ಪ್ರವೇಶ ಶುಲ್ಕವನ್ನು ಪರಿಷ್ಕರಣೆ ಮಾಡಿಲ್ಲ. ಈ ಕುರಿತು ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಈಗಾಗಲೇ ಸಭೆ ನಡೆಸಲಾಗಿದೆ. ಸಮಿತಿ ವರದಿ ನೀಡಿದ ಬಳಿಕ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು.

ಎಂ.ಸಿ.ಸುಧಾಕರ್, ಉನ್ನತ ಶಿಕ್ಷಣ ಸಚಿವ **(ಪ್ರಶ್ನೆ: ಮಧು ಮಾದೇಗೌಡ,** ಕಾಂಗ್ರೆಸ್)

ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆ ಭರ್ತಿ

ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 5,202 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ನೇರ ನೇಮಕಾತಿಯ ಮೂಲಕ ಹಂತಹಂತವಾಗಿ ಭರ್ತಿ ಮಾಡಲಾಗುವುದು. ಕಲ್ಯಾಣ ಕರ್ನಾಟಕ ಭಾಗದಲ್ಲಿ 5,267 ಶಿಕ್ಷಕರ ನೇಮಕಾತಿ ಪ್ರಕ್ರಿಯೆಗೆ ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದ್ದು, ದೈಹಿಕ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳನ್ನೂ ಒಳಗೊಂಡಿವೆ. ಉಳಿದ ನೇರ ನೇಮಕಾತಿಗಳಲ್ಲೂ ಆದ್ಯತೆ ನೀಡಲಾಗುವುದು

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ **(ಪ್ರಶ್ನೆ: ಚಿದಾನಂದ ಗೌಡ,** ಬಿಜೆಪಿ)

ಪ್ರಶ್ನೋತ್ತರ

ಯುಯುಸಿಎಂಎಸ್ ವ್ಯಾಪ್ತಿಗೆ ಡೀಮ್ಡ್ ವಿವಿ

ರಾಜ್ಯದ ಎಲ್ಲ ಸ್ವಾಯುತ್ತ ವಿಶ್ವವಿದ್ಯಾಲಯಗಳನ್ನೂ (ಡೀಮ್ಡ್) ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ವ್ಯವಸ್ಥೆಯ (ಯುಯುಸಿಎಂಎಸ್) ವ್ಯಾಪ್ತಿಗೆ ತರಲಾಗುವುದು. ಏಕೀಕೃತ ವ್ಯವಸ್ಥೆಯನ್ನು ಈಗಾಗಲೇ ಎಲ್ಲ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಅವುಗಳ ಸಂಯೋಜಿತ ಕಾಲೇಜುಗಳಿಗೆ ಅನ್ವಯಿಸಲಾಗಿದೆ. 12 ಲಕ್ಷಕ್ಕೂ ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ. ಯುಯುಸಿಎಂಎಸ್–2 ಅಭಿವೃದ್ಧಿಪಡಿಸಲು ಕ್ರಮಕೈಗೊಳ್ಳಲಾಗಿದೆ.

ಎಂ.ಸಿ.ಸುಧಾಕರ್, ಉನ್ನತ ಶಿಕ್ಷಣ ಸಚಿವ **(ಪ್ರಶ್ನೆ: ರಮೇಶ್ ಬಾಬು,** ಕಾಂಗ್ರೆಸ್)

ಆಂಬುಲೆನ್ಸ್ : ಕೇಂದ್ರಿಕೃತ ವ್ಯವಸ್ಥೆ

ಕೇಂದ್ರಿಕೃತ ನಿರ್ವಹಣಾ ವ್ಯವಸ್ಥೆ ಮೂಲಕ ರಾಜ್ಯ ಸರ್ಕಾರವೇ 1,715 ಆಂಬುಲೆನ್ಸ್‌ಗಳ ಮೇಲುಸ್ತುವಾರಿ ನೋಡಿಕೊಳ್ಳಲಿದೆ. 108 ಆರೋಗ್ಯ ಸೇವೆಯ ಅಡಿ ಬರುವ 715 ಆಂಬುಲೆನ್ಸ್‌ಗಳನ್ನು ಹೊಸ ವ್ಯವಸ್ಥೆಗೆ ವಿಲೀನಗೊಳಿಸಲಾಗುವುದು. ರಾಜ್ಯ ವಲಯದಲ್ಲಿ 1,000 ಆಂಬುಲೆನ್ಸ್‌ಗಳು ಇವೆ.

ದಿನೇಶ್ ಗುಂಡೂರಾವ್ ಪರವಾಗಿ
ಶರಣ ಪ್ರಕಾಶ ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ
(ಪ್ರಶ್ನೆ: ಟಿ.ಎನ್.ಜವರಾಯಿ ಗೌಡ, ಜೆಡಿಎಸ್)

ಪರಿಷತ್ ಕಲಾಪದಲ್ಲಿ ಜೆಡಿಎಸ್‌ನ ಎಸ್.ಎಲ್ ಭೋಜೇಗೌಡ ಪ್ರಶ್ನೆ

‘ಅಧಿಕಾರಿಗಳ ನಿಯಂತ್ರಿಸುವ ಶಕ್ತಿ ಇಲ್ಲವೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನ ಮಂಡಲದಲ್ಲಿ ತಾಕೀತು ಮಾಡಿದರೂ ಉತ್ತರ ಒದಗಿಸದಷ್ಟು ಅಧಿಕಾರಿಗಳು ಜಿಡ್ಡು ಹಿಡಿದಿದ್ದಾರಾ? ಕಂಟ್ರೋಲ್ ಮಾಡೋಕೆ ಸರ್ಕಾರಕ್ಕೆ ಶಕ್ತಿ ಇಲ್ಲವೇ’ ಎಂದು ಜೆಡಿಎಸ್‌ನ ಎಸ್.ಎಲ್ ಭೋಜೇಗೌಡ ಪ್ರಶ್ನಿಸಿದರು.

ಪರಿಷತ್ ಕಲಾಪದಲ್ಲಿ ಸೋಮವಾರ ಮಾತನಾಡಿದ ಅವರು, ಅಧಿಕಾರಿಗಳು ಪ್ರಶ್ನೆಗಳಿಗೆ ಉತ್ತರ ಒದಗಿಸದೇ ಇರುವುದಕ್ಕೆ ವಿಧಾನಸಭೆಯಲ್ಲಿ ಸಭಾಧ್ಯಕ್ಷರು ಹೊರನಡೆದಿರುವುದನ್ನು ಪ್ರಸ್ತಾಪಿಸಿದರು.

‘ವಿಧಾನ ಪರಿಷತ್‌ನಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಸೋಮವಾರ 140 ಪ್ರಶ್ನೆಗಳಿಗೆ, 40ಕ್ಕಷ್ಟೇ ಉತ್ತರ ಸಿಕ್ಕಿದೆ. ಇನ್ನು, ಹಳೆಯ 203 ಪ್ರಶ್ನೆಗಳಿಗೆ ಉತ್ತರ ಬಾಕಿ ಇದೆ. ಅಧಿಕಾರಿಗಳಿಂದ ಉತ್ತರ ಪಡೆಯದಷ್ಟು ಅಸಮರ್ಥರಾಗಿದ್ದೇವೆಯೇ’ ಎಂದು ಕೇಳಿದರು.

‘ಅಧಿಕಾರಿಗಳಿಗೆ ಕೈಗೊಬ್ಬ, ಕಾಲಿಗೊಬ್ಬರು ಜನ ಇರುತ್ತಾರೆ. ಎಲ್ಲವೂ ಕೈಬೆರಳಲ್ಲಿ ಲಭ್ಯ ಇದ್ದರೂ, ಉತ್ತರ ಕೊಡುವ ಸೌಜನ್ಯ ಇಲ್ಲ ಎಂದರೆ ಹೇಗೆ’ ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಭಾಪತಿ ಬಸರಾಜ ಹೊರಟ್ಟಿ, ‘ನಾನು ದಿನಾ ಹೇಳುತ್ತೇನೆ, ಸರ್ಕಾರ ಕ್ರಮ ಕೈಗೊಳ್ಳಬೇಕು. ಇಬ್ಬರು– ಮೂವರು ಸಚಿವರು ನನಗೆ ಪತ್ರ ಕಳುಹಿಸಿದ್ದಾರೆ. ಒಂದು ತಿಂಗಳು ಸಮಯಾವಕಾಶ ಕೊಡಿ ಎನ್ನುತ್ತಾರೆ. ಕಲಾಪ ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಬೇಕಲ್ಲ? ಬರೆದಿದ್ದನ್ನು ಕೊಡಲು ಏಕೆ ಸಮಯಬೇಕು ಎಂದು ಕೇಳಿ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಅಧಿಕಾರಿಗಳು ಏನು ಹೇಳುತ್ತಾರೋ ಅದನ್ನು ಕಳುಹಿಸುತ್ತಾರೆ’ ಎಂದರು.

‘ಅವರಿಗೆ ಒಂದು ತಿಂಗಳು ಕಡ್ಡಾಯ ರಜೆ ಹೋಗಲು ಹೇಳಿ’ ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದರು.

‘ಸಭೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರ ಬಂದಿರುವುದಕ್ಕೆ ಸಭಾನಾಯಕರಿಗೆ ಸಮಾಧಾನ ಇದೆಯೇ’ ಎಂದು ಬಿಜೆಪಿಯ ಸಿ.ಟಿ.ರವಿ ಪ್ರಶ್ನಿಸಿದರು.

‘ಮುಖ್ಯಮಂತ್ರಿಯವರು ಸೂಚಿಸಿದ್ದಾರೆ, ಮುಖ್ಯ ಕಾರ್ಯದರ್ಶಿಯವರೂ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ಉತ್ತರು ನೀಡಲು ಕ್ರಮ ಕೈಗೊಳ್ಳುತ್ತೇವೆ’ ಎಂದು ಸಭಾನಾಯಕ ಎನ್.ಎಸ್. ಭೋಸರಾಜು ಹೇಳಿದರು.


ವಿಧಾನ ಪರಿಷತ್ ಕಲಾಪದ ಚರ್ಚೆ ವೇಳೆ ಪರಿಷತ್ ಸದಸ್ಯೆ ಹೇಮಲತಾ ನಾಯ್ಕ್ ಮತ್ತು ಬೋಜೇಗೌಡ ಮಾತುಕತೆಯಲ್ಲಿ ತೊಡಗಿದ್ದರು ಪ್ರಜಾವಾಣಿ ಚಿತ್ರ

ಕ್ರಮ ಜರುಗಿಸಿ: ಹೊರಟ್ಟಿ

‘ಯಾರು ಉತ್ತರ ನೀಡುವುದಿಲ್ಲವೋ ಕಾರ್ಯದರ್ಶಿ ಯಾಗಲಿ, ಕೆಎಎಸ್, ಐಎಎಸ್ ಆಗಲಿ, ಯಾವ ಅಧಿಕಾರಿಯಾದರೂ ಅವರ ಮೇಲೆ ಕ್ರಮ ಕೈಗೊಳ್ಳಿ. ಪೀಠಕ್ಕಾದರೂ ಗೌರವ ಇರಬೇಕಲ್ಲವೇ’ ಎಂದು ಬಸವರಾಜ ಹೊರಟ್ಟಿ ಹೇಳಿದರು.

ಸಭಾನಾಯಕ ಬೋಸರಾಜು ಅವರನ್ನು ಉದ್ದೇಶಿಸಿ ನಿರ್ದೇಶನ ನೀಡಿದ ಹೊರಟ್ಟಿ, ‘ಇದನ್ನು ಮಾಡದೆ ಸರ್ಕಾರಕ್ಕೆ ಇನ್ನಾವ ಕೆಲಸ ಇದೆ ಹೇಳಿ’ ಎಂದು ಪ್ರಶ್ನಿಸಿದರು.

‘ನಾಳೆಯಿಂದ ಹೀಗಾಗಬಾರದು. ಸಭಾನಾಯಕರಾಗಿ ನೀವೂ ಪತ್ರ ಬರೆಯಿರಿ. ಮುಖ್ಯ ಕಾರ್ಯದರ್ಶಿಗೆ ಹೇಳಿ’ ಎಂದರು.

ಡಿ.ಸಿ ವಿರುದ್ಧ ರೇವಣ್ಣ ಹಕ್ಕುಚ್ಯುತಿ ಮಂಡನೆ

ಬೆಂಗಳೂರು: ಹೊಳೆನರಸೀಪುರ ದೇವಸ್ಥಾನದ ರಥೋತ್ಸವದ ವೇಳೆ ರಥದ ಬಟ್ಟೆ ತೆಗೆಸಿ ಹಾಕಿಸಿದ ಜಿಲ್ಲಾಧಿಕಾರಿ ಕ್ರಮದ ವಿರುದ್ಧ ಜೆಡಿಎಸ್‌ನ ಎಚ್.ಡಿ.ರೇವಣ್ಣ ಅವರು ವಿಧಾನಸಭೆಯಲ್ಲಿ ಹಕ್ಕುಚ್ಯುತಿ ಮಂಡಿಸಿದರು.

ಅದನ್ನು ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಲು ಸೂಚಿಸಿದರು.

‘ದೇವಸ್ಥಾನದಲ್ಲಿ ನೂರಾರು ವರ್ಷಗಳಿಂದ ನಡೆದುಕೊಂಡು ಬಂದ ಪದ್ಧತಿಯನ್ನು ಜಿಲ್ಲಾಧಿಕಾರಿ ಉಲ್ಲಂಘಿಸಿದ್ದಾರೆ. ಸ್ಥಳೀಯ ಶಾಸಕನಾದ ನನ್ನ ಮಾತನ್ನೂ ಅವರು ಕೇಳಲಿಲ್ಲ’ ಎಂದು ರೇವಣ್ಣ ದೂರಿದರು.

ಕಲಾಪ ವೀಕ್ಷಣೆ

ಪ್ರಜಾವಾಣಿ ಚಿತ್ರ: ರಂಜು ಪಿ


ಬೆಂಗಳೂರಿನ ವಿಧಾನಸೌಧದಲ್ಲಿ ಸೋಮವಾರ ನಡೆದ ವಿಧಾನ ಪರಿಷತ್ ಕಲಾಪವನ್ನು ಶಾಲಾ ವಿದ್ಯಾರ್ಥಿಗಳು ವೀಕ್ಷಣೆ ಮಾಡಿದರು

‘ಗೃಹ ಬಳಕೆ ವಿದ್ಯುತ್ ಶುಲ್ಕ ಏರಿಕೆ ಇಲ್ಲ’

ಪ್ರಜಾವಾಣಿ ವಾರ್ತೆ


ಬೋಸರಾಜು

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಸೇರಿ ರಾಜ್ಯದ ಎಲ್ಲ ವಿದ್ಯುತ್ ಕಂಪನಿಗಳು ಒಟ್ಟು ₹4,516 ಕೋಟಿ ನಷ್ಟದಲ್ಲಿವೆ. ಆದರೂ ಏಪ್ರಿಲ್ 1ರಿಂದ ಗೃಹ ಬಳಕೆಯ ವಿದ್ಯುತ್ ದರ ಹೆಚ್ಚಳ ಮಾಡುತ್ತಿಲ್ಲ ಎಂದು ಸಭಾನಾಯಕ ಎನ್.ಎಸ್. ಬೋಸರಾಜು ಹೇಳಿದರು.



ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಸಿ.ಎನ್.ಮಂಜೇಗೌಡ ಅವರ ಪ್ರಶ್ನೆಗೆ ಇಂಧನ ಸಚಿವ ಕೆ.ಜೆ.ಜಾರ್ಜ್ ಪರವಾಗಿ ಉತ್ತರ ನೀಡಿದ ಅವರು, ‘ಐದು ಎಸ್ಕಾಂಗಳು ನಷ್ಟದಲ್ಲಿದ್ದರೂ ನಾಗರಿಕ ಸ್ನೇಹಿಯಾಗಿ ಕೆಲಸ ಮಾಡುತ್ತಿವೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು 2025ನೇ ಮಾರ್ಚ್‌ನಲ್ಲೇ 2027–28ನೇ ಸಾಲಿನವರೆಗೆ ಬಹು ವಾರ್ಷಿಕ ದರ ಪರಿಷ್ಕರಣೆ ಆದೇಶ ಹೊರಡಿಸಿತ್ತು. ಅದೇ ವರ್ಷದ ನವೆಂಬರ್‌ನಲ್ಲಿ ಸಲ್ಲಿಸಿದ್ದ ಪ್ರಸ್ತಾವನೆಯಲ್ಲಿ ಗೃಹ ಬಳಕೆ ವಿದ್ಯುತ್ ಶುಲ್ಕ ಹೆಚ್ಚಿಸುವ ಪ್ರಸ್ತಾವ ಸಲ್ಲಿಸಿಲ್ಲ ಎಂದು ಮಾಹಿತಿ ನೀಡಿದರು.

ನಷ್ಟದಲ್ಲಿರುವ ಕಂಪನಿಗಳಲ್ಲಿ ಬೆಸ್ಕಾಂ ಸಿಂಹಪಾಲು ಹೊಂದಿದೆ. ಆಯೋಗವು 2024–25ನೇ ಸಾಲಿನಲ್ಲಿ ವಿದ್ಯುತ್ ಬಳಕೆಯ ಸರಾಸರಿ ದರವನ್ನು ಪ್ರತಿ ಯೂನಿಟ್‌ಗೆ ₹9.54 ನಿಗದಿ ಮಾಡಿತ್ತು. ಆದರೆ, ಬೆಸ್ಕಾಂ ಗ್ರಾಹಕರಿಂದ ಪಡೆದಿದ್ದು ₹8.59 ಮಾತ್ರ. ನಿಗದಿ ಮಾಡಿದ ವಿದ್ಯುತ್ ಖರೀದಿ ದರ ₹27,190 ಕೋಟಿ. ಖರೀದಿಸಿದ ಮೊತ್ತ ₹27,895 ಕೋಟಿ. ಇದರಿಂದ ಕಂಪನಿಗೆ ₹1,678 ಕೋಟಿ ನಷ್ಟವಾಗಿದೆ. ₹38 ಕೋಟಿ ಕಾರ್ಯ ನಿರ್ವಹಣಾ ವೆಚ್ಚ, ₹57.48 ಕೋಟಿ ಬಡ್ಡಿ ಮತ್ತು ಹಣಕಾಸು ವೆಚ್ಚ, ₹91.47 ಕೋಟಿ ಇತರೆ ಆದಾಯ ಖೋತಾ ಸೇರಿ ಬೆಸ್ಕಾಂ ಒಂದೇ ₹2,802.80 ಕೋಟಿ ನಷ್ಟ ಅನುಭವಿಸಿದೆ ಎಂದು ವಿವರ ನೀಡಿದರು.

ರಾಜ್ಯ ಸರ್ಕಾರ ಜಾರಿಗೆ ತಂದ ಗೃಹಜ್ಯೋತಿ ಯೋಜನೆಗೆ ರಾಜ್ಯ ಸರ್ಕಾರ ಇದುವರೆಗೂ ₹25,076 ಕೋಟಿ ಭರಿಸುವ ಮೂಲಕ ಜನರ ವಿದ್ಯುತ್ ಶುಲ್ಕ ಪಾವತಿ ಭಾರ ಕಡಿಮೆ ಮಾಡಿದೆ. ನೇಕಾರರ ವಿದ್ಯುತ್ ಸ್ಥಾವರಗಳಿಗೆ ಉಚಿತ ವಿದ್ಯುತ್ ಪೂರೈಸಲಾಗಿದೆ. ಗ್ರಾಮ ವ್ಯಾಪ್ತಿಯ ಕೈಗಾರಿಕೆಗಳಿಗೆ ಪ್ರತಿ ಯೂನಿಟ್‌ಗೆ 20 ಪೈಸೆ ರಿಯಾಯಿತಿ ನೀಡಲಾಗಿದೆ ಎಂದರು.

ಮುಡಾ: ದಿನೇಶ್ ಕುಮಾರ್‌ಗೆ ಜಾಮೀನು


ಜಿ.ಟಿ.ದಿನೇಶ್ ಕುಮಾರ್

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತನಿಖೆ ನಡೆಸುತ್ತಿರುವ ಪ್ರಕರಣದಲ್ಲಿ ಜಿ.ಟಿ.ದಿನೇಶ್ ಕುಮಾರ್ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ (ಡಿಫಾಲ್ಟ್) ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ದಿನೇಶ್ ಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಜಾಮೀನು ಮಂಜೂರು ಮಾಡಿ ಸೋಮವಾರ ಆದೇಶಿಸಿದರು.

₹1 ಲಕ್ಷ ಮೊತ್ತದ ಬಾಂಡ್ ಮತ್ತು ಇಷ್ಟೇ ಮೊತ್ತಕ್ಕೆ ಒಬ್ಬರ ಭದ್ರತೆ ಸೇರಿದಂತೆ ಸಾಂಪ್ರದಾಯಿಕ ಷರತ್ತುಗಳನ್ನು ವಿಧಿಸಲಾಗಿದೆ. ಜಿ.ಟಿ.ದಿನೇಶ್ ಕುಮಾರ್ ಮುಡಾ ಆಯುಕ್ತರಾಗಿದ್ದ ಅವಧಿಯಲ್ಲಿ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು ಅಕ್ರಮವಾಗಿ ಅನರ್ಹರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ ಆರೋಪ ಎದುರಿಸುತ್ತಿದ್ದಾರೆ.

ಸಭಾಧ್ಯಕ್ಷ ಖಾದರ್ ಸಭಾತ್ಯಾಗ

ಒಂದನೇ ಪುಟದಿಂದ...

ಸಚಿವರ ಅನುಪಸ್ಥಿತಿಗೆ ತೀವ್ರ ಬೇಸರ ವ್ಯಕ್ತಪಡಿಸಿದ ಸಭಾಧ್ಯಕ್ಷರು, ‘ಶಾಸಕರು ತಮ್ಮ ಕ್ಷೇತ್ರದ ಸಮಸ್ಯೆ ಹೇಳಿಕೊಳ್ಳುವುದಕ್ಕೆ ನಾವು ಸದನ ನಡೆಸುತ್ತೇವೆ. ಮೂರು ತಿಂಗಳಿಗೊಮ್ಮೆ ಶಾಸಕರು ಸಭೆ ಸೇರಬೇಕು ಎಂದು ಅಧಿವೇಶನ ನಡೆಸುತ್ತೇವೆ. ಪ್ರಶ್ನೆ ಕೇಳಿದರೆ ಉತ್ತರ ಇರುವುದಿಲ್ಲ. ಗಂಭೀರತೆಯಿಂದ ಇರಬೇಕು ಎಂದು ಹೇಳಿದ್ದೇನೆ. ಆದರೆ, ಯಾರೂ ಹಾಜರಾಗುತ್ತಿಲ್ಲ. ಈ ಬಗ್ಗೆ ಮೊನ್ನೆಯೇ ಸಚಿವರು, ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳಿದ್ದೇನೆ’ ಎಂದರು.

‘ಸರಿಯಾದ ಸಮಯಕ್ಕೆ ಮಂತ್ರಿಗಳು ಬರುವುದಿಲ್ಲ. ನಾನು ಹಿಂದೆಯೂ ಈ ಬಗ್ಗೆ ಸೂಚನೆ ನೀಡಿದ್ದೇನೆ. ಈಗಾಗಲೇ ನಾಲ್ಕು ಬಾರಿ ಸೂಚನೆ ನೀಡಿದ್ದೇನೆ. ಐದನೇ ಬಾರಿಯೂ ಸುಧಾರಿಸದಿದ್ದರೆ ಏನು ಮಾಡುವುದು. ಸುಧಾರಣೆ ಕಾಣಲೇ ಇಲ್ಲ. ಸಚಿವರು ಹಾಗೂ ಕಾರ್ಯದರ್ಶಿಗಳು ಈ ಬಗ್ಗೆ ಸ್ಪಷ್ಟನೆ ನೀಡುವವರೆಗೆ ಸದನ ನಡೆಸುವುದಿಲ್ಲ’ ಎಂದು ಕಟು ಪದಗಳಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಸಭಾಧ್ಯಕ್ಷರು, ತಮ್ಮ ಪೀಠದಿಂದ ಎದ್ದು ಹೊರಹೋದರು.

ಮನವೊಲಿಸಿದ ಸಿ.ಎಂ: ಸಭಾಧ್ಯಕ್ಷರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಚಿವರಾದ ಸತೀಶ ಜಾರಕಿಹೊಳಿ, ಜಿ. ಪರಮೇಶ್ವರ, ಎಚ್.ಕೆ. ಪಾಟೀಲ ಮತ್ತಿತರರು ಚರ್ಚೆ ನಡೆಸಿದರು. ಲಿಖಿತ ಉತ್ತರ ನೀಡದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಮುಖ್ಯಮಂತ್ರಿ ಚರ್ಚೆ ನಡೆಸಿದರು. ಸದನವನ್ನು ಸರಿಯಾದ ರೀತಿಯಲ್ಲಿ ನಡೆಸಲು ಸಂಪೂರ್ಣ ಸಹಕಾರ ನೀಡುವುದಾಗಿ ಇದೇ ವೇಳೆ ಸಚಿವರು ಭರವಸೆ ನೀಡಿದರು.

ಮನವೊಲಿಕೆಯ ಬಳಿಕ ಮತ್ತೆ ಕಲಾಪ ಆರಂಭಿಸಿದ ಖಾದರ್, ‘ಲಿಖಿತ ಪ್ರಶ್ನೆಗಳಿಗೆ ಉತ್ತರ ನೀಡುವ ಕುರಿತಂತೆ ಮುಖ್ಯಮಂತ್ರಿ, ಸಚಿವರು ಮತ್ತು ವಿರೋಧ ಪಕ್ಷದ ನಾಯಕರ ಜೊತೆ ಚರ್ಚಿಸಿ ತೀರ್ಮಾನಿಸಲಾಗಿದೆ. ಭೋಜನ ವಿರಾಮದ ಬಳಿಕ ಸರ್ಕಾರ ಈ ಬಗ್ಗೆ ಉತ್ತರ ನೀಡಲಿದೆ’ ಎಂದು ಕಲಾಪವನ್ನು ಮುಂದೂಡಿದರು.

ಪುಸ್ತಕ ಖರೀದಿ: ಪಟ್ಟಿ ಹಿಂಪಡೆದ ಸರ್ಕಾರ

ಬೆಂಗಳೂರು: ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ 2025–26ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿಸಲು ನೀಡಿದ್ದ ಪಟ್ಟಿಯನ್ನು ಸರ್ಕಾರ ಹಿಂಪಡೆದಿದೆ.

‘ಪುಸ್ತಕಗಳ ಪಟ್ಟಿಯಲ್ಲಿ ಕೆಲವು ದೋಷಗಳು ಕಂಡು ಬಂದಿರುವುದರಿಂದ ಈ ಕ್ರಮ ಕೈ ಗೊಳ್ಳಲಾಗಿದೆ. ಆಯ್ಕೆ ಪಟ್ಟಿಯಲ್ಲಿ ನೀಡಲಾದ ಯಾವುದೇ ಪುಸ್ತಕಗಳನ್ನು ಸಂಬಂಧಿಸಿದ ಶಾಲಾ ಮುಖ್ಯಸ್ಥರು ಖರೀದಿಸಬಾರದು. ಶೀಘ್ರದಲ್ಲೇ ಸರಿಪಡಿಸಿದ ಪಟ್ಟಿಯನ್ನು ನೀಡಲಾಗುವುದು’ ಎಂದು ಸಮಗ್ರ ಶಿಕ್ಷಣ ರಾಜ್ಯ ಯೋಜನಾ ನಿರ್ದೇಶಕರು ತಿಳಿಸಿದ್ದಾರೆ.

ಪುಸ್ತಕಗಳನ್ನು ಖರೀದಿಸಲು ಇತ್ತೀಚೆಗೆ ಸುತ್ತೋಲೆ ಹೊರಡಿಸಲಾಗಿತ್ತು. ಜೊತೆಗೆ ಪುಸ್ತಕಗಳ ಪಟ್ಟಿಯನ್ನು ನೀಡಲಾಗಿತ್ತು. ಪಟ್ಟಿಯಲ್ಲಿ ಹಲವು ಲೋಪಗಳಿವೆ. ಯಾವುದೋ ಪ್ರಕಾಶನದ ಪುಸ್ತಕವನ್ನು ಇನ್ನಾವುದೋ ಪ್ರಕಾಶನ ಎಂದು ತೋರಿಸಲಾಗಿದೆ. ದರಗಳೂ ವ್ಯತ್ಯಾಸ ಇದೆ ಎಂದು ಕರ್ನಾಟಕ ಪ್ರಕಾಶಕರ ಸಂಘ ಹಾಗೂ ಹಲವು ಪ್ರಕಾಶಕರು ದೂರಿದ್ದರು. ಈ ಕುರಿತು ‘ಪುಸ್ತಕ ಪಟ್ಟಿ ದೋಷ: ಪ್ರಕಾಶಕರ ಆಕ್ರೋಶ’ ಎಂಬ ಶೀರ್ಷಿಕೆಯಡಿ ‘ಪ್ರಜಾವಾಣಿ’ ವಿಸ್ತೃತ ವರದಿ ಪ್ರಕಟಿಸಿತ್ತು.

ಇಸ್ತ್ರಿಪೆಟ್ಟಿಗೆ, ಬಟ್ಟೆ ಶುಚಿಗೊಳಿಸುವ ಪರಿಕರ ಪ್ರದರ್ಶಿಸಿ ಹೋರಾಟ

ಪರಿಶಿಷ್ಟ ಜಾತಿಗೆ ಸೇರಿಸಿ: ಮಡಿವಾಳರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗೆ ಸೇರಿಸಬೇಕೆಂದು ಆಗ್ರಹಿಸಿ ಮಡಿವಾಳ ಸಮುದಾಯದವರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ ಮತ್ತು ಉತ್ತರ ಕರ್ನಾಟಕ ಮಡಿವಾಳರ ಸಂಘದ ಆಶ್ರಯದಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಸಮುದಾಯದವರು, ಇಸ್ತ್ರಿ ಪೆಟ್ಟಿಗೆ, ಬಟ್ಟೆ ಶುಚಿಗೊಳಿಸುವ ಪರಿಕರ ಪ್ರದರ್ಶಿಸಿದರು.

ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ಕೆ.ಹನುಮಂತಪ್ಪ ಮಾತನಾಡಿ, ‘ಪರಿಶಿಷ್ಟ ಜಾತಿಗೆ ಸೇರಿಸಬೇಕೆಂಬ ಕೂಗು ಹಲವಾರು ದಶಕಗಳಿಂದ ಇದೆ. ಸಮುದಾಯಕ್ಕೆ ಸಿಗಬೇಕಾದ ಸ್ಥಾನಮಾನ, ಬೇಡಿಕೆ ಈಡೇರಿಕೆಗೆ ಯಾವುದೇ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ. ಪ್ರಬಲ ಸಮುದಾಯಗಳು ನಮ್ಮ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಪರಿಶಿಷ್ಟ ಜಾತಿಗೆ ಸೇರಿಸಲು ಮೀನಮೇಷ ಮಾಡುತ್ತಿರುವುದರ ಹಿಂದೆ ರಾಜಕೀಯ ಷಡ್ಯಂತ್ರ ಇದೆ’ ಎಂದು ಆರೋಪಿಸಿದರು.

‘ಈಗಾಗಲೇ ದೇಶದ 18 ರಾಜ್ಯಗಳು, 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ನಮ್ಮ ಸಮುದಾಯವನ್ನು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿಸಲಾಗಿದೆ. ಆದರೆ, ಕರ್ನಾಟಕದಲ್ಲಿ ನಮ್ಮನ್ನು ಹಿಂದುಳಿದ ವರ್ಗಕ್ಕೆ ಸೇರಿಸಲಾಗಿದೆ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ನಮ್ಮ ಒತ್ತಡಕ್ಕೆ ಮಣಿದು ಕುಲಶಾಸ್ತ್ರೀಯ ಅಧ್ಯಯನ ಮಾಡಿಸಿ, ವರದಿ ಸ್ವೀಕರಿಸಿದರು. ಆದರೆ, ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡದೆ ನಿರ್ಲಕ್ಷ್ಯ ವಹಿಸಲಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಸ್ಥಳಕ್ಕೆ ಬಂದು ಮನವಿ ಪತ್ರ ಸ್ವೀಕರಿಸಿದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ‘ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಚರ್ಚಿಸಿ, ಬೇಡಿಕೆ ಈಡೇರಿಸಲು ಪ್ರಯತ್ನಿಸಲಾಗುವುದು’ ಎಂದು ಭರವಸೆ ನೀಡಿದರು. ಬಳಿಕ ಪ್ರತಿಭಟನೆ ಅಂತ್ಯಗೊಂಡಿತು.

ಮಾಚಿದೇವ ಮಠದ ಬಸವ ಮಾಚಿದೇವ ಸ್ವಾಮೀಜಿ, ಸಂಘದ ಉಪಾಧ್ಯಕ್ಷ ದುರಗೇಶ ಜಿ.ಮಡಿವಾಳರ, ಮುಖಂಡರಾದ ದೀಪಕ್ ವಿ, ದುರ್ಗೇಶ್ ಜಿ.ಮಡಿವಾಳರ, ಎಂ.ಚಂದ್ರಕಾಂತ್, ಕೆ.ಮಲ್ಲಯ್ಯ, ರಾಜು ತಲ್ಲೂರು, ಡಾ.ರವಿಕುಮಾರ್, ಎಚ್.ಎಸ್. ವೆಂಕಟೇಶ್, ಪಿ.ರಂಗಸಾಮಯ್ಯ, ಸಂಗಮೇಶ್ ಭಾಗವಹಿಸಿದ್ದರು.


ತಮ್ಮನ್ನು ಪರಿಶಿಷ್ಟಜಾತಿಗೆ ಸೇರಿಸಬೇಕು ಎಂದು ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಡಿವಾಳ ಸಮುದಾಯದವರು ಸೋಮವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಎತ್ತಿನಹೊಳೆಗೆ ಷರತ್ತುಬದ್ಧ ಅನುಮತಿ

ಯೋಜನೆಗೆ 277 ಎಕರೆ ಕಾಡು ಬಳಕೆಗೆ ಅರಣ್ಯ ಸಲಹಾ ಸಮಿತಿ ಒಪ್ಪಿಗೆ

• ಮಂಜುನಾಥ ಹೆಬ್ಬಾರ್



ನವದೆಹಲಿ: ಎತ್ತಿನಹೊಳೆ ಯೋಜನೆಗೆ ಹಾಸನ ಹಾಗೂ ತುಮಕೂರು ಜಿಲ್ಲೆಗಳ 277 ಎಕರೆ (111 ಹೆಕ್ಟೇರ್) ಕಾಡು ಬಳಸಲು ಕೇಂದ್ರ ಪರಿಸರ ಸಚಿವಾಲಯದ ಅರಣ್ಯ ಸಲಹಾ ಸಮಿತಿ ಷರತ್ತುಬದ್ಧ ಅನುಮತಿ ನೀಡಿದೆ. ಇದರಿಂದಾಗಿ, ಸಚಿವಾಲಯದ ತಕರಾರಿನ ಕಾರಣದಿಂದ ವರ್ಷದಿಂದ ಸ್ಥಗಿತಗೊಂಡಿದ್ದ ಎತ್ತಿನಹೊಳೆ ಯೋಜನೆ ಕಾಮಗಾರಿಗೆ ಮತ್ತೆ ಚಾಲನೆ ಸಿಗಲಿದೆ.

ರಾಜ್ಯ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವಕ್ಕೆ 2025ರ ಜೂನ್ 24 ಹಾಗೂ ಅಕ್ಟೋಬರ್ 27ರಂದು ನಡೆದ ಸಭೆಗಳಲ್ಲಿ ಒಪ್ಪಿಗೆ ಸಿಕ್ಕಿರಲಿಲ್ಲ. ಯೋಜನೆಯ ಬಗ್ಗೆ ಹೆಚ್ಚುವರಿ ಮಾಹಿತಿ ಕೇಳಿದ್ದ ಸಮಿತಿಯು, ಸಚಿವಾಲಯದ ಪ್ರಾದೇಶಿಕ ಕಚೇರಿಯಿಂದ ಸ್ಥಳ ಪರಿಶೀಲನಾ ವರದಿಯನ್ನು ತರಿಸಿಕೊಂಡಿತ್ತು. ಯಾವುದೇ ಅನುಮತಿ ಪಡೆಯದೇ ಅರಣ್ಯ ಭೂಮಿಯಲ್ಲಿ ಕಾಮಗಾರಿ ನಡೆಸಲಾಗಿದೆ ಎಂದು ವರದಿ ನೀಡಿದ್ದ ಪ್ರಾದೇಶಿಕ ಕಚೇರಿ, ಇದರಲ್ಲಿ ಅರಣ್ಯ ಇಲಾಖೆಯ ಲೋಪವೂ ಇದೆ ಎಂದು ಬೆಳಕು ಚೆಲ್ಲಿತ್ತು.

‘ಪರಿಷ್ಕೃತ ಪ್ರಸ್ತಾವದ ಪ್ರಕಾರ, ಯೋಜನೆಗೆ 111 ಹೆಕ್ಟೇರ್ ಅರಣ್ಯದ ಬದಲು 108 ಹೆಕ್ಟೇರ್ ಬಳಸಿಕೊಳ್ಳಲಾಗುವುದು. 69.80 ಹೆಕ್ಟೇರ್‌ನಲ್ಲಿ ಕಾಲುವೆ ನಿರ್ಮಾಣ ಮಾಡಲಾಗುವುದು. ಹೂಳು ಸುರಿಯುವ ಪ್ರದೇಶವನ್ನು 103 ಹೆಕ್ಟೇರ್‌ನಿಂದ 38 ಹೆಕ್ಟೇರ್‌ಗೆ ಇಳಿಸಲಾಗಿದೆ. ಕಾಮಗಾರಿ ನಡೆಸುವ ಪ್ರದೇಶಗಳಲ್ಲಿ ಹೂಳು ಸುರಿಯುವುದಿಲ್ಲ. ಜತೆಗೆ, ಹಾಸನ ಜಿಲ್ಲೆಯಲ್ಲಿ 107 ಹೆಕ್ಟೇರ್‌ನಲ್ಲಿ ನಿಯಮ ಉಲ್ಲಂಘನೆ ಆಗಿದೆ. ಈ ಪ್ರದೇಶವು ಕಂದಾಯ ದಾಖಲೆಗಳಲ್ಲಿ ಅರಣ್ಯವೆಂದು ದಾಖಲಾಗಿಲ್ಲ. ರೈತರು ಸಾಗುವಳಿ ಮಾಡುತ್ತಿದ್ದಾರೆ ಎಂದು ರಾಜ್ಯ ಸರ್ಕಾರ ಸಮಜಾಯಿಷಿ ನೀಡಿದೆ. ನಿಯಮ ಉಲ್ಲಂಘನೆ ಬಗ್ಗೆ ಅರಣ್ಯ ಇಲಾಖೆಯಿಂದ ವಿವರಣೆ ಕೇಳಲಾಗಿದೆ’ ಎಂದು ಪ್ರಾದೇಶಿಕ ಕಚೇರಿ ವರದಿ ಸಲ್ಲಿಸಿತ್ತು. ಆ ಬಳಿಕ ಸಚಿವಾಲಯವು ರಾಜ್ಯ ಅರಣ್ಯ ಇಲಾಖೆಯಿಂದ ಇನ್ನಷ್ಟು ವಿವರಣೆ ಕೇಳಿತ್ತು. ಅರಣ್ಯ ಸಚಿವಾಲಯದಿಂದ ಅನುಮತಿ ಪಡೆಯಲು ಕರ್ನಾಟಕ ಸರ್ಕಾರವು ವರ್ಷದಿಂದ ಹರಸಾಹಸ ಪಟ್ಟಿತ್ತು. ಇದೀಗ, ಕೇಂದ್ರದಿಂದ ಅನುಮೋದನೆ ದೊರಕಿದೆ.

ಷರತ್ತುಗಳೇನು?

- ಅರಣ್ಯ ಸಂರಕ್ಷಣಾ ಕಾಯ್ದೆಯ ನಿಯಮ ಉಲ್ಲಂಘಿಸಿದವರ ವಿರುದ್ಧ ಸೆಕ್ಷನ್ 3 ಎ ಹಾಗೂ 3 ಬಿ ಅಡಿಯಲ್ಲಿ ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕು.
- ವಿಶ್ವೇಶ್ವರಯ್ಯ ಜಲ ನಿಗಮವು ನಿಯಮ ಉಲ್ಲಂಘಿಸಿ ಬಳಸಿದ ಅರಣ್ಯ ಪ್ರದೇಶಕ್ಕೆ ದಂಡ ವಸೂಲಿ ಮಾಡಲಾಗುತ್ತದೆ. ಈ ಮೊತ್ತವು ಅರಣ್ಯ ಭೂಮಿಯ ಈಗಿನ ಒಟ್ಟು ಮೌಲ್ಯದ (ಎನ್‌ಪಿವಿ) ಐದು ಪಟ್ಟು ಆಗಿರುತ್ತದೆ. ಈ ಮೊತ್ತವನ್ನು ಕಾಂಪಾ ಖಾತೆಗೆ ವರ್ಗಾವಣೆ ಮಾಡುವ ವರೆಗೆ ಶೇ 12 ಬಡ್ಡಿ ವಸೂಲಿ ಮಾಡಬೇಕು.
- ನಿಯಮ ಉಲ್ಲಂಘಿಸಿ ಅರಣ್ಯ ಭೂಮಿ ಬಳಸಿರುವ ಪ್ರಕರಣಗಳಲ್ಲಿ ದಂಡ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಅರಣ್ಯ ಸಚಿವಾಲಯ ಜನವರಿ 21ರಂದು ಮಾರ್ಗಸೂಚಿ ಹೊರಡಿಸಿದೆ. ಈ ಮಾರ್ಗಸೂಚಿ ಕಟ್ಟುನಿಟ್ಟಾಗಿ ಪಾಲನೆ ಆಗಿರುವುದನ್ನು ರಾಜ್ಯ ಸರ್ಕಾರ ಖಚಿತಪಡಿಸಿಕೊಳ್ಳಬೇಕು. ದಂಡ ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಜಾಗ ಗುರುತಿಸಬೇಕು.
- ಪೂರ್ವಾನುಮತಿ ಇಲ್ಲದೆ ಬಳಸಿರುವ ಉಳಿದ ಅರಣ್ಯ ಪ್ರದೇಶವನ್ನು ಜಲ ನಿಗಮದಿಂದ ವಾಪಸ್ ಪಡೆದು ಸೂಕ್ತ ಮರು ಸ್ಥಾಪನೆ ಮಾಡಬೇಕು. ಇದಕ್ಕೆ ತಗಲುವ ವೆಚ್ಚವನ್ನು ಜಲ ನಿಗಮದಿಂದಲೇ ವಸೂಲಿ ಮಾಡಬೇಕು.
- ವನ್ಯಜೀವಿಗಳ ಸಂರಕ್ಷಣೆಗಾಗಿ ವನ್ಯಜೀವಿ ಸಂರಕ್ಷಣಾ ಯೋಜನೆಯನ್ನು ರಾಜ್ಯ ಸರ್ಕಾರ ಸಲ್ಲಿಸಬೇಕು. ಇದನ್ನು ಭಾರತೀಯ ವನ್ಯಜೀವಿ ಸಂಸ್ಥೆಯಿಂದ ಪರಿಶೀಲನೆಗೆ ಒಳಪಡಿಸಬೇಕು.

ರಾಜ್ಯದ ನಿವೇದನೆ ಏನಾಗಿತ್ತು?

‘ಬರಪೀಡಿತ ಬಯಲುಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸಲು 252 ಕಿ.ಮೀ. ಗುರುತ್ವಾಕರ್ಷಣೆ ಕಾಲುವೆ ನಿರ್ಮಿಸಲಾಗುತ್ತಿದ್ದು, 246 ಕಿ.ಮೀ. ಕಾಮಗಾರಿ ಮುಗಿದಿದೆ. ಕೇವಲ ಆರು ಕಿ.ಮೀ. ಕಾಮಗಾರಿ ಅರಣ್ಯ ಪ್ರದೇಶದಲ್ಲಿ ಸಾಗಲಿದೆ. ಅರಣ್ಯ ತೀರುವಳಿ ಪ್ರಸ್ತಾವಕ್ಕೆ ಅನುಮೋದನೆ ನೀಡಿದರೆ 75 ಲಕ್ಷ ಜನರಿಗೆ ನೀರು ಪೂರೈಸಲು ಅನುಕೂಲವಾಗಲಿದೆ’ ಎಂದು ರಾಜ್ಯ ಸರ್ಕಾರ ನಿವೇದಿಸಿಕೊಂಡಿತ್ತು.

ಟ್ರಾನ್ಸ್‌ಜೆಂಡರ್: ತಿದ್ದುಪಡಿ ಮಸೂದೆ ವಾಪಸ್‌ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮಂಡಿಸಿರುವ ಲಿಂಗತ್ವ ಅಲ್ಪಸಂಖ್ಯಾತರ (ಟ್ರಾನ್ಸ್‌ಜೆಂಡರ್) ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆಯನ್ನು ಹಿಂಪಡೆಯಬೇಕು ಎಂದು ಕರ್ನಾಟಕ ರಾಜ್ಯ ಲಿಂಗತ್ವ ಮತ್ತು ಲೈಂಗಿಕತೆ ಅಲ್ಪಸಂಖ್ಯಾತರ ಒಕ್ಕೂಟ ಆಗ್ರಹಿಸಿದೆ.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಕ್ಕೈ ಪದ್ಮಶಾಲಿ, ಪ್ರಕಾಶ್, ಅರವಿಂದ್ ನರೈನ್, ರೂಮಿ ಹರೀಶ್, ಮಾಯಾ, ಮೋನಿಕಾ, ರಕ್ಷಿತಾ ಅವರು, ‘ಹೋರಾಟದಿಂದ ಪಡೆದುಕೊಂಡ ಹಕ್ಕುಗಳನ್ನು ಈ ಮಸೂದೆಯ ಮೂಲಕ ಹಿಂಪಡೆಯಲಾಗುತ್ತಿದೆ. ಇದು ನಮ್ಮ ಅಸ್ತಿತ್ವವನ್ನು ಗುರುತಿಸುವ ಮೂಲಭೂತ ತತ್ವಕ್ಕೆ ವಿರುದ್ಧವಾಗಿದೆ. ಈ ಮಸೂದೆಯನ್ನು ಹಿಂಪಡೆಯುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯಲಾಗಿದೆ’ ಎಂದು ತಿಳಿಸಿದರು.

‘ಮಸೂದೆ ಪ್ರಕಾರ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಯನ್ನು ಕಿನ್ನರ್, ಹಿಜ್ರಾ, ಅರವಾಣಿ, ಜೋಗತಾ ಅಥವಾ ಯೂನಕ್ ಎಂಬ ಸಾಂಸ್ಕೃತಿಕ ಗುರುತುಗಳಿಗೆ ಸೀಮಿತಗೊಳಿಸಲಾಗಿದೆ. ಲಿಂಗತ್ವ ಅಲ್ಪಸಂಖ್ಯಾತರ ಸ್ವಯಂ ಗುರುತಿನ ಹಕ್ಕು ಸೇರಿದಂತೆ ಎಲ್ಲ ಹಕ್ಕುಗಳನ್ನು ರಕ್ಷಿಸುವ ಬದಲು ಕಸಿದುಕೊಳ್ಳುತ್ತಿದೆ. ಮಸೂದೆ ಅನುಷ್ಠಾನಗೊಂಡರೆ ಟ್ರಾನ್ಸ್‌ಮೆನ್‌ಗಳನ್ನು ಕಾನೂನಿನ ಪ್ರಕಾರ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳೆಂದು ಪರಿಗಣಿಸದೇ ಅವರ ಎಲ್ಲ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತದೆ’ ಎಂದು ವಿವರಿಸಿದರು.

‘ಟ್ರಾನ್ಸ್‌ವುಮನ್ ಎಂದು ಗುರುತಿಸಿಕೊಳ್ಳುವ ಅವಕಾಶವನ್ನು ಇದು ನಿರಾಕರಿಸುತ್ತದೆ. ಟ್ರಾನ್ಸ್‌ಜೆಂಡರ್ ವ್ಯಕ್ತಿ ಎಂಬ ಪದದ ವ್ಯಾಖ್ಯಾನವೇ ಸಂವಿಧಾನಬಾಹಿರವಾಗಿದೆ. ನಲ್ಸಾ ಮತ್ತು ಕೇಂದ್ರ ಸರ್ಕಾರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿಗೆ ಈ ತಿದ್ದುಪಡಿ ವಿರುದ್ಧವಾಗಿದೆ’ ಎಂದರು.

‘ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳು ಸರ್ಕಾರ ನೇಮಿಸುವ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರ ಪಡೆದುಕೊಳ್ಳಬೇಕು. ಈ ಪ್ರಮಾಣ ಪತ್ರ ಪಡೆದ ನಂತರವೂ ನಮ್ಮ ಗುರುತಿನ ಮಾನ್ಯತೆ ನೀಡಬೇಕೋ ಅಥವಾ ಬೇಡವೋ ಎಂಬ ಅಧಿಕಾರವನ್ನು ಜಿಲ್ಲಾಧಿಕಾರಿಗೆ ನೀಡಲಾಗಿದೆ. ಇದು ನಮ್ಮ ಗೋಪ್ಯತೆ, ಸ್ವಾಯತ್ತತೆ ಮತ್ತು ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತದೆ’ ಎಂದರು.

ಡಿಕೆಶಿ ಸಭೆ ಇಂದು

ನವದೆಹಲಿ: ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಿಸುವ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ಇರುವುದರಿಂದ ಭೂಸ್ವಾಧೀನಕ್ಕೆ ಅವಕಾಶ ನೀಡಬಾರದೆಂದು ಕೇಂದ್ರ ಸರ್ಕಾರಕ್ಕೆ ಆಂಧ್ರಪ್ರದೇಶ ಸರ್ಕಾರ ಪತ್ರ ಬರೆದ ಹಿನ್ನೆಲೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ರಾಜ್ಯದ ಸಂಸದರ ಸಭೆ ಕರ್ನಾಟಕ ಭವನದಲ್ಲಿ ಮಂಗಳವಾರ ಸಂಜೆ 6ಕ್ಕೆ ನಡೆಯಲಿದೆ.

ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 519 ಮೀಟರ್‌ನಿಂದ 524 ಮೀಟರ್‌ಗೆ ಹೆಚ್ಚಿಸುವುದಕ್ಕೆ ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿವೆ. ಇತ್ತೀಚೆಗೆ ಆಂಧ್ರ ಪ್ರದೇಶವು ಕೇಂದ್ರ ಜಲಶಕ್ತಿ ಸಚಿವಾಲಯದ ಉನ್ನತ ಅಧಿಕಾರಿಗಳಿಗೆ ಪತ್ರ ಬರೆದು ಭೂಸ್ವಾಧೀನಕ್ಕೆ ಅವಕಾಶ ನೀಡಬಾರದು ಎಂದು ಒತ್ತಾಯಿಸಿತ್ತು. ಆ ಬಳಿಕ ಸಚಿವಾಲಯವು ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆದು ಸ್ಪಷ್ಟನೆ ಕೇಳಿತ್ತು.

ಭದ್ರಾ ಮೇಲ್ದಂಡೆಗೆ ಅನುದಾನ ಕೇಂದ್ರ ಗೃಹ ಸಚಿವರಿಗೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಿಸಿರುವ ₹5300 ಕೋಟಿ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಗೃಹ ಸಚಿವ ಅಮಿತ್ ಶಾ ಅವರಿಗೆ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಮನವಿ ಮಾಡಿದರು.

ಸಂಸತ್ ಭವನದಲ್ಲಿ ಸೋಮವಾರ ಗೃಹ ಸಚಿವರನ್ನು ಭೇಟಿ ಮಾಡಿದ ಅವರು, ಚಿತ್ರದುರ್ಗ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದ ಹಲವು ವಿಷಯಗಳನ್ನು ಚರ್ಚಿಸಿದರು.

ಭದ್ರಾ ಮೇಲ್ದಂಡೆ ಯೋಜನೆ ಜಾರಿಯಾದಲ್ಲಿ ಚಿತ್ರದುರ್ಗ ಸೇರಿದಂತೆ ಮಧ್ಯ ಕರ್ನಾಟಕದ ಹಲವು ಜಿಲ್ಲೆಗಳ ರೈತರಿಗೆ ಪ್ರಯೋಜನವಾಗಲಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶದಿಂದ ಹೆಚ್ಚುವರಿ ಏಕಲವ್ಯ ಮಾದರಿ ವಸತಿ ಶಾಲೆ ಸ್ಥಾಪಿಸಲು ಬುಡಕಟ್ಟು ವ್ಯವಹಾರಗಳ ಸಚಿವಾಲಯಕ್ಕೆ ಶಿಫಾರಸು ಮಾಡಬೇಕು ಎಂದು ಕೋರಿದರು.



ಅಮಿತ್ ಶಾ ಅವರಿಗೆ ಗೋವಿಂದ ಕಾರಜೋಳ ಮನವಿ ಸಲ್ಲಿಸಿದರು

ವೀರ ಮದಕರಿ ನಾಯಕ ಸ್ಮರಣಾರ್ಥ ಚಿತ್ರದುರ್ಗದಲ್ಲಿ ಮದಕರಿ ನಾಯಕ ಥೀಮ್ ಪಾರ್ಕ್ ಸ್ಥಾಪನೆ ಮಾಡಬೇಕು. ಈ ಯೋಜನೆ ಜಾರಿಯಾದಲ್ಲಿ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಉತ್ತೇಜನ ದೊರೆಯಲಿದೆ ಎಂದು ಅವರು ಗಮನ ಸೆಳೆದರು.



ಚಿಂತೆ ಬಿಡಿ ನಿದ್ರೆ ಮಾಡಿ

• ರಮ್ಯಾ ಶ್ರೀಹರಿ

ನಮ್ಮ ನಿದ್ರೆ ನಮ್ಮ ಅಂತರಂಗದಲ್ಲೇನು ನಡೆಯುತ್ತಿದೆ ಎನ್ನುವುದನ್ನು ತಿಳಿಸಿಕೊಡುವಷ್ಟು ಚೆನ್ನಾಗಿ ಮತ್ಯಾವುದೂ ತಿಳಿಸಿಕೊಡುವುದಿಲ್ಲ. ಹಗಲಲ್ಲಿ ನಾವು ಮರೆಯಲೆತ್ನಿಸುವುದನ್ನು, ಮುಚ್ಚು ಮರೆಯಲ್ಲಿರಿಸಬಯಸುವುದನ್ನೆಲ್ಲಾ 'ರಾತ್ರಿ' ಎನ್ನುವುದು ನಮ್ಮ ಕಣ್ಮುಂದೆಯೇ ನೇರವಾಗಿ ತಂದು ಸುರಿಯುತ್ತದೆ. ಕೆಲವೊಮ್ಮೆ ಹಗಲಿನ 'ನಾನೇ' ಬೇರೆ, ಇರುಳಿನ 'ನಾನೇ' ಬೇರೆ ಎಂದೆನಿಸುವಷ್ಟು ವೈರುಧ್ಯ ನಮ್ಮಲ್ಲಿರುವುದೂ ಅಪರೂಪವೇನಲ್ಲ. ಬಾಹ್ಯಪ್ರಪಂಚದ ಒತ್ತಡಗಳು, ಬಾಂಧವ್ಯಗಳಲ್ಲಿನ ಬಿರುಕುಗಳು, ಸಂಕಟಗಳು ಒಳಪ್ರಪಂಚದ ಮೇಲೆ ಎಂತಹ ಪರಿಣಾಮಗಳನ್ನು ಉಂಟುಮಾಡುತ್ತಿದೆ ಎನ್ನುವುದನ್ನು ಅರಿಯಲು ಬೇಕಾದ ಮೌನ, ಧ್ಯಾನ, ವ್ಯವಧಾನ ಜೀವನದಲ್ಲಿ ಯಾವಾಗಲೂ ಇದ್ದೇ ಇರುತ್ತದೆ ಎಂದು ಹೇಳಲಾಗುವುದಿಲ್ಲ.

ಪ್ರತಿದಿನದ ಸೂರ್ಯೋದಯ ಆ ದಿನದಲ್ಲಿ ಸಾಧಿಸಲು ಬೇಕಾದ ಉತ್ಸಾಹವನ್ನು, ಭರವಸೆಯನ್ನು ತಂದುಕೊಡುತ್ತದೆ. ಹಗಲಿನಲ್ಲಿ ಏಕಾಂಗಿಯಾಗಿ ಏನನ್ನು ಬೇಕಾದರೂ ಎದುರಿಸಬಲ್ಲೆ ಎನ್ನುವ ಆತ್ಮವಿಶ್ವಾಸ, ಕಾರ್ಯದಕ್ಷತೆ, ಸ್ವಾವಲಂಬನೆ, ಬಾಹ್ಯ ಪ್ರಪಂಚಕ್ಕೆ ಸ್ಪಂದಿಸಲು ಬೇಕಾದ ಸ್ಪಷ್ಟ ಆಲೋಚನೆಗಳಿರುವಂತೆಯೇ, ಪ್ರತಿಸಂಜೆಯ ಸೂರ್ಯಾಸ್ತದಲ್ಲೂ ಮನಸ್ಸು ಒಳಮನೆಯನ್ನು, ತಾನೇ ಕಟ್ಟಿಕೊಂಡ ಪುಟ್ಟಗೂಡೊಂದನ್ನು ಸೇರಲು ಬಯಸುತ್ತದೆ; ಬಾಹ್ಯಪ್ರಪಂಚಕ್ಕೆ ಬೆನ್ನು ಮಾಡಿ ಒಳಲೋಕದ ಅವಲೋಕನಕ್ಕೆ ಮುಖ ಮಾಡುತ್ತದೆ. ಆಗ ನಮಗೆ ಭಾವನಾತ್ಮಕ ಆಸರೆಯಾಗಬಲ್ಲ ಕುಟುಂಬದ, ಸ್ನೇಹಿತರ ಒಡನಾಟ ಹಿತವೆನಿಸುತ್ತದೆ, ಭಾವಸೂಕ್ಷ್ಮತೆ ನಮ್ಮನ್ನಾವರಿಸುತ್ತದೆ.

ಪ್ರಕೃತಿಗೆ ಸ್ಪಂದಿಸುತ್ತಾ ಸ್ಥಿತ್ಯಂತರಗೊಳ್ಳುವ ಮೈಮನಗಳ ಮಾತನ್ನು ಸಾವಧಾನದಿಂದ ಆಲಿಸಿ, ಮೈಮನಗಳ ಸಹಜ ಅಭಿವ್ಯಕ್ತಿಗೆ, ಅವಶ್ಯಕತೆಗಳಿಗೆ ಅವಕಾಶವಾಗಲು ಬೇಕಾದ ಸೂಕ್ತ ವಾತಾವರಣವನ್ನು ನಾವೇ ಕಲ್ಪಿಸಿಕೊಳ್ಳಬೇಕಾಗುತ್ತದೆ. ಆದರೆ ಇದು ಸುಲಭಸಾಧ್ಯವೆ? ಹಗಲಿನಲ್ಲಿ ಬದುಕು (ಅದರಲ್ಲೂ ನಗರದ ಬದುಕು) ಒಂದು ರೀತಿ ಕಂಗೆಡಿಸಿದರೆ, ಇರುಳು ಮತ್ತೊಂದು ಬಗೆಯ ಕಳವಳಕ್ಕೆ ಒಳಪಡಿಸುತ್ತದೆ. ಆರ್ಥಿಕ ಅಭದ್ರತೆ, ಸಾಮಾಜಿಕ ಕೌಟುಂಬಿಕ ವಿಘಟನೆ, ಮನುಷ್ಯನ ಮೂಲಭೂತ ಒಂಟಿತನ, ನಮ್ಮನ್ನು ನಾವಾಗಿರಲು ಬಿಡದ ಬದುಕಿನ ಅನಿವಾರ್ಯಗಳು, ನಮ್ಮ ಸಣ್ಣ ಸಣ್ಣ ಆಸೆಗಳಿಗೂ ತಣ್ಣೀರೆರೆಚುವ, ತೀವ್ರ ಅಭೀಪ್ಸೆಗಳನ್ನೂ ಮಣ್ಣು ಮುಕ್ಕಿಸುವ ವಾಸ್ತವಿಕ ಪ್ರಪಂಚ ನಮ್ಮ ಒಳಲೋಕವನ್ನು ನುಚ್ಚುನೂರಾಗಿಸುತ್ತದೆ. ಇದೆಲ್ಲದರ ಪರಿಣಾಮದ ಸ್ವರೂಪ ಹೇಗಿದೆ ಎನ್ನುವುದನ್ನು ನಮ್ಮ ನಿದ್ರೆ ನಮಗೇ ವರದಿ ಮಾಡುತ್ತದೆ.

ತಲೆಯನ್ನು ದಿಂಬಿಗಿಟ್ಟರೂ, ಕಣ್ಣು ಮುಚ್ಚಿದರೂ ನಿದ್ರೆಗೆ ಜಾರಲು ಬಿಡದಂತೆ ವಟಗುಟ್ಟುವ ಮನಸ್ಸು, ನಿದ್ರೆಗೆ ಜಾರಿದರೆ ಸಾಕು ಏನೋ ಅನಾಹುತವಾಗಿಬಿಡುತ್ತದೆ, ಏನೋ ಕೈತಪ್ಪಿಹೋಗುತ್ತದೆ ಎಂಬಂತೆ ಪದೇಪದೇ ಎಚ್ಚರವಾಗಿ ತಲ್ಲಣಿಸುವ ದೇಹ, ಕೆಟ್ಟ ಕನಸುಗಳಿಗೆ ಕಂಪಿಸುವ ಮೈಮನ, ಕತ್ತಲಾವರಿಸಿದರೆ ಸಾಕು ಬದುಕೇ ಮುಗಿದುಹೋದಂತೆ ಕನವರಿಸುವ, ಕೈಕೊಡುವ ಬುದ್ಧಿ-ವಿವೇಕ, ಇನ್ನು ಬೆಳಗಾಗುವುದೇ ಇಲ್ಲ, ಇನ್ನು ಬದುಕು ಸುಧಾರಿಸುವುದೇ ಇಲ್ಲ ಎಂಬಂತೆ ವ್ಯಥಾ ವ್ಯಥೆಗೊಳಗಾಗುವ ಹೃದಯವನ್ನು ಹೇಗೂ ಸಮಾಧಾನಿಸಲಾಗದೇ, ಅತ್ತಿಂದಿತ್ತ ಹೊರಳಿ ಚಡಪಡಿಕೆಯಲ್ಲೇ ಇಡೀ ರಾತ್ರಿ ಕಳೆದು, ನಿದ್ರಾಹೀನತೆಯಿಂದ ನೆಗ್ಗಿಹೋದ ಮೈಮನಗಳನ್ನು ಮತ್ತೆ ಬೆಳಿಗ್ಗೆ ಬದುಕನ್ನು ನೂಕಲು ಸಜ್ಜುಗೊಳಿಸಬೇಕಾದ ಪರಿಸ್ಥಿತಿಯಲ್ಲಿರುವ ಎಂಥವರಿಗೂ ಬದುಕು ಸುಂದರವಾಗಿಯೂ ಸಂಭ್ರಮದಂತೆಯೂ ಕಾಣಲು ಸಾಧ್ಯವೇ ಇಲ್ಲ.

ಇಡೀ ದಿನ ಮನಸ್ಸು, ಬುದ್ಧಿ, ದೇಹ, ಭಾವ ಎಲ್ಲವೂ ಸೌಹಾರ್ದದಿಂದಿದ್ದು, ಒಂದಕ್ಕೊಂದು ಸಹಕರಿಸಿ ಏಕಾಗ್ರತೆಯಿಂದ ಮೌಲ್ಯಯುತವಾದ, ಸಾರ್ಥಕ ಎಂದೆನಿಸುವ ಕೆಲಸ ಮಾಡುವಂತಿರಬೇಕು. ಕೆಲಸ ಕಾರ್ಯಗಳನ್ನು ಮುಗಿಸಿದ ತೃಪ್ತಿ ಮೈಮನಗಳನ್ನು ದಣಿಸಿರುವ ಸಂಜೆಗಳಲ್ಲಿ ಹೃದಯಕ್ಕೆ ಹಿತವೆನಿಸುವ, ಪ್ರೀತಿಸುವ, ಆರೈಕೆಮಾಡುವ ಆತ್ಮೀಯರ ಸಹವಾಸವಿರಬೇಕು; ಚಿಂತೆ-ದುಃಖಗಳಿಗೆ ಕಿವಿಯಾಗುವ, ಸಣ್ಣಪುಟ್ಟ ಗೆಲುವುಗಳಿಗೆ ಬೆನ್ನುತಟ್ಟುವ ಸ್ನೇಹದ ಆಸರೆಯಿರಬೇಕು; ಆಗ ನಮ್ಮನ್ನು ನಾವು ಸಮಾಧಾನಪಡಿಸಿಕೊಳ್ಳುವುದು, ವಿಶ್ರಾಂತಿ ತೆಗೆದುಕೊಳ್ಳುವುದು ಸರಾಗವಾಗುತ್ತದೆ.

ಅಂದರೆ ಹಗಲು ನಮ್ಮ ಕೆಲಸಕಾರ್ಯಗಳಲ್ಲಿ ಮಗ್ನತೆ, ತೃಪ್ತಿ; ರಾತ್ರಿ ತಲ್ಲಣಿಸುವ ಹೃದಯಕ್ಕೆ ತಾಳ್ಮೆ ಕಲಿಸಿಕೊಡುವ ಆತ್ಮೀಯರ ಬೆಚ್ಚಗಿನ ಆಸರೆ - ಇವೆರಡರಲ್ಲಿ ಎಲ್ಲಿ ಏರುಪೇರಾದರೂ ಸುಖನಿದ್ರೆ ನಮ್ಮ ಕೈಜಾರಿಹೋಗುತ್ತದೆ. ಹಾಗೆ ನಿದ್ರೆ ತಪ್ಪಿಹೋಗಿ ಅಂತರಂಗದ ತುಮುಲಗಳಿಗೆ ಅಭಿವ್ಯಕ್ತಿಯ ದಾರಿ ಕಾಣದೇ ಹೋದಾಗ, ಸಮಾಧಾನ ತಂದುಕೊಡಬಹುದಾದ ನಾಲ್ಕಾರು ವಿಚಾರಗಳು ಇಲ್ಲಿವೆ:

ನಿದ್ರೆಗೂ ಆತ್ಮಸಾಕ್ಷಿಗೂ ನೇರ ಸಂಬಂಧವಿದೆ; ಅಂತಃಸಾಕ್ಷಿ, ನೈತಿಕಪ್ರಜ್ಞೆ ಜಾಗೃತವಾಗಿರುವುದು ಸ್ವಸ್ಥ ಮನುಷ್ಯನ ಲಕ್ಷಣ. ನಮಗೂ, ಅನ್ಯರಿಗೂ ಅಹಿತವಾಗಬಹುದಾದ ಆಲೋಚನೆಗಳು, ಕೆಲಸಗಳು, ಮಾತುಗಳು ನಮ್ಮನ್ನು ನೆಮ್ಮದಿಯಾಗಿ ನಿದ್ರಿಸಲು ಬಿಡುವುದಿಲ್ಲ. ಸಹಾನುಭೂತಿ, ಸಹಜ ನ್ಯಾಯಸಂವೇದನೆ ಇದ್ದಾಗ, ಇತರರನ್ನು ಹೇಗೆ ಮೆಚ್ಚಿಸುವುದು ಎನ್ನುವುದನ್ನು ಬಿಟ್ಟು ನಮ್ಮ ಆತ್ಮಸಾಕ್ಷಿಗನುಗುಣವಾಗಿ ನಡೆದುಕೊಂಡಾಗ ಹಗಲಿನ ಬೆಳಕೂ ಸೊಗಸು, ಇರುಳಿನ ಕತ್ತಲೆಯೂ ಸೊಗಸು. 'ನಾನಿಷ್ಟು ಗಂಟೆಗಳ ಕಾಲ ನಿದ್ರಿಸಲೇಬೇಕು', 'ಎಲ್ಲರೂ ಎಷ್ಟು ಚೆನ್ನಾಗಿ ನಿದ್ರಿಸುತ್ತಿದ್ದಾರೆ, ನನಗೇಕೆ ಹೀಗೆ ಇಡೀ ರಾತ್ರಿ ಎಚ್ಚರವಾಗಿರಬೇಕಾದ ಶಿಕ್ಷೆ?' ಹೀಗೆ ನಿದ್ರೆಯ ಬಗೆಗೆ ಆಗ್ರಹಗಳಿದ್ದರೆ ನಿದ್ರೆ ಆವರಿಸುವುದು ಕಷ್ಟ. ನಮ್ಮ ವಯಸ್ಸು, ನಾವಿರುವ ಬದುಕಿನ ಹಂತ, ಆರೋಗ್ಯ, ದೈಹಿಕಶ್ರಮ, ಆಹಾರ, ವಿಹಾರ, ವ್ಯಕ್ತಿತ್ವ, ಪರಿಸರ, ನಮ್ಮ ಆಲೋಚನೆ, ಗ್ರಹಿಕೆ, ಸೂಕ್ಷ್ಮತೆಯ ಮಟ್ಟ ಎಲ್ಲವೂ ನಾವೆಷ್ಟು ಸಮಯ ಯಾವ ಬಗೆಯ ನಿದ್ರೆ ಮಾಡಬೇಕೆನ್ನುವುದನ್ನು ನಿರ್ಧರಿಸುತ್ತದೆ.

ನಿದ್ರೆಯಲ್ಲೂ ಹೋಲಿಕೆ, ಸ್ಪರ್ಧೆ, ಅಸೂಯೆ ಸಲ್ಲದು! ನಿದ್ರೆ ಬಾರದಿರುವುದಕ್ಕೆ ಮಿತಿಮೀರಿದ ಯೋಚನೆಗಳೇ ಮುಖ್ಯ ಕಾರಣ ಎಂದೆನಿಸುವುದುಂಟು. ಆದರೆ, ಆಲೋಚನೆಗಳನ್ನೇ ತಪ್ಪಿತಸ್ಥ ಸ್ಥಾನದಲ್ಲಿರಿಸುವುದರಿಂದ ನಿದ್ರೆಗೆ ಹೆಚ್ಚಿನ ಪ್ರಯೋಜನವೇನೂ ಆಗದು. ಬದಲಾಗಿ ಮಿತಿಮೀರುತ್ತಿರುವ ಆಲೋಚನೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಹೇಗೆ ಎಂಬ ಮತ್ತೊಂದು ದೊಡ್ಡ ಸಮಸ್ಯೆಯ ಬಗ್ಗೆ ಆಲೋಚನೆ ಶುರುವಾಗುತ್ತದೆ. ಆಲೋಚನೆಗಳನ್ನು ನಾವು ನಿಯಂತ್ರಿಸಬೇಕೆಂಬ ಆಲೋಚನೆ ತೊರೆದು, ಅವುಗಳು ತಮ್ಮಷ್ಟಕ್ಕೇ ಬಂದು ಹೋಗುವ ನಿರಪಾಯಕಾರಿ ವಿದ್ಯಮಾನ ಎಂಬುದನ್ನರಿತು ಆಲೋಚನೆಗಳಿಗೆ ಹೆದರದೆ, ಸ್ಪಂದಿಸದೆ, ಅವುಗಳೊಂದಿಗೆ ವಾದ-ವಿವಾದಗಳಿಗಿಳಿಯದೇ ಹೋದಾಗ ನಿದ್ರೆ ಸುಲಭವಾಗುತ್ತದೆ.

ಕೆಲವೊಮ್ಮೆ ನಿದ್ರೆ ಸುಲಭವಾಗಿ ಬಾರದಿರುವುದೂ ಒಳ್ಳೆಯ ಸೂಚನೆಯೇ ಹೌದು. ಬಾರದೇ ಕಾಡಿಸುವ ನಿದ್ರೆ ನಮ್ಮ ಬದುಕಿನ ಮೂಲ ಸಂಘರ್ಷ ಯಾವುದು ಎನ್ನುವುದರ ಕಡೆಗೆ ಬೆರಳು ಮಾಡಿ ಸೂಚಿಸುತ್ತದೆ. ನಿದ್ರೆ ಬರುತ್ತಿಲ್ಲವೆಂದು ಹಲುಬುವ ಬದಲು, ಬಾರದ ನಿದ್ರೆಯ ಬಗೆಗೆ ಕುತೂಹಲ ತಳೆದರೆ ಸಂಘರ್ಷ ನಿರ್ವಹಣೆಯೂ ಸುಲಭವಾಗಿ ಬದುಕಿನಲ್ಲಿ ಸುಧಾರಣೆಯೂ ಕಂಡುಬಂದೀತು. ಬದುಕಿನ ಮಹತ್ವಪೂರ್ಣ ಸಂಘರ್ಷಗಳನ್ನು ಒಂದೆರೆಡು ರಾತ್ರಿಗಳಲ್ಲಿ ಅರ್ಥಮಾಡಿಕೊಂಡು ಎಲ್ಲ ಕಗ್ಗಂಟುಗಳನ್ನು ಬಿಡಿಸುವುದಕ್ಕಾಗುವುದಿಲ್ಲ. ಸುಲಭದಲ್ಲಿ ಬಿಡಿಸಲಾಗದ ಕಗ್ಗಂಟುಗಳ ಬಗ್ಗೆ, ಬಗೆಹರಿಯದ ಸಮಸ್ಯೆಗಳ ಬಗ್ಗೆ, ಉತ್ತರ ಸಿಕ್ಕಿಲ್ಲದ ಪ್ರಶ್ನೆಗಳ ಬಗ್ಗೆ ತಾಳ್ಮೆ, ಕುತೂಹಲ, ಪ್ರೀತಿ ಬೆಳೆಸಿಕೊಳ್ಳುವುದೇ ಸಂಘರ್ಷ ನಿರ್ವಹಣೆಯ ಪ್ರಮುಖ ಹಂತ.

ನಾವು ಯಾವುದನ್ನು ಭಯದಿಂದ, ಸಂಶಯದಿಂದ, ಪೂರ್ವಗ್ರಹಗಳಿಂದ ನೋಡುತ್ತಿರುವೆವೋ ಅದನ್ನು ಪ್ರೀತಿ, ಕುತೂಹಲಗಳಿಂದ ನೋಡುವುದು, ಪ್ರಪಂಚದ ದೃಷ್ಟಿಯಿಂದ ನಮ್ಮನ್ನು ಕಂಡುಕೊಳ್ಳುವುದನ್ನು ಬಿಟ್ಟು ನಮ್ಮ ದೃಷ್ಟಿಯಿಂದ ಪ್ರಪಂಚ ಹೇಗೆ ಕಾಣುತ್ತಿದೆ ಎನ್ನುವುದರ ಕಡೆಗೆ ಮಾತ್ರ ಗಮನ ಕೊಡುವುದು ನಮ್ಮನ್ನು ಅತಿ ಆಯಾಸದಿಂದ ಪಾರುಮಾಡುತ್ತದೆ.

ಪ್ರತಿದಿನವೂ ಮನಸ್ಸಿಗೆ ತೃಪ್ತಿ, ಶಾಂತಿ, ಪ್ರೀತಿ, ಧನ್ಯತೆ, ಅರ್ಥಪೂರ್ಣತೆ ತಂದುಕೊಡುವ ಕೆಲಸಗಳಲ್ಲಿ ಮಗ್ನರಾದಾಗ ನಮ್ಮ ಬಗ್ಗೆ ನಮಗೇ ಇರುವ ಸೌಹಾರ್ದ, ಸ್ನೇಹ ಭಾವಗಳು ಚಿಗುರೊಡೆದು ನಮ್ಮೊಳಗಿನ ಸ್ವ-ಸಾಂತ್ವನದ ಶಕ್ತಿಯನ್ನು ಜಾಗೃತವಾಗಿಸುತ್ತದೆ. ಸ್ವ-ಸಾಂತ್ವನ ಸುಖನಿದ್ರೆಗೆ ಅವಶ್ಯವಾಗಿ ಬೇಕಾದ್ದು.

ಏಕತಾನತೆ, ಮಾಡಿದ್ದನ್ನೇ ಮಾಡಿ ಮಾಡಿ ದಣಿಯುವುದು, ದೇಹ, ಬುದ್ಧಿ, ಮನಸ್ಸುಗಳನ್ನು ಅಷ್ಟೇನೂ ಪ್ರಚೋದಿಸದೇ ಇರುವ, ಭಾವೋದ್ರಿಕ್ತಗೊಳಿಸದ ದಿನನಿತ್ಯದ ಸಾಧಾರಣ ಕೆಲಸಗಳಲ್ಲಿ, ಸಂದರ್ಭಗಳಲ್ಲಿ ಭಾಗವಹಿಸುವುದು ನಿದ್ರೆಗೆ ಸಹಕಾರಿ. ಪ್ರತಿಕ್ಷಣವೂ ಮನೋರಂಜನೆ ಮತ್ತು ಅತಿಶಯವಾದ ಅಪರೂಪದ ಅನುಭವಗಳನ್ನು ಬಯಸುವ ಮನಃಸ್ಥಿತಿ ನಮ್ಮನ್ನು ಅತಿ ಪ್ರಚೋದನೆಗೊಳಪಡಿಸುವ ಪರಿಸರದಲ್ಲಿರಲು ಒತ್ತಾಯ ಮಾಡುತ್ತದೆ. ಅತಿಯಾದ ಸಾಮಾಜಿಕ ಮಾಧ್ಯಮ ಬಳಕೆ, ಅತಿ ಬೆಳಕು, ಜೋರಾದ ಸಂಗೀತ, ಅತಿ ಓಡಾಟ, ಭಾವಾವೇಶದ ಮಾತುಕತೆ - ಎಲ್ಲವೂ ನಿದ್ರೆಗೆ ಭಂಗ ತಂದೀತು.

ಪುನರಾವರ್ತನೆಯ ಮೂಲಕ ಮನಸ್ಸನ್ನು ಶಾಂತಗೊಳಿಸಿ ನಿದ್ರೆಗೆ ಜಾರಿಸುವಂತಹ ಕೆಲಸಗಳಾದ ಹೂವಿನ ಚಿತ್ತಾರಗಳ ಕಸೂತಿ ಮಾಡುವುದು, ಚುಕ್ಕಿರಂಗೋಲಿಗಳನ್ನು ಕಾಗದದ ಮೇಲೆ ಅಭ್ಯಾಸ ಮಾಡುವುದು, ಡೂಡ್ಲಿಂಗ್, ಝೆನ್‌ಟ್ಯಾಂಗ್ಲಿಂಗ್ (doodling, zentangling), ಝೆನ್ ಸಂಗೀತವನ್ನು ಆಲಿಸುವುದು ಮುಂತಾದವನ್ನು ನಿದ್ರೆಗೆ ಮೊದಲೂ, ಅರ್ಧ ನಿದ್ರೆಯಲ್ಲಿ ಎಚ್ಚರವಾಗಿ ನಿದ್ರೆ ಬಾರದಿದ್ದಾಗಲೂ ಮಾಡುವುದು ಸುಖನಿದ್ರೆಗೆ ಪೋಷಕವಾಗುತ್ತದೆ. ❖



ಹೃದಯದ ಕಾಳಜಿ ಹೀಗಿರಲಿ

• ಡಾ.ವಿಜಯಲಕ್ಷ್ಮಿ ಪಿ.

ಗರ್ಭದಲ್ಲಿ ಜೀವ ತಳೆದಾಗಿನಿಂದ ಮರಣದವರೆಗೂ ವ್ಯಕ್ತಿಯ ಅಸ್ತಿತ್ವಕ್ಕೆ ಅಗತ್ಯವಾದ ಅಂಗವೆಂದರೆ ಅದು ಹೃದಯ. ಭಾವನಾತ್ಮಕವಾಗಿಯೂ ಹೃದಯಕ್ಕೆ ವಿಶಿಷ್ಟವಾದ ಸ್ಥಾನವಿದೆ. ಶರೀರಕ್ಕೂ ಮನಸ್ಸಿಗೂ ಅಗತ್ಯವೆನಿಸಿದ ಹೃದಯದ ಆರೋಗ್ಯ ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ಮನುಷ್ಯನ ಆದ್ಯ ಕರ್ತವ್ಯ.

ಹೃದಯವು ದೇಹಕ್ಕೆ ತಾಯಿ ಇದ್ದಂತೆ. ತಾಯಿ ಇಡೀ ಕುಟುಂಬದ ಜವಾಬ್ದಾರಿಯನ್ನು ಹೊರುವಂತೆ, ಇಡೀ ದೇಹದಲ್ಲಿರುವ ಸಕಲ ಅಂಗಾಂಗಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಹೃದಯವು ಹೊರುತ್ತದೆ. ಇದರ ಗಾತ್ರ ಹಿಡಿಯಷ್ಟಾದರೂ ಕೆಲಸ ಪರ್ವತದಷ್ಟು.

ಆತ್ಮವು ಹೃದಯದ ತುತ್ತತುದಿಯಲ್ಲಿ ಆಶ್ರಯ ಪಡೆದಿದೆ ಎನ್ನುತ್ತದೆ ಮಹಾನಾರಾಯಣೋಪನಿಷತ್. ಹೃದಯದ ಕಾರ್ಯದ ಪ್ರತಿಬಿಂಬ ಕಾಣುವುದು ಇಂದ್ರಿಯಗಳಲ್ಲಿ. ಕಣ್ಣಿನ ಹೊಳಪು, ನಾಲಗೆಯ ರುಚಿ , ಚರ್ಮದ ಕಾಂತಿ ಎಲ್ಲವೂ ಹೃದಯದ ಕ್ರಿಯೆಯನ್ನು ಅವಲಂಬಿಸಿವೆ. ಹಾಗಾಗಿ ಆಯುರ್ವೇದದಲ್ಲಿ ಹೃದಯಕ್ಕೆ ಬಹಳ ಮಹತ್ವವನ್ನು ನೀಡಿ 'ಮಹತ್' ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ.

ದೇಹದಲ್ಲಿರುವ ಪ್ರಮುಖವಾದ ಮರ್ಮಗಳ ಪೈಕಿ, ಎಲ್ಲಾ ಮರ್ಮಗಳಿಗೂ ಬಲ ಕೊಡುವ ಪ್ರಧಾನ ಮರ್ಮ ಹೃದಯ. ಹೃದಯಕ್ಕೆ ತೊಂದರೆಯಾದರೆ, ಇತರ ಎಲ್ಲಾ ಅಂಗಗಳಿಗೂ ಒಂದಲ್ಲಾ ಒಂದು ಬಗೆಯಲ್ಲಿ ತೊಂದರೆಗಳು ಉಂಟಾಗಬಹುದು.

ಆಹಾರಕ್ಕೆ ರುಚಿ ಒದಗಿಸುವ ಆರು ರಸಗಳ ಪೈಕಿ ಯಾವುದೇ ಒಂದು ರಸದ ಅಧಿಕವಾದ ಸೇವನೆಯು ಹೃದಯದಲ್ಲಿ ವಿಕೃತಿಯನ್ನು ಉತ್ಪತ್ತಿ ಮಾಡುತ್ತದೆ. ಅತಿಯಾದ ಉಪ್ಪು, ಹುಳಿಗಳ ಸೇವನೆಯು ಹೃದಯದ ಮಾಂಸಖಂಡ ಮತ್ತು ರಕ್ತನಾಳದ ಮಾಂಸಖಂಡಗಳನ್ನು ಶಿಥಿಲಗೊಳಿಸಬಹುದು. ಅತಿಯಾದ ಕಹಿ ಪದಾರ್ಥಗಳಾದ, ಕಹಿಬೇವು, ಹಾಗಲಕಾಯಿ, ಒಗರಾದ ಅಡಿಕೆಯ ಸೇವನೆಯಿಂದಲೂ ತೊಂದರೆಯಾಗುತ್ತದೆ. ಅತಿಯಾಗಿ ಸಿಹಿಯನ್ನು ಸೇವನೆ ಮಾಡುವುದರಿಂದ ಹೃದಯದ ರಕ್ತನಾಳಗಳು ಹಿಗ್ಗಿ, ಮೇದಸ್ಸಿನ ಶೇಖರಣೆಗೆ ಕಾರಣವಾಗಬಹುದು. ಖಾರವನ್ನು ಅತಿಯಾಗಿ ಸೇವಿಸಿದರೆ ರಕ್ತನಾಳಗಳಲ್ಲಿ ಊರಿಯೂತ ಉಂಟಾಗಬಹುದು. ಇದರಿಂದಾಗಿ ಹೃದಯಕ್ಕೆ ರಕ್ತ ಪರಿಚಲನೆ ಸಮರ್ಪಕವಾಗಿ ಆಗದೇ ಹೃದ್ರೋಗ ಉಂಟಾಗಬಹುದು.

ಸಮತೋಲಿತ ಆಹಾರಸೇವನೆ ಎಂದರೆ ಯಾವುದೇ ಒಂದು ರುಚಿಯು ಅತಿ ಹೆಚ್ಚಾಗದಂತೆ ಹಿತವಾಗಿ, ಮಿತವಾಗಿ, ಒಂದಕ್ಕೊಂದು ಪೂರಕವಾಗಿರುವಂತೆ ತಯಾರಿಸಿರುವ ಆಹಾರವನ್ನು ಸೇವಿಸುವುದು. ಜಿಹ್ವಾಚಾಪಲ್ಯಕ್ಕೆ ಆಹಾರ ಸೇವಿಸುವುದು, ಜೀರ್ಣವಾಗುವ ಮೊದಲೇ ಆಹಾರ ಸೇವಿಸುವುದು, ದೇಹಕ್ಕೆ ಒಗ್ಗದ ಆಹಾರ ಸೇವಿಸುವುದು, ಮೊಟ್ಟೆ ಅಥವಾ ಮಾಂಸ ಮತ್ತು ಹಾಲು ಅಥವಾ ಹಾಲಿನ ಪದಾರ್ಥಗಳನ್ನು ಒಟ್ಟಾಗಿ ಸೇವಿಸುವುದು, ಮೀನಿನ ಪದಾರ್ಥದೊಡನೆ ಹಾಲನ್ನು ಸೇವಿಸುವುದು, ಹಣ್ಣು – ಹಾಲು, ಹಾಲು – ಮೊಸರು, ಹಾಲು – ಉಪ್ಪು ಇವುಗಳನ್ನು ಬೆರೆಸಿ ನಿರಂತರವಾಗಿ ಸೇವಿಸುವುದರಿಂದಲೂ ಹೃದ್ರೋಗ ಉಂಟಾಗಬಹುದು. ಇಂಥ ವಿರುದ್ಧ ಆಹಾರದ ಸೇವನೆಯನ್ನು ಮೊದಲು ಬಿಡಬೇಕು.

ಹೃದ್ರೋಗಿಗಳು ಪ್ರಧಾನವಾಗಿ ಹಾಲು, ಮೊಸರು, ಬೆಲ್ಲ ಮತ್ತು ಮಾಂಸಾಹಾರ, ಕ್ಷಾರೀಯ ಪಾನಗಳು, ಅತಿ ತಂಪಾದ ಆಹಾರಸೇವನೆ, ಮದ್ಯಪಾನ, ಧೂಮಪಾನಗಳನ್ನು ವರ್ಜಿಸಬೇಕು. ಮಲ – ಮೂತ್ರ ವಿಸರ್ಜನೆಯನ್ನು ತಡೆ ಹಿಡಿಯುವುದು ಅಥವಾ ಮುಂದೂಡುವುದು, ತೇಗು, ವಾಂತಿ ಬಂದಾಗ ತಡೆದುಕೊಳ್ಳುವುದರಿಂದಲೂ ಹೃದ್ರೋಗ ಸಮಸ್ಯೆ ಹೆಚ್ಚಬಹುದು.

'ನಿತ್ಯಾಭ್ಯಂಗ' ಎಂದರೆ ನಿತ್ಯವೂ ಮೈಗೆ ಎಣ್ಣೆಯನ್ನು ಹಚ್ಚಿ ಸ್ನಾನ ಮಾಡುವುದು, ನಿತ್ಯವೂ ಮೈ ಬೆವರುವಷ್ಟು ವ್ಯಾಯಾಮ, ನಡಿಗೆಯ ಅಭ್ಯಾಸಗಳಿಂದ ಹೃದಯದ ಮಾಂಸಖಂಡಗಳು ಬಲಗೊಂಡು ಮುಪ್ಪು ಅಥವಾ ಮರಣದವರೆಗೂ ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ರಾತ್ರಿ ಬೇಗ ಮಲಗಿ ಬೆಳಿಗ್ಗೆ ಸೂರ್ಯೋದಯಕ್ಕಿಂತ ಮುಕ್ಕಾಲು ಗಂಟೆ ಮೊದಲು ಏಳುವುದರಿಂದ ಹೃದ್ರೋಗವನ್ನು ತಡೆಗಟ್ಟಬಹುದು. ಬೇಸಿಗೆಯಲ್ಲಿ ನೀರಿನಂಶ ಹೆಚ್ಚಿರುವ ಆಹಾರ ಸೇವನೆ ಹಿತವಾದರೆ, ಮಳೆಗಾಲದಲ್ಲಿ ಕಾಳು, ಗಡ್ಡೆ–ಗೆಣಸುಗಳ ಉಪಯೋಗ ಹಿತಕರ. ಅಮೃತಬಳ್ಳಿಯ ಎಳೆ ಎಲೆಗಳ ಸೇವನೆ ಅಥವಾ ಅದರಿಂದ ಪಲ್ಯ ತಯಾರಿಸಿ ಸೇವಿಸುವುದರಿಂದ ಹೃದ್ರೋಗವನ್ನು ತಡೆಗಟ್ಟಬಹುದು.

ಚಿಂತೆ ಮನುಷ್ಯನನ್ನು ಜೀವಂತವಾಗಿ ಸುಡುತ್ತದೆ ಎಂಬುದು ಪ್ರಸಿದ್ಧವಾದ ಮಾತು. ಅತಿಯಾಗಿ ಚಿಂತಿಸುವುದರಿಂದ, ಮನಸ್ಸಿಗೆ ಆಗುವ ಆಘಾತವು, ಹೃದಯದ ಮೇಲೆಯೂ ಪ್ರಭಾವ ಬೀರುತ್ತದೆ. ಅತಿಯಾದ, ಸಿಟ್ಟು, ದ್ವೇಷ, ವಿನಾಕಾರಣ ಶೋಕ, ಮಾನಸಿಕವಾಗಿ ಕೊರಗುವುದು, ಅಕಾಲಭೋಜನ, ಅತಿಯಾದ ಉಪವಾಸ ಹೃದಯದ ಆರೋಗ್ಯವನ್ನು ಹಾಳು ಮಾಡುತ್ತದೆ. ಮನಸ್ಸಿನ ಭಾವನೆಗಳನ್ನು ಸಮತೋಲನದಲ್ಲಿರಿಸಿ ಕೊಳ್ಳುವುದು ಹೃದಯದ ರಕ್ಷಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ನಿತ್ಯವೂ ಪ್ರಾಣಾಯಾಮವನ್ನು ಮಾಡುವುದರಿಂದ ಪುಪ್ಪುಸದ ಕಾರ್ಯಕ್ಷಮತೆಯ ಜೊತೆಗೆ, ಹೃದಯದ ಕಾರ್ಯಕ್ಷಮತೆಯೂ ಹೆಚ್ಚುತ್ತದೆ. ಇಂದ್ರಿಯಗಳ ಅತಿ ಉಪಯೋಗ , ಎಂದರೆ ನಿರಂತರ ಕಿವಿಗವಸುಗಳ (ear phone) ಬಳಕೆ, ಆಹಾರ ಸೇವಿಸುವಾಗ ಅತಿಯಾಗಿ ಮಾತನಾಡುವುದು, ಸಿಟ್ಟು ಮಾಡುವುದು, ದ್ವೇಷ, ಕ್ರೌರ್ಯ, ವಿಕೃತಿಯಿಂದ ಕೂಡಿರುವ ಚಲನಚಿತ್ರ, ಧಾರಾವಾಹಿಗಳ ವೀಕ್ಷಣೆಯಿಂದ ಮನಸ್ಸು ಹಾಗೂ ಹೃದಯ ಆರೋಗ್ಯದ ಮೇಲೆ ಪರಿಣಾಮ ಬೀರಬಲ್ಲವು.

ಸಕಾಲದಲ್ಲಿ, ಶುಚಿ, ರುಚಿಯಾದ, ಸ್ಥಳೀಯ ಹವಾಮಾನಕ್ಕೆ ಅನುಗುಣವಾದ ಆಹಾರವನ್ನು ಶಾಂತವಾಗಿ ಸೇವಿಸುವುದರಿಂದ ಹೃದಯದ ಆರೋಗ್ಯವನ್ನು ಕಾಪಾಡಿ ಕೊಳ್ಳಬಹುದು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ/ಸಿಇಟಿ ಪರೀಕ್ಷೆ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

28) n ದ ಯಾವುದೇ ಬೆಲೆಗೆ 6^n ಇದು ಸೊನ್ನೆಯಿಂದ ಕೊನೆಕೊಳ್ಳಬಹುದೇ ಪರೀಕ್ಷಿಸಿ. ಇಲ್ಲಿ n ಒಂದು ಸ್ವಾಭಾವಿಕ ಸಂಖ್ಯೆಯಾಗಿದೆ.

ಉತ್ತರ:–ಸೊನ್ನೆಯಿಂದ ಕೊನೆಗೊಳ್ಳುವ ಸಂಖ್ಯೆಗಳಿಗೆ ಉದಾ ಎಂದರೆ (ಅ) 10 (ಆ)100 ಮೊದಲಾದವು

10ರ ಅವಿಭಾಜ್ಯ ಅಪವರ್ತನ= 2 x 5

100ರ ಅವಿಭಾಜ್ಯ ಅಪವರ್ತನ= 2 x 2 x 5 x 5

ಸೊನ್ನೆಯಿಂದ ಕೊನೆಗೊಳ್ಳುವ ಸಂಖ್ಯೆಗಳ ಅವಿಭಾಜ್ಯ ಅಪವರ್ತನ 2 ಮತ್ತು 5 ಆದರೆ 2 x 3ಗಳು 6ರ ಅವಿಭಾಜ್ಯ ಅಪವರ್ತನಗಳಾಗಿವೆ ಆದರೆ ಇಲ್ಲಿ 5 ಇಲ್ಲ ಹೀಗಾಗಿ ಸಾಧ್ಯವಿಲ್ಲ

29) ಒಂದು ಬುಟ್ಟಿಯಲ್ಲಿ 36 ಮಾವಿನ ಹಣ್ಣುಗಳಿವೆ, ಅವುಗಳ ¼ ಭಾಗದಷ್ಟು ಹಣ್ಣುಗಳು ಕೊಳೆತಿವೆ ಮತ್ತು ಉಳಿದವು ಚೆನ್ನಾಗಿವೆ. ಬುಟ್ಟಿಯಿಂದ ಯಾದೃಚ್ಛಿಕವಾಗಿ ಒಂದು ಮಾವಿನ ಹಣ್ಣನ್ನು ಹೊರತೆಗೆದಾಗ ಅದು ಚೆನ್ನಾಗಿರುವ ಸಂಭವನೀಯತೆಯನ್ನು ಕಂಡು ಹಿಡಿಯಿರಿ.

ಉತ್ತರ:–

$n(S) - 36$

ಚೆನ್ನಾಗಿರುವ ಮಾವಿನ ಹಣ್ಣುಗಳ ಸಂಖ್ಯೆ $= \frac{3}{4} \times 36 - 27$

$n(A) = 27$


$\therefore \quad p(A) = \frac{n(A)}{n(S)}$

$p(A) - \frac{27}{36}$

$p(A) = \frac{3}{4}$

30) ಒಂದು ಸಮಾಂತರ ಚತುರ್ಭುಜದಲ್ಲಿ ವೃತ್ತವು ಅಂತಸ್ಥವಾದಾಗ ಸಮಾಂತರ ಚತುರ್ಭುಜವು ವಜ್ರಾಕೃತಿಯಾಗುತ್ತದೆ ಎಂದು ಸಾಧಿಸಿ.

ಪರಿಹಾರ:–



O ಕೇಂದ್ರವಿರುವ ವೃತ್ತಕ್ಕೆ ABCD ಚತುರ್ಭುಜವು ವೃತ್ತಪರಿಧಿಯಲ್ಲಿರುವ PQRS ಬಿಂದುಗಳಲ್ಲಿ ಸ್ಪರ್ಶಿಸುತ್ತದೆ. ಮತ್ತು ABCD ಚತುರ್ಭುಜವು ಸಮಾಂತರ ಚತುರ್ಭುಜವಾಗಿದೆ ಹೀಗಾಗಿಯೇ AB=CD ಮತ್ತು BC=AD.

ಮೇಲಿನ ಚಿತ್ರದಿಂದ (i) DR = DS (ii) BP = BQ (iii) CR = CQ (iv) AP = AS

D, B, C ಮತ್ತು A ಬಿಂದುಗಳ ಮೇಲಿನಿಂದ ವೃತ್ತಕ್ಕೆ ಸ್ಪರ್ಶಕವನ್ನು ಎಳೆಯಲಾಗಿದೆ

ಇವುಗಳನ್ನು ಕೂಡಿಸಿ

DR+BP+CR+AP = DS+BQ+CQ+AS

ಪುನರ್ ರಚಿಸಿ

(BP+AP)+(DR+CR) = (CQ+BQ)+(DS+AS)

ಪುನಃ ಪುನರ್ ರಚಿಸಿ

AB+CD = BC+AD

ಹೀಗಾಗಿ AB = CD ಮತ್ತು BC = AD

2AB = 2BC

∴ AB = BC

ಹೀಗಾಗಿ AB = BC = CD = DA,

ಆದ್ದರಿಂದ ABCD ಸಮಾಂತರಚತುರ್ಭುಜವು ವಜ್ರಾಕೃತಿಯಾಗುತ್ತದೆ

31) ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಪದಗಳ ಸಂಖ್ಯೆ ಮತ್ತು ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.

ಪರಿಹಾರ: ಇಲ್ಲಿ **a = 5** ***l* = 45** **S = 400**

ನಮಗೆ ಗೊತ್ತಿರುವಂತೆ

$$S = \frac{n}{2}[a + l]$$

$$400 = \frac{n}{2}[5 + 45]$$

$$400 = \frac{n}{2}[50]$$

$$400 = 25n$$

$$n = \frac{400}{25}$$

$$n = 16$$

ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಪದಗಳ ಸಂಖ್ಯೆ 16


ನಮಗೆ ಗೊತ್ತಿರುವಂತೆ

$$l = a + (n-1)d$$
$$45 = 5 + (16 - 1)d$$
$$45 - 5 = 15d$$
$$15d = 40$$
$$d = 40/15$$
$$d = 8/3$$

ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಸಾಮಾನ್ಯ ವ್ಯತ್ಯಾಸ = 8/3

32) ABCD ಯು ಒಂದು ತ್ರಾಪಿಜ್ಯ ಇದರಲ್ಲಿ $AB \parallel DC$ ಮತ್ತು ಕರ್ಣಗಳು ಪರಸ್ಪರ O ಬಿಂದುವಿನಲ್ಲಿ ಛೇದಿಸುತ್ತವೆ. ಆದರೆ $\frac{AO}{BO} = \frac{CO}{DO}$ ಎಂದು ತೋರಿಸಿ.

ಪರಿಹಾರ:



ABCD ಯು ಒಂದು ತ್ರಾಪಿಜ್ಯ ಇದರಲ್ಲಿ $AB \parallel DC$ ಮತ್ತು ಕರ್ಣಗಳು ಪರಸ್ಪರ O ಬಿಂದುವಿನಲ್ಲಿ ಛೇದಿಸುತ್ತವೆ. (ದತ್ತ)

ಸಾಧಿಸಿ:–, $\frac{AO}{BO} = \frac{CO}{DO}$

ರಚನೆ:– O ಬಿಂದುವಿನಿಂದ AD ಬಾಹುವಿಗೆ ಸಂಧಿಸುವಂತೆ OE ಎಳೆಯಿರಿ.

ಹೀಗಾಗಿ $EO \parallel DC \parallel AB$

ΔADC ದಲ್ಲಿ, $OE \parallel DC$

ಮೂಲ ಸಮಾನುಪಾತತೆಯ ಪ್ರಮೇಯದಂತೆ

$$\Rightarrow \frac{AE}{ED} = \frac{AO}{CO} \quad \ldots\ldots\ldots\ldots(1)$$

ΔABD ದಲ್ಲಿ $OE \parallel AB$

ಮೂಲ ಸಮಾನುಪಾತತೆಯ ಪ್ರಮೇಯದಂತೆ

$$\Rightarrow \frac{DE}{EA} = \frac{DO}{BO} \quad \ldots\ldots\ldots\ldots(2)$$

ಸಮೀಕರಣ 1 ಮತ್ತು 2 ರಿಂದ,

$$\Rightarrow \frac{AO}{CO} = \frac{BO}{DO}$$

$$\Rightarrow \frac{AO}{BO} = \frac{CO}{DO}$$

ಸಾಧಿಸಿದೆ

PHYSICS

17) To reduce the reasonant frequency in an LCR series circuit with a generator

a) the generator frequency should be reduced.
b) another capacitor should be added in parallel to the first.
c) the iron core of the inductor should be removed.
d) dielectric in the capacitor should be removed.

Ans:- b

18) Which of the following combinations should be selected for better turning of an LCR circuit used for communication?

a) $R = 20\Omega$, $L = 1.5$ H, $C = 35\mu F$
b) $R = 25\Omega$, $L = 2.5$ H, $C = 45\mu F$
c) $R = 15\Omega$, $L = 3.5$ H, $C = 30\mu F$
d) $R = 25\Omega$, $L = 1.5$ H, $C = 45\mu F$

Ans:-C

19) For a particle executing simple harmonic motion (SHM), at its mean position

a) Velocity is zero and acceleration is maximum
b) Velocity is maximum and acceleration is zero
c) Both velocity and acceleration are maximum
d) Both velocity and acceleration are zero


Ans:- b

Expl:-

$$V = \omega\sqrt{A^2 - y^2}$$

$$a = -\omega^2 y$$

20) A point positive charge is brought near an isolated conducting sphere as in the figures given below. The electric field is best given by



a) Fig (i) b) Fig (ii)
c) Fig (iii) d) Fig (iv)

Ans:- (a)

21) An inductor of reactance 1Ω, and a resistor of 2Ω, are connected in series to the terminals of a 6 V (rms) a.c. source. The power dissipated in the circuit is

a) 8 W b) 12 W
c) 14.4 W d) 18 W

Ans:-C

22) A car moves from A to B with a speed of 30 kmph and from B to A with a speed of 20 kmph. What is the average speed of the car?

(a) 50 kmph (b) 25 kmph
(c) 10 kmph (d) 24 kmph

Ans: (d):

Expln:- let *S* be distance between *A* and *B*.

Let t_1 be time taken by the car to move from *A* to *B* with speed v_1 and t_2 be time taken by the car to move from *B* to *A* with speed v_2. Then

$$t_1 = \frac{S}{v_1} \text{ and } t_2 = \frac{S}{v_2}$$

Average speed of the car

$$v_{av} = \frac{\text{Total distance travelled}}{\text{Total time taken}} = \frac{2S}{t_1 + t_2}$$

$$= \frac{2S}{\frac{S}{v_1} + \frac{S}{v_2}} = \frac{2v_1v_2}{v_1 + v_2}$$

Here, $v_1 = 30$ kmph, $v_2 = 20$ kmph

$$\therefore v_{av} = \frac{2 \times 30 \times 20}{30 + 20} = 24 \text{ kmph}$$

23) A motor-cyclist moving towards a huge cliff with a speed of 18 kmh^{-1}, blows a horn of source frequency 325 Hz. If the speed of the sound in air is 330 ms^{-1}, the number of beats heard by him is

(a) 5 (b) 4
(c) 10 (d) 7

Ans:-A

Expln:-

$$\Delta f = f\left(\frac{v_s}{v - v_s}\right) (v_o = v_s)$$

$$\Delta f = 325\left(\frac{5}{330 - 5}\right) = 5$$

24) The output of a step-down transformer is measured to be 24 V when connected to a 12 watt light bulb. The value of the peak current is

a) $1\sqrt{2}$ A b) $\sqrt{2}$ A
c) 2 A d) $2\sqrt{2}$ A

Ans:-a

25) One requires 11 eV of energy to dissociate a carbon monoxide molecule into carbon and oxygen atoms. The minimum frequency of the appropriate electromagnetic radiation to achieve the dissociation lies in.

a) visible region b) infrared region
c) ultraviolet region d) microwave region

Ans:C

26) In a permanent magnet at room temperature

a) Domains are all perfectly aligned.
b) Magnetic moment of each molecule is zero.
c) The individual molecules have non-zero magnetic moment which are all perfectly aligned.
d) Domains are partially aligned.

Ans: a

ಪಶ್ಚಿಮ ಬಂಗಾಳ: ಅಧಿಕಾರಿಗಳ ವರ್ಗ

ಚುನಾವಣೆ ಘೋಷಣೆ ಬೆನ್ನಲ್ಲೇ ಆಯೋಗದಿಂದ ಕ್ರಮ • ವಿಪಕ್ಷಗಳ ಆಕ್ಷೇಪ

ಕೋಲ್ಕತ್ತ/ ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ದಿನಾಂಕ ಘೋಷಣೆಯಾದ ಬೆನ್ನಲ್ಲೇ, ಮುಖ್ಯ ಕಾರ್ಯದರ್ಶಿ, ಡಿಜಿಪಿ ಸೇರಿದಂತೆ ರಾಜ್ಯದ ಉನ್ನತ ಅಧಿಕಾರಿಗಳನ್ನು ಚುನಾವಣಾ ಆಯೋಗ ವರ್ಗಾವಣೆ ಮಾಡಿದೆ.

ಭಾನುವಾರ ವಿಧಾನಸಭೆ ಚುನಾವಣೆ ದಿನಾಂಕ ಘೋಷಣೆ ಮಾಡಲಾಗಿತ್ತು. ಇದಾದ ಕೆಲವೇ ಗಂಟೆಗಳಲ್ಲಿ ವರ್ಗಾವಣೆ ಆದೇಶ ಹೊರಬಿದ್ದಿದೆ.

ಭಾನುವಾರ ಸಂಜೆ ಪ್ರಕಟಿಸಿದ ಆದೇಶದಲ್ಲಿ, ಮುಖ್ಯ ಕಾರ್ಯದರ್ಶಿ ನಂದಿನಿ ಚಕ್ರವರ್ತಿ ಮತ್ತು ಗೃಹ ಕಾರ್ಯದರ್ಶಿ ಜಗದೀಶ್ ಪ್ರಸಾದ್ ಮೀನಾ ಅವರನ್ನು ವರ್ಗಾವಣೆ ಮಾಡಲಾಗಿತ್ತು. ಸೋಮವಾರ ಹೊರಡಿಸಿದ ಮತ್ತೊಂದು ಆದೇಶದಲ್ಲಿ, ರಾಜ್ಯದ ಡಿಜಿಪಿ ಪಿಯೂಷ್ ಪಾಂಡೆ ಮತ್ತು ಕೋಲ್ಕತ್ತ ಪೊಲೀಸ್ ಆಯುಕ್ತ (ಸಿಪಿ) ಸುಪ್ರತಿಮ್ ಸರ್ಕಾರ್ ಸೇರಿದಂತೆ ನಾಲ್ವರು ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ.

1993ನೇ ಬ್ಯಾಚ್‌ನ ಐಎಎಸ್ ಅಧಿಕಾರಿ, ಉತ್ತರ ಬಂಗಾಳ ಅಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ದುಷ್ಯಂತ್ ನಾರಿಯಾಲಾ ಅವರನ್ನು ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

1997ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಸಂಘಮಿತ್ರಾ ಘೋಷ್ ಅವರನ್ನು ಗೃಹ ಕಾರ್ಯದರ್ಶಿಯಾಗಿ ನೇಮಕ ಮಾಡಿ ಆಯೋಗ ಆದೇಶ ಹೊರಡಿಸಿದೆ.

ಹಿರಿಯ ಐಪಿಎಸ್ ಅಧಿಕಾರಿ ಸಿದ್ಧನಾಥ್ ಗುಪ್ತಾ ಅವರನ್ನು ಪೊಲೀಸ್ ಮಹಾ ನಿರ್ದೇಶಕರಾಗಿ (ಡಿಜಿಪಿ) ಮತ್ತು ನೂತನ ಪೊಲೀಸ್ ಆಯುಕ್ತರಾಗಿ ಅಜಯ್ ಕುಮಾರ್ ನಂದ್ ಅವರನ್ನು ನೇಮಿಸಿದೆ.

ಎಡಿಜಿ (ಕಾನೂನು ಮತ್ತು ಸುವ್ಯವಸ್ಥೆ) ವಿನೀತ್ ಗೋಯಲ್ ಅವರ ಸ್ಥಾನಕ್ಕೆ ಅಜಯ್ ಮುಕುಂದ್ ರಾನಡೆ (ಐಪಿಎಸ್–1995) ಅವರನ್ನು ಹಾಗೂ ಡಿಜಿ (ಸುಧಾರಣಾ ಸೇವೆಗಳು) ಆಗಿ ನಟರಾಜನ್ ರಮೇಶ್ ಬಾಬು ಅವರನ್ನು ನೇಮಕ ಮಾಡಿದೆ.

ತಕ್ಷಣದಿಂದಲೇ ಈ ನಿರ್ದೇಶನಗಳನ್ನು ಅನುಷ್ಠಾನಗೊಳಿಸಬೇಕು ಮತ್ತು ಸೋಮವಾರ ಮಧ್ಯಾಹ್ನ 3 ಗಂಟೆಯ ಒಳಗಾಗಿ ಅಧಿಕಾರಿಗಳು ನೂತನ ಜವಾಬ್ದಾರಿಯನ್ನು ವಹಿಸಿಕೊಂಡು ವರದಿ ಸಲ್ಲಿಸಬೇಕು ಎಂದು ಆಯೋಗ ಸೂಚಿಸಿದೆ.

ಚುನಾವಣೆ ಮುಗಿಯುವವರೆಗೂ ವರ್ಗಾವಣೆಗೊಂಡ ಅಧಿಕಾರಿಗಳನ್ನು ಯಾವುದೇ ಚುನಾವಣಾ ಸಂಬಂಧಿತ ಹುದ್ದೆಗಳಿಗೆ ನೇಮಕ ಮಾಡಬಾರದು ಎಂದೂ ಅದು ತಿಳಿಸಿದೆ.

'ಪಶ್ಚಿಮ ಬಂಗಾಳದಲ್ಲಿ ಶಾಂತಿಯುತ ಚುನಾವಣೆ ನಡೆಸುವುದಾಗಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಭರವಸೆ ನೀಡಿದ್ದಾರೆ. ಹೀಗಾಗಿ ಡಿಜಿಪಿ, ಸಿಪಿ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಜೆಪಿ ಅಧಿಕಾರದಲ್ಲಿ ಇಲ್ಲದ ರಾಜ್ಯಗಳ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ಬಿಜೆಪಿ ಅಧಿಕಾರದಲ್ಲಿರುವ ಉತ್ತರ ಪ್ರದೇಶದಲ್ಲಿ ಚುನಾವಣೆ ಸಂದರ್ಭದಲ್ಲಿ ಏಕೆ ಇಂಥ ಕ್ರಮ ಕೈಗೊಳ್ಳಲಿಲ್ಲ

ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

ಮಮತಾ ಸರ್ಕಾರದಿಂದ ಮೂಲೆಗುಂಪಾಗಿದ್ದ ಅಧಿಕಾರಿಗಳನ್ನು ಮತ್ತೆ ವಾಪಸ್ ಕರೆತರುವುದಕ್ಕೆ ಸಂತಸವಾಗಿದೆ. ಈ ಎಲ್ಲ ಅಧಿಕಾರಿಗಳು ಮುಕ್ತ, ನ್ಯಾಯಸಮ್ಮತ ಚುನಾವಣೆಯ ಉಸ್ತುವಾರಿ ವಹಿಸಲಿದ್ದಾರೆ

ಸುವೇಂದು ಅಧಿಕಾರಿ, ವಿಧಾನಸಭೆಯ ವಿರೋಧ ಪಕ್ಷದ ನಾಯಕ



ಎಲ್‌ಪಿಜಿ ಬಿಕ್ಕಟ್ಟನ್ನು ವಿರೋಧಿಸಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸೋಮವಾರ ಕೋಲ್ಕತ್ತದಲ್ಲಿ ಪ್ರತಿಭಟನಾ ರ‍್ಯಾಲಿ ನಡೆಸಿದರು –ಪಿಟಿಐ ಚಿತ್ರ

ರಾಜಕೀಯ ವಾಕ್ಸಮರ

ಆಯೋಗವು ಪ್ರಮುಖ ಅಧಿಕಾರಿಗಳನ್ನು ವರ್ಗಾವಣೆ ಮಾಡಿರುವುದು ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ.

'ಆಯೋಗವು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯ ಅಣತಿಯಂತೆ ಕೆಲಸ ಮಾಡುತ್ತಿದೆ' ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

'ವಿಪಕ್ಷಗಳು ಸಾಂವಿಧಾನಿಕ ಸಂಸ್ಥೆಯ ವಿರುದ್ಧ ಅಪಪ್ರಚಾರ ಮಾಡುತ್ತಿವೆ' ಎಂದು ಬಿಜೆಪಿ ಪ್ರತ್ಯುತ್ತರ ನೀಡಿದೆ.

ಟಿಎಂಸಿ ಸಂಸದ ಸೌಗತಾ ರಾಯ್ ಅವರು, 'ಆಯೋಗದ ನಡೆಯು ತಪ್ಪಾಗಿದೆ ಮತ್ತು ಇದು ಪಶ್ಚಿಮ ಬಂಗಾಳದ ವಿರುದ್ಧವಾಗಿದೆ' ಎಂದು ಕಿಡಿಕಾರಿದ್ದಾರೆ.

ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರು, 'ಸಾಂವಿಧಾನಿಕ ಸಂಸ್ಥೆಗಳು ಪ್ರಜಾಪ್ರಭುತ್ವದ ಶಕ್ತಿ. ವಿರೋಧ ಪಕ್ಷಗಳು ಅವುಗಳನ್ನು ದುರ್ಬಲಗೊಳಿಸಲು ಯತ್ನಿಸುತ್ತಿವೆ' ಎಂದು ದೂರಿದ್ದಾರೆ.

ಮಮತಾ ಬದಲಿಸಲು ಸಾಧ್ಯವಿಲ್ಲ: ಟಿಎಂಸಿ

ಚುನಾವಣೆಯಲ್ಲಿ ಪ್ರಜಾಸತ್ತಾತ್ಮಕ ಹಾದಿಯಲ್ಲಿ ಗೆಲುವು ಸಾಧಿಸಲು ಅಸಾಧ್ಯ ಎಂದು ತಿಳಿದ ಬಿಜೆಪಿಯು ಆತಂಕದಿಂದ ಈ ಮಾರ್ಗ ಹಿಡಿದಿದೆ ಎಂದು ಟಿಎಂಸಿ ಆರೋಪಿಸಿದೆ.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಟಿಎಂಸಿ ವಕ್ತಾರ ಕುನಾಲ್ ಘೋಷ್, 'ಬಂಗಾಳ ಮುಖ್ಯಮಂತ್ರಿ ಮತ್ತು ರಾಜ್ಯದ ಜನರ ನಡುವಣ ಬಾಂಧವ್ಯವನ್ನು ಕುಗ್ಗಿಸುವ ಬಿಜೆಪಿ ಯತ್ನವು ವಿಫಲವಾಗಲಿದೆ' ಎಂದರು.

'ಮಮತಾ ಬ್ಯಾನರ್ಜಿ ಅವರನ್ನು ಬದಲಿಸಲು ನಿಮ್ಮಿಂದ ಸಾಧ್ಯವಿಲ್ಲ. ಅವರು ಭಾರತದ ಹೆಣ್ಣು ಹುಲಿ' ಎಂದು ಹೇಳಿದರು.

ಪ್ರಚಾರಕ್ಕೆ ಡಿಕೆಶಿ, ತೇಜಸ್ವಿ ಸೂರ್ಯ

ಅಸ್ಸಾಂ: ಕಾವು ಹೆಚ್ಚಿಸಲಿರುವ ಕರ್ನಾಟಕದ ರಾಜಕಾರಣಿಗಳು

• ಸಮೀರ್ ಕರ್ಮಾಕರ್

ಗುವಾಹಟಿ: ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ಈ ಬಾರಿ ಬಿಜೆಪಿ ಮತ್ತು ಕಾಂಗ್ರೆಸ್‌ಅನ್ನು ಅಧಿಕಾರಕ್ಕೆ ತರಲು ಕರ್ನಾಟಕದ ರಾಜಕಾರಣಿಗಳು ಪ್ರಯತ್ನಿಸಲಿದ್ದಾರೆ.



ಡಿ.ಕೆ. ಶಿವಕುಮಾರ್

ಏಪ್ರಿಲ್ 9ರಂದು ನಡೆಯುವ ಚುನಾವಣೆಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಕಾಂಗ್ರೆಸ್ ಪಕ್ಷವು ಕೇಂದ್ರದ ವೀಕ್ಷಕರನ್ನಾಗಿ ನೇಮಕ ಮಾಡಿದೆ. ಮತ್ತೊಂದೆಡೆ, ಬಿಜೆಪಿಯು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರಿಗೆ ಹೆಚ್ಚಿನ ಜವಾಬ್ದಾರಿ ನೀಡಿದೆ.

ಡಿ.ಕೆ.ಶಿವಕುಮಾರ್ ಅವರು ಈಚೆಗೆ ಈಶಾನ್ಯ ರಾಜ್ಯಕ್ಕೆ ಭೇಟಿ ನೀಡಿದ್ದಾಗ, 'ಅಸ್ಸಾಂನಲ್ಲಿ ಬದಲಾವಣೆಯ ಪರ ಬಲವಾದ ಗಾಳಿ ಬೀಸುತ್ತಿದೆ' ಎಂದು ಹೇಳಿದ್ದರು. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಮಾದರಿಯ ಬಗ್ಗೆ ಹೆಚ್ಚು ಒತ್ತು ನೀಡಿ ಮಾತನಾಡಿದ್ದರು. ಗೌರವ್ ಗೊಗೊಯ್ ನೇತೃತ್ವದಲ್ಲಿ ಪಕ್ಷವು ಅಧಿಕಾರಕ್ಕೆ ಬಂದರೆ ಕರ್ನಾಟಕದಲ್ಲಿರುವಂತೆಯೇ ಹೊಸ ಅಭಿವೃದ್ಧಿ ಮಾದರಿಯನ್ನು ಜಾರಿಗೆ ತರುವುದಾಗಿ ಅಸ್ಸಾಂನ ಕಾಂಗ್ರೆಸ್ ನಾಯಕರು ಭರವಸೆ ನೀಡಿದ್ದಾರೆ.

ತರುಣ್ ಗೊಗೊಯ್ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಸ್ಸಾಂನಲ್ಲಿ 15 ವರ್ಷ ಅಧಿಕಾರದಲ್ಲಿತ್ತು. 2016ರಲ್ಲಿ ಸರ್ಬಾನಂದ ಸೋನೊವಾಲ್ ನೇತೃತ್ವದಲ್ಲಿ ಬಿಜೆಪಿ ತನ್ನ ಮೊದಲ ಸರ್ಕಾರ ರಚಿಸಿತು. 2021ರಲ್ಲಿ ಬಿಜೆಪಿಯು ಸೋನೊವಾಲ್ ಅವರ ಸ್ಥಾನಕ್ಕೆ ಹಿಮಂತ ಬಿಸ್ವಾ ಶರ್ಮಾ ಅವರನ್ನು ನೇಮಿಸಿತು.

ಹಿಮಂತ ನೇತೃತ್ವದಲ್ಲಿ ಮೂರನೇ ಅವಧಿಗೆ ಸರ್ಕಾರ ರಚಿಸುವ ಗುರಿಯನ್ನು ಬಿಜೆಪಿ ಹೊಂದಿದೆ. ಮತ್ತೆ ಅಧಿಕಾರಕ್ಕೇರುವ ಪ್ರಯತ್ನದಲ್ಲಿರುವ ಕಾಂಗ್ರೆಸ್ ಪಕ್ಷವು ತನ್ನ ಹೋರಾಟವನ್ನು ಮುನ್ನಡೆಸುವ ಜವಾಬ್ದಾರಿಯನ್ನು ತರುಣ್ ಗೊಗೊಯ್ ಅವರ ಪುತ್ರ ಗೌರವ್ ಅವರಿಗೆ ನೀಡಿದೆ.

'ಶಿವಕುಮಾರ್ ಅವರಿಗೆ ಅಸ್ಸಾಂನಲ್ಲಿ ಪ್ರಮುಖ ಜವಾಬ್ದಾರಿ ನೀಡುವ ಮೂಲಕ, ಪಕ್ಷವು ಕಾಂಗ್ರೆಸಿಗನ ಬದ್ಧತೆಯನ್ನು ಎತ್ತಿ ತೋರಿಸಲು ಬಯಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಭಿನ್ನಾಭಿಪ್ರಾಯಗಳಿದ್ದರೂ, ಶಿವಕುಮಾರ್ ಕಾಂಗ್ರೆಸ್‌ಗೆ ದ್ರೋಹ ಮಾಡಿಲ್ಲ. ಪಕ್ಷದ ಪರವಾಗಿ ದೃಢವಾಗಿ ನಿಂತಿದ್ದಾರೆ. ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಮಾದರಿಯನ್ನು ಎತ್ತಿ ತೋರಿಸುವುದು ಶಿವಕುಮಾರ್ ಅವರನ್ನು ವೀಕ್ಷಕರಾಗಿ ನೇಮಕ ಮಾಡಿದ್ದರ ಹಿಂದಿರುವ ಮತ್ತೊಂದು ಕಾರಣ' ಎಂದು ಅಸ್ಸಾಂನ ಕಾಂಗ್ರೆಸ್ ನಾಯಕರೊಬ್ಬರು ಹೇಳಿದ್ದಾರೆ.

ಚುನಾವಣಾ ಪ್ರಚಾರದ ಸಮಯದಲ್ಲಿ ಡಿ.ಕೆ.ಶಿವಕುಮಾರ್ ಮತ್ತು ತೇಜಸ್ವಿ ಸೂರ್ಯ ಅವರು ಹಲವು ಸಭೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಹಿಮಂತ ಶ್ಲಾಘಿಸಿದ ಸಂಸದ

ಗುವಾಹಟಿಯಲ್ಲಿ ಭಾನುವಾರ ಗೃಹ ಸಚಿವ ಅಮಿತ್ ಶಾ ಭಾಗವಹಿಸಿದ ಬಿಜೆಪಿಯ ಯುವ ನಾಯಕರ ಸಭೆಯಲ್ಲಿ ಮಾತನಾಡಿದ ತೇಜಸ್ವಿ ಸೂರ್ಯ ಅವರು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು 'ನುಸುಳುಕೋರರ' ವಿರುದ್ಧ ನಡೆಸುತ್ತಿರುವ ಹೋರಾಟವನ್ನು ಶ್ಲಾಘಿಸಿದ್ದಾರೆ.

ಅಸ್ಸಾಂ ಮತ್ತು ಬಂಗಾಳದ ಗಡಿಗಳನ್ನು ಅಕ್ರಮವಾಗಿ ದಾಟಿ ಬೆಂಗಳೂರಿಗೆ ಬರುವ ಬಾಂಗ್ಲಾದೇಶದ ನುಸುಳುಕೋರರಿಗೆ ಕರ್ನಾಟಕದ ಕಾಂಗ್ರೆಸ್ ಸರ್ಕಾರವು 'ರಕ್ಷಣೆ' ನೀಡುತ್ತಿದೆ ಎಂದು ಆರೋಪಿಸಿದ್ದಾರೆ.

ಬಂಗಾಳಿ ಮಾತನಾಡುವ ಮುಸ್ಲಿಮರನ್ನು ಅಸ್ಸಾಂನಿಂದ ಹೊರಹಾಕಲು ಹಿಮಂತ ನಡೆಸಿರುವ ಅಭಿಯಾನ ಮತ್ತು ಹೂಡಿಕೆ ಹೆಚ್ಚಿಸಲು ಹಾಗೂ ಉದ್ಯೋಗ ಸೃಷ್ಟಿಸಲು ನಡೆಸಿರುವ ಪ್ರಯತ್ನಗಳನ್ನು ಸೂರ್ಯ ಅವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಕೊಂಡಾಡಿದ್ದಾರೆ.



ತೇಜಸ್ವಿ ಸೂರ್ಯ

ರಾಜ್ಯ ರಾಜಕಾರಣಕ್ಕೆ –ಕನಿಮೊಳಿ ಇಂಗಿತ

ಪ್ರಜಾವಾಣಿ ವಾರ್ತೆ

ಚೆನ್ನೈ: ಡಿಎಂಕೆ ಪಕ್ಷದ ಪ್ರಮುಖ ಮಹಿಳಾ ನಾಯಕಿ, ಸಂಸದೆ ಕನಿಮೊಳಿ ಅವರು ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಈ ಮನವಿಯನ್ನು ಪಕ್ಷದ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರು ಒಪ್ಪಿಕೊಂಡರೆ, ರಾಜ್ಯ ರಾಜಕಾರಣದ ಶಕ್ತಿ ಕೇಂದ್ರದ ಸಮೀಕರಣವು ಬದಲಾಗಲಿದೆ.



ಕನಿಮೊಳಿ

ಸ್ಟಾಲಿನ್ ಅವರು ತಮ್ಮ ಉತ್ತರಾಧಿಕಾರಿಯಾಗಿ ಮಗ ಉದಯನಿಧಿ ಸ್ಟಾಲಿನ್ ಅವರನ್ನು ಮುಂದೆ ಮಾಡಿದ್ದಾರೆ. ಕನಿಮೊಳಿ ಅವರು ರಾಜ್ಯ ರಾಜಕಾರಣಕ್ಕೆ ಬರುವುದರಿಂದ ಸ್ಟಾಲಿನ್ ಅವರ ಈ ಯೋಜನೆಗೆ ಹೊಡೆತ ಬೀಳಲಿದೆ. ಪಕ್ಷದ ಮೂಲಗಳ ಪ್ರಕಾರ, ಕನಿಮೊಳಿ ಅವರು ತಮ್ಮ ಇಚ್ಛೆಯ ನಾಲ್ಕು ಕ್ಷೇತ್ರಗಳನ್ನೂ ಹೇಳಿದ್ದಾರೆ.

ರಾಜ್ಯ ರಾಜಕಾರಣಕ್ಕೆ ಬರುವಂತೆ ಪಕ್ಷದ ಮಹಿಳಾ ಘಟಕವು ಕನಿಮೊಳಿ ಅವರಿಗೆ ಕೆಲವು ವಾರಗಳ ಹಿಂದೆ ಮನವಿ ಮಾಡಿತ್ತು. ಕನಿಮೊಳಿ ಮಾತ್ರವಲ್ಲ ಪಕ್ಷದ ಹಲವು ಸಂಸದರು ಇದೇ ಇಂಗಿತವನ್ನು ವ್ಯಕ್ತಪಡಿಸುತ್ತಿದ್ದಾರೆ. 'ಪಕ್ಷವು ಸತತ ಎರಡನೇ ಬಾರಿಗೆ ತಮಿಳುನಾಡಿನಲ್ಲಿ ಅಧಿಕಾರಕ್ಕೆ ಬರಲಿದೆ. ನಾವು ಸಂಸತ್ತಿನಲ್ಲಿ ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ. ನಮ್ಮ ರಾಜಕಾರಣದ ಅನುಭವವನ್ನು ಸಂಸತ್ತಿನಲ್ಲಿ ಸೂಕ್ತರೀತಿಯಲ್ಲಿ ಬಳಸಿಕೊಳ್ಳುತ್ತಿಲ್ಲ' ಎಂದು ಹಲವು ಸಂಸದರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ ಎನ್ನಲಾಗಿದೆ.

'ತಾರತಮ್ಯ ಮಾಡದ ಸ್ಟಾಲಿನ್'

ಸಹೋದರಿ ಕನಿಮೊಳಿ ಮತ್ತು ಮಗ ಉದಯನಿಧಿ ಅವರ ಮಧ್ಯೆ ಸ್ಟಾಲಿನ್ ಅವರು ಎಂದಿಗೂ ತಾರತಮ್ಯ ಮಾಡಿಲ್ಲ ಎನ್ನುವುದು ಪಕ್ಷದ ಮೂಲಗಳ ಅಭಿಪ್ರಾಯ. ಇಬ್ಬರಿಗೂ ಸಮಾನ ಅವಕಾಶ ಮತ್ತು ಅಧಿಕಾರವನ್ನು ಸ್ಟಾಲಿನ್ ನೀಡಿದ್ದಾರೆ. ಜೊತೆಗೆ, ಉದಯನಿಧಿ ಅವರನ್ನು ಸಚಿವರನ್ನಾಗಿ ಮಾಡಿದ ಬಳಿಕ ಉಪಮುಖ್ಯಮಂತ್ರಿಯನ್ನಾಗಿ ಘೋಷಿಸಿದಾಗಲೂ ಕನಿಮೊಳಿ ಅವರು ಸಣ್ಣ ಅಪಸ್ವರವನ್ನೂ ಎತ್ತಿಲ್ಲ. ಪಕ್ಷದ ಎಲ್ಲ ಪ್ರಮುಖ ನಿರ್ಧಾರದಲ್ಲಿಯೂ ಸ್ಟಾಲಿನ್ ಅವರು ಕನಿಮೊಳಿ ಅವರ ಮಾತುಗಳನ್ನು ಕೇಳುತ್ತಾರೆ. ತಾವು ರಾಜ್ಯ ರಾಜಕಾರಣಕ್ಕೆ ಬರುವುದಕ್ಕೆ ಸಹೋದರ ಸ್ಟಾಲಿನ್ ಅವರ ಒಪ್ಪಿಗೆಯನ್ನು ಕನಿಮೊಳಿ ಅವರು ಕಾಯುತ್ತಿದ್ದಾರೆ.

ನಾಲ್ವರು ಎಸ್‌ಪಿಗಳ ವರ್ಗಾವಣೆ

ಚೆನ್ನೈ: ವಿಧಾನಸಭೆ ಚುನಾವಣೆಗೆ ದಿನಾಂಕ ನಿಗದಿಪಡಿಸಿ, ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ಮಾರನೇ ದಿನವೇ ಕೇಂದ್ರ ಚುನಾವಣಾ ಆಯೋಗ ಸೋಮವಾರ ತಮಿಳುನಾಡಿನ ನಾಲ್ವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ವರ್ಗಾವಣೆ ಮಾಡಿದೆ.

ಕರೂರು, ಈರೋಡ್, ನಾಗಪಟ್ಟಣಂ ಮತ್ತು ವಿರುಧುನಗರ್ ಜಿಲ್ಲೆಗಳ ಎಸ್‌ಪಿಗಳನ್ನು ವರ್ಗಾಯಿಸಲಾಗಿದೆ. ಕರೂರು ಎಸ್‌ಪಿ ಜೋಶ್ ತಂಗಯ್ಯ ಅವರ ಸ್ಥಾನಕ್ಕೆ ಹರಿಕೃಷ್ಣನ್ ಪ್ರಸಾದ್, ಈರೋಡ್ ಎಸ್‌ಪಿ ಎ.ಸುಜಾತ ಬದಲಿಗೆ ಡಿ.ವಿ.ಕಿರಣ್ ಶ್ರುತಿ ಅವರನ್ನು ನಿಯೋಜಿಸಲಾಗಿದೆ.

ನಾಗಪಟ್ಟಣಂ ಎಸ್‌ಪಿ ಕೆ.ಬಲ್ಲಾ ಅವರ ಸ್ಥಾನಕ್ಕೆ ಸುಜಿತ್ ಕುಮಾರ್, ವಿರುಧುನಗರ ಜಿಲ್ಲೆಯ ಎಸ್‌ಪಿ ಡಿ.ಕಣ್ಣನ್ ಅವರ ಸ್ಥಾನಕ್ಕೆ ಎನ್.ಶ್ರೀನಾಥ ಅವರನ್ನು ನಿಯೋಜಿಸಲಾಗಿದೆ.

'ಕರೂರು ಎಸ್‌ಪಿ ಮತ್ತು ಜಿಲ್ಲಾಧಿಕಾರಿಯನ್ನು ತೆರವು ಮಾಡದೇ ಜಿಲ್ಲೆಯಲ್ಲಿ ಪಾರದರ್ಶಕ ಚುನಾವಣೆ ಸಾಧ್ಯವಿಲ್ಲ' ಎಂದು ಬಿಜೆಪಿ ಮುಖಂಡ ಕೆ.ಅಣ್ಣಾಮಲೈ ಹೇಳಿಕೆ ನೀಡಿದ್ದರು. ಅದಾದ ಕೆಲ ಗಂಟೆಗಳಲ್ಲೇ ಆಯೋಗದ ನಿರ್ದೇಶನ ಹೊರಬಿದ್ದಿದೆ.

ಎರಡು ಕ್ಷೇತ್ರದಲ್ಲಿ ಸುವೇಂದು ಸ್ಪರ್ಧೆ

ನವದೆಹಲಿ/ ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ 144 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಜೆಪಿ ಸೋಮವಾರ ಬಿಡುಗಡೆ ಮಾಡಿದೆ.



ಸುವೇಂದು ಅಧಿಕಾರಿ

ನಂದಿಗ್ರಾಮ ಮತ್ತು ಮಮತಾ ಬ್ಯಾನರ್ಜಿ ಕ್ಷೇತ್ರವಾದ ಭವಾನಿಪುರದಿಂದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರನ್ನು ಕಣಕ್ಕಿಳಿಸಿದೆ. ಈ ಮೂಲಕ ಟಿಎಂಸಿ ಮುಖ್ಯಸ್ಥೆ ಮಮತಾ ಅವರಿಗೆ ನೇರವಾಗಿ ಸವಾಲೆಸೆದಿದೆ.

ನಂದಿಗ್ರಾಮವು 2007ರ ಭೂಸ್ವಾಧೀನ ವಿರೋಧಿ ಅಭಿಯಾನದ ಕೇಂದ್ರಬಿಂದುವಾಗಿದ್ದು, ಮಮತಾ ಬ್ಯಾನರ್ಜಿ ಅವರು ಅಧಿಕಾರಕ್ಕೆ ಬರಲು ಕಾರಣವಾಗಿತ್ತು. 2021ರಲ್ಲಿ ಈ ಕ್ಷೇತ್ರದಿಂದ ಮಮತಾ ಅವರನ್ನು ಸುವೇಂದು ಅವರು ಕೇವಲ 1,900 ಮತಗಳ ಅಂತರದಲ್ಲಿ ಪರಾಭವಗೊಳಿಸಿದ್ದರು.

ಭವಾನಿಪುರ ಕ್ಷೇತ್ರವು ಮಮತಾ ಬ್ಯಾನರ್ಜಿ ಅವರ ಭದ್ರಕೋಟೆಯಾಗಿದ್ದು, 2021ರ ಉಪಚುನಾವಣೆಯಲ್ಲಿ 58,000 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದರು.

ಮೊದಲ ಪಟ್ಟಿಯಲ್ಲಿ 41 ಹಾಲಿ ಶಾಸಕರಿಗೆ, ಮೂವರು ಮಾಜಿ ಶಾಸಕರಿಗೆ ಮತ್ತು ಇಬ್ಬರು ಮಾಜಿ ಸಂಸದರಿಗೆ ಟಿಕೆಟ್ ನೀಡಿದೆ. 11 ಕ್ಷೇತ್ರಗಳಲ್ಲಿ ಮಹಿಳೆಯರನ್ನು ಕಣಕ್ಕಿಳಿಸಿದೆ.

192 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದ ಎಡಪಕ್ಷಗಳು

ಕೋಲ್ಕತ್ತ, ಪಶ್ಚಿಮ ಬಂಗಾಳ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಎಡಪಕ್ಷಗಳು 192 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆಗೊಳಿಸಿವೆ. ನಿಕಟಪೂರ್ವ ರಾಜ್ಯಸಭಾ ಸಂಸದ ಬಿಕಾಶ್ ರಂಜನ್ ಭಟ್ಟಾಚಾರ್ಯ ಹಾಗೂ ಸಿಪಿಐ(ಎಂ) ಕೇಂದ್ರೀಯ ಸಮಿತಿ ಸದಸ್ಯೆ ಮೀನಾಕ್ಷಿ ಮುಖರ್ಜಿ ಅವರು ಮೊದಲ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಭಟ್ಟಾಚಾರ್ಯ ಅವರು ಕೋಲ್ಕತ್ತ ಹೊರವಲಯದಲ್ಲಿರುವ ಜಾಧವ್‌ಪುರ್ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲಿದ್ದು, ಪಕ್ಷದ ಯುವ ನಾಯಕಿ ಮುಖರ್ಜಿ ಅವರು ಹೂಗ್ಲಿ ಜಿಲ್ಲೆಯ ಉತ್ತರಪಾರಾ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ.

2021ರ ವಿಧಾನಸಭಾ ಚುನಾವಣೆಯಲ್ಲಿ ಮುಖರ್ಜಿ ಅವರು ನಂದಿಗ್ರಾಮ್ ಕ್ಷೇತ್ರದಿಂದ ಕಣಕ್ಕಿಳಿದಿದ್ದರು. ಬಿಜೆಪಿಯ ಸುವೇಂದು ಅಧಿಕಾರಿ ಗೆಲುವು ಪಡೆದರೆ, ತೃಣಮೂಲ ಕಾಂಗ್ರೆಸ್‌ನ ಮಮತಾ ಬ್ಯಾನರ್ಜಿ ಎರಡನೇ ಸ್ಥಾನ ಪಡೆದಿದ್ದರು.

ಕಾಳಿಗಂಜ್ ಕ್ಷೇತ್ರದಿಂದ ಶಬೀನಾ ಯಾಸ್ಮೀನ್ ಅವರನ್ನು ಕಣಕ್ಕಿಳಿಸಿದೆ. ಕಳೆದ ವರ್ಷ ಜೂನ್‌ನಲ್ಲಿ ಈ ಕ್ಷೇತ್ರದಲ್ಲಿ ನಡೆದ ಉಪಚುನಾವಣೆಯಲ್ಲಿ ಟಿಎಂಸಿ ಪಕ್ಷ ಜಯಗಳಿಸಿತ್ತು. ನಂತರ ನಡೆದ ವಿಜಯೋತ್ಸವ ರ‍್ಯಾಲಿ ವೇಳೆ ಎಸೆದ ಕಚ್ಚಾಬಾಂಬ್ ಸ್ಫೋಟದಿಂದ ಯಾಸ್ಮೀನ್ ಅವರ 6 ವರ್ಷದ ಮಗಳು ತಮನ್ನಾ ಮೃತಪಟ್ಟಿದ್ದಳು.

'ಉಳಿದ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಮೂರರಿಂದ ನಾಲ್ಕು ದಿನದಲ್ಲಿ ಅಂತಿಮಗೊಳಿಸಲಾಗುವುದು' ಎಂದು ಎಡಪಕ್ಷಗಳ ಮುಖ್ಯಸ್ಥ ಬಿಮನ್ ಬೋಸ್ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ ವಿಧಾನಸಭೆಗೆ ಏಪ್ರಿಲ್ 23 ಹಾಗೂ 29ರಂದು ಮತದಾನ ನಡೆಯಲಿದ್ದು, ಮೇ 4ರಂದು ಫಲಿತಾಂಶ ಪ್ರಕಟಗೊಳ್ಳಲಿದೆ.



ಅಸ್ಸಾಂ ವಿಧಾನಸಭೆ ಚುನಾವಣೆ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ಸೋಮವಾರ ಸೋನಿತ್‌ಪುರದ ತೇಜ್‌ಪುರದಲ್ಲಿ ಚುನಾವಣಾಧಿಕಾರಿ ಇವಿಎಂಗಳ ಬಳಕೆಯ ಕುರಿತು ಮಾಹಿತಿ ನೀಡಿದರು–ಪಿಟಿಐ ಚಿತ್ರ

ವೆಬ್ ಕ್ಯಾಮೆರಾ ಪೂರೈಕೆ: ಒಪ್ಪಂದ ರದ್ದು

ಕೋಲ್ಕತ್ತ (ಪಿಟಿಐ): 2021ರ ಪಶ್ಚಿಮ ಬಂಗಾಳ ವಿಧಾನಸಭೆ ಹಾಗೂ 2024ರ ಲೋಕಸಭೆ ಚುನಾವಣೆಗಳಲ್ಲಿ ವೆಬ್ ಕ್ಯಾಮೆರಾಗಳನ್ನು ಪೂರೈಸಿದ್ದ ಸಂಸ್ಥೆಯೊಂದಿಗಿನ ಒಪ್ಪಂದವನ್ನು ರದ್ದುಗೊಳಿಸಲಾಗಿದೆ. ಇದೀಗ ಟೆಂಡರ್‌ನಲ್ಲಿ ಹೊರರಾಜ್ಯದ ಮೂರು ಸಂಸ್ಥೆಗಳನ್ನು ವೆಬ್ ಕ್ಯಾಮೆರಾ ಪೂರೈಕೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗವು ತಿಳಿಸಿದೆ.

ವೆಬ್ ಕ್ಯಾಮೆರಾಗಳಲ್ಲಿನ ದೃಶ್ಯಾವಳಿಗಳನ್ನು ಪರಿಶೀಲಿಸುವಾಗ, ಲೋಪ ಕಂಡುಬಂದಿದೆ. ಶೇ 30ರಷ್ಟು ಕ್ಯಾಮೆರಾಗಳು ಯಾವುದೇ ಚಿತ್ರೀಕರಣವನ್ನೇ ಮಾಡಿಲ್ಲ. ಇನ್ನೂ ಶೇ 30ರಷ್ಟು ಕ್ಯಾಮೆರಾಗಳಲ್ಲಿ, ಮತದಾನದ ಆರಂಭ ಹಾಗೂ ಕೊನೆಯ ಅರ್ಧ ಗಂಟೆಯ ದೃಶ್ಯಾವಳಿಗಳು ಮಾತ್ರವೇ ಇವೆ. ಆದ್ದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಆಯೋಗದ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಮತದಾನದಲ್ಲಿ ಯಾವುದೋ ಲೋಪ ಆಗಬಾರದು ಎಂದು ಆಯೋಗವು ಸ್ಪಷ್ಟಪಡಿಸುತ್ತದೆ. ಯಾವುದೇ ಮತಗಟ್ಟೆಯಲ್ಲಿ ಹಿಂಸಾಚಾರ ಅಥವಾ ಗಲಾಟೆ ನಡೆದರೆ ಮತದಾನವನ್ನು ನಿಲ್ಲಿಸಿ ಮರುಮತದಾನ ಮಾಡಲಾಗುತ್ತದೆ' ಎಂದರು.

ವಿರೋಧ ಪಕ್ಷಗಳಿಗೆ ಅಡ್ಡಮತದಾನದ ಪೆಟ್ಟು

ರಾಜ್ಯಸಭೆ: ಎನ್‌ಡಿಎ 8, ಬಿಜೆಡಿ 1

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ರಾಜ್ಯಸಭೆಯ 11 ಸದಸ್ಯ ಸ್ಥಾನಗಳಿಗೆ ಒಡಿಶಾ, ಬಿಹಾರ ಮತ್ತು ಹರಿಯಾಣದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ 8 ಸ್ಥಾನಗಳನ್ನು ತನ್ನದಾಗಿಸಿಕೊಂಡಿದ್ದರೆ, ಪ್ರಾದೇಶಿಕ ಪಕ್ಷ ಬಿಜೆಡಿ ಒಂದರಲ್ಲಿ ಗೆಲುವು ಸಾಧಿಸಿದೆ. ಹರಿಯಾಣದಲ್ಲಿ ಮತದಾನದ ಗೋಪ್ಯತೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿರುವ ಕಾರಣ, ಎರಡು ಸ್ಥಾನಗಳ ಮತ ಎಣಿಕೆ ತಡವಾಗಿ ನಡೆಯಿತು.

ಕಾಂಗ್ರೆಸ್ ನೇತೃತ್ವದ 'ಇಂಡಿಯಾ' ಬಣಕ್ಕೆ ಒಂದೆಡೆ ಅಡ್ಡಮತದಾನದ ಬಿಸಿ ತಟ್ಟಿದ್ದರೆ, ಇನ್ನೊಂದೆಡೆ ಕೆಲ ಶಾಸಕರು ಮತದಾನದಿಂದ ದೂರ ಉಳಿದಿದ್ದರಿಂದ ಭಾರಿ ಹಿನ್ನಡೆಯಾಗಿದೆ.

ದೇಶದ 10 ರಾಜ್ಯಗಳ 37 ರಾಜ್ಯಸಭಾ ಸ್ಥಾನಗಳಿಗೆ ಸೋಮವಾರ ಚುನಾವಣೆ ನಿಗದಿಯಾಗಿತ್ತು. ಆದರೆ ಈ ಪೈಕಿ ಏಳು ರಾಜ್ಯಗಳ 26 ಅಭ್ಯರ್ಥಿಗಳು ಈಗಾಗಲೇ ಅವಿರೋಧವಾಗಿ ಆಯ್ಕೆಯಾಗಿದ್ದು, ಉಳಿದ 11 ಸ್ಥಾನಗಳಿಗೆ ಬಿಹಾರ, ಒಡಿಶಾ ಮತ್ತು ಹರಿಯಾಣದಲ್ಲಿ ಮತದಾನ ಜರುಗಿತು.

ಬಿಹಾರದ ಐದೂ ಸ್ಥಾನಗಳ ಗೆದ್ದ ಎನ್‌ಡಿಎ: ಬಿಜೆಪಿ ನೇತೃತ್ವದ ಎನ್‌ಡಿಎ ಬಿಹಾರದ ಎಲ್ಲ ಐದೂ ಸ್ಥಾನಗಳನ್ನು ಗೆದ್ದು ಬೀಗಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ಕೇಂದ್ರ ಸಚಿವ ಮತ್ತು ಜೆಡಿಯು ನಾಯಕ ರಾಮನಾಥ್ ಠಾಕೂರ್, ಕೇಂದ್ರದ ಮಾಜಿ ಸಚಿವ ಉಪೇಂದ್ರ ಕುಶ್ವಾಹ ಮತ್ತು ಬಿಜೆಪಿ ನಾಯಕ ಶಿವೇಶ್ ಕುಮಾರ್ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ.

ನಿತೀಶ್ ಕುಮಾರ್ ಮತ್ತು ನಿತಿನ್ ನವೀನ್ ಅವರು ತಲಾ 44 ಮೊದಲ ಪ್ರಾಶಸ್ತ್ಯದ ಮತಗಳನ್ನು ಪಡೆದರೆ, ರಾಮನಾಥ್ ಠಾಕೂರ್ ಮತ್ತು ಉಪೇಂದ್ರ ಕುಶ್ವಾಹ ತಲಾ 42 ಮೊದಲ ಪ್ರಾಶಸ್ತ್ಯದ ಮತಗಳನ್ನು ಪಡೆದರು. ಮೊದಲ ಪ್ರಾಶಸ್ತ್ಯದ 30 ಮತಗಳನ್ನು ಪಡೆದ ಎನ್‌ಡಿಎಯ ಐದನೇ ಅಭ್ಯರ್ಥಿ ಶಿವೇಶ್ ಕುಮಾರ್ ಅವರು ಎರಡನೇ ಪ್ರಾಶಸ್ತ್ಯದ ಮತಗಳ ನೆರವಿನಿಂದ ಆರ್‌ಜೆಡಿಯ ಎ.ಡಿ. ಸಿಂಗ್ ಅವರನ್ನು ಸೋಲಿಸಿದರು.

ನಾಲ್ವರು ಮತದಾನದಿಂದ ದೂರ: ಬಿಹಾರದಲ್ಲಿ 'ಮಹಾಘಟಬಂಧನ್'ನ ನಾಲ್ವರು ಶಾಸಕರು (ಕಾಂಗ್ರೆಸ್‌ನ ಮೂವರು, ಆರ್‌ಜೆಡಿಯ ಒಬ್ಬರು) ಮತದಾನದಿಂದ ದೂರ ಉಳಿದಿದ್ದು, ಎನ್‌ಡಿಎಯ ಐದನೇ ಅಭ್ಯರ್ಥಿಯ ಗೆಲುವನ್ನು ಸುಲಭವಾಗಿಸಿತು. ಅಸಾದುದ್ದೀನ್ ಓವೈಸಿ ಅವರ ಎಐಎಂಐಎಂ ಮತ್ತು ಬಿಎಸ್‌ಪಿ ಬೆಂಬಲ ನೀಡಿದ್ದರೂ ಮಹಾಘಟಬಂಧನ್ ಅಗತ್ಯವಿರುವ 41 ಶಾಸಕರನ್ನು ಒಟ್ಟುಗೂಡಿಸುವಲ್ಲಿ ವಿಫಲವಾಯಿತು.

'ಹಣ ಮತ್ತು ತೋಳ್ಬಲದಿಂದ ಬಿಜೆಪಿ ನೇತೃತ್ವದ ಎನ್‌ಡಿಎ ರಾಜ್ಯಸಭೆಯ ಸ್ಥಾನಗಳನ್ನು ತನ್ನದಾಗಿಸಿಕೊಂಡಿದೆ' ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ದೂರಿದ್ದಾರೆ.

ದೂರ ಉಳಿದ ಐಎನ್‌ಎಲ್‌ಡಿ: ಹರಿಯಾಣದಲ್ಲಿ ಇಬ್ಬರು ಶಾಸಕರನ್ನು ಹೊಂದಿರುವ ಐಎನ್‌ಎಲ್‌ಡಿ ದೂರ ಉಳಿಯಿತು. ಬಿಜೆಪಿ ಮತ್ತು ಕಾಂಗ್ರೆಸ್ ಎರಡರಿಂದಲೂ ಅಂತರ ಕಾಯ್ದುಕೊಳ್ಳಲು ಈ ನಿರ್ಧಾರ ತೆಗೆದುಕೊಳ್ಳಲಾಯಿತು ಎಂದು ಪಕ್ಷ ಹೇಳಿದೆ.

ಗೋಪ್ಯತೆ ಕಾಯ್ದುಕೊಂಡಿಲ್ಲ: ಹರಿಯಾಣದ ರಾಜ್ಯಸಭಾ ಚುನಾವಣಾ ವೇಳೆ ಕೆಲ ಶಾಸಕರು ಮತದಾನದ ಗೋಪ್ಯತೆ ಕಾಯ್ದುಕೊಂಡಿಲ್ಲ ಎಂದು ಕಾಂಗ್ರೆಸ್ ಮತ್ತು ಬಿಜೆಪಿ ಆಕ್ಷೇಪಿಸಿವೆ.

ಖರ್ಗೆ ಪತ್ರ: ಮತದಾನದ ಗೋಪ್ಯತೆಗೆ ಸಂಬಂಧಿಸಿದಂತೆ ಎದುರಾಗಿರುವ ಸಮಸ್ಯೆ ಪರಿಹರಿಸಲು ಮಧ್ಯಪ್ರವೇಶಿಸುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಕಾಂಗ್ರೆಸ್ ಶಾಸಕರ ಮತವನ್ನು ಅನರ್ಹಗೊಳಿಸದಂತೆ ಆಗ್ರಹಿಸಿದ್ದಾರೆ

ಒಡಿಶಾ: ಎನ್‌ಡಿಎಗೆ ಮೂರು, ಬಿಜೆಡಿಗೆ ಒಂದು ಸ್ಥಾನ

ಒಡಿಶಾದಲ್ಲಿ ಬಿಜೆಪಿಯ ಇಬ್ಬರು, ಬಿಜೆಡಿಯ ಒಬ್ಬರು ಮತ್ತು ಬಿಜೆಪಿ ಬೆಂಬಲಿತ ಒಬ್ಬರು ಸ್ವತಂತ್ರ ಅಭ್ಯರ್ಥಿ ಆಯ್ಕೆಯಾಗಿದ್ದಾರೆ. ಬಿಜೆಪಿಯ ಮನಮೋಹನ್ ಸಮಲ್, ಸುಜಿತ್ ಕುಮಾರ್, ಬಿಜೆಡಿಯ ಸಂತೃಪ್ತ್ ಮಿಶ್ರಾ ಗೆದ್ದಿದ್ದಾರೆ. ಬಿಜೆಪಿ ಬೆಂಬಲಿತರಾಗಿ ಕಣದಲ್ಲಿದ್ದ ಸ್ವತಂತ್ರ ಅಭ್ಯರ್ಥಿ, ಕೇಂದ್ರದ ಮಾಜಿ ಸಚಿವ ದಿಲೀಪ್ ರಾಯ್ ಅವರು ಬಿಜೆಡಿ ಮತ್ತು ಕಾಂಗ್ರೆಸ್ ಬೆಂಬಲಿತ ದತ್ತೇಶ್ವರ ಹೋಟಾ ವಿರುದ್ಧ ಜಯಗಳಿಸಿದ್ದಾರೆ.

ಬಿಜೆಡಿಯ ಇಬ್ಬರು ಮತ್ತು ಕಾಂಗ್ರೆಸ್‌ನ ಮೂವರು ಶಾಸಕರು ಅಡ್ಡ ಮತದಾನ ಮಾಡಿದ್ದರಿಂದ ದಿಲೀಪ್ ಅವರು ಗೆಲ್ಲುವುದು ಸಾಧ್ಯವಾಗಿದೆ .

'ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳಿಂದ ದೊಡ್ಡ ಪ್ರಮಾಣದಲ್ಲಿ ಶಾಸಕರ ಖರೀದಿ ನಡೆದಿದೆ' ಎಂದು ಬಿಜೆಡಿ ಅಧ್ಯಕ್ಷ ನವೀನ್ ಪಟ್ನಾಯಕ್ ಆರೋಪಿಸಿದ್ದಾರೆ.

'ಮಹಿಳಾ ಸಬಲೀಕರಣಕ್ಕೆ ಸರ್ಕಾರ ಒತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಗಲಕೋಟೆ, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳಿಗೆ ನಡೆಯಲಿರುವ ಉಪ ಚುನಾವಣೆಯ ಗೆಲುವಿನಲ್ಲಿ ಕಾಂಗ್ರೆಸ್ ಮಹಿಳಾ ಸದಸ್ಯರ ಪಾತ್ರ ಮಹತ್ವವಾದುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ದಿ ಚಾನ್ಸರಿ ಪೆವಿಲಿಯನ್' ಹೋಟೆಲ್‌ನಲ್ಲಿ ಸೋಮವಾರ ನಡೆದ ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಕಾರ್ಯಕಾರಿ ಸಮಿತಿ ಸಭೆ, ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದರು.

'2013ರಿಂದ 2018 ಮತ್ತು 2023ರಿಂದ ಕಾಂಗ್ರೆಸ್ ಸರ್ಕಾರ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡುತ್ತಿದೆ. ಮಹಿಳಾ ಕೇಂದ್ರಿತ ಯೋಜನೆಗಳಿಂದ ಮಹಿಳೆಯರ ಹಕ್ಕುಗಳನ್ನು ರಕ್ಷಿಸಲಾಗಿದೆ. ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರ ಆರ್ಥಿಕ, ಸಾಮಾಜಿಕ ಸ್ಥಿತಿ ಸುಧಾರಿಸಿದೆ' ಎಂದರು.

'ಮಹಿಳಾ ಕಾಂಗ್ರೆಸ್‌ನ ಸದಸ್ಯರ ಸಂಖ್ಯೆ 2 ಲಕ್ಷಗಳಿಗೆ ವೃದ್ಧಿಸಬೇಕು. ಉಪ ಚುನಾವಣೆ ನಡೆಯಲಿರುವ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಬೇಕು. ಮಹಿಳಾ ಸದಸ್ಯರ ಎರಡು ತಂಡ ರಚಿಸಿ ಪ್ರಚಾರದಲ್ಲಿ ಪಾಲ್ಗೊಳ್ಳಬೇಕು' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿಯ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಲಕಾ ಲಂಬಾ, ಪ್ರಧಾನ ಕಾರ್ಯದರ್ಶಿ ಕಮಲಾಕ್ಷಿ ರಾಜಣ್ಣ, ಮಹಿಳಾ ಕಾಂಗ್ರೆಸ್ ಕರ್ನಾಟಕ ಉಸ್ತುವಾರಿ ಸೋಫಿಯಾ ಜುಬೇರಾ, ಪ್ರಧಾನ ಕಾರ್ಯದರ್ಶಿ ಸೇವಾ ಸೆಲ್ವಾನ್, ಪ್ರದೇಶ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯಾ ರೆಡ್ಡಿ, ಶಾಸಕಿ ನಯನ ಮೋಟಮ್ಮ, ಮಾಜಿ ಸಚಿವೆ ರಾಣಿ ಸತೀಶ್ ಇದ್ದರು.

'ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡಿ'

'ಬಿಜೆಪಿಯಲ್ಲಿ ಆರ್‌ಎಸ್‌ಎಸ್ ಯಾವುದೇ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಿದೆ. ಅದೇ ರೀತಿ ಮಹಿಳಾ ಕಾಂಗ್ರೆಸ್ ಘಟಕ ಕೂಡ ಪಕ್ಷದಲ್ಲಿ ಕೆಲಸ ಮಾಡುತ್ತಿದೆ. ಉತ್ತಮ ಕೆಲಸ ಮಾಡಿದರೆ ಅಧಿಕಾರ ನಮ್ಮನ್ನು ಹುಡುಕಿಕೊಂಡು ಬರುತ್ತದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಾಳೆಯಿಂದ

ಒಂದನೇ ಪುಟದಿಂದ...

ಮೊದಲ ದಿನವಾದ ಬುಧವಾರ ಪ್ರಥಮ ಭಾಷೆ (ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಸಂಸ್ಕೃತ ವಿಷಯದ ಪರೀಕ್ಷೆ ನಡೆಯಲಿದೆ. ಏಪ್ರಿಲ್ 24ರಂದು ಫಲಿತಾಂಶ ಪ್ರಕಟವಾಗುವ ಸಾಧ್ಯತೆ ಇದೆ.

8,12,855 ಮಂದಿ ಹೊಸಬರು, 62,845 ಮಂದಿ ಪುನರಾವರ್ತಿತ, 27,189 ಮಂದಿ ಖಾಸಗಿ ಅಭ್ಯರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಪ್ರವೇಶ ಪತ್ರ ತೋರಿಸಿ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತವಾಗಿ ಪರೀಕ್ಷಾ ಕೇಂದ್ರಕ್ಕೆ ಪ್ರಯಾಣಿಸಬಹುದು.

ವೆಬ್‌ಕಾಸ್ಟಿಂಗ್ ಮುಖಾಂತರ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ವೀಕ್ಷಣೆಗೆ ಅಗತ್ಯ ವ್ಯವಸ್ಥೆ ಮಾಡಲಾಗಿದೆ. ಪರೀಕ್ಷಾ ಕೇಂದ್ರದೊಳಗೆ ಮೊಬೈಲ್ ಫೋನ್, ಎಲೆಕ್ಟ್ರಾನಿಕ್ ಉಪಕರಣ ತೆಗೆದುಕೊಂಡು ಹೋಗಲು ಅವಕಾಶ ಇಲ್ಲ.

ಕಲ್ಯಾಣ ಮಂಟಪ, ದೇವಸ್ಥಾನಗಳಲ್ಲೂ ಪ್ರದರ್ಶಿಸಲು ಹೈಕೋರ್ಟ್ ಸೂಚನೆ

ಬಾಲ್ಯ ವಿವಾಹ ನಿಷೇಧ ಫಲಕ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಲ್ಯ ವಿವಾಹವನ್ನು (18 ವರ್ಷಕ್ಕಿಂತ ಕಡಿಮೆ) ಕಾನೂನು ನಿಷೇಧಿಸಿದೆ ಎಂಬ ಫಲಕಗಳನ್ನು ದೇವಸ್ಥಾನ ಗಳು,ಕಲ್ಯಾಣ ಮಂಟಪಗಳು ಮತ್ತು ಅಂತಹುದೇ ಇತರ ಸ್ಥಳಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕು' ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

'ನಮ್ಮ ವಿರುದ್ಧ ದೇವನಹಳ್ಳಿ ಕೋರ್ಟ್‌ನಲ್ಲಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಎನ್.ಮಂಜುನಾಥ (ಬಾಲಕಿಯ ಗಂಡ) ಸೇರಿದಂತೆ ಕುಟುಂಬದ ಒಟ್ಟು ಐವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿ ಈ ಕುರಿತಂತೆ ಆದೇಶಿಸಿದೆ.



ತಿಳಿವಳಿಕೆ ಮೂಡುವ, ಕಾನೂನುಬದ್ಧ ವಯಸ್ಸು ತಲುಪುವ ಮುನ್ನವೇ ಮದುವೆಯ ಬಲಿಪೀಠದಲ್ಲಿ ಕೂರಿಸುವುದು ಅಕ್ಷಮ್ಯ. ಕಮರುವ ಬಾಲ್ಯವನ್ನು ರಕ್ಷಿಸಲು ಕಾನೂನು ಇದೆ

ನ್ಯಾ. ಎಂ.ನಾಗಪ್ರಸನ್ನ

'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ, 2012 (ಪೋಕ್ಸೊ) ಅಥವಾ ಬಾಲ್ಯವಿವಾಹ ನಿಷೇಧ ಕಾಯ್ದೆ–2006ರ ನಿಬಂಧನೆಗಳ ಅಡಿಯಲ್ಲಿ ಉದ್ಭವಿಸುತ್ತಿರುವ ಮೊಕದ್ದಮೆಗಳ ಸಂಖ್ಯೆ ಹೆಚ್ಚಾಗುತ್ತಿದೆ' ಎಂದು ನ್ಯಾಯ ಪೀಠ ಇದೇ ವೇಳೆ ತೀವ್ರ ಕಳವಳ ವ್ಯಕ್ತಪಡಿಸಿದೆ.

'ಬಾಲ್ಯ ವಿವಾಹ ನಿರ್ಮೂಲನೆ ಕೇವಲ ಶಾಸನಬದ್ಧ ಗುರಿಯಲ್ಲ, ಇದು ಸಾಂವಿಧಾನಿಕವಾಗಿ ಕಡ್ಡಾಯವಾದ ಆಶಯ. ಈ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳು ತಮ್ಮ ಪಾತ್ರವನ್ನು ಇನ್ನಷ್ಟು ಕಾಳಜಿಯಿಂದ ನಿರ್ವಹಿಸಬೇಕು' ಎಂದು ಸೂಚಿಸಿದೆ.

ಕೇರಳ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ತೀರ್ಪುಗಳನ್ನು ಉಲ್ಲೇಖಿಸಿರುವ ನ್ಯಾಯಪೀಠ, 'ಬಾಲ್ಯ ವಿವಾಹವು ಹೆಚ್ಚಾಗಿ ಹುಡುಗಿಯರು ಶಾಲೆಯನ್ನು ತೊರೆಯುವಂತೆ ಮಾಡುತ್ತದೆ. ಶಿಕ್ಷಣ ಮತ್ತು ಭವಿಷ್ಯದ ಅವಕಾಶಗಳನ್ನು ಸೀಮಿತಗೊಳಿಸುತ್ತದೆ. ಬಾಲ್ಯ ವಧುಗಳು ಹಿಂಸೆ ಮತ್ತು ದೌರ್ಜನ್ಯಕ್ಕೆ ಹೆಚ್ಚು ಗುರಿಯಾಗುತ್ತಾರೆ' ಎಂದು ಆತಂಕ ವ್ಯಕ್ತಪಡಿಸಿದೆ. ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ವಾದ ಮಂಡಿಸಿದ್ದರು.

ಪ್ರಕರಣ: 'ಕೋವಿಡ್ ಸಾಂಕ್ರಾಮಿಕ ಯಾರನ್ನು ಯಾವಾಗ ಬಲಿತೆಗೆದುಕೊಳ್ಳುವುದೋ ಏನೊ; ನಾವು ಕಣ್ಮುಚ್ಚುವುದರೊಳಗೆ ಈಕೆಯ ಮದುವೆ ಮಾಡಿಬಿಡೋಣ' ಎಂದು 16 ವರ್ಷದ ಬಾಲಕಿಯನ್ನು 27ರ ವರನಿಗೆ ಕೊಟ್ಟು 2021ರಲ್ಲಿ ಮದುವೆ ಮಾಡಿದ್ದ ಕುಟುಂಬದ ವಿರುದ್ಧ ದೇವನಹಳ್ಳಿ ತಾಲ್ಲೂಕು, ಶಿಶು ಅಭಿವೃದ್ಧಿ ಯೋಜನಾ ನೀಡಿದ್ದ ದೂರಿನ ಅನ್ವಯ ಐವರು ಸದಸ್ಯರು ಈಗ ವಿಚಾರಣೆ ಎದುರಿಸುವಂತಾಗಿದೆ.

'ಪುರೋಹಿತರು ಕಂಬಿ ಎಣಿಸಬೇಕಾಗುತ್ತದೆ'

'ಬಾಲ್ಯ ವಿವಾಹ ನಡೆಸುವ, ನಿರ್ದೇಶಿಸುವ ಅಥವಾ ಪ್ರಚೋದಿಸುವ ಯಾರಾದರೂ ಆಗಲಿ ಅದಕ್ಕೆ ಸಮಾನ ಹೊಣೆಗಾರರಾಗುತ್ತಾರೆ. ಸಮಾರಂಭವನ್ನು ಆಚರಿಸುವ ಪುರೋಹಿತ, ಅದನ್ನು ಏರ್ಪಡಿಸುವ ಸಂಬಂಧಿ, ಸುಗಮಗೊಳಿಸುವ ಆಯೋಜಕರು ಸೇರಿದಂತೆ ಎಲ್ಲರೂ ಬಾಲ್ಯ ವಿವಾಹ ನಿಷೇಧ ಕಾಯ್ದೆಯ ಚೌಕಟ್ಟಿನಲ್ಲಿ ಶಿಕ್ಷಾರ್ಹ ಅಪರಾಧಿಗಳಾಗಿ ಕಂಬಿ ಎಣಿಸಬೇಕಾಗುತ್ತದೆ. ಕಾನೂನು ಅಜ್ಞಾನವನ್ನು ಕ್ಷಮಿಸುವುದಿಲ್ಲ. ಹಾಗಾಗಿ, ವಿವಾಹಗಳು ಜರುಗುವ ಪ್ರತಿಯೊಂದು ಸ್ಥಳದಲ್ಲಿ ಕ್ರಿಮಿನಲ್ ಹೊಣೆಗಾರಿಕೆಯ ಅರಿವು ಇರುವಂತೆ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳು ನೋಡಿಕೊಳ್ಳತಕ್ಕದ್ದು' ಎಂದು ಎಚ್ಚರಿಸಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಅಭಿಮತ



ಸುಭಾಷಿತ

ಹಳೆ ಹಾದಿ ನಡೆಗಲಿವವರೆಗೆ ಎಮಗೆ ಸಾಕು ಬಲಿವುದಕೆ,
ನಲಿವುದಕೆ ಹೊಸ ಹಾದಿ ಬೇಕು.

–ಎಂ. ಗೋಪಾಲಕೃಷ್ಣ ಅಡಿಗ

ಸಂಪಾದಕೀಯ

ಎಸ್‌ಐಆರ್ ಪರಿಣಾಮದ ವಿಮರ್ಶೆಗೆ ವಿಧಾನಸಭೆ ಚುನಾವಣೆಗಳ ಕನ್ನಡಿ

ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಗೆ ಚುನಾವಣೆ ನಡೆಯಲು ದಿನಗಣನೆ ಶುರುವಾಗಿದೆ. ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳ ವಿಧಾನಸಭೆಗೆ, ಕೇಂದ್ರಾಡಳಿತ ಪ್ರದೇಶವಾದ ಪುದುಚೆರಿಯ ವಿಧಾನಸಭೆಗೆ ಚುನಾವಣೆ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗ ಮಾರ್ಚ್ 15ರಂದು ಘೋಷಿಸಿದೆ. ವಿವಿಧ ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳು ಚುನಾವಣೆಗೆ ಸಿದ್ಧತೆ ಶುರು ಮಾಡಿ ಆಗಿದೆ. ಹೀಗಿದ್ದರೂ, ವೇಳಾಪಟ್ಟಿ ಪ್ರಕಟ ಆಗುವುದರೊಂದಿಗೆ ಅವರು ಸಿದ್ಧತೆಗೆ ಇನ್ನಷ್ಟು ವೇಗ ನೀಡಲಿದ್ದಾರೆ ಎಂಬುದು ಖಚಿತ. ಪಶ್ಚಿಮ ಬಂಗಾಳದಲ್ಲಿ ಮತದಾನವು ಎರಡು ಹಂತಗಳಲ್ಲಿ (ಏಪ್ರಿಲ್ 23, 29) ನಡೆಯಲಿದೆ. ಅಸ್ಸಾಂ, ಕೇರಳ ಮತ್ತು ಪುದುಚೆರಿ ವಿಧಾನಸಭಾ ಚುನಾವಣೆಯ ಮತದಾನ ಪ್ರಕ್ರಿಯೆಯು ಏಪ್ರಿಲ್ 9ರಂದು ನಡೆಯಲಿದೆ. ತಮಿಳುನಾಡಿನಲ್ಲಿ ಮತದಾನದ ದಿನಾಂಕ ಏಪ್ರಿಲ್ 23 ಆಗಿರಲಿದೆ. ಎಲ್ಲೆಡೆ ಮತ ಎಣಿಕೆಯು ಮೇ 4ರಂದು ನಡೆಯಲಿದೆ. ಅಸ್ಸಾಂ, ಪುದುಚೆರಿ ಮತ್ತು ಕೇರಳದಲ್ಲಿ ಪ್ರಚಾರ ಕಾರ್ಯಕ್ಕೆ ಹೆಚ್ಚು ಸಮಯ ಸಿಕ್ಕಿಲ್ಲ ಎಂದು ಪಕ್ಷಗಳಿಗೆ ಅನ್ನಿಸಬಹುದು. ಆದರೆ ಇತರ ಕಡೆಗಳಲ್ಲಿ ಸಾಕಷ್ಟು ಸಮಯ ಸಿಗಲಿದೆ.

ಈ ಬಾರಿಯ ಚುನಾವಣೆಯಲ್ಲಿ ಪ್ರತಿ ರಾಜ್ಯದ ರಾಜಕಾರಣ ಕೂಡ ಇನ್ನೊಂದು ರಾಜ್ಯಕ್ಕಿಂತ ಭಿನ್ನವಾಗಿದೆ. ಬಿಜೆಪಿಯನ್ನು ರಾಜಕೀಯವಾಗಿ ವಿರೋಧಿಸುವ ಪಕ್ಷಗಳು ಮೂರು ರಾಜ್ಯಗಳಲ್ಲಿ ಅಧಿಕಾರದಲ್ಲಿವೆ. ಚುನಾವಣೆಯ ಫಲಿತಾಂಶವು ಬಿಜೆಪಿಯನ್ನು ವಿರೋಧಿಸುವ ಪಕ್ಷಗಳಿಗೆ ಆಯಾ ರಾಜ್ಯಗಳ ಮಟ್ಟದಲ್ಲಿ ಹಾಗೂ ದೇಶದ ಮಟ್ಟದಲ್ಲಿ ಬಹಳ ಮಹತ್ವದ್ದಾಗುತ್ತದೆ. ಕೇರಳದಲ್ಲಿ ಎಲ್‌ಡಿಎಫ್ ಹಾಗೂ ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಒಂದಕ್ಕಿಂತ ಹೆಚ್ಚಿನ ಅವಧಿಯಿಂದ ಅಧಿಕಾರದಲ್ಲಿವೆ. ತಮಿಳುನಾಡು, ಕೇರಳ ಹಾಗೂ ಪಶ್ಚಿಮ ಬಂಗಾಳದ ಆಡಳಿತಾರೂಢ ಪಕ್ಷಗಳು ತಮ್ಮಲ್ಲಿ ಆಡಳಿತ ವಿರೋಧಿ ಅಲೆ ಇಲ್ಲ ಎಂದು ಹೇಳಿಕೊಳ್ಳುತ್ತಿವೆ. ತಮಿಳುನಾಡಿನಲ್ಲಿ ಡಿಎಂಕೆ ಪಕ್ಷವು ಕಾಂಗ್ರೆಸ್ ಹಾಗೂ ಇತರ ಮಿತ್ರಪಕ್ಷಗಳ ಜೊತೆಗೂಡಿ ದ್ರಾವಿಡ ಅಸ್ಮಿತೆಯನ್ನು ಪ್ರಧಾನ ಅಂಶವನ್ನಾಗಿ ಇರಿಸಿಕೊಂಡು, ಸರ್ಕಾರದ ಸಾಧನೆಯನ್ನು ಹೇಳಿಕೊಂಡು ಚುನಾವಣೆ ಎದುರಿಸುವ ನಿರೀಕ್ಷೆ ಇದೆ. ಡಿಎಂಕೆ ಪಕ್ಷದ ಪ್ರಧಾನ ಎದುರಾಳಿಯಾದ ಎಐಎಡಿಎಂಕೆ ಪಕ್ಷವು ಬಿಜೆಪಿಯ ಜೊತೆ ಹೊಂದಾಣಿಕೆ ಮಾಡಿಕೊಂಡಿದೆ. ತಮಿಳುನಾಡಿನಲ್ಲಿ ನೆಲೆ ವಿಸ್ತರಿಸಿಕೊಳ್ಳುವ ಬಯಕೆಯಲ್ಲಿ ಬಿಜೆಪಿ ಇದೆ. ಆದರೆ, ತಮಿಳು ನಟ ವಿಜಯ್ ಅವರ ಹೊಸ ಪಕ್ಷದ ನಿಲುವಿನ ಬಗ್ಗೆ ಒಂದಿಷ್ಟು ಅಸ್ಪಷ್ಟತೆ ಕೂಡ ಇದೆ.



‘ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ’ಯ ಪರಿಣಾಮಗಳ ಪರಾಮರ್ಶೆಗೆ ಐದು ವಿಧಾನಸಭೆಗಳಿಗೆ ನಡೆಯಲಿರುವ ಚುನಾವಣೆ ಅವಕಾಶ ಕಲ್ಪಿಸಲಿದೆ.

ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟವು ತಾನು ಬಹಳ ಉತ್ತಮ ಸ್ಥಿತಿಯಲ್ಲಿ ಇರುವುದಾಗಿ ಭಾವಿಸಬಹುದು. ಆದರೆ ಅಲ್ಲಿನ ಆಂತರಿಕ ಜಗಳಗಳು, ಶಿಸ್ತಿನ ಕೊರತೆ, ಪ್ರಚಾರ ಅಭಿಯಾನಕ್ಕೆ ಸಂಬಂಧಿಸಿದ ಸಮಸ್ಯೆಗಳು ಆ ಮೈತ್ರಿಕೂಟಕ್ಕೆ ಸವಾಲಾಗಿ ಪರಿಣಮಿಸಬಹುದು. ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಕೂಡ ಬಹಳ ತುರುಸಿನ ಹಣಾಹಣಿ ನಡೆಯಬಹುದು. ಅಲ್ಲಿ ಬಿಜೆಪಿಯು ತನ್ನ ಬಲವನ್ನು ನಿಧಾನವಾಗಿ ಹೆಚ್ಚಿಸಿಕೊಳ್ಳುತ್ತಿದೆ. ಅಲ್ಲಿ ಈಗ ಬಿಜೆಪಿಯೇ ಪ್ರಧಾನ ಪ್ರತಿಪಕ್ಷವಾಗಿದ್ದು, ಟಿಎಂಸಿ ಕೈಯಲ್ಲಿರುವ ಅಧಿಕಾರವನ್ನು ಕಿತ್ತುಕೊಳ್ಳಲು ಯತ್ನಿಸುವುದು ಖಚಿತ. ಆದರೆ ಟಿಎಂಸಿ ನಾಯಕಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೂಡ ಪ್ರಬಲ ಪೈಪೋಟಿ ನೀಡಬಲ್ಲರು. ಹೀಗಾಗಿ ಅಲ್ಲಿನ ಚುನಾವಣೆಯ ಮೇಲೆ ರಾಜಕೀಯ ಆಸಕ್ತರ ನೋಟ ಹೆಚ್ಚು ತೀವ್ರವಾಗಿ ಇರಲಿದೆ. ಹಿಂದಿನ ಚುನಾವಣೆಯಲ್ಲಿ ಅಸ್ಸಾಂನಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ಸಿನ ಮತಗಳಿಕೆ ಪ್ರಮಾಣದಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಇರಲಿಲ್ಲ. ಆದರೆ ಈಗ ಅಲ್ಲಿನ ರಾಜಕಾರಣವು ಹೆಚ್ಚು ಧ್ರುವೀಕರಣಗೊಂಡಿದೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಂತರದಲ್ಲಿ ಈ ಚುನಾವಣೆಗಳು ನಡೆಯುತ್ತಿರುವ ಕಾರಣದಿಂದಾಗಿಯೂ ಇವುಗಳಿಗೆ ಹೆಚ್ಚಿನ ಮಹತ್ವ ಇದೆ. ಎಸ್‌ಐಆರ್ ಕಾರಣದಿಂದಾಗಿ ಯಾವೆಲ್ಲ ಪರಿಣಾಮಗಳು ಆಗಿವೆ ಎಂಬ ದೃಷ್ಟಿಯಿಂದಲೂ ಚುನಾವಣಾ ಫಲಿತಾಂಶದ ಅವಲೋಕನ ನಡೆಯಲಿದೆ.

ಚಾಟಿ

ಇಬ್ಬರಿಂದಲೂ ಪೆಟ್ಟು!



ಕನ್ನಡಿಗರು ಕನ್ನಡದಲ್ಲಿ ಪರೀಕ್ಷೆ ಬರೆಯುವ ಹಕ್ಕನ್ನು ಕಿತ್ತುಕೊಂಡಿದ್ದು ನರೇಂದ್ರ ಮೋದಿ ಅವರ ಸರ್ಕಾರ. ಈ ಅನ್ಯಾಯದ ವಿರುದ್ಧ ಪ್ರತಿಭಟಿಸುವ ಕನ್ನಡಿಗರ ಹಕ್ಕನ್ನು ಕಿತ್ತುಕೊಳ್ಳುತ್ತಿರುವುದು ಸಿದ್ದರಾಮಯ್ಯ ಅವರ ಸರ್ಕಾರ.

ಅರುಣ್ ಜಾವಗಲ್, ಕನ್ನಡ ಕಾರ್ಯಕರ್ತ, ‘ಎಕ್ಸ್’ನಿಂದ

ಕಿಡಿನುಡಿ



ಸಭಾಧ್ಯಕ್ಷರೇ ಪೀಠದಿಂದ ಹೊರನಡೆಯುವಂತಹ ಸನ್ನಿವೇಶವನ್ನು ಸರ್ಕಾರ ಸೃಷ್ಟಿಸಿದೆ. ಕಲಾಪ ನಡೆಸುವುದಕ್ಕಾಗಲಿ, ಉತ್ತರ ನೀಡುವುದಕ್ಕಾಗಲಿ ಸರ್ಕಾರಕ್ಕೆ ಮನಸ್ಸಿಲ್ಲ. ಇದೇ ಅಧಿವೇಶನದಲ್ಲಿ ಸಭಾಧ್ಯಕ್ಷರ ಸೂಚನೆಯನ್ನು ಐದನೇ ಬಾರಿಗೆ ಸರ್ಕಾರ ನಿರ್ಲಕ್ಷಿಸಿದೆ.

ವಿ. ಸುನಿಲ್‌ಕುಮಾರ್, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಶನಿವಾರ, 17-3-2001

- **ಕಾರ್ಕೋಟಕ ರೋಗಕ್ಕೆ ಏಳು ಮಂದಿ ಬಲಿ**

ರಾಯಚೂರು, ಮಾರ್ಚ್ 16– ಸಿಂಧನೂರು ತಾಲ್ಲೂಕಿನ ಚಿಕ್ಕಬೇರಿಗೆ ಗ್ರಾಮದಲ್ಲಿ ಕಳೆದ ಒಂದು ವಾರದಿಂದ ‘ಕಾರ್ಕೋಟಕ’ ಎಂಬ ವಿಚಿತ್ರ ರೋಗದಿಂದ ಎಂಟು ಜನ ಸತ್ತಿದ್ದಾರೆ. ಸುಮಾರು 29 ಮಂದಿ ಹಾಸಿಗೆ ಹಿಡಿದಿದ್ದು, 450ಕ್ಕೂ ಹೆಚ್ಚು ಮಂದಿ ಬಳಲುತ್ತಿದ್ದಾರೆ.

ಒಮ್ಮಿಂದೊಮ್ಮೆಲೆ ಜ್ವರ ಬಂದು ನಿತ್ರಾಣವಾಗಿ ಎರಡೇ ದಿನದಲ್ಲಿ ರೋಗಿ ಸಾಯುವುದು ನಿಗೂಢವಾಗಿದೆ.

ವಿಶ್ವಸಂಸ್ಥೆ ಅಧ್ಯಯನದ ಪ್ರಕಾರ ಅತಿಯಾದ ಕ್ರಿಮಿನಾಶಕ ಮತ್ತು ರಸಗೊಬ್ಬರ ಬಳಕೆಯಿಂದ ರಾಸಾಯನಿಕ ವಸ್ತುಗಳು ಅಂತರ್ಜಲದಲ್ಲಿ ಸೇರಿ ನೀರನ್ನು ಕಲುಷಿತಗೊಳಿಸಿದೆ.

- **ಹಗರಣ: ನ್ಯಾಯಾಂಗ ತನಿಖೆಗೆ ಕೇಂದ್ರ ನಿರ್ಧಾರ**

ನವದೆಹಲಿ, ಮಾರ್ಚ್ 16– ರಕ್ಷಣಾ ವ್ಯವಹಾರಗಳಲ್ಲಿ ಲಂಚ ಪಡೆಯಲಾಗಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಎನ್‌ಡಿಎ ಸರ್ಕಾರ ಎದುರಿಸುತ್ತಿರುವ ಬಿಕ್ಕಟ್ಟನ್ನು ಪರಿಹರಿಸುವ ಕ್ರಮವಾಗಿ ತೆಹಲ್ಕಾ ಡಾಟ್‌ಕಾಮ್ ಬಹಿರಂಗಗೊಳಿಸಿರುವ ಹಗರಣದ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವುದಾಗಿ ಪ್ರಧಾನಿ ವಾಜಪೇಯಿ ಇಂದು ರಾತ್ರಿ ಪ್ರಕಟಿಸಿದರು.

ಕೇಂದ್ರ ಸಚಿವ ಸಂಪುಟದ ಸಭೆಯಲ್ಲಿ ಈ ಬಗ್ಗೆ ನಿರ್ಧರಿಸ ಲಾಯಿತು. ಇದಕ್ಕೂ ಮೊದಲು ನಡೆದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ (ಎನ್‌ಡಿಎ) ಸಮನ್ವಯ ಸಮಿತಿ ಸಭೆ, ಗುರುವಾರ ಕೇಂದ್ರ ಸಂಪುಟಕ್ಕೆ ರಾಜೀನಾಮೆ ನೀಡಿದ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರ ಮೇಲೆ ವಿಶ್ವಾಸ ವ್ಯಕ್ತಪಡಿಸಿತು. ಮಾತ್ರವಲ್ಲದೆ ಅವರನ್ನೇ ಎನ್‌ಡಿಎ ಸಂಚಾಲಕರಾಗಿ ಪುನರಾಯ್ಕೆ ಮಾಡಿತು.

‘ತಪ್ಪಿತಸ್ಥರು ಯಾರೇ ಆದರೂ ಅವರನ್ನು ಶಿಕ್ಷೆಗೆ ಗುರಿಪಡಿಸಲು ಬೇಕಾದ ಕ್ರಮಗಳನ್ನು ಸರ್ಕಾರ ಕೈಗೊಳ್ಳುವುದು’ ಎಂದು ಪ್ರಧಾನಿ ಹೇಳಿದರು.

75 ವರ್ಷಗಳ ಹಿಂದೆ

ಶನಿವಾರ, 17-3-1951

- **ಸ್ತ್ರೀಯರ ಮುಂದೆ ಮೀಸೆ ತಿರುವುದು ಅಸಭ್ಯತೆ!**


ಸಾಂಗ್ಲಿ, ಮಾರ್ಚ್ 16– ಹೆಂಗಸರ ಮುಂದೆ ಗಂಡಸರು ಮೀಸೆಯನ್ನು ತಿರುವುವುದು ಅಸಭ್ಯ ವರ್ತನೆ ಎಂದು ಸಾಂಗ್ಲಿ ಪುರಸಭೆಯ ಮಹಿಳಾ ಸದಸ್ಯರೊಬ್ಬರ ಅಭಿಪ್ರಾಯ.

ಪುರಸಭೆಯಲ್ಲಿ ಒಂದು ಜೊತೆ ಎತ್ತುಗಳನ್ನು ಕೊಂಡ ಬಗ್ಗೆ ಇತ್ತೀಚೆಗೆ ಬಿಸಿಬಿಸಿ ಚರ್ಚೆಯಾಗುತ್ತಿದ್ದಾಗ, ಒಂದು ಪಕ್ಷದ ಸದಸ್ಯರೊಬ್ಬರು ಮೀಸೆಯನ್ನು ಹುರಿ ಮಾಡಿ ತಮ್ಮ ವಾದಕ್ಕೆ ಹುರುಪುಕೊಟ್ಟರು.

‘ಹೆಂಗಸರ ಮುಂದೆ ಸದಸ್ಯರು ಈ ರೀತಿಯ ಸವಾಲಿನ ಕಸರತ್’ ಪ್ರದರ್ಶನಕ್ಕೆ ಅವಕಾಶ ಕೊಡಕೂಡದೆಂದು ಮಹಿಳಾ ಸದಸ್ಯರೊಬ್ಬರು ಅಧ್ಯಕ್ಷರನ್ನು ಕೋರಿದರು.

ಸದಸ್ಯೆಯ ಪ್ರಾರ್ಥನೆಯನ್ನು ಮನ್ನಿಸಿ, ಕಸರತ್ ಪ್ರದರ್ಶಕ ಸದಸ್ಯರು ತಮ್ಮ ಆಟಾಟೋಪವನ್ನು ಕೈಬಿಟ್ಟರು.

ಘಟ್ಟಕ್ಕೆ ಬೆಂಕಿ! ಲಾಭ ಯಾರಿಗೆ?



ಗತಿಬಿಂಬ

ವೈ.ಗ. ಜಗದೀಶ್

‘ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಲು ಹೋಗಿದ್ರಂತೆ’ ಎಂಬ ಗಾದೆ ಹುಟ್ಟಿದ ಹೊತ್ತಿನೊಳಗೆ ನೆಲವನ್ನು ಬೆರಳುಗಳಲ್ಲೇ ಅಗೆದರೂ ನೀರು ಬರುತ್ತಿದ್ದಂಥ ಕಾಲ ಇತ್ತು. ಹಿಂದೆಲ್ಲ, ಮಳೆಗಾಲದಲ್ಲಿ ಕೈಯಲ್ಲಿಯೇ ನೆಲ ಕೆರೆದರೆ ನೀರಿನ ಬುಗ್ಗೆಗಳು ಚಿಮ್ಮುತ್ತಿದ್ದುದನ್ನು ಪಶ್ಚಿಮ ಘಟ್ಟದ ಸೆರಗಿನ ಮೂಲ ನಿವಾಸಿಗರು ಮರೆತಿರಲಿಕ್ಕಿಲ್ಲ.

ಜಾಗತಿಕ ತಾಪಮಾನ ಏರಿಕೆ, ಹವಾಮಾನ ವೈಪರೀತ್ಯದಂತಹ ಅನಾಹುತಗಳನ್ನು ತಡೆದು, ಜಗತ್ತನ್ನೇ ಅಮ್ಮನಂತೆ ಪೊರೆಯುವ ಶಕ್ತಿಯಿರುವ, ಅಪಾರ ಜೀವ ವೈವಿಧ್ಯಗಳ ತಾಣವಾಗಿರುವ ಪಶ್ಚಿಮ ಘಟ್ಟದ ಸಾಲಿನ ಗುಡ್ಡಗಳು ಈಗ ಕಜ್ಜಿ ಹಿಡಿದಂತೆ ಕಾಣುತ್ತಿವೆ. ನಗರವಾಸಿಗಳ ಆಸೆ ತೀರಿಸಲು ವಿದ್ಯುತ್, ನೀರಾವರಿ ಹಾಗೂ ಅಲ್ಲಿಗೆ ಜನ, ವಾಹನಗಳು ಸರಾಗವಾಗಿ ಸಾಗುವಂತೆ ಮಾಡಲು ಹೆದ್ದಾರಿಯಂತಹ ಹತ್ತಾರು ಯೋಜನೆಗಳಿಗಾಗಿ ಪಶ್ಚಿಮಘಟ್ಟವನ್ನು ಬಲಿಗೊಡುತ್ತಲೇ ಬರಲಾಗಿದೆ. ಹೀಗಾಗಿ, ಘಟ್ಟದ ತುದಿ ಹೋಗಲಿ ತಪ್ಪಲುಗಳಲ್ಲೂ ನೀರು ಹುಟ್ಟದು. ದೂರದೃಷ್ಟಿಯಿಲ್ಲದ ಅಭಿವೃದ್ಧಿ ಯೋಜನೆಗಳಿಂದ ಬಸವಳಿದು ಹೋಗಿರುವ ಘಟ್ಟವನ್ನು ಬಗೆಯುವ, ಕೊರೆಯುವ, ಕಣಿವೆಗಳನ್ನು ಮುಳುಗಿಸುವ ಯೋಜನೆಗಳು ಒಂದಾದ ಮೇಲೊಂದು ದಾಳಿ ಮಾಡುತ್ತಲೇ ಇವೆ. ಮೂರು ತಲೆಮಾರಿಗೆ ಆಗುವಷ್ಟು ದುಡ್ಡನ್ನು ಅಧಿಕಾರದಲ್ಲಿ ಇರುವಾಗಲೇ ಮಾಡಿಕೊಳ್ಳಬೇಕೆಂಬ ಜನಪ್ರತಿನಿಧಿಗಳ ಧೂರ್ತತನ, ಅದಕ್ಕೆ ಇಂಬುಕೊಡುವ ಅಧಿಕಾರಿಗಳ ದುರಾಸೆಯಿಂದಾಗಿ ಪಶ್ಚಿಮಘಟ್ಟ ನಿರಂತರ ಆಕ್ರಮಣಕ್ಕೆ ಒಳಗಾಗಿದೆ. ಇಂತಹ ಯೋಜನೆಗಳ ವಿರುದ್ಧ ದಣಿವರಿಯದೇ ನಡೆದ ಜನ ಚಳವಳಿಗಳು ತಾಯಿಯೊಡಲನ್ನು ಕಾಪಾಡುವಲ್ಲಿ ಯಶಸ್ವಿಯೂ ಆಗಿವೆ.

ಈಗ ಮತ್ತೆ ಪಶ್ಚಿಮಘಟ್ಟವನ್ನು ಕೇಂದ್ರೀಕರಿಸಿ ಹಲವು ಯೋಜನೆಗಳನ್ನು ಜಾರಿಗೊಳಿಸಲು ರಾಜಕಾರಣಿಗಳು ಟೊಂಕ ಕಟ್ಟಿ ನಿಂತಿದ್ದಾರೆ. ಘಟ್ಟಕ್ಕೆ ಬೆಂಕಿ ಬಿದ್ದರೇನು? ನಾಡು ಕೆಟ್ಟರೇನು? ನಾಡಾಡಿಗಳು ಕಂಗೆಟ್ಟರೇನು? ವಿಮಾನದಲ್ಲಿ ಓಡಾಡುವ, ಸದಾ ಹವಾನಿಯಂತ್ರಿತ ಕೊಠಡಿಗಳಲ್ಲಿ ವಾಸಿಸುವ ಅವರಿಗೆ ತಮ್ಮ ತಿಜೋರಿ ತುಂಬಿದರೆ ಸಾಕು.

ಕರ್ನಾಟಕ ವಿದ್ಯುತ್ ನಿಗಮವು 2,000 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಗುರಿಯೊಂದಿಗೆ ಸುಮಾರು ₹9,000 ಕೋಟಿ ವೆಚ್ಚದಲ್ಲಿ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಗೆ ಪಣ ತೊಟ್ಟಿದೆ. ವಿದ್ಯುತ್ ಯೋಜನೆಗೆ ಬಳಸಿದ ನೀರನ್ನು ಮತ್ತೆ ಮೇಲೆತ್ತಿ ಮರು ಬಳಸುವ ಯೋಜನೆ ಇದು. ಈ ಯೋಜನೆಗೆ 352.77 ಎಕರೆ ಬೇಕಿದ್ದು, ಅದರಲ್ಲಿ 133.81 ಎಕರೆ ಅರಣ್ಯ ಭೂಮಿ. ಲೋಕಸಭೆ ಚುನಾವಣೆಗೆ ಕೆಲವು ತಿಂಗಳಿದ್ದಾಗ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಈ ಯೋಜನೆಯನ್ನು ಮುನ್ನೆಲೆಗೆ ತಂದಿತು. ಕೆಪಿಸಿಎಲ್ ಸಿದ್ಧಪಡಿಸಿದ್ದ ಸಮಗ್ರ ಯೋಜನಾ ವರದಿಗೆ ಕೇಂದ್ರ ವಿದ್ಯುತ್ ಪ್ರಾಧಿಕಾರ 2024ರಲ್ಲಿ ಅನುಮೋದನೆಯನ್ನೂ ನೀಡಿದೆ. ಶರಾವತಿ ಕಣಿವೆಯಲ್ಲಿರುವ ಅಪರೂಪದ ಸಿಂಹದ ಬಾಲದ ಸಿಂಗಳೀಕಗಳ ಆಸರೆಯ ತಾಣ ಇದು. ಇಲ್ಲಿ ಅನುಷ್ಠಾನಗೊಳ್ಳಲಿರುವ ಯೋಜನೆಗೆ ಮೊದಲು ರಾಷ್ಟ್ರೀಯ ವನ್ಯಜೀವಿ ಮಂಡಳಿ ತಾತ್ವಿಕ ಒಪ್ಪಿಗೆ ಸೂಚಿಸಿದೆ. ಜನ ವಿರೋಧದ ಬಳಿಕ ಮರುಪರಿಶೀಲನೆ ನಡೆಸಿದ ಮಂಡಳಿ, ಇದರ ಕಾರ್ಯಸಾಧ್ಯತೆಯ ಪರಿಶೀಲನೆಗೆ ತಂಡವನ್ನೂ ಕಳುಹಿಸಿತು. ಯೋಜನೆಯಿಂದ ಪರಿಸರದ ಮೇಲೆ ಹಾನಿಯಾಗುತ್ತದೆ ಎಂದು ತಂಡ ವರದಿ ನೀಡಿದ್ದು, ಅದು ಮತ್ತೆ ಮಂಡಳಿಯ ಮುಂದೆ ಬರಬೇಕಿದೆ. ಹೈಕೋರ್ಟ್ ಕೂಡ ತಾತ್ಕಾಲಿಕ ತಡೆ ನೀಡಿದೆ.

ಬೇಡ್ತಿ–ಅಘನಾಶಿನಿ ನದಿ ತಿರುವು ಯೋಜನೆ ಸದ್ದು ಜೋರಾಗಿದೆ. 2021ರಲ್ಲಿ ಬಿಜೆಪಿಯ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಬಜೆಟ್‌ನಲ್ಲಿ ಈ ಯೋಜನೆ ಘೋಷಿಸಿದ್ದರು. ಕೇಂದ್ರದ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ ಸಿದ್ಧಪಡಿಸಿದ ಸಮಗ್ರ ಯೋಜನಾ ವರದಿಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ₹10 ಸಾವಿರ ಕೋಟಿ ವೆಚ್ಚದ ಯೋಜನೆ ಇದಾಗಿದ್ದು, ಕೇಂದ್ರ ಸರ್ಕಾರ ₹9 ಸಾವಿರ ಕೋಟಿ ಭರಿಸಲಿದೆ. ಈಗಾಗಲೇ ಹತ್ತಾರು ಯೋಜನೆಗಳಿಂದ ಕಂಗೆಟ್ಟಿರುವ ಉತ್ತರ ಕನ್ನಡ ಜಿಲ್ಲೆಯ ಜನರು ಇದರ ವಿರುದ್ಧ ತಿರುಗಿಬಿದ್ದಿದ್ದಾರೆ.

> ನಾಡಿನ ಪಾಲಿಗೆ ತಾಯಿಯಂತೆ ಇರಬೇಕಾದ ಸರ್ಕಾರ ಪೂತನಿಯ ರೂಪ ತಾಳಿದರೆ ಏನಾಗುತ್ತದೆ ಎನ್ನುವುದಕ್ಕೆ ಪಶ್ಚಿಮ ಘಟ್ಟ ಪ್ರದೇಶ ನಿದರ್ಶನದಂತಿದೆ. ಜನಪ್ರತಿನಿಧಿಗಳ ಬಕಾಸುರ ದಾಹಕ್ಕೆ ಘಟ್ಟಪ್ರದೇಶ ಗಾಯಗೊಂಡಿದೆ. ಅದೃಷ್ಟವಶಾತ್, ಅಲ್ಲಿನ ನಾಗರಿಕರು ಘಟ್ಟಗಳನ್ನು ಉಳಿಸಿಕೊಳ್ಳಲು ‘ಜನ ಚಳವಳಿ’ಗಳನ್ನು ರೂಪಿಸಿ ಮುನ್ನಡೆಸುತ್ತಿದ್ದಾರೆ.

ಎರಡು ಯೋಜನೆಗಳು ಪರಿಸರ ಹೋರಾಟಗಾರರ ಸಿಟ್ಟನ್ನು ಕೆರಳಿಸಿರುವ ಹೊತ್ತಿನಲ್ಲಿಯೇ ಆಗುಂಬೆ–ಹೆಬ್ರಿ ಸಂಪರ್ಕಿಸುವ ಘಾಟಿ ರಸ್ತೆ ವಿಸ್ತರಣೆ ಅಥವಾ ಸುರಂಗ ಮಾರ್ಗ ನಿರ್ಮಿಸುವ ಬಗ್ಗೆ ಕೇಂದ್ರ ಹೆದ್ದಾರಿ ಭೂ ಸಚಿವಾಲಯ ಪ್ರಸ್ತಾವ ಮಂಡಿಸಿದೆ. ಯೋಜನಾ ವರದಿ ಸಿದ್ಧಪಡಿಸಲು ಕೇಂದ್ರ ಸರ್ಕಾರ ₹2.33 ಕೋಟಿ ನೀಡಿದೆ. ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ಯೋಜನೆ ಅನುಷ್ಠಾನಕ್ಕೆ ತುದಿಗಾಲಲ್ಲಿ ನಿಂತಿದ್ದಾರೆ. ಸರಿಸುಮಾರು ₹6 ಸಾವಿರ ಕೋಟಿ ವೆಚ್ಚವಾಗಲಿದೆ ಎಂಬುದು ಆರಂಭಿಕ ಅಂದಾಜು.

ಎಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರ ಕೈಗಾರಿಕೆ ಸಚಿವರಾದ ಬಳಿಕ ಮೊತ್ತ ಮೊದಲು ಸಹಿ ಹಾಕಿದ್ದು, ಸಂಡೂರು ತಾಲ್ಲೂಕಿನಲ್ಲಿರುವ ದೇವದಾರಿ ಅರಣ್ಯ ಪ್ರದೇಶದಲ್ಲಿ ಕಬ್ಬಿಣದ ಅದಿರು ತೆಗೆಯಲು ಕುದುರೆಮುಖ ಕಬ್ಬಿಣ ಅದಿರು ಕಂಪನಿಗೆ ಸಂಬಂಧಿಸಿದ ಒಪ್ಪಂದಕ್ಕೆ. ಈ ಯೋಜನೆ ಜಾರಿಯಾದರೆ, ಅಲ್ಲಿನ ಅಮೂಲ್ಯ ಪರಿಸರಕ್ಕೆ, ಜೀವವೈವಿಧ್ಯಕ್ಕೆ ಹಾನಿಯಾಗಲಿದೆ.

ನೀರು, ವಿದ್ಯುತ್ ಹಾಗೂ ವಾಹನ ದಟ್ಟಣೆ ನಿವಾರಣೆಗೆ ನಾನಾ ಪರ್ಯಾಯಗಳಿವೆ. ಕಡಿಮೆ ಖರ್ಚು ತಗಲುವ, ಸ್ಥಳೀಯರ ಒಳಗೊಳ್ಳುವಿಕೆಯಿಂದ ಪರಿಸರದ ಮೇಲೆ ಹಾನಿಯೇ ಆಗದಂತೆ ಯೋಜನೆಗಳನ್ನು ಅನುಷ್ಠಾನ ಮಾಡುವ ಅವಕಾಶವೂ ಇದೆ. ಆ ಮಟ್ಟಿಗೆ ನಮ್ಮ ತಂತ್ರಜ್ಞಾನವೂ ಬೆಳೆದಿದೆ. ಆದರೆ, ಆಳುವವರಿಗೆ ಇಂತಹದರ ಬಗ್ಗೆ ಆಸಕ್ತಿ ಇಲ್ಲ. ಏಕೆಂದರೆ, ಅಂದಾಜು ₹3 ಕೋಟಿ ವೆಚ್ಚದ ಯೋಜನೆ ರೂಪಿಸಿದರೆ ಕನಿಷ್ಠ ಶೇ 15ರಷ್ಟು ಕಮಿಷನ್ ಬಾಚಿದರೂ ಸಿಗುವುದು ₹45 ಲಕ್ಷ ಅಷ್ಟೆ. ಅದೇ ₹5 ಸಾವಿರ ಕೋಟಿ, ₹10 ಸಾವಿರ ಕೋಟಿ ಯೋಜನೆಗಳಾದರೆ ಕಮ್ಮಿ ಕಮಿಷನ್ ಎಂದು ಶೇ 10 ಹೊಡೆದರೂ ₹500 ಕೋಟಿಯಿಂದ ₹1 ಸಾವಿರ ಕೋಟಿ ಕಳ್ಳಗಂಟು ಒಂದೇ ಏಟಿಗೆ ತಿಜೋರಿ ಸೇರಿ ಬಿಡುತ್ತದೆ. ಹಾನಿರಹಿತ ಅಭಿವೃದ್ಧಿಗಿಂತ ‘ಧನ ಸಹಿತ’ ಅಭಿವೃದ್ಧಿಗೆ ರಾಜಕಾರಣಿಗಳು ಹೆಚ್ಚು ಆಸ್ಥೆ ವಹಿಸುವುದರ ಗುಟ್ಟಿದು.

ಹಾಗಂತ, ಇದು ಎಲ್ಲ ಕಾಲದಲ್ಲೂ ಯಶಸ್ವಿಯಾದ ನಿದರ್ಶನಗಳಿಲ್ಲ. ಕುದುರೆಮುಖ ಕಬ್ಬಿಣದ ಅದಿರು ಕಂಪನಿಯಿಂದ ಜೀವ ವೈವಿಧ್ಯದ ಆಗರವಾದ ಪಶ್ಚಿಮಘಟ್ಟವೇ ಹಾಳಾಗಿತ್ತು. ಅದರ ವಿರುದ್ಧ ಕಾನೂನು ಹೋರಾಟಗಳೂ ನಡೆದಿದ್ದವು. ತುಂಗಾ ಮೂಲ ಉಳಿಸಿ ಹೋರಾಟ ಸಮಿತಿ ನಡೆಸಿದ ಸುದೀರ್ಘ ಹೋರಾಟ, ಜನಾಂದೋಲನವಾಗಿ ರೂಪುಗೊಂಡಿತು. ಶ್ರಮವರಿಯದ ಕಾಳಜಿಪರರ ಹೋರಾಟ ಗಣಿಗಾರಿಕೆ ನಿಲ್ಲಿಸುವಲ್ಲಿ ದೊಡ್ಡ ಮಟ್ಟದ ಗೆಲುವು ಸಾಧ್ಯವಾಯಿತು. ಅಂತಹುದೇ ಪಾರಿಸಾರಿಕ ಮೌಲ್ಯ ಇರುವ ಕಪ್ಪತಗುಡ್ಡವನ್ನು ಗಣಿಗಾರಿಕೆಗೆ ಒಡ್ಡುವ ಯೋಜನೆ ವಿರುದ್ಧದ ಹೋರಾಟ ಕೂಡ ಜನ ಚಳವಳಿಯಾಗಿ ಪರಿವರ್ತನೆಯಾಯಿತು. ಕೊನೆಗೆ ಸರ್ಕಾರ ಮಣಿಯಲೇಬೇಕಾಯಿತು.

ಈಗಲೂ ಯಾವುದೇ ಪ್ರಮುಖ ನಾಯಕರು ಚಳವಳಿ ಮುನ್ನಡೆಸುತ್ತಿಲ್ಲ. ಬೇಡ್ತಿ–ಅಘನಾಶಿನಿ, ಶರಾವತಿ, ಆಗುಂಬೆ ಉಳಿವಿಗೆ ಹೋರಾಟ ನಡೆಸುತ್ತಿರುವವರು ಶ್ರೀಸಾಮಾನ್ಯರು. ತಮ್ಮ ಜೇಬಿನಿಂದಲೇ ದುಡ್ಡು ಖರ್ಚು ಮಾಡಿ ಚಳವಳಿಯನ್ನು ಸಂಘಟಿಸುತ್ತಲೇ ಇದ್ದಾರೆ. ಮದುವೆ, ಜಾತ್ರೆ, ಸಂತೆಗಳನ್ನೂ ತಮ್ಮ ಆಂದೋಲನದ ಕೇಂದ್ರ ಮಾಡಿಕೊಂಡಿದ್ದಾರೆ. ಯಾವುದೇ ರಾಜಕೀಯ ಪಕ್ಷಗಳ ಮೇಲೂ ಜನರಿಗೆ ಈಗ ನಂಬಿಕೆ ಉಳಿದಿಲ್ಲ. ವಿರೋಧ ಪಕ್ಷದಲ್ಲಿದ್ದಾಗ ಯೋಜನೆಗಳ ವಿರುದ್ಧ ನಿಲ್ಲುವವರು, ಆಡಳಿತಕ್ಕೆ ಬಂದ ಮೇಲೆ ತಮ್ಮ ನಿಲುವನ್ನು ಬದಲಾಯಿಸುತ್ತಲೇ ಬಂದಿದ್ದಾರೆ. ಇದು ನಾಡಿನ ದುರಂತ ಕತೆ.

ಬಹುತೇಕ ಯೋಜನೆಗಳು ಹಣ ಮಾಡುವ ವ್ಯವಹಾರವಾಗಿವೆಯೇ ವಿನಾ ಜನ ಕಾಳಜಿಯ ಕನಸುಗಳಾಗಿ ಉಳಿದಿಲ್ಲ. 2013ರಲ್ಲಿ ₹8,323 ಕೋಟಿಯಷ್ಟು ಯೋಜನಾ ವೆಚ್ಚ ಹೊಂದಿದ್ದ ಎತ್ತಿನಹೊಳೆ ಯೋಜನೆ ವೆಚ್ಚ ಈಗ ₹23,231 ಕೋಟಿ ದಾಟಿದೆ. 13 ವರ್ಷ ಕಳೆದರೂ ಬಯಲು ನಾಡಿಗೆ ನೀರು ಹರಿಯುವ ಲಕ್ಷಣ ಕಾಣಿಸುತ್ತಿಲ್ಲ. ಯಾವುದೇ ವಿವೇಚನೆ ಇಲ್ಲದೇ, ಚುನಾವಣೆ ಹೊತ್ತಿಗೆ ಮತ ಕಸಿಯಲು ಕೈಗೊಳ್ಳುವ ಇಂತಹ ಯೋಜನೆಗಳಿಂದಾಗಿ ಜನರ ತೆರಿಗೆಯ ಹಣ ಪೋಲಾಗುವುದು ಬಿಟ್ಟರೆ, ಅನುಕೂಲ ಆಗಿದ್ದಂತೂ ಕಡಿಮೆ

ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣೆ ಸಂಸ್ಥೆಯ ವಿವಿಧ ವರದಿಗಳನ್ನು ಆಧರಿಸಿ, ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ವಿಭಾಗವು ಪಶ್ಚಿಮ ಘಟ್ಟದ ಸ್ಥಿತಿಯ ಕುರಿತು ಸಿದ್ಧಪಡಿಸಿರುವ ವರದಿಯೊಂದನ್ನು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ಸಲ್ಲಿಸಿದೆ. ಎಂಟು ಜಿಲ್ಲೆಗಳ 31,231 ಚದರ ಕಿ.ಮೀ. ಅಂದರೆ, ಶೇ 53ರಷ್ಟು ಪ್ರದೇಶವು ಭೂಕುಸಿತದ ಸಂಭಾವ್ಯ ವಲಯದ ವ್ಯಾಪ್ತಿಯಲ್ಲಿದೆ ಎಂದೂ ವರದಿ ಆತಂಕ ವ್ಯಕ್ತಪಡಿಸಿದೆ.

‘ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ/ ಧರೆಹತ್ತಿ ಉರಿದಡೆ ನಿಲಲುಬಾರದು/ ಏರಿ ನೀರುಂಬಡೆ/ ಬೇಲಿ ಕೆಯ್ಯ ಮೇವಡೆ... ತಾಯ ಮೊಲೆವಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂರುವೆ...’ ಎನ್ನುತ್ತಾರೆ ಬಸವಣ್ಣ.

ಧರೆಹತ್ತಿ ಉರಿಯುವ ಕಾಲದಲ್ಲಿ ನಾವಿದ್ದೇವೆ. ಜನರನ್ನು ಮೂರ್ಖರಾಗಿಸಿರುವವರು ಘಟ್ಟಕ್ಕೆ ಬೆಂಕಿ ಇಡುತ್ತಲೇ ಇದ್ದಾರೆ. ಸರ್ಕಾರವೆಂಬುದು ತಾಯ್ತನದಲ್ಲಿ ಜನ, ನೆಲ ಹಾಗೂ ನೀರನ್ನು ಸಂರಕ್ಷಿಸಬೇಕೆಂಬುದು ಅಪೇಕ್ಷೆ. ಆದರೆ, ಅಂತಹ ತಾಯಿ ಮೊಲೆ ಹಾಲೇ ವಿಷವಾಗತೊಡಗಿದರೆ ಆಪತ್ತಿನಿಂದ ಕಾಪಾಡುವಂತೆ ಜನರು ಯಾರ ಮೊರೆ ಹೋಗಬೇಕು? ಯಾರ ಮೇಲೆ ಅಪಾದನೆ ಹೊರಿಸಬೇಕು?



ವಾಚಕರ ವಾಣಿ

ವಚನ ಪ್ರಸ್ತಾಪ ಸರಳ; ಪಾಲನೆ ಕಷ್ಟಕರ

‘ಧರೆಯ ಕೃಷಿ ಶುದ್ಧವಾಗಿಯಲ್ಲದೆ, ಸಸಿ ಶುದ್ಧವಿಲ್ಲ’ ಎಂಬ ವಚನಕಾರ ಶಿವಲೆಂಕ ಮಂಚಣ್ಣರ ಸಾಲುಗಳು ಈ ಬಾರಿಯ ರಾಜ್ಯ ಬಜೆಟ್ ಪುಸ್ತಿಕೆಯಲ್ಲಿವೆ. ವಚನಗಳನ್ನು ಪ್ರಕಟಿಸಿ ದರೆ ಸಾಕೆ? ಆಡಳಿತದಲ್ಲಿ ಅವುಗಳ ಸಾರಾಂಶ ಅಳವಡಿಸಿಕೊಳ್ಳಬೇಕಲ್ಲವೆ? ರಾಜ್ಯ ಸರ್ಕಾರವೂ ಭ್ರಷ್ಟಾಚಾರದಿಂದ ಹೊರತಾಗಿಲ್ಲ. ಕೆಪಿಎಸ್‌ಸಿ ವಿರುದ್ಧ ಕೇಳಿಬರುತ್ತಿ ರುವ ಭ್ರಷ್ಟಾಚಾರದ ಬಗ್ಗೆ ಸಮಗ್ರ ತನಿಖೆ ನಡೆಸಲು ಸರ್ಕಾರ ಮನಸ್ಸು ಮಾಡುತ್ತಿಲ್ಲ. ಆಡಳಿತ ನಡೆಸಲು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಲೋಪ ವಾದರೆ ಅವರಿಂದ ಉತ್ತಮ ಆಡಳಿತ ಬಯಸುವುದು ಸಾಧ್ಯವಿಲ್ಲ. ಸರ್ಕಾರವು ವಚನಗಳನ್ನು ಪ್ರಕಟಿಸಿದರೆ ಸಾಲದು. ವಚನಗಳ ಆಶಯವನ್ನು ಆಡಳಿತದಲ್ಲಿ ಅಳವಡಿಸಿಕೊಂಡರೆ ಅಭಿವೃದ್ಧಿ ಸಾಧ್ಯ.

ರಾಜೇಶ ಆರ್., ಪಾವಗಡ

ವರ್ಷವಾದರೂ ಶಿಕ್ಷಕರಿಗೆ ಸಲ್ಲದ ಗೌರವಧನ

ದ್ವಿತೀಯ ಪಿಯುಸಿ ಪರೀಕ್ಷೆಯ ಕೊಠಡಿ ಮೇಲ್ವಿಚಾರಕರನ್ನಾಗಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸಲಾಗುತ್ತಿದೆ. ಆದರೆ, ಅವರಿಗೆ ಗೌರವಧನ ದೊರಕುತ್ತಿಲ್ಲ. ಕಳೆದ ವರ್ಷ ಕರ್ತವ್ಯ ನಿರ್ವಹಿಸಿದವರಿಗೆ ಇನ್ನೂ ಗೌರವಧನ ನೀಡಿಲ್ಲ. ಪರೀಕ್ಷೆಗಳು ಮುಗಿದ ತಕ್ಷಣವೇ ನಗದು ಪಾವತಿಸುವ ವ್ಯವಸ್ಥೆಯಾಗಬೇಕು. ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳು, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿದ ತಕ್ಷಣವೇ ಸಂಭಾವನೆ ನೀಡಲಾಗುತ್ತದೆ. ಬಾಕಿ ಗೌರವಧನ ಬಿಡುಗಡೆಗೆ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಗಮನಹರಿಸಬೇಕಿದೆ.

ರಾಜೇಂದ್ರಕುಮಾರ ಮುದ್ನಾಳ್, ಯಾದಗಿರಿ

ಮತದಾರರಿಗೆ ಆಮಿಷ ಅಕ್ರಮವಲ್ಲವೆ?

ಬಿಹಾರದ ವಿಧಾನಸಭಾ ಚುನಾವಣೆಯಲ್ಲಿ ಒಂದೂವರೆ ಕೋಟಿ ಮಹಿಳಾ ಮತದಾರರ ಖಾತೆಗೆ ಎನ್‌ಡಿಎ ಸರ್ಕಾರವು ತಲಾ ಹತ್ತು ಸಾವಿರ ರೂಪಾಯಿ ಜಮೆ ಮಾಡಿತ್ತು. ಚುನಾವಣೆ ಘೋಷಣೆಯಾಗಿರುವ ತಮಿಳುನಾಡಿನಲ್ಲೂ ಡಿಎಂಕೆ ಸರ್ಕಾರವು ಒಂದು ಕೋಟಿ ಮೂವತ್ತು ಲಕ್ಷ ಮಹಿಳೆಯರ ಖಾತೆಗೆ ತಲಾ ಐದು ಸಾವಿರ ರೂಪಾಯಿ ಹಾಕಿದೆ. ಅಸ್ಸಾಂನಲ್ಲಿ ಬಿಜೆಪಿ ಸರ್ಕಾರವು ನಲವತ್ತು ಲಕ್ಷ ಮಹಿಳೆಯರಿಗೆ ತಲಾ ಒಂಬತ್ತು ಸಾವಿರ ರೂಪಾಯಿ ನೀಡಿದೆ. ಚುನಾವಣೆಗೆ ಕೆಲವೇ ದಿನಗಳಿರುವಾಗ ಮತದಾರರ ಖಾತೆಗಳಿಗೆ ಹಣ ಹಾಕಿ ಆಮಿಷವೊಡ್ಡುವುದು ಚುನಾವಣಾ ಅಕ್ರಮದಡಿ ಬರುವುದಿಲ್ಲವೆ? ಮಾಧ್ಯಮಗಳಲ್ಲಿ ಈ ಸುದ್ದಿ ಪ್ರಕಟವಾದರೂ ಕೇಂದ್ರ ಮುಖ್ಯ ಚುನಾವಣಾ ಅಧಿಕಾರಿಯ ಮೌನ ಸೋಜಿಗ ತಂದಿದೆ.

ಶಾಂತಕುಮಾರ್, ಸರ್ಜಾಪುರ

ಸೇಂದಿವನ: ಸಚಿವರಿಗೆ ಮಾಹಿತಿ ಕೊರತೆ

ನಮೂನೆ 50, 53 ಮತ್ತು 57 ಅರ್ಜಿಗಳಿಗೆ ಸೇಂದಿವನ ಮಂಜೂರು ಮಾಡಲು ಸರ್ಕಾರ ಕ್ರಮವಹಿಸಬೇಕೆಂದು ಶಾಸಕ ಟಿ.ಬಿ. ಜಯಚಂದ್ರ ಅವರು ಸದನದಲ್ಲಿ ಒತ್ತಾಯಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಕಂದಾಯ ಸಚಿವರು, ಈ ಕುರಿತಂತೆ ಹೊಸ ನಿಯಮಾವಳಿ ರೂಪಿಸುವುದಾಗಿ ಹೇಳಿದ್ದಾರೆ. ಈಗಾಗಲೇ, ನಮೂನೆ 50, 53 ಅರ್ಜಿಗಳಿಗೆ ಜಮೀನು ಮಂಜೂರಾಗಿದೆ. ಶಾಸಕರು, ಸಚಿವರಿಗೆ ಈ ವಿಷಯದ ಕೊರತೆ ಇದ್ದಂತಿದೆ. ಅಬಕಾರಿ ಇಲಾಖೆ ವಶದಲ್ಲಿದ್ದ ಸೇಂದಿವನಗಳನ್ನು ಕಂದಾಯ ಇಲಾಖೆಗೆ ಹಸ್ತಾಂತರಿಸಿ ಸಾರ್ವಜನಿಕ ಉದ್ದೇಶದ ಬಳಕೆಗೆ 2003ರಲ್ಲಿಯೇ ಹೇಳಲಾಗಿದೆ. 2018ರಲ್ಲಿ ಹೊಸದಾಗಿ ಸಕ್ರಮ ಸಾಗುವಳಿಗೆ ಅರ್ಜಿ ಕರೆಯಲಾಗಿತ್ತು. ನಮೂನೆ 57 ಅರ್ಜಿಗಳಿಗೆ ಸೇಂದಿವನ ಮಂಜೂರು ಮಾಡಬೇಕೆಂಬ ಕೂಗು ರಾಜ್ಯದಲ್ಲಿದೆ. ಈ ಕೂಗನ್ನು ಮಾನ್ಯ ಮಾಡಬೇಕಿದೆ.

ಲಕ್ಷ್ಮೀಕಾಂತರಾಜು ಎಂ.ಜಿ., ಗುಬ್ಬಿ

ಹಿಂಬಾಗಿಲಲ್ಲಿ ‘ರಾಷ್ಟ್ರೀಯ ಶಿಕ್ಷಣ ನೀತಿ’

ಕೆಪಿಎಸ್ ಶಾಲೆಗಳು ‘ಬಡವರ ಮಕ್ಕಳು ಬೆಳೆಬೇಕು’ ಎಂಬ ಆಶಯಕ್ಕೆ ಅನುಗುಣವಾಗಿವೆ. ಸರ್ಕಾರಿ ಶಾಲೆಗಳು ಉಳಿದರಷ್ಟೆ ಕನ್ನಡ ಭಾಷೆ ಮತ್ತು ಅಸ್ಮಿತೆ ಉಳಿಯಲಿದೆ. ಕೆಪಿಎಸ್ ಶಾಲೆಗಳು ಹಿಂದುಳಿದ, ದಲಿತರ ಮಕ್ಕಳ ಪಾಲಿಗೆ ಆಶಾಕಿರಣ. ಆದರೆ, ಇವುಗಳ ಸ್ಥಾಪನೆ ನೆಪದಲ್ಲಿ 25 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಒಗ್ಗೂಡಿಸುವುದು ಆತಂಕಕಾರಿ. ಸರ್ಕಾರವು ಹಿಂಬಾಗಿಲ ಮೂಲಕ ‘ರಾಷ್ಟ್ರೀಯ ಶಿಕ್ಷಣ ನೀತಿ’ ಅಳವಡಿಸಿಕೊಂಡಿದೆ.

ಸಿಎಸ್‌ಆರ್ ನಿಧಿ ಮೂಲಕ ಖಾಸಗಿಯವರನ್ನು ಒಳಗು ಮಾಡಿಕೊಂಡಿದೆ. ಮೂಲಸೌಕರ್ಯ ರೂಪಿಸುವ ನೆಪದಲ್ಲಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ಕೆಪಿಎಸ್ ಶಾಲೆಗಳಲ್ಲಿ ಖಾಸಗಿ ಹಸ್ತಕ್ಷೇಪ ಹೆಚ್ಚಾದರೆ ಅವು ಕುಲಾಂತರಿ ಸಸ್ಯಗಳಂತೆ ನಾಡಿನ ಸಹಜ ಶಿಕ್ಷಣವನ್ನು ಹಾಳುಮಾಡುತ್ತವೆ. ಕನ್ನಡದ ಅಸ್ಮಿತೆ, ದ್ವಿಭಾಷಾ ನೀತಿ ಜಾರಿಗೂ ಮಾರಕವಾಗಲಿದೆ.

ಎಸ್. ಬೈರೇಗೌಡ, ಬೆಂಗಳೂರು

ಸರ್ಕಾರಕ್ಕೆ ‘ಹುಲಿ ಸವಾರಿ’ಯಾದ ಬದ್ಧ ವೆಚ್ಚ

‘ಏರಿಕೆಯತ್ತ ಬದ್ಧ ವೆಚ್ಚದ ದಾಪುಗಾಲು’ ವರದಿಯು (ಪ್ರ.ವಾ., ಮಾರ್ಚ್ 12) ಸತ್ಯಕ್ಕೆ ಹತ್ತಿರವಾಗಿದೆ. ಲಾಗಾಯ್ತಿನಿಂದ ಎಲ್ಲಾ ಸರ್ಕಾರಗಳು ತಮ್ಮ ಆರ್ಥಿಕ ಪರಿಸ್ಥಿತಿಗನುಗುಣವಾಗಿ ವೇತನ, ಪಿಂಚಣಿ ಸೇರಿದಂತೆ ಅಗತ್ಯ ಕ್ಷೇತ್ರಗಳಿಗೆ ಆರ್ಥಿಕ ನೆರವು, ಸಹಾಯಧನ, ಸಾಮಾಜಿಕ ಭದ್ರತಾ ಕಾರ್ಯಕ್ರಮ ನೀಡುತ್ತಿದ್ದವು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಗ್ಯಾರಂಟಿ ಕಾರ್ಯಕ್ರಮಗಳೆಂಬ ಹೊಸ ಸಂಪ್ರದಾಯವನ್ನು ದೇಶದ ಎಲ್ಲಾ ರಾಜ್ಯಗಳು ಅನುಸರಿಸುತ್ತಿವೆ. ಇದು ಬದ್ಧ ವೆಚ್ಚದ ಏರುಗತಿಗೆ ಗಣನೀಯ ಕೊಡುಗೆ ನೀಡುತ್ತಿದೆ. ‘ಗ್ಯಾರಂಟಿ’ಗಳು ಉಪಯುಕ್ತವಾದ ಉಪಕ್ರಮ; ಆದರೆ, ಇಂತಹ ಕಾರ್ಯಕ್ರಮಗಳ ಘೋಷಣೆಯು ನಿಯಮಿತವಾಗಿ ಪರಿಶೀಲನೆಗೆ ಒಳಪಡಬೇಕು. ಆಗಷ್ಟೆ ಸರ್ಕಾರದ ಸೌಲಭ್ಯಗಳ ಸದ್ಬಳಕೆ ಮತ್ತು ಅಭಿವೃದ್ಧಿ ಸಾಧ್ಯ. ಆದರೆ, ಬದ್ಧ ವೆಚ್ಚದ ಏರುಗತಿಯು ಎಲ್ಲಾ ಸರ್ಕಾರಗಳ ಪಾಲಿಗೆ ‘ಹುಲಿ ಸವಾರಿ’ಯಂತಾಗಿದೆ.

ರಘು ಗಂಕಾರನಹಳ್ಳಿ, ಮಧುಗಿರಿ

ಚುರುಮುರಿ



ಬೇವು–ಬೆಲ್ಲದ ಮುನ್ನೋಟವು

• ಲಿಂಗರಾಜು ಡಿ.ಎಸ್.

2026ರ ವಿಕ್ರಮ ಸಂವತ್ಸರದಲ್ಲಿ ದೇಶದ ಜನಸಾಮಾನ್ಯರಿಗೆ ಬೇವು ಹೆಚ್ಚು. ಪಂಚಾಂಗದ ಪ್ರಕಾರ ಗುರುವು ಅರಸನಾಗಿದ್ದು, ಮಂಗಳನು ಮಂತ್ರಿಯಾಗಿರಲಿದ್ದಾನೆ. ಚುನಾವಣೆ ದಿಸೆಯಿಂದ ಪ್ರಧಾನಿಗೆ, ಸಿಎಂಗಳಿಗೆ ಅಗ್ನಿಪರೀಕ್ಷೆ.

ಕೊಲ್ಲಿ ಕಾಳಗದಿಂದ ಎಲ್ಲೆಡೆ ವಾರ್ಮೋಡಗಳು ಕವಿದು ಕೊಲ್ಲಾಟ ಹೆಚ್ಚಲಿದೆ. ಜಗತ್ತಿನ ಆರ್ಥಿಕ ಸ್ಥಿತಿಗೆ ಟ್ರಂಪೇಚರ್ ಬಾಧೆ. ಬಾಂಬುವಂತರ ಕಾಳಗಕ್ಕೆ ಕೊರಿಯಾದ ಕಿಮ್ಮಣ್ಣನ ಪ್ರವೇಶದ ಕ್ಲೈಮ್ಯಾಕ್ಸ್. ಜನತೆಗೆ ಗ್ಯಾಸ್ಫೋಟನ ಕಾಯಿಲೆ ಕಾಡಲಿದೆ. ಹೋಟೆಲು ನಂಬಿದವರಿಗೆ ತತ್ವಾರವು.

ಇರಾನು ದೇವತೆಯ ಅಭಯದಿಂದ ಭಾರತೀಯ ನೌಕೆಗಳ ಬಿಡುಗಡೆ. ಮನೆ ಮನೆಯಲ್ಲೂ ಸೌದೆ ಒಲೆಯಿಂದ ಕಣ್ಣುರಿ, ಹಿಡಿ ಶಾಪ. ಕಣ್ಣೀರಮಳೆ ಸಂಭವವು. ಶನಿ ನೀಚ ರಾಶಿಯಲ್ಲಿರುವುದರಿಂದ ಬಡಜನತೆಗೆ ದುರ್ಭಿಕ್ಷದ ಭಯ ಮತ್ತು ಸಂಕಟ.

ಊರು ಹೊತ್ತಿ ಉರಿಯುತ್ತಿದ್ದರೂ ರಾಜಕಾರಣಿಗಳು ಹೌತಣಕೂಟ ಮತ್ತು ರೆಸಾರ್ಟ್ ಸಂಭ್ರಮದಲ್ಲಿ ಮುಳುಗೇಳುವರು. ಚುನಾವಣೆ ಘೋಷಣೆಯಿಂದ ಹಿರಿ, ಕಿರಿ, ಮರಿ, ನರಿ ರಾಜಕಾರಣಿಗಳಿಗೆ ಸಂತಸವು. ಪಕ್ಷದ ಟಿಕೇಟಿಗೆ ತಲ್ಲಣ. ಕುಟುಂಬ ರಾಜಕಾರಣ ಮತ್ತು ಕುದುರೆ ವ್ಯಾಪಾರದಿಂದ ಮಾನಹಾನಿ. ಮಂತ್ರಿ ಸ್ಥಾನಕ್ಕೆ ರೊಟೇಶನ್ ಪದ್ಧತಿ ಬೇಡಿಕೆ. ಮುದಿ ರಾಜಕಾರಣಿಗಳು ವಾನಪ್ರಸ್ಥದ ನಿರ್ಧಾರದಿಂದ ಹಿಂದೆ ಸರಿಯುವರು.

ಕುರ್ಚಿ ಕದನಕ್ಕೆ ಕ್ಲೈಮ್ಯಾಕ್ಸ್ ಸಂಭವ. ಸಂಸದರು ಮತ್ತು ಶಾಸಕರು ತಮ್ಮ ಕರ್ತವ್ಯವನ್ನೇ ಮರೆತು ಬೈದಾಟದಲ್ಲೇ ಇರುವುದರಿಂದ ಇವರಿಗೆಲ್ಲಾ ಉಚಿತ ಬೈಯ್ಯೋಗ್ಯಾಸ್ ಕೊಡಲು ರಾಜ್ಯ ಸರ್ಕಾರ ಚಿಂತಿಸಲಿದೆ. ಬಾಯಿದ್ದವರಿಗೆ ಬೆಲ್ಲ ಎನ್ನುವುದು ಸತ್ಯವಾಗಲಿದೆ.

ಅಧಿಕಾರಿ ವರ್ಗವು ಸಿಗ್ಗಿಲ್ಲದೇ ಕಾಸು ಮಾಡಲು ಮುಂದಾಗಿ ಲೋಕಾಯುಕ್ತರ ಬಲೆಗೆ ಬೀಳಲಿರುವುದರಿಂದ ಲೋಕಾಯುಕ್ತರಿಗೆ ಬಿಡುವಿಲ್ಲದ ಬೇಟೆ. ಐಪಿಎಲ್ ಕದನಕ್ಕೆ ಕ್ಷಣಗಣನೆ ಆರಂಭವು. ಆರ್‌ಸಿಬಿ ಖರೀದಿಗೆ ವಿದೇಶಿ ಬಂಡವಾಳ ಸಾಧ್ಯತೆ. ಆದರೂ, ಅಭಿಮಾನಿಗಳಿಂದ ಈ ಬಾರಿಯೂ ಕಪ್ ನಮ್ದೇ ಎಂಬ ರೋಷವಾಕ್ಯ.

ಸರ್ವ ಜೆನ್–ಝೀಗಳಿಗೂ, ಶ್ರಮಜೀವಿಗಳಿಗೂ, ಉಂಡಾಡಿಗರಿಗೂ ಯಶಸ್ಸು ಪ್ರಾಪ್ತಿರಸ್ತು.

ಸಂಗತ

‘ಟ್ರಿಪಲ್ ಟೆಸ್ಟ್’ ಇಲ್ಲದೆ ಪಾಲಿಕೆ ಚುನಾವಣೆ?

ಸುಪ್ರೀಂ ಕೋರ್ಟ್ ನಿರ್ದೇಶನದ ‘ಟ್ರಿಪಲ್ ಟೆಸ್ಟ್’ ನೀತಿ ಅನುಸರಿಸದೆ ‘ಪಾಲಿಕೆ’ ಚುನಾವಣೆಗೆ ಸರ್ಕಾರ ಮುಂದಾಗಿರುವುದು ಸಾಮಾಜಿಕ ನ್ಯಾಯಕ್ಕೆ ವಿರುದ್ಧ.

• ಕೆ.ಎನ್. ಲಿಂಗಪ್ಪ

‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ’ ಚುನಾವಣೆ ನಡೆಯದೆ ಐದು ವರ್ಷಗಳೇ ಕಳೆದುಹೋಗಿವೆ. ಜೂನ್ ತಿಂಗಳ ಒಳಗೆ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿರುವುದರಿಂದ, ಈಗ ಚುನಾವಣಾ ಸಿದ್ಧತೆ ಆರಂಭ ಗೊಂಡಿದೆ.

ಬಿಬಿಎಂಪಿಗೆ ‘ಜಿಬಿಎ’ ಎಂದು ನಾಮಕರಣ ಮಾಡಿ, ಅದನ್ನು ಐದು ನಗರಪಾಲಿಕೆಗಳಾಗಿ ವಿಂಗಡಿಸುವುದರ ಜೊತೆಗೆ ವಾರ್ಡ್ ವಿಂಗಡಣೆಯನ್ನೂ ಮಾಡಿರುವ ಸರ್ಕಾರ, ಮೀಸಲಾತಿಯನ್ನೂ ನಿಗದಿಗೊಳಿಸಿದೆ. ಈ ದಿಸೆಯಲ್ಲಿ ಅಂತಿಮ ಅಧಿಸೂಚನೆಯನ್ನೂ ಹೊರಡಿಸಿದೆ. ರಾಜ್ಯ ಚುನಾವಣಾ ಆಯೋಗ ಮತದಾರರ ಪಟ್ಟಿಯನ್ನೂ ಪ್ರಕಟಿಸಿದೆ. ಈ ಎಲ್ಲಾ ಸಿದ್ಧತೆಗಳೊಡನೆ ಜಿಬಿಎಗೆ ಚುನಾವಣೆ ನಡೆಸಲು ಸರ್ಕಾರಕ್ಕೆ ಯಾವುದೇ ಅಡಚಣೆ ಇಲ್ಲ ಎಂದು ಮೇಲ್ನೋಟಕ್ಕೆ ಕಂಡುಬರುವುದು ಸಹಜ.

ಕೆ. ಕೃಷ್ಣಮೂರ್ತಿ ವರ್ಸಸ್ ಭಾರತ ಒಕ್ಕೂಟ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಎರಡು ಅಧಿಷರತ್ತುಗಳನ್ನು ವಿಧಿಸಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಸರ್ಕಾರಕ್ಕೆ 2010ರಲ್ಲಿ ಆದೇಶಿಸಿತ್ತು. ಒಟ್ಟಾರೆ ಮೀಸಲಾತಿಯ ಕೋಟಾ ಶೇ 50ರ ಮಿತಿ ಮೀರುವ ಹಾಗಿಲ್ಲ ಹಾಗೂ ‘ಟ್ರಿಪಲ್ ಟೆಸ್ಟ್’ ಕ್ರಮ ಅನುಸರಿಸಿ ರಾಜಕೀಯವಾಗಿ ಹಿಂದುಳಿದ ಜಾತಿ ಅಥವಾ ವರ್ಗಗಳನ್ನು ಗುರ್ತಿಸುವುದೇ ಆ ಷರತ್ತುಗಳು. ಆ ಟ್ರಿಪಲ್ ಟೆಸ್ಟ್ ಇಂತಿದೆ: ಸ್ವತಂತ್ರ ಮತ್ತು ಸಮರ್ಪಿತ ಆಯೋಗವೊಂದರ ರಚನೆ, ಪ್ರಾಯೋಗಿಕ ದತ್ತಾಂಶಗಳನ್ನು ಇಟ್ಟುಕೊಂಡು ರಾಜಕೀಯವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸು ವುದು ಹಾಗೂ ಮೀಸಲಾತಿಯ ಒಟ್ಟು ಮಿತಿ ಶೇ 50ರಷ್ಟು ಮೀರಬಾರದು.



ಸುಪ್ರೀಂ ಕೋರ್ಟ್‌ನ ಆದೇಶವನ್ನು ಪಾಲಿಸುವಲ್ಲಿ 2010ರಲ್ಲಿ ರಾಜ್ಯ ಸರ್ಕಾರ ಹಿಂದೇಟು ಹಾಕಿತು. ಶೇ 50ರ ಮಿತಿಯನ್ನು ಜಾರಿಗೊಳಿಸಿ, ಸ್ಥಳೀಯ ಸಂಸ್ಥೆಗಳ ಹಿಂದುಳಿದ ವರ್ಗಗಳ ಮೀಸಲಾತಿ ಸಂಖ್ಯೆಗಳನ್ನೇನೊ ಕಡಿಮೆಗೊಳಿಸಿತು. ಆದರೆ, ‘ಟ್ರಿಪಲ್ ಟೆಸ್ಟ್’ ಕೈಗೆತ್ತಿಕೊಳ್ಳಲಿಲ್ಲ. 2015ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಿದಾಗಲೂ ಸರ್ಕಾರ ‘ಟ್ರಿಪಲ್ ಟೆಸ್ಟ್’ ಉಸಾಬರಿಗೆ ಹೋಗಲಿಲ್ಲ.

ವಿಕಾಸ್ ರಾವ್ ಗೌಳಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಮಹಾರಾಷ್ಟ್ರ ಸರ್ಕಾರಕ್ಕೆ ‘ಟ್ರಿಪಲ್ ಟೆಸ್ಟ್’ ನಡೆಸುವಂತೆ ತಾಕೀತು ಮಾಡಿದೆ. ಮಧ್ಯಪ್ರದೇಶದ ಪ್ರಕರಣ ಒಂದರಲ್ಲಿಯೂ ‘ಟ್ರಿಪಲ್ ಟೆಸ್ಟ್’ ನಡೆಸುವಂತೆ ಕಟ್ಟುನಿಟ್ಟಿನ ಆದೇಶ ನೀಡಿದೆ. ಮಹಾರಾಷ್ಟ್ರದಲ್ಲಿ ಇದನ್ನು ಕ್ರಮಬದ್ಧವಾಗಿ ಮಾಡಿಲ್ಲ ಎಂಬ ಪ್ರಶ್ನೆ ಮತ್ತೊಮ್ಮೆ ಸುಪ್ರೀಂ ಕೋರ್ಟ್ ಮುಂದೆ ಬಂದಾಗ, ‘ಟ್ರಿಪಲ್ ಟೆಸ್ಟ್’ ಮಾಡುವುದು ಆಯಾ ರಾಜ್ಯಗಳ ಕರ್ತವ್ಯ; ನ್ಯಾಯಾಲಯದ ಆದೇಶ ಪಾಲಿಸದಿದ್ದಲ್ಲಿ ಎಲ್ಲ ಕ್ಷೇತ್ರ ಅಥವಾ ವಾರ್ಡ್‌ಗಳನ್ನು ಸಾಮಾನ್ಯ ಕ್ಷೇತ್ರ ಅಥವಾ ವಾರ್ಡ್ ಎಂದು ಪರಿಗಣಿಸಿ ಚುನಾವಣೆ ನಡೆಸಿ ಎಂದು ಕಟ್ಟಪ್ಪಣೆ ವಿಧಿಸಿತು. ಹೀಗಾಗಿ, ಯಾವುದೇ ರಾಜ್ಯವಾಗಲಿ ಅಥವಾ ಕರ್ನಾಟಕವೇ ಆಗಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕೊಡದೆ ಚುನಾವಣೆ ನಡೆಸುವುದು ಸುಲಭದ ಮಾತಲ್ಲ.

ಸುಪ್ರೀಂ ಕೋರ್ಟ್ ಕಟ್ಟಪ್ಪಣೆಯ ಇಕ್ಕಟ್ಟಿಗೆ ಸಿಲುಕಿದ ಕರ್ನಾಟಕ ಸರ್ಕಾರವು 2022ರಲ್ಲಿ ‘ಟ್ರಿಪಲ್ ಟೆಸ್ಟ್’ ಮಾಡುವ ಕಾರ್ಯಕ್ಕೆ ನ್ಯಾಯಮೂರ್ತಿ ಭಕ್ತವತ್ಸಲ ಆಯೋಗವನ್ನು ರಚಿಸಿ, ಮೂರು ತಿಂಗಳಲ್ಲಿ ವರದಿ ಸಲ್ಲಿಸಲು ಹೇಳಿತು. ಆಯೋಗ ಬರೀ 46 ದಿನಗಳಲ್ಲಿಯೇ ವರದಿ ಸಲ್ಲಿಸಿ ಇತಿಹಾಸವನ್ನೇ ನಿರ್ಮಿಸಿತು! ಅತ್ಯಲ್ಪ ಅವಧಿಯಲ್ಲಿ ಆಯೋಗ ಪ್ರಾಯೋಗಿಕ ದತ್ತಾಂಶಗಳನ್ನು ಹೇಗೆ ಸಂಗ್ರಹಿಸಿತು ಹಾಗೂ ಯಾವ ಅಳತೆಗೋಲನ್ನು ಅನುಸರಿಸಿ ಆ ವರ್ಗಗಳನ್ನು ಗುರ್ತಿಸಿತು ಎಂಬುದೇ ಯಾರಿಗೂ ತಿಳಿದಿಲ್ಲ.

2023ರಲ್ಲಿ ಅಸ್ತಿತ್ವಕ್ಕೆ ಬಂದ ಸಿದ್ದರಾಮಯ್ಯ ಸರ್ಕಾರದ ಸಂಪುಟದಲ್ಲಿ ಭಕ್ತವತ್ಸಲ ಆಯೋಗದ ವರದಿಯನ್ನು ಚರ್ಚಿಸಿ, ಆಯೋಗದ ಕೆಲವೊಂದು ಸಲಹೆಗಳನ್ನು ಒಪ್ಪಿ ಕೆಲವೊಂದನ್ನು ತಿರಸ್ಕರಿಸಲಾಗಿದೆ ಎಂಬ ವಿಷಯ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಅಲ್ಲಿಗೆ ಈ ವಿಷಯದ ಚರ್ಚೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿತ್ತು. ಸರ್ಕಾರವಾದರೂ ನ್ಯಾಯಾಲಯದ ಆದೇಶದ ಪ್ರಕಾರ ಆಯೋಗವು ವರದಿ ಸಿದ್ಧಪಡಿಸಿದೆಯೇ ಎಂಬ ಅಂಶದ ಬಗ್ಗೆ ತಲೆಬಿಸಿ ಮಾಡಿಕೊಳ್ಳದೆ ಹಾಗೆಯೇ ಮುಂದುವರಿಯಿತು. ಮುಂದೆ ಸರ್ಕಾರ ‘ಟ್ರಿಪಲ್ ಟೆಸ್ಟ್’ ಬಗ್ಗೆ ಜನತೆಗೆ ಏನನ್ನೂ ಹೇಳದೆ, ಮರೆಮಾಚಿತು.

ಪ್ರಸ್ತುತ ಸರ್ಕಾರ ‘ಟ್ರಿಪಲ್ ಟೆಸ್ಟ್’ ಕ್ರಮ ಅನುಸರಿಸುವುದನ್ನು ತನ್ನಲ್ಲಿಯೇ ಮುಚ್ಚಿಟ್ಟುಕೊಂಡು ಜಿಬಿಎ ಚುನಾವಣೆಗಾಗಿ ವಾರ್ಡ್‌ಗಳನ್ನು ವಿಂಗಡಿಸಿರುವುದಲ್ಲದೆ, ಮೀಸಲಾತಿಯನ್ನು ನಿಗದಿಪಡಿಸಿರುವುದು ಹಿಂದುಳಿದ ವರ್ಗಗಳಿಗೆ ಮರ್ಮಾಘಾತವನ್ನು ನೀಡಿದೆ. ಹಿಂದುಳಿದ ವರ್ಗಗಳಲ್ಲಿ ಕಾನೂನು ಬಲ್ಲವರು ಸರ್ಕಾರದ ಈ ಅನ್ಯಾಯವನ್ನು ಪ್ರಶ್ನಿಸಬೇಕಲ್ಲವೆ?

ಹಿಂದುಳಿದ ವರ್ಗ, ಅದರಲ್ಲೂ ದಮನಿತ ಹಿಂದುಳಿದ ವರ್ಗಗಳಿಗೆ ರಾಜಕೀಯವಾಗಿ ನ್ಯಾಯೋಚಿತ ಪ್ರಾತಿನಿಧ್ಯವನ್ನು ನೀಡಿ ರಾಜಕೀಯ ಸಬಲತೆಯತ್ತ ಸಾಗಲು ದಾರಿಯನ್ನು ಸುಗಮಗೊಳಿಸುವುದು ಸರ್ಕಾರ ಮತ್ತು ಸಮಾಜದ ಕರ್ತವ್ಯ. ಸಂದರ್ಭ ಒದಗಿದಾಗಲೆಲ್ಲ ಸಾಮಾಜಿಕ ನ್ಯಾಯಕ್ಕೆ ಕಂಕಣಬದ್ಧ ಎಂದು ಸರ್ಕಾರ ಪದೇ ಪದೇ ಹೇಳುತ್ತದೆ. ಆದರೆ, ಎಲ್ಲವನ್ನೂ ಧಿಕ್ಕರಿಸಿ, ದಬ್ಬಾಳಿಕೆ ಮೇಲೆ ಚುನಾವಣೆ ನಡೆಸುವುದು ಸಾಮಾಜಿಕ ನ್ಯಾಯ ಎನ್ನಿಸಿಕೊಳ್ಳುವುದೆ?

ಲೇಖಕ: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಇಂಧನ ಭದ್ರತೆ ಅತಿ ಅವಲಂಬನೆ ಸೃಷ್ಟಿಸಿದ ಬಿಕ್ಕಟ್ಟು

ಇರಾನ್ ಯುದ್ಧದಿಂದ ಭಾರತದಲ್ಲಿ ಎಲ್‌ಪಿಜಿ, ಎಲ್‌ಎನ್‌ಜಿ ಕೊರತೆ; ದಾಸ್ತಾನು ವ್ಯವಸ್ಥೆ ಅಲಭ್ಯ


46 ಸಾವಿರ ಟನ್ ಎಲ್‌ಪಿಜಿ ಹೊತ್ತ ಶಿವಾಲಿಕ್ ಹಡಗು ಹೊರ್ಮುಜ್ ಜಲಸಂಧಿ ದಾಟಿ ಸೋಮವಾರ ಗುಜರಾತ್‌ನ ಮುಂದ್ರಾ ಬಂದರು ತಲುಪಿತು

ಅಮೆರಿಕ–ಇಸ್ರೇಲ್ ಜೊತೆಯಾಗಿ ಇರಾನ್ ವಿರುದ್ಧ ಸಾರಿರುವ ಯುದ್ಧದಿಂದಾಗಿ ಭಾರತದಲ್ಲಿ ಅಡುಗೆ ಅನಿಲ (ಎಲ್‌ಪಿಜಿ) ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಪೂರೈಕೆ ವ್ಯವಸ್ಥೆಯಲ್ಲಿ ಗೊಂದಲ ಮೂಡಿದೆ. ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಕೊರತೆಯಿಂದ ಹಲವು ಹೋಟೆಲ್‌ಗಳು ಬಂದ್ ಆಗಿವೆ. ರಸಗೊಬ್ಬರ ತಯಾರಿಕಾ ಘಟಕಗಳು ಸ್ಥಗಿತಗೊಂಡಿವೆ. ಸ್ಮಶಾನಗಳಲ್ಲಿ ಶವದಹನಕ್ಕೂ ಅಡ್ಡಿಯುಂಟಾಗಿದೆ. ಭಾರತವು ಎಲ್‌ಪಿಜಿ ಮತ್ತು ಎನ್‌ಎನ್‌ಜಿಗಾಗಿ ಪಶ್ಚಿಮ ಏಷ್ಯಾ ರಾಷ್ಟ್ರಗಳನ್ನೇ ಹೆಚ್ಚಾಗಿ ಅವಲಂಬಿಸಿರುವುದು ಮತ್ತು ಅದರ ದಾಸ್ತಾನಿಗೆ ಸೂಕ್ತ ಕ್ರಮ ಕೈಗೊಳ್ಳದೇ ಇರುವುದು ಭಾರತಕ್ಕೆ ಸಂಕಷ್ಟ ತಂದೊಡ್ಡಿದೆ. ಎರಡು ವಾರಗಳಿಂದ ನಡೆಯುತ್ತಿರುವ ಯುದ್ಧವು ಇಂಧನ ಭದ್ರತೆ ವಿಚಾರದಲ್ಲಿ ಭಾರತದ ದೌರ್ಬಲ್ಯವನ್ನು ಬಹಿರಂಗಪಡಿಸಿದೆ. ದೇಶದ ಆರ್ಥಿಕತೆಗೂ ಇದರಿಂದ ಪೆಟ್ಟು ಬೀಳುವ ಸಂಭವ ಇದೆ. ಕೇಂದ್ರ ಸರ್ಕಾರವು ಪರ್ಯಾಯ ಇಂಧನಗಳ ಬಗ್ಗೆ ಯೋಚಿಸುವ ಸಮಯ ಇದಾಗಿದೆ

ಪ್ರಜಾವಾಣಿ ವಾರ್ತೆ

ಭಾರತದಲ್ಲಿ ಮೊದಲು ಅಡುಗೆ ತಯಾರಿಸಲು ಉರುವಲು, ಸೀಮೆಎಣ್ಣೆ, ಇದ್ದಿಲು, ಸೆಗಣಿ–ಬೆರಣಿ ಇತ್ಯಾದಿಗಳನ್ನು ಹೆಚ್ಚಾಗಿ ಬಳಸಲಾಗುತ್ತಿತ್ತು. ಕೈಗಾರಿಕೆಗಳಲ್ಲಿ ಕಲ್ಲಿದಲ್ಲಿನ ಬಳಕೆ ಹೆಚ್ಚಿತ್ತು. ಆದರೆ, ಗೃಹಿಣಿಯರ ಆರೋಗ್ಯ ರಕ್ಷಣೆ, ಪರಿಸರ ಮಾಲಿನ್ಯ ತಡೆಯುವುದು ಇತ್ಯಾದಿ ಕಾರಣಗಳಿಂದ ಸರ್ಕಾರಗಳು ಜನರನ್ನು ಅಡುಗೆ ಅನಿಲ (ಎಲ್‌ಪಿಜಿ) ಮತ್ತು ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಬಳಸುವಂತೆ ಪ್ರೇರೇಪಿಸಿದವು. ಸರ್ಕಾರ ಸಬ್ಸಿಡಿ ನೀಡಿ ಎಲ್‌ಪಿಜಿ ಬಳಕೆಯನ್ನು ಪ್ರೋತ್ಸಾಹಿಸಿತು. ಒಂದು ಕಾಲದಲ್ಲಿ ಕೆಲವರ ಮನೆಗಳಲ್ಲಿ ಮಾತ್ರವೇ ಕಾಣಸಿಗುತ್ತಿದ್ದ ಎಲ್‌ಪಿಜಿ ಸಿಲಿಂಡರ್‌ಗಳು ಬರಬರುತ್ತಾ ಪ್ರತಿ ಕುಟುಂಬದ ಅಗತ್ಯ ಎನ್ನುವಷ್ಟರ ಮಟ್ಟಿಗೆ ಸರ್ವವ್ಯಾಪಿಯಾದವು.

ವಾಹನಗಳು, ವಿವಿಧ ಉದ್ಯಮಗಳಲ್ಲಿ ಎಲ್‌ಎನ್‌ಜಿ ಬಳಸಲಾಗುತ್ತಿದೆ. ಜನ ಎಲ್‌ಪಿಜಿ ಮತ್ತು ಎಲ್‌ಎನ್‌ಜಿ ಬಳಸುವುದು ಹೆಚ್ಚಾದಂತೆ ಭಾರತದ ಪಶ್ಚಿಮ ಏಷ್ಯಾ ರಾಷ್ಟ್ರಗಳ ಮೇಲಿನ ಅವಲಂಬನೆ ಹೆಚ್ಚಾಯಿತು. ಭಾರತದ ಎಲ್‌ಪಿಜಿ ಬಳಕೆಯ ಶೇ 65ರಷ್ಟನ್ನು ಬೃಹತ್ ಹಡಗುಗಳಲ್ಲಿ ಆಮದು ಮಾಡಿಕೊಳ್ಳಲಾಗುತ್ತಿದೆ ಮತ್ತು ಈ ಪೈಕಿ ಶೇ 90ರಷ್ಟು ಹೊರ್ಮುಜ್ ಜಲಸಂಧಿಯ ಮೂಲಕವೇ ಸಾಗಣೆಯಾಗುತ್ತಿದೆ. ದೇಶದಲ್ಲಿ ತುರ್ತು ಸಂದರ್ಭದಲ್ಲಿ ಕನಿಷ್ಠ ಎರಡು ತಿಂಗಳಿಗೆ ಬೇಕಾಗುವಷ್ಟು ತೈಲ ಸಂಗ್ರಹಿಸುವ ವ್ಯವಸ್ಥೆ ಇದೆ. ಆದರೆ, ಎಲ್‌ಪಿಜಿ, ನೈಸರ್ಗಿಕ ಅನಿಲ ಸಂಗ್ರಹಿಸುವ ವ್ಯವಸ್ಥೆ ಇಲ್ಲ. ಕ್ರಮವಾಗಿ 25 ಮತ್ತು 10 ದಿನಗಳಿಗೆ ಆಗುವಷ್ಟೇ ಎಲ್‌ಪಿಜಿ, ಎಲ್‌ಎನ್‌ಜಿ ದಾಸ್ತಾನು ಇದೆ. ಎಲ್‌ಪಿಜಿಯನ್ನು ತೈಲದಂತೆ ನೆಲದಡಿಯಲ್ಲಿ ಸಂಗ್ರಹಿಸಲು ಆಗುವುದಿಲ್ಲ. ಅದಕ್ಕೆ ವಿಶೇಷ ವಾತಾನುಕೂಲ ವ್ಯವಸ್ಥೆ ಇರುವ ಟ್ಯಾಂಕ್‌ಗಳು ಬೇಕಾಗುತ್ತವೆ. ಅಂತಹ ವ್ಯವಸ್ಥೆ ನಮ್ಮಲ್ಲಿ ಇಲ್ಲದಿರುವುದು ಬಿಕ್ಕಟ್ಟಿಗೆ ಕಾರಣ.


ಇರಾನ್ ಯುದ್ಧವು ಭಾರತದಲ್ಲಿ ಅಡುಗೆ ಮನೆಯಿಂದ ಹಿಡಿದು ಹೋಟೆಲ್‌ಗಳು, ಕೈಗಾರಿಕೆಗಳು, ಕೃಷಿ, ಸ್ಮಶಾನ ಸೇರಿ ಹಲವು ವಲಯಗಳ ಮೇಲೆ ಪರಿಣಾಮ ಬೀರಿದೆ. ಪುಣೆಯಲ್ಲಿ ಎಲ್‌ಪಿಜಿ ಆಧಾರಿತವಾಗಿ ಶವದಹನ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ. ಎಲ್‌ಎನ್‌ಜಿ ಬಳಕೆಗೆ ಸಂಬಂಧಪಟ್ಟಂತೆಯೂ ಇದೇ ರೀತಿಯ ಸ್ಥಿತಿ ಇದೆ. ಭಾರತಕ್ಕೆ ಅತಿ ಹೆಚ್ಚು (ಶೇ 30ರಷ್ಟು) ಎಲ್‌ಎನ್‌ಜಿ ಕತಾರ್‌ನಿಂದ ಆಮದಾಗುತ್ತಿದೆ. ಈಗ ಅದಕ್ಕೆ ಅಡ್ಡಿಯುಂಟಾಗಿದೆ. ಮಾರ್ಚ್ 9ರಂದು ಕೇಂದ್ರ ಸರ್ಕಾರವು ಎಲ್‌ಎನ್‌ಜಿ ಬಳಕೆಗೆ ಸಂಬಂಧಿಸಿದಂತೆ ಆದೇಶವೊಂದನ್ನು ಹೊರಡಿಸಿದೆ. ಅದರ ಪ್ರಕಾರ, ಉದ್ಯಮ ವಲಯಕ್ಕೆ ಪೂರೈಸಲಾಗುತ್ತಿದ್ದ ಎಲ್‌ಎನ್‌ಜಿಯಲ್ಲಿ ಶೇ 20ರಷ್ಟು ಕಡಿತ ಮಾಡಲಾಗಿದೆ. ರಾಸಾಯನಿಕ ಗೊಬ್ಬರ ಕ್ಷೇತ್ರಕ್ಕೆ ನೀಡಲಾಗುತ್ತಿದ್ದ ಎಲ್‌ಎನ್‌ಜಿಯಲ್ಲಿ ಶೇ 30ರಷ್ಟು ಕಡಿತ, ಸಂಸ್ಕರಣ ಘಟಕಗಳು ಮತ್ತು ಪೆಟ್ರೋಕೆಮಿಕಲ್ಸ್ ಕ್ಷೇತ್ರದಲ್ಲಿ ಶೇ 35ರಷ್ಟು ಕಡಿತ ಮಾಡಲಾಗಿದೆ ಎಂದು ಆದೇಶ ಹೇಳಿದೆ.


ಎಲ್‌ಎನ್‌ಜಿ ಕೊರತೆಯಿಂದ ಕೃಷಿಯಲ್ಲಿ ವ್ಯಾಪಕವಾಗಿ ಬಳಸುವ ಯೂರಿಯಾ ತಯಾರಿಕೆಗೆ ಹೊಡೆತ ಬಿದ್ದಿದೆ. ಮುಂಗಾರು ಸಮೀಪಿಸುತ್ತಿದ್ದು, ಪರಿಸ್ಥಿತಿ ಹೀಗೆಯೇ ಮುಂದುವರಿದರೆ, ಕೃಷಿ ಕ್ಷೇತ್ರದ ಮೇಲೆ ತೀವ್ರ ಪರಿಣಾಮ ಉಂಟಾಗುವ ಸಾಧ್ಯತೆ ಇದೆ.

ವಾಹನಗಳು, ಇನ್ನಿತರ ಉದ್ದೇಶಗಳಿಗೂ ಎಲ್‌ಎನ್‌ಜಿ ಪೂರೈಸಲಾಗುವುದು ಎಂದು ಸರ್ಕಾರ ಹೇಳಿದ್ದರೂ ಸಮಸ್ಯೆ ಉಂಟಾಗಿದೆ. ಅನಿಲ ಕೊರತೆಯು ಜನರ ಬದುಕು, ಉದ್ಯಮಗಳ ಜತೆಗೆ ದೇಶದ ಆರ್ಥಿಕತೆಯ ಮೇಲೂ ಪರಿಣಾಮ ಬೀರುವ ಸಂಭವ ಇದೆ. ಪ್ರಸ್ತುತ ತೈಲದ ಸಮಸ್ಯೆ ಇಲ್ಲವಾದರೂ ಯುದ್ಧ ಮುಂದುವರಿದರೆ, ಕೊರತೆ ಉಂಟಾಗುವ ಸಾಧ್ಯತೆ ತಳ್ಳಿ ಹಾಕಲಾಗದು.

ಭಾರತವು ಹೆಚ್ಚು ಹೆಚ್ಚು ಅನಿಲ ಆಧಾರಿತ ಆರ್ಥಿಕತೆಯಾಗುತ್ತಿದ್ದು, ಅದಕ್ಕಾಗಿ ಎಲ್‌ಎನ್‌ಜಿಯನ್ನೇ ಅವಲಂಬಿಸಿದೆ. ಬಳಕೆಗೆ ಅಗತ್ಯವಿರುವ ಅರ್ಧದಷ್ಟು ಅನಿಲವನ್ನು ಭಾರತ ಉತ್ಪಾದಿಸುತ್ತಿದ್ದರೂ ಇನ್ನರ್ಧಕ್ಕೆ ಹೊರ ದೇಶಗಳನ್ನು ಅವಲಂಬಿಸಿದೆ. ಕೇಂದ್ರ ಸರ್ಕಾರ ಭಾರಿ ಪ್ರಮಾಣದಲ್ಲಿ ಟರ್ಮಿನಲ್ ಸಾಮರ್ಥ್ಯ ವಿಸ್ತರಣೆ ಮತ್ತು ಅತಿದೊಡ್ಡ ಅನಿಲ ಪೈಪ್‌ಲೈನ್ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡಿದೆ.

ಈಗ ದೇಶದ ಆರ್ಥಿಕತೆಯು ಹೊರಳುಹಾದಿಯಲ್ಲಿದ್ದು, ಅದರಲ್ಲಿ ಎಲ್‌ಪಿಜಿ ಮತ್ತು ಎಲ್‌ಎನ್‌ಜಿ ಪ್ರಮುಖ ಪಾತ್ರ ವಹಿಸಿವೆ. ದೇಶದಲ್ಲಿ ಹಸಿರು ಜಲಜನಕ ಆಧರಿಸಿದ ಪರ್ಯಾಯಗಳನ್ನು ರೂಪಿಸುವ ಕೆಲಸಗಳು ನಡೆಯುತ್ತಿವೆ. ಆದರೆ, ಅಷ್ಟರಲ್ಲಿಯೇ ಯುದ್ಧವು ಆರಂಭವಾಗಿದ್ದು, ಭಾರತವು ಅನಿಲಕ್ಕಾಗಿ ಹೊರದೇಶಗಳನ್ನು ವಿಶೇಷವಾಗಿ ಪಶ್ಚಿಮ ಏಷ್ಯಾ ರಾಷ್ಟ್ರಗಳನ್ನು ಅತಿಯಾಗಿ ಅವಲಂಬಿಸಿರುವುದನ್ನು, ಬಿಕ್ಕಟ್ಟಿನ ಸಂದರ್ಭಗಳಲ್ಲಿ ಅದರಿಂದ ಉಂಟಾಗಬಹುದಾದ ಪರಿಣಾಮಗಳನ್ನು ಬಯಲು ಮಾಡಿದೆ.





ಆಧಾರ: ಪಿಟಿಐ, ರಾಯಿಟರ್ಸ್, ಪೆಟ್ರೋಲಿಯಂ ಪ್ಲಾನಿಂಗ್ ಆ್ಯಂಡ್ ಅನಾಲಿಸಿಸ್ ಸೆಲ್, ಮಾಧ್ಯಮ ವರದಿಗಳು

ಪರ್ಯಾಯ ಮಾರ್ಗ ಏನು?

ಭಾರತವು ಇಂಧನ ಭದ್ರತೆಗಾಗಿ ಹೊರದೇಶಗಳ ಮೇಲೆ ಅತಿಯಾಗಿ ಅವಲಂಬಿಸುವುದನ್ನು ತಪ್ಪಿಸಲು ಹಲವು ಪರ್ಯಾಯ ಮಾರ್ಗಗಳತ್ತ ತುರ್ತಾಗಿ ಗಮನಹರಿಸಬೇಕಾದ ಅಗತ್ಯವಿದೆ ಎಂಬುದು ತಜ್ಞರ ಮಾತು.

- ಎಲ್‌ಪಿಜಿ, ನೈಸರ್ಗಿಕ ಅನಿಲ ಮತ್ತು ಕಚ್ಚಾ ತೈಲಗಳಿಗಾಗಿ ಪಶ್ಚಿಮ ಏಷ್ಯಾ ರಾಷ್ಟ್ರಗಳು ಸೇರಿದಂತೆ ಹೊರದೇಶಗಳ ಅವಲಂಬನೆಯನ್ನು ಕಡಿಮೆಗೊಳಿಸಲು ದೇಶದಲ್ಲೇ ಅವುಗಳ ಉತ್ಪಾದನೆಯನ್ನು ಹೆಚ್ಚಿಸಬೇಕು. ಅದಕ್ಕಾಗಿ ನಿಕ್ಷೇಪಗಳ ಪತ್ತೆ, ಮೂಲಸೌಕರ್ಯಗಳ ನಿರ್ಮಾಣಕ್ಕೆ ಗಮನಹರಿಸಬೇಕು. ದೇಶದಲ್ಲಿ ತೈಲ ಮತ್ತು ಅನಿಲ ಉತ್ಪಾದನೆಗೆ ಉತ್ತೇಜನ ನೀಡಲು 2017ರಲ್ಲಿ ಕೇಂದ್ರ ಸರ್ಕಾರ ರೂಪಿಸಿರುವ ಒಎಎಲ್‌ಪಿ (ದಿ ಓಪನ್ ಅಕ್ರೇಜ್ ಲೈಸೆನ್ಸಿಂಗ್ ಪಾಲಿಸಿ) ಇನ್ನಷ್ಟು ಪ್ರೋತ್ಸಾಹ ನೀಡಬೇಕು
- ಸೌರಶಕ್ತಿ ಉತ್ಪಾದನೆಯಲ್ಲಿ ದೇಶವು ಉತ್ತಮ ಸಾಧನೆ ಮಾಡುತ್ತಿದೆ. ಸೌರ ಕ್ಷೇತ್ರದಲ್ಲಿ ಇನ್ನಷ್ಟು ಹೂಡಿಕೆ ಮಾಡಿ ಪಳೆಯುಳಿಕೆ ಆಧಾರಿತ ಇಂಧನಗಳ ಬಳಕೆಯನ್ನು ತಗ್ಗಿಸಲು ಕ್ರಮ ವಹಿಸಬೇಕು
- ಪರಿಸರಸ್ನೇಹಿ ಜಲಜನಕ ಅನಿಲದ ಉತ್ಪಾದನೆಗೆ ಉತ್ತೇಜನ ನೀಡುವುದು
- ಕಲ್ಲಿದ್ದಲಿನ ಪದರಗಳ ನಡುವಿನ ಸಂದಿಯಲ್ಲಿ ಲಭ್ಯವಿರುವ ನೈಸರ್ಗಿಕವಾದ ಸಿಬಿಎಂ (ಕೋಲ್ ಬೆಡ್ ಮಿಥೇನ್) ಅನ್ನು ಸಂಗ್ರಹಿಸಲು ಕ್ರಮಕೈಗೊಳ್ಳುವುದು
- ಕಲ್ಲಿದ್ದಲು, ತ್ಯಾಜಗಳನ್ನು ಅನಿಲೀಕರಣಗೊಳಿಸುವ ಮೂಲಕ ಉತ್ಪಾದಿಸುವ ಸಿನ್‌ಗ್ಯಾಸ್ ಉತ್ಪಾದನೆಗೆ ಉತ್ತೇಜನ ನೀಡುವುದು
- ಕೃಷಿ ತ್ಯಾಜ್ಯ, ಸಗಣಿ, ನಗರ ಪ್ರದೇಶಗಳಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯವನ್ನು ಬಳಸಿಕೊಂಡು ಉತ್ಪಾದಿಸಬಹುದಾದ ಸಂಪೀಡಿತ ಜೈವಿಕ ಅನಿಲ (ಸಿಬಿಜಿ) ಉತ್ಪಾದನೆಗೆ ಪ್ರೋತ್ಸಾಹ ಕೊಡುವುದು
- ಈಗ ಉದ್ಭವವಾಗಿರುವಂತಹ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಕಚ್ಚಾ ತೈಲದ ಸಂಗ್ರಹಾಗಾರದ ಮಾದರಿಯಲ್ಲಿ ಎಲ್‌ಪಿಜಿ, ನೈಸರ್ಗಿಕ ಅನಿಲವನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿಡುವ ವ್ಯವಸ್ಥೆಯ ಅಗತ್ಯವಿದೆ
- ಪೆಟ್ರೋಲ್‌ಗೆ ಎಥೆನಾಲ್ ಬೆರೆಸುವ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸುವುದು (ಸದ್ಯ ಶೇ 20ರಷ್ಟು ಇದೆ). ಈ ಪ್ರಕ್ರಿಯೆಯು ಅತ್ಯಂತ ವೈಜ್ಞಾನಿಕವಾಗಿ ನಡೆಯಬೇಕು

ರಾಷ್ಟ್ರೀಯ

‘ಕಾನೂನು ಪದವಿ ಅವಧಿ ನಾಲ್ಕು ವರ್ಷಕ್ಕೆ ಇಳಿಸಿ’

ನವದೆಹಲಿ (ಪಿಟಿಐ): ಕಾನೂನು ಪದವಿಯ ಅವಧಿಯನ್ನು ಐದು ವರ್ಷದಿಂದ ನಾಲ್ಕು ವರ್ಷಕ್ಕೆ ಇಳಿಸಬೇಕು ಎಂಬ ಕುರಿತು ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಏಪ್ರಿಲ್‌ನಲ್ಲಿ ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.


ಗುಣಮಟ್ಟಣದ ಕಾನೂನು ಶಿಕ್ಷಣ ನೀಡುವುದೂ ಅಗತ್ಯ. ಆದರೆ, ಈಗಲೂ ಉತ್ತಮ ವಕೀಲರು ತಯಾರಾಗುತ್ತಿದ್ದಾರೆ. ಪ್ರಾಯೋಗಿಕ ಶಿಕ್ಷಣ ಇಲ್ಲದಿರುವುದು ಸತ್ಯ
ಸೂರ್ಯಕಾಂತ್, ಸಿಜೆಐ

ವಕೀಲ ಅಶ್ವಿನಿ ಉಪಾಧ್ಯಾಯ ಅವರು ಪಿಐಎಲ್ ಸಲ್ಲಿಸಿದ್ದಾರೆ. ಭಾರತದ ಕಾನೂನು ಪಠ್ಯಕ್ರಮವನ್ನು ಪರಿಶೀಲಿಸಬೇಕು. ಇದಕ್ಕಾಗಿ ಅತ್ಯುನ್ನತ ನ್ಯಾಯಶಾಸ್ತ್ರತಜ್ಞರನ್ನು ಒಳಗೊಂಡ ಸಮಿತಿ ರಚಿಸಿ ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ ಅವರ ಪೀಠವು ಅರ್ಜಿಯ ವಿಚಾರಣೆ ನಡೆಸುವುದಾಗಿ ಹೇಳಿದೆ.

‘ಇತರೆ ಹಲವು ದೇಶಗಳಲ್ಲಿ 12ನೇ ತರಗತಿಯ ಬಳಿಕ ಕಾನೂನು ಪದವಿಯ ಅವಧಿಯು ನಾಲ್ಕು ವರ್ಷವಿದೆ. ನಮ್ಮಲ್ಲಿ ಐದು ವರ್ಷವಿದೆ. ಆದರೂ ಪ್ರಾಯೋಗಿಕ ಜ್ಞಾನ ಇಲ್ಲದೆಯೇ ಶಿಕ್ಷಣ ಮುಗಿದು ಹೋಗುತ್ತದೆ. ಈಗಿರುವ ಐದು ವರ್ಷದ ಶಿಕ್ಷಣವು ಅತ್ಯುನ್ನತ ವಕೀಲರನ್ನು ತಯಾರಿಸುವಲ್ಲಿ ಸೋತಿದೆ’ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

‘ನಮ್ಮ ದೃಷ್ಟಿಕೋನವನ್ನು ಮಾತ್ರವೇ ನಂಬಲು ಸಾಧ್ಯವಿಲ್ಲ. ಶಿಕ್ಷಣ ತಜ್ಞರು, ನ್ಯಾಯಶಾಸ್ತ್ರ ತಜ್ಞರು, ವಕೀಲರು, ಸಾಮಾಜಿಕ ಮತ್ತು ನೀತಿ ರೂಪಿಸುವ ಸಂಶೋಧಕರು ಎಲ್ಲರೂ ಇದ್ದಾರೆ. ಇವರೂ ತಮ್ಮ ತಮ್ಮ ಅಭಿಪ್ರಾಯ ಹಂಚಿಕೊಳ್ಳಬೇಕಾಗುತ್ತದೆ’ ಎಂದು ಸಿಜೆಐ ಸೂರ್ಯಕಾಂತ್ ಅಭಿಪ್ರಾಯಪಟ್ಟರು.

ದಯಾಮರಣ: ಸಿದ್ಧರಾದ ಹರೀಶ್

ಗಾಜಿಯಾಬಾದ್ (ಪಿಟಿಐ): ದೇಶದಲ್ಲಿ ಮೊದಲ ಬಾರಿಗೆ ಪರೋಕ್ಷ ದಯಾಮರಣಕ್ಕೆ ಸುಪ್ರೀಂ ಕೋರ್ಟ್‌ನಿಂದ ಅವಕಾಶ ಪಡೆದ ಹರೀಶ್ ರಾಣಾ ಅವರು ಸೋಮವಾರ ದೆಹಲಿಯ ಏಮ್ಸ್ ಆಸ್ಪತ್ರೆಗೆ ತೆರಳಿದರು.


ಹರೀಶ್ ರಾಣಾ

12 ವರ್ಷದಿಂದಲೂ ಕೋಮಾದಲ್ಲಿದ್ದ 32 ವರ್ಷದ ಯುವಕ ಹರೀಶ್ ಅವರ ಮನೆಯಲ್ಲಿ ಧ್ಯಾನದ ನಂತರ ಘೋಷಗಳು ಮೊಳಗಿದವು. ಪ್ರೀತಿಪಾತ್ರರು ಹಣೆ ಮೇಲೆ ಕೈ ಇಟ್ಟು, ವಿದಾಯದ ನುಡಿಗಳನ್ನಾಡಿ ಗಾಜಿಯಾಬಾದ್‌ನ ಮನೆಯಿಂದ ದೆಹಲಿಯ ಏಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ಹರೀಶ್ ದಯಾಮರಣ ಪಡೆಯಲಿದ್ದಾರೆ.

ದಯಾಮರಣದ ಕುರಿತು ಕಳೆದ ವಾರ ಮಹತ್ವದ ತೀರ್ಪನ್ನು ನೀಡಿದ್ದ ಸುಪ್ರೀಂ ಕೋರ್ಟ್, ‘ಹರೀಶ್‌ಗೆ ನೀಡುತ್ತಿದ್ದ ಜೀವರಕ್ಷಕ ವ್ಯವಸ್ಥೆಯನ್ನು ಮಾನವೀಯ ರೀತಿಯಲ್ಲಿ ಹಿಂಪಡೆಯಬೇಕು. ಗೌರವಯುತವಾಗಿ ಜೀವ ಬಿಡಲು ಅವಕಾಶ ಕಲ್ಪಿಸಬೇಕು’ ಎಂದು ದೆಹಲಿಯ ಏಮ್ಸ್‌ಗೆ ನಿರ್ದೇಶನ ನೀಡಿತ್ತು.

ದಯಾಮರಣ ಪ್ರಕ್ರಿಯೆ ಯಾವಾಗ ಮತ್ತು ಹೇಗೆ ನಡೆಯಲಿದೆ ಎಂಬ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ. ಹರೀಶ್ ಮನೆಯಲ್ಲಿ ಸಂಬಂಧಿಕರು ಪ್ರಾರ್ಥನೆ ಮಾಡುತ್ತಿರುವ ಮತ್ತು ಬ್ರಹ್ಮಕುಮಾರಿಗಳು ಹರೀಶ್ ತಲೆಗೆ ತಿಲಕವನ್ನಿಟ್ಟು, ‘ಎಲ್ಲರನ್ನೂ ಕ್ಷಮಿಸು ಮತ್ತು ಎಲ್ಲರಿಂದ ಕ್ಷಮೆಯಾಚಿಸು. ಈಗ ಮಲಗು’ ಎಂದು ಹೇಳಿದ ವಿಡಿಯೊ ಹರಿದಾಡುತ್ತಿದೆ.

ರಾಹುಲ್ ವಿರುದ್ಧದ ಮಾನಹಾನಿ ಪ್ರಕರಣ: ಏ.13ಕ್ಕೆ ವಿಚಾರಣೆ

ಹಾಥರಸ್ (ಪಿಟಿಐ): 2020ರ ಹಾಥರಸ್ ಸಾಮೂಹಿಕ ಅತ್ಯಾಚಾರ ಪ್ರಕರಣದ ಕುರಿತು ನೀಡಿದ್ದ ಹೇಳಿಕೆಗೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ಅವರ ವಿರುದ್ಧ ದಾಖಲಾಗಿರುವ ಮಾನಹಾನಿ ಪ್ರಕರಣದ ವಿಚಾರಣೆ ಏಪ್ರಿಲ್ 13ಕ್ಕೆ ನಿಗದಿಯಾಗಿದೆ.

ಉತ್ತರ ಪ್ರದೇಶದ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಾಧೀಶರು ಸೋಮವಾರ ರಜೆಯಲ್ಲಿದ್ದರು. ಹೀಗಾಗಿ ವಿಚಾರಣೆಯನ್ನು ಏ. 13ಕ್ಕೆ ನಿಗದಿ ಪಡಿಸಲಾಯಿತು ಎಂದು ಅರ್ಜಿದಾರರ ಪರ ವಕೀಲ ಮುನ್ನಾ ಸಿಂಗ್ ಪುಂಧಿರ್ ತಿಳಿಸಿದರು.

2024ರ ಡಿಸೆಂಬರ್‌ನಲ್ಲಿ ಪ್ರಕರಣದ ಮೂವರು ಖುಲಾಸೆಯಾಗಿದ್ದರೂ ಅವರ ವಿರುದ್ಧ ರಾಹುಲ್ ಗಾಂಧಿ ಅವರು ಮಾನಹಾನಿಕರ ಹೇಳಿಕೆ ನೀಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿತ್ತು.

ನುಡಿ ಬೆಳಗು

ತಾಳ್ಮೆಯ ಬೆಳವಣಿಗೆ


ದೀಪಾ ಹಿರೇಗುತ್ತಿ

ಒಂದು ದಟ್ಟ ಮಳೆಕಾಡಿನ ಅಂಚಿನಲ್ಲಿ ಬಿದಿರಿನ ಸಸಿಯೊಂದು ಹುಟ್ಟಿಕೊಂಡಿತ್ತು. ಅದರ ಸುತ್ತಲೂ ಬೃಹದಾಕಾರದ ಮರಗಳು ಬೆಳೆದಿದ್ದವು. ತಮ್ಮ ರೆಂಬೆಕೊಂಬೆಗಳನ್ನು ಹೆಮ್ಮೆಯಿಂದ ವಿಶಾಲವಾಗಿ ಹರಡಿಕೊಂಡಿದ್ದವು. ಆದರೆ ಈ ಬಿದಿರಿನ ಗಿಡ ಅದೆಷ್ಟು ಪುಟ್ಟದಾಗಿತ್ತು ಎಂದರೆ ಕೆಲವೊಮ್ಮೆ ಪಾತರಗಿತ್ತಿಗಳೂ ಅದನ್ನು ಹುಲ್ಲು ಎಂದು ತಿಳಿದುಕೊಳ್ಳುತ್ತಿದ್ದವು.

ತನ್ನ ಸುತ್ತಲಿರುವ ಎತ್ತರದ ಗಿಡಗಳನ್ನು ನೋಡಿದಾಗಲೆಲ್ಲ ಬಿದಿರು ತಾನು ಕೂಡ ಅದಷ್ಟು ಬೇಗ ಎತ್ತರಕ್ಕೆ ಬೆಳೆಯಬೇಕು ಎಂದುಕೊಳ್ಳುತ್ತಿತ್ತು. ಆಕಾಶ ಮುಟ್ಟಬೇಕು ಎಂದು ಚಡಪಡಿಸುತ್ತಿತ್ತು. ಒಂದು ದಿನ ಬಿದಿರು ಹೀಗೆ ತನ್ನಷ್ಟಕ್ಕೆ ತಾನು ಹೇಳಿಕೊಳ್ಳುವಾಗ ಒಂದು ಹಳದಿ ಬಣ್ಣದ ಸುಂದರ ಪಾತರಗಿತ್ತಿ ಅದನ್ನು ಕೇಳಿಸಿಕೊಂಡಿತು. ‘ನೀನೂ ಬೆಳೀತಿಯಾ ಬಿಡು’ ಅಂದಿತು. ಆಗ ಬಿದಿರು ಅಸಹನೆಯಿಂದ ‘ಆದರೆ ಯಾವಾಗ’ ಎಂದು ಕೇಳಿತು. ‘ನಾನು ಹುಟ್ಟಿ ಅದೆಷ್ಟು ತಿಂಗಳುಗಳಾದವು, ಆದರೆ ನಾನಿನ್ನೂ ಸಣ್ಣ ಇದ್ದೇನೆ’ ಎಂದು ಕೊರಗಿತು. ಅದನ್ನು ಕೇಳಿಸಿಕೊಂಡ ತೇಗದ ಮರ, ನಾವು ಬಹಳ ಬೇಗ ಬೆಳೆಯುತ್ತೇವೆ, ನೀನು ಬಹಳ ನಿಧಾನ ಬಿಡು ಎಂದಿತು ಜಂಭದಿಂದ. ಮರದ ಮಾತುಗಳು ಬಿದಿರಿನ ಸಸಿಯನ್ನು ಕುಟುಕಿದವು. ಅದು ತನ್ನನ್ನು ತಾನು ಮೇಲೆತ್ತಲು ಜೋರಾಗಿ ಪ್ರಯತ್ನ ಪಡತೊಡಗಿತು. ಆದರೂ ಪ್ರಯೋಜನವಾಗಲಿಲ್ಲ.

ದಿನಗಳು ಉರುಳಿದವು. ದಿನಗಳ ನಂತರ ವಾರಗಳು, ವಾರಗಳ ನಂತರ ತಿಂಗಳುಗಳು ಕಳೆದವು. ಬಿದಿರಿನ ಸಸಿ ಬದಲಾಗಲಿಲ್ಲ. ಆದರೆ ಭೂಮಿಯಡಿಯಲ್ಲಿ ಬದಲಾವಣೆಗಳಾಗುತ್ತಿರುವುದು ಅದರ ಗಮನಕ್ಕೆ ಬಂದಿತು. ಬಿದಿರಿನ ಬೇರುಗಳು ಆಳಕ್ಕೆ ಇಳಿಯುತ್ತಿದ್ದವು, ಗಟ್ಟಿಯಾಗುತ್ತಿದ್ದವು.

ಒಂದು ದಿನ ಮಧ್ಯಾಹ್ನ ಆ ಮಳೆಕಾಡಿನಲ್ಲಿ ಬಹು ಜೋರಾದ ಗಾಳಿ ಮಳೆ ಬಂದಿತು. ಮಳೆಗಾಳಿಯ ಹೊಡೆತಕ್ಕೆ ಸುತ್ತಲಿನ ಮರಗಳು ತಮ್ಮ ಬಲವಾದ ಕೊಂಬೆಗಳನ್ನು ಕಳೆದುಕೊಂಡವು. ಬಿದಿರಿನ ಸಸಿಯೂ ನಡುಗಿತು. ಆದರೆ ಅದರ ಆಳಕ್ಕಿಳಿದ ಬೇರುಗಳು ಅದನ್ನು ಬುಡಮೇಲು ಮಾಡಲಿಲ್ಲ. ಮೇಲ್ಗಡೆ ಪುಟ್ಟದಾಗಿದ್ದ ಸಸಿ ನೆಲದಡಿಯಲ್ಲಿ ಬಲಿಷ್ಠವಾಗಿತ್ತು.

ವರ್ಷಗಳು ಕಳೆದವು. ಒಂದು ವಸಂತ ಕಾಲದ ಮುಂಜಾವು. ಒಂದು ವಿಚಿತ್ರ ಘಟನೆಯನ್ನು ಕಾಡಿಗೆ ಕಾಡೇ ನೋಡಿತು. ಬಿದಿರಿನ ಪುಟಾಣಿ ಸಸಿ ಇದ್ದಕ್ಕಿದ್ದಂತೆ ಬೆಳೆಯಲಾರಂಭಿಸಿತು. ದಿನದಿಂದ ದಿನಕ್ಕೆ ಬೆಳೆಯುತ್ತಲೇ ಹೋಯಿತು. ನೋಡನೋಡುತ್ತಿದ್ದಂತೆಯೇ ತನ್ನನ್ನು ಟೀಕಿಸುತ್ತಿದ್ದ ಸುತ್ತಲಿನ ಮರಗಳಿಗಿಂತ ಎತ್ತರಕ್ಕೆ ಬೆಳೆದು ನಿಂತಿತು. ಅಷ್ಟು ಹೊತ್ತಿಗೆ ಹಾರಾಡುತ್ತ ಬಂದ ಗಿಳಿಹಸಿರಿನ ಪಾತರಗಿತ್ತಿಯೊಂದು ತನ್ನ ಅಮ್ಮ ಹೇಳುತ್ತಿದ್ದ ಬಿದಿರಿನ ಸಸಿ ಹೀಗೆ ಬೆಳೆದು ನಿಂತಿರುವುದನ್ನು ನೋಡಿತು. ಅದರಮ್ಮನಿಗೆ ಅವರಮ್ಮ, ಹೀಗೆ ಅದೆಷ್ಟೋ ತಲೆಮಾರಿನಿಂದ ಈ ಬಿದಿರಿನ ಬಗ್ಗೆ ಪಾತರಗಿತ್ತಿಗೆ ಹೇಳಲಾಗಿತ್ತು. ‘ನನ್ನ ಮುತ್ತಜ್ಜನ ಮುತ್ತಜ್ಜಿ ಹೇಳಿದ್ದು ನಿಜವಾಯ್ತು ನೋಡು, ನೀನು ನಿಧಾನವಾಗಿ ಬೆಳೆಯುತ್ತಿರಲಿಲ್ಲ, ಬುದ್ಧಿವಂತಿಕೆಯಿಂದ ಬೆಳೆಯುತ್ತಿದ್ದೆ’ ಅಂದಿತು ಚಿಟ್ಟೆ.

ಅಂತೂ ಬಿದಿರಿನ ಕಾಯುವಿಕೆ ಮುಗಿದಿತ್ತು. ಆ ಕಾಯುವಿಕೆಯ ಸಮಯ ವ್ಯರ್ಥವೇನಾಗಿರಲಿಲ್ಲ. ಇಷ್ಟು ಎತ್ತರವನ್ನು ತಾಳಿಕೊಳ್ಳಲು ಅಷ್ಟೂ ವರ್ಷ ಭೂಮಿಯೊಳಗೆ ಸತತ ಪ್ರಯತ್ನ ನಡೆದಿತ್ತು ಅಷ್ಟೇ. ಅದರ ನಂತರ ಯಾವುದಾದರೂ ಗಿಡಗಳು ತಮ್ಮ ಕಡಿಮೆ ಬೆಳವಣಿಗೆಯ ಬಗ್ಗೆ ಬೇಸರ ವ್ಯಕ್ತಪಡಿಸಿದಾಗ ಬಿದಿರು ಸಮಾಧಾನ ಮಾಡುತ್ತಿತ್ತು. ದೊಡ್ಡ ಸಂಗತಿಗಳಿಗೆ ಸಮಯ ಬೇಕಾಗುತ್ತದೆ ಎನ್ನುತ್ತಿತ್ತು. ಬದುಕಿನಲ್ಲೂ ಅಷ್ಟೇ, ಯಾರೋ ಬೇಗ ಪಡೆದ ಯಶಸ್ಸು ನಮ್ಮ ಆತಂಕದ ಕಾರಣವಾಗಬಾರದು. ಪ್ರತಿಯೊಬ್ಬರ ಸಮಯವೂ ಬರುತ್ತದೆ. ಅದಕ್ಕಾಗಿ ತಾಳ್ಮೆಯಿಂದ ಪ್ರಯತ್ನಿಸಬೇಕು. ❖

ಗುಂಡಣ್ಣ




ಪದಬಂಧ 6346

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗೆ ವಿಕ್ರಯಿಸಿ ಎಂದಿದ್ದಕ್ಕೇ ಈ ಹೊಡೆದಾಟ! (4)
3.ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವುದು (4)
5.ಒಣಗಿದ ಸಣ್ಣ ಕಟ್ಟಿಗೆ (3)
6.ಹೀಗೆ ಭ್ರಾಂತಿಗೆ ಒಳಗಾಗು (3)
7.ಆಡಂಬರ ಈ ರೀತಿ ಕಾಣುತ್ತಿದೆ (2)
8.ವಾರಕ್ಕೆ ಮೊದಲೇ ಬಂದಿರುವ ಬಾಧ್ಯಸ್ಥ (5)
11.ಪಿನಾಕದ ಬಳಿಯಿರುವ ಗಿಳಿ (2)
13.ನೃತ್ಯವನ್ನು ಹೀಗೆ ಹೇಳಿ (3)
14.ಗಣಪತಿ ಚಿಕ್ಕದಾಗಿ ಬಂದಿದೆ (3)
15.ಕನ್ನಡಿಗನಿಗೆ ಸಿಕ್ಕಿರುವ ರಿಬೇಟ್ (4)
16.ದೇವರನ್ನು ರಥದಲ್ಲಿ ಕೂರಿಸಿ ಮಾಡುವ ಮೆರವಣಿಗೆ (4)

ಮೇಲಿಂದ ಕೆಳಕ್ಕೆ
1.ಮರ್ಯಾದೆಯೊಡನಿರುವ ಅಳತೆಗೋಲು (4)
2.ಶತ್ರುಗಳನ್ನು ಕೊಲ್ಲುವುದು (5)
3.ಅಬಲೆಗೆ ಕಾಣಿಸಿದ ನೀರಿನ ತೆರೆ (2)
4.ಕಾಡಿನ ಹೂವಿದು (4)
6.ಮರದ ಹತ್ತಿರವಿರುವ ದುಂಬಿ (3)
8.ವಾದ್ಯವನ್ನು ನುಡಿಸುವುದು (3)
9.ಸಂಕೋಚವುಳ್ಳವನು ದಾರದಲ್ಲಿ ಬಂದಿಹನಲ್ಲಾ? (5)
10.ಈಕೆ ಬೇಡತಿ (4)
12.ಮಧುರವಾದ ಧ್ವನಿ (4)
14.ಗಣತಿಯಲ್ಲೇ ಅವಸ್ಥೆ ಬಂದಿದೆ (2)



6345ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ದಗಲ್ಬಾಜಿ 3.ಪರಿಮಿತ
5.ನಗರ 6.ನಿಗಮ
8.ಜತನ 9.ಮಾನಿನಿ
10.ನಾಸಿಕ 11.ವಿವಾಹ
12.ಕದನ 14.ಇರುಳು
16.ನವಿರೆಳೆ 17.ಅನುಮಾನ

ಮೇಲಿಂದ ಕೆಳಕ್ಕೆ:
1.ದನಾನಿ 2.ಜಿನ 3.ಪರ
4.ತಲ್ಲೀನ 7.ಮನೋನಿಗ್ರಹ
8.ಜನನಾಯಕ 11.ವಿಮಾನ
13.ನಯನ 14.ಇಳೆ
15.ಳುಅ

ಸುಡೊಕು 6730

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		4	1	5			8	
						5		9
8		3			9		1	
3		9	5		1			
	6			9				
5		1	6		8	9		
	7			3	5	2		4
4		5						
	8			6		3		1

6729 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

17 ಮಾರ್ಚ್ 2026 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣತ್ರಯೋದಶಿ ಗಂ 9-23 ನಕ್ಷತ್ರ: ಧನಿಷ್ಠ ಗಂ 6-22 ಯೋಗ: ಸಿದ್ಧ ಗಂ. 8-15 ಕರಣ: ವಣಿಜ ಗಂ 9-23 ಮೀನ ಮಾಸದ 03 ನೇ ದಿನ. ಮಳೆ ನಕ್ಷತ್ರ : ಪೂರ್ವಾಭಾದ್ರ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-40 ಸೂರ್ಯಾಸ್ತ : 06-38, ಮುಸ್ಲಿಂ ದಿನಾಂಕ : 27 ರಂಜಾನ್ ,ದಿನ ವಿಶೇಷ : ಸಬ್-ಇ-ಖಾದರ್ (ಹಿಂದಿನ ರಾತ್ರಿ) ,ಅದೃಷ್ಟ ಸಂಖ್ಯೆ : 8, 10

ಮೇಷ: ಪತ್ರಿಕೆ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವವರಿಗೆ ಅಸ್ಥಿರತೆ ಕಾಡಲಿದೆ. ಶ್ರಮಕ್ಕೆ ಫಲ ದೊರೆಯುತ್ತದೆ. ಮಕ್ಕಳಿಗೆ ಶ್ರಮವಹಿಸಿ ವಿದ್ಯಾಭ್ಯಾಸ ಮಾಡಲು ತಿಳಿಸಿ.

ವೃಷಭ: ವಿದ್ಯಾರ್ಥಿಗಳಿಗೆ ವಿಪುಲ ಅವಕಾಶ ಒದಗಿ ಬಂದರೂ ಆಲಸ್ಯ ಗುರಿ ಸಾಧನೆಗೆ ಅಡ್ಡಿ ಮಾಡಲಿದೆ. ಏಕಾಗ್ರತೆಯಿಂದ ಶಿವನ ಸ್ಮರಣೆ ಅಥವಾ ಧ್ಯಾನ ಮಾಡಿ.

ಮಿಥುನ: ಹವಾಮಾನದಲ್ಲಿ ಉಂಟಾಗುತ್ತಿರುವ ಬದಲಾವಣೆ ಆರೋಗ್ಯದ ಮೇಲೆ ಪ್ರಭಾವ ಬೀರಲಿದೆ. ದ್ರವರೂಪದ ವಸ್ತುವಿನ ಅದರಲ್ಲೂ ತೈಲಗಳ ಮಾರಾಟದಲ್ಲಿ ಅಧಿಕ ಲಾಭ. ವೈವಾಹಿಕ ಜೀವನದಲ್ಲಿ ನೆಮ್ಮದಿ ಇರಲಿದೆ.

ಕರ್ಕಾಟಕ: ಕೈಗಾರಿಕೋದ್ಯಮಿಗಳು ಕಂಪನಿಯ ತಯಾರಿಕಾ ಘಟಕದ ಅಭಿವೃದ್ಧಿ ಮಾಡುವ ಬಗ್ಗೆ ಗಮನಹರಿಸಬಹುದು. ಆತ್ಮವಿಶ್ವಾಸದಿಂದ ಮುಂದುವರಿಯಿರಿ. ಎದುರಾಳಿಗಳೊಂದಿಗೆ ಸಂಧಾನ ಮಾಡಿಕೊಳ್ಳುವುದು ಸರಿಯಲ್ಲ.

ಸಿಂಹ: ಧನಾಗಮನಕ್ಕೆ ಹಲವು ದಾರಿಗಳು ಕಂಡರೂ ಸರಿಯಾದ ದಾರಿಯನ್ನು ಆರಿಸಿಕೊಳ್ಳುವುದು ವಿವೇಚನೆಗೆ ಬಿಟ್ಟಂತಹ ವಿಚಾರ. ತಂತ್ರಜ್ಞಾನಿಗಳಿಗೆ ಉದ್ಯೋಗದಲ್ಲಿ ಬಗೆಹರಿಸಲಾಗದ ಸಮಸ್ಯೆ ಎದುರಾಗಬಹುದು.

ಕನ್ಯಾ: ಪಿತ್ರಾರ್ಜಿತ ಆಸ್ತಿಗಳ ವಿಚಾರದಲ್ಲಿ ನ್ಯಾಯಾಲಯದ ಮೆಟ್ಟಿಲು ಏರಬೇಕಾಗುತ್ತದೆ. ಹಿರಿಯರ ಮಾತಿನಂತೆ ನಡೆದುಕೊಳ್ಳುವ ನಿರ್ಧಾರ ಶುಭಪ್ರದ. ಆಹಾರ ಬೆಳೆಗಳು ರೈತರಿಗೆ ನಿರೀಕ್ಷೆಗೂ ಮೀರಿದ ಆದಾಯ ತರಲಿವೆ.

ತುಲಾ: ನಯವಾದ ಮಾತುಗಳು ಎದುರಿನ ವ್ಯಕ್ತಿಯ ಮನವನ್ನು ಗೆಲ್ಲುವ ಮೂಲಕ ಕಾರ್ಯ ಸಾಧನೆ ಆಗುತ್ತದೆ. ಹಲವು ವರ್ಷಗಳಿಂದ ಯೋಚಿಸುತ್ತಿದ್ದ ಕಾರ್ಯವು ದೇವತಾ ಅನುಗ್ರಹದಿಂದ ನಡೆಯಲಿದೆ.

ವೃಶ್ಚಿಕ: ವ್ಯವಹಾರದ ಜೀವನದಲ್ಲಿ ಕೆಲವು ವಿಚಾರಕ್ಕೆ ಆತಂಕ ಮೂಡಿ ಮನೋಧೈರ್ಯ ಕಟ್ಟಿಹಾಕಿಕೊಳ್ಳುತ್ತದೆ. ಕೌಟುಂಬಿಕವಾಗಿ ಕೆಟ್ಟು ಹೋದ ಸಂಬಂಧ ಸತ್ಯದ ಅರಿವಿನಿಂದ ಮರಳಿ ಬರಲಿದೆ.


ಧನು: ಅವಸರ ಮತ್ತು ಉದ್ವೇಗ ಇವೆರಡೂ ತಲೆ ತಗ್ಗಿಸುವಂತೆ ಮಾಡುತ್ತದೆ. ಸಂಘ–ಸಂಸ್ಥೆಗಳ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ ಸಿಗುತ್ತದೆ. ಉದ್ಯೋಗದಲ್ಲಿ ಕ್ರಿಯಾಶೀಲತೆಯಿಂದ ಮೆರೆಯುವಿರಿ.

ಮಕರ: ಪ್ರೀತಿಸುವವರ ಮಾರ್ಗದರ್ಶನ ದೊರೆಯಲಿದ್ದು ಹೊಸ ಚೈತನ್ಯ ತುಂಬಿಬರಲಿದೆ. ನಿರ್ದಿಷ್ಟವಾದ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು. ಕಲಾವಿದರ ಆಸಕ್ತಿಯಿಂದ ಅವಕಾಶಗಳು ಲಭ್ಯವಾಗಲಿವೆ.

ಕುಂಭ: ಮನೆಯಲ್ಲಿನ ಆಗು ಹೋಗುಗಳ ಬಗೆಗೆ ಗಮನ ನೀಡಬೇಕಾಗುವುದು. ಹೂವು, ಹಣ್ಣು, ತರಕಾರಿ, ಹಾಲಿನ ವ್ಯಾಪಾರಿಗಳಿಗೆ ಲಾಭವಾಗಲಿದೆ. ದುಂದುವೆಚ್ಚದಿಂದ ದಿನಾಂತ್ಯದಲ್ಲಿ ಹಣದ ಅಭಾವ ಕಾಡುತ್ತದೆ.

ಮೀನ: ಅನಿವಾರ್ಯವಾಗಿ ನಿವೇಶನ ಮಾರುವ ಪರಿಸ್ಥಿತಿ ಎದುರಾದರೂ ಲಾಭ ಪಡೆಯುವಿರಿ. ದುರ್ಜನರ ಸಹವಾಸದಿಂದ ತಕ್ಷಣ ಹೊರಬರುವ ಪ್ರಯತ್ನ ಮಾಡಿ. ಕಾರ್ಮಿಕರ ಬೇಡಿಕೆಗಳನ್ನು ಪೂರೈಸುವ ಭರವಸೆಯನ್ನು ಮರೆಯದಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 23,151
ಇಂದಿನ ಅಂತ್ಯ: 23,408
ದಿನದ ಗರಿಷ್ಠ: 23,502
257

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹485; 12 ಕ್ಕೆ ₹72
ಮೈಸೂರು: 100 ಕ್ಕೆ ₹490

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹211.50
ಆರ್‌ಎಸ್‌ಎಸ್-5 ₹205.50
ಗುಡ್ ಲಾಟ್ ₹188

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಕ್ವಿ.ಟ) ₹525-760
ದ್ವಿತಳಿ (ಕ್ವಿ.ಟ) ₹211-866

ಮುದ್ರಮನೆ ಕಾಫಿ
ಎಪಿ ₹22750
ಎಸಿ ₹13100
ಆರ್‌ಪಿ ₹18250
ಆರ್‌ಸಿ ₹9725

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆ.ಜಿ)
ಶೇಂಗಾ (ರಿಫೈನ್ಡ್) ₹1750 (1720)
ಸೋಯಾ (ರಿಫೈನ್ಡ್) ₹1450 (1445)
ಸೂರ್ಯಕಾಂತಿ (ರಿಫೈನ್ಡ್) ₹1710 (1710)
ಪಾಮೋಲಿನ್ ₹1430 (1435)

ವ್ಯಾಪಾರ ಕೊರತೆ ₹2.50 ಲಕ್ಷ ಕೋಟಿ

ರಫ್ತು ಶೇ 0.81ರಷ್ಟು ಇಳಿಕೆ ● ಆಮದು ಶೇ 24.11ರಷ್ಟು ಹೆಚ್ಚಳ: ಕೇಂದ್ರ ಸರ್ಕಾರ



ನವದೆಹಲಿ (ಪಿಟಿಐ): ಫೆಬ್ರುವರಿ ತಿಂಗಳಿನಲ್ಲಿ ದೇಶದ ಸರಕುಗಳ ರಫ್ತು ಪ್ರಮಾಣವು ಶೇ 0.81ರಷ್ಟು ಇಳಿಕೆಯಾಗಿದ್ದು, ₹3.38 ಲಕ್ಷ ಕೋಟಿ ಆಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಸೋಮವಾರ ತಿಳಿಸಿದೆ.

ಇದೇ ಅವಧಿಯಲ್ಲಿ ಆಮದು ಪ್ರಮಾಣವು ಶೇ 24.11ರಷ್ಟು ಹೆಚ್ಚಳವಾಗಿದ್ದು, ₹5.88 ಲಕ್ಷ ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ಫೆಬ್ರುವರಿ ತಿಂಗಳಿನಲ್ಲಿ ದೇಶದ ವ್ಯಾಪಾರ ಕೊರತೆ ₹2.50 ಲಕ್ಷ ಕೋಟಿಯಷ್ಟಾಗಿದೆ ಎಂದು ಅದು ಮಾಹಿತಿ ನೀಡಿದೆ.

ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಅದನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಫೆಬ್ರುವರಿವರೆಗೆ ದೇಶದ ರಫ್ತು ಶೇ 1.84ರಷ್ಟು ಹೆಚ್ಚಳವಾಗಿದ್ದು, ₹37.22 ಲಕ್ಷ ಕೋಟಿಯಷ್ಟಾಗಿದೆ. ಆಮದು ಶೇ 8.53ರಷ್ಟು ಏರಿಕೆಯಾಗಿದ್ದು, ₹65.90 ಲಕ್ಷ ಕೋಟಿಯಾಗಿದೆ.

'ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಸವಾಲುಗಳ ನಡುವೆಯೂ ದೇಶದ ರಫ್ತು ಉತ್ತಮವಾಗಿದೆ' ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಅಗರ್‌ವಾಲ್ ಹೇಳಿದ್ದಾರೆ.

ಪಶ್ಚಿಮ ಏಷ್ಯಾದ ಬಿಕ್ಕಟ್ಟಿನಿಂದ ಹಡಗುಗಳ ಸಂಚಾರಕ್ಕೆ ಸಮಸ್ಯೆಯಾಗಿದೆ. ವಿಮಾನಗಳ ಕಾರ್ಯಾಚರಣೆಯಲ್ಲಿ ಅಡಚಣೆ ಸೇರಿದಂತೆ ಕೆಲವು ಸವಾಲುಗಳನ್ನು ವಿಮಾನಯಾನ ವಲಯವು ಎದುರಿಸುತ್ತಿದೆ. ಇದು ಮಾರ್ಚ್ ತಿಂಗಳ ರಫ್ತು ಮೇಲೆ ಪರಿಣಾಮ ಬೀರಲಿದೆ ಎಂದು ತಿಳಿಸಿದ್ದಾರೆ.

ಆಮದು ಹೆಚ್ಚಳಕ್ಕೆ ಕಾರಣವೇನು?: ಫೆಬ್ರುವರಿ ತಿಂಗಳಿನಲ್ಲಿ ಚಿನ್ನ ಮತ್ತು ಬೆಳ್ಳಿ ಆಮದು ಹೆಚ್ಚಳವಾಗಿದೆ. ಇದೇ ಆಮದು ಹೆಚ್ಚಳಕ್ಕೆ ಕಾರಣವಾಗಿದೆ. ಚಿನ್ನದ ಆಮದಿನಲ್ಲಿ ಶೇ 218ರಷ್ಟು ಹೆಚ್ಚಳವಾಗಿದ್ದು, ₹68,628 ಕೋಟಿ ಮೌಲ್ಯದ ಚಿನ್ನ ಆಮದಾಗಿದೆ. ಬೆಳ್ಳಿ ಆಮದಿನಲ್ಲಿ ಶೇ 285ರಷ್ಟು ಜಿಗಿತವಾಗಿದ್ದು, ₹15,311 ಕೋಟಿ ಮೌಲ್ಯದ ಬೆಳ್ಳಿ ಆಮದಾಗಿದೆ.

ಅಮೆರಿಕಕ್ಕೆ ರಫ್ತು ಶೇ 13ರಷ್ಟು ಇಳಿಕೆ

ಫೆಬ್ರುವರಿ ತಿಂಗಳಿನಲ್ಲಿ ಅಮೆರಿಕಕ್ಕೆ, ದೇಶದ ರಫ್ತು ಶೇ 13ರಷ್ಟು ಇಳಿಕೆಯಾಗಿದೆ. ₹63,412 ಕೋಟಿ ಮೌಲ್ಯದ ಸರಕುಗಳು ರಫ್ತಾಗಿವೆ ಎಂದು ವಾಣಿಜ್ಯ ಸಚಿವಾಲಯ ತಿಳಿಸಿದೆ.

ಅಮೆರಿಕದಿಂದ ಭಾರತಕ್ಕೆ ಆಮದು ಪ್ರಮಾಣ ಶೇ 36ರಷ್ಟು ಹೆಚ್ಚಳವಾಗಿದ್ದು, ₹41,291 ಕೋಟಿಯಾಗಿದೆ. ಭಾರತದ ಸರಕುಗಳ ಮೇಲೆ ಅಮೆರಿಕ ವಿಧಿಸಿದ ಸುಂಕವೇ ರಫ್ತು ಇಳಿಕೆಗೆ ಕಾರಣ ಎಂದು ತಿಳಿಸಿದೆ.

2025ರ ಏಪ್ರಿಲ್‌ನಿಂದ ಫೆಬ್ರುವರಿವರೆಗಿನ ಅವಧಿಯಲ್ಲಿ ಅಮೆರಿಕಕ್ಕೆ, ದೇಶದ ರಫ್ತು ಶೇ 3.84ರಷ್ಟು ಏರಿಕೆಯಾಗಿದ್ದು, ₹7.31 ಲಕ್ಷ ಕೋಟಿಯಷ್ಟಾಗಿದೆ. ಆಮದು ಪ್ರಮಾಣದಲ್ಲಿ ಶೇ 15ರಷ್ಟು ಹೆಚ್ಚಳವಾಗಿದ್ದು, ₹4.46 ಲಕ್ಷ ಕೋಟಿಯಾಗಿದೆ.

ವ್ಯಾಪಾರ ಕೊರತೆ ₹9 ಲಕ್ಷ ಕೋಟಿ: ಫೆಬ್ರುವರಿಯಲ್ಲಿ ಭಾರತದಿಂದ ಚೀನಾಕ್ಕೆ ಆಗುವ ರಫ್ತು ಶೇ 32ರಷ್ಟು ಹೆಚ್ಚಳವಾಗಿದ್ದು, ₹15,398 ಕೋಟಿಯಷ್ಟಾಗಿದ್ದರೆ, ಆಮದು ಪ್ರಮಾಣ ಶೇ 30ರಷ್ಟು ಏರಿಕೆಯಾಗಿದ್ದು, ₹1.10 ಲಕ್ಷ ಕೋಟಿಯಾಗಿದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಫೆಬ್ರುವರಿವರೆಗಿನ ಅವಧಿಯಲ್ಲಿ ಚೀನಾಕ್ಕೆ ರಫ್ತು ಶೇ 37ರಷ್ಟು ಹೆಚ್ಚಳವಾಗಿದ್ದು, ₹1.61 ಲಕ್ಷ ಕೋಟಿಯಾಗಿದೆ. ಆಮದು ಶೇ 15ರಷ್ಟು ಏರಿಕೆಯಾಗಿದ್ದು, ₹11 ಲಕ್ಷ ಕೋಟಿಯಾಗಿದೆ. ವ್ಯಾಪಾರ ಕೊರತೆಯು ₹9.41 ಲಕ್ಷ ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ಎಲ್‌ಪಿಜಿ ಬುಕಿಂಗ್ ಸಂಖ್ಯೆ ಇಳಿಕೆ

ನವದೆಹಲಿ (ಪಿಟಿಐ): ಮನೆಬಳಕೆಯ ಎಲ್‌ಪಿಜಿ ಸಿಲಿಂಡರ್ ಬುಕ್ ಮಾಡುವ ಸಂಖ್ಯೆಯು ತುಸು ಕಡಿಮೆ ಆಗಿದೆ. ಮಾರ್ಚ್ 13ರಂದು 88.8 ಲಕ್ಷದಷ್ಟು ಇದ್ದ ಬುಕಿಂಗ್ ಸಂಖ್ಯೆಯು ಶನಿವಾರ 77 ಲಕ್ಷಕ್ಕೆ ಇಳಿಕೆ ಆಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಎಲ್‌ಪಿಜಿ ಸಿಲಿಂಡರ್‌ಗಳಿಗೆ ಆನ್‌ಲೈನ್ ಮೂಲಕ ಬರುವ ಬುಕಿಂಗ್ ಶೇ 84ರಷ್ಟು ಇದ್ದಿದ್ದು ಶೇ 87ಕ್ಕೆ ಹೆಚ್ಚಳ ಕಂಡಿದೆ ಎಂದೂ ಕೂಡ ಕೇಂದ್ರವು ಭಾನುವಾರ ಹೇಳಿದೆ.

ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಡಿಜಿಟಲ್ ವೇದಿಕೆಯ ಮೂಲಕ ಎಲ್‌ಪಿಜಿ ಸಿಲಿಂಡರ್ ಬುಕ್ ಮಾಡುವುದಕ್ಕೆ ಉತ್ತೇಜನ ನೀಡುತ್ತಿವೆ.

ಮುಂಬೈ ಧಾರಣೆ (ಶೇಂಗಾ)

16-03-2026	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1760 (1730)
ಒಂದು ವಾರದ ಡೆಲಿವರಿ	1755 (1725)
ಪಾಮ್ ವಾರದ ಡೆಲಿವರಿ	1428 (1433)
ಸೂರ್ಯಕಾಂತಿ ಎಣ್ಣೆ ಕಚ್ಚಾ	1595 (1690)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,55,700 (1,56,700)
ಬೆಳ್ಳಿ ಕೆ.ಜಿಗೆ	2,52,000 (2,56,800)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹29000-30500
ಭದ್ರಾವತಿ	₹30000-30000
ತಿಪಟೂರು	₹28500-31006
ತುಮಕೂರು	₹13500-17500
ತುರುವೇಕೆರೆ	₹30000-30800

ಉದ್ಯಮಗಳಲ್ಲಿ ವಹಿವಾಟು ಸ್ಥಗಿತಗೊಂಡ ವರದಿ ಸದ್ಯಕ್ಕೆ ಇಲ್ಲ: ಎಫ್‌ಕೆಸಿಸಿಐ

ಸಮರ ಮುಂದುವರಿದರೆ ಸಂಕಷ್ಟ ತೀವ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕ ಮತ್ತು ಇಸ್ರೇಲ್ ಜೊತೆಗೂಡಿ ಇರಾನ್ ವಿರುದ್ಧ ಸಾರಿರುವ ಸಮರವು ಇನ್ನೂ 10–15 ದಿನಗಳವರೆಗೆ ಮುಂದುವರಿದರೆ ರಾಜ್ಯದ ಉದ್ಯಮಗಳು ತೀವ್ರ ಸಂಕಷ್ಟಕ್ಕೆ ಸಿಲುಕಲಿವೆ ಎಂದು ಉದ್ಯಮಿಗಳು ಹಾಗೂ ಉದ್ಯಮಿಗಳ ಪ್ರಾತಿನಿಧಿಕ ಸಂಘಟನೆಗಳು ಆತಂಕ ವ್ಯಕ್ತಪಡಿಸಿವೆ.



ಉಮಾ ರೆಡ್ಡಿ

ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆ ಇಲ್ಲವಾಗಿರುವುದು ಉದ್ಯಮಗಳಿಗೆ ಒಂದಿಷ್ಟು ಸಮಸ್ಯೆ ಸೃಷ್ಟಿಸಿದೆ. ಇದರ ಜೊತೆಯಲ್ಲೇ, ಸರಕು ಸಾಗಣೆ ವೆಚ್ಚದಲ್ಲಿನ ಹೆಚ್ಚಳವು ಆಮದು ಮತ್ತು ರಫ್ತು ವಹಿವಾಟಿಗೆ ಸಮಸ್ಯೆಯಾಗಿ ಪರಿಣಮಿಸಿದೆ.

ಆತಿಥ್ಯ ಉದ್ಯಮದ ಭಾಗವಾಗಿರುವ ಹೋಟೆಲ್‌ಗಳು ಹಲವೆಡೆ ವಹಿವಾಟು ನಿಲ್ಲಿಸಿವೆ. ಆದರೆ, ವಹಿವಾಟು ನಿಂತಿರುವ ವರದಿಗಳು ಅಥವಾ ದೂರುಗಳು ಇತರ ಉದ್ಯಮ ವಲಯಗಳಿಂದ ಈವರೆಗೆ ಬಂದಿಲ್ಲ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷೆ ಉಮಾ ರೆಡ್ಡಿ ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಉದ್ಯಮಿಗಳು ಲಭ್ಯವಿರುವ ಎಲ್‌ಪಿಜಿ ಬಳಸಿಕೊಂಡು ಹೇಗೋ ಪರಿಸ್ಥಿತಿಯನ್ನು ನಿಭಾಯಿಸುತ್ತಿದ್ದಾರೆ. ಯುದ್ಧವು ಹೀಗೇ ಮುಂದುವರಿದಲ್ಲಿ, ಸರಕು ಸಾಗಣೆ ಮುಕ್ತವಾಗಿ ಆಗದೆ ಇದ್ದಲ್ಲಿ ದೊಡ್ಡ ಬಿಕ್ಕಟ್ಟು ಸೃಷ್ಟಿಯಾಗಬಹುದು. ಯಾವ ರೀತಿಯ ಪರಿಸ್ಥಿತಿ ಎದುರಾಗಬಹುದು ಎಂಬುದನ್ನು ಈಗಲೇ ಊಹೆ ಮಾಡಲು ಆಗದು' ಎಂದು ಅವರು ಹೇಳಿದರು.

ಪರಿಸ್ಥಿತಿ ಹೀಗೇ ಮುಂದುವರಿದರೆ ರಾಜ್ಯದಲ್ಲಿ ಹಲವು ಉದ್ಯಮಗಳು ವಹಿವಾಟು ನಿಲ್ಲಿಸಬೇಕಾಗ ಬಹುದು, ಆಗ ಕಾರ್ಮಿಕರು ಕೆಲಸ ಕಳೆದುಕೊಳ್ಳುವ ಸಂದರ್ಭ ಸಹಜವಾಗಿಯೇ ಎದುರಾಗುತ್ತದೆ ಎಂದರು.

ಎಲ್‌ಪಿಜಿ ಕೊರತೆ ಹಾಗೂ ಸರಕು ಸಾಗಣೆಯಲ್ಲಿನ ಸಮಸ್ಯೆಯಿಂದಾಗಿ ಉದ್ಯಮಗಳಿಗೆ ಬಹಳಷ್ಟು ತೊಂದರೆ ಆಗಿದೆ ಎಂದು ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ, ಉದ್ಯಮಿ ಜೆ.ಕ್ರಾಸ್ತ ಹೇಳಿದರು.

'ಎಲ್‌ಪಿಜಿ ಕೊರತೆಯಿಂದಾಗಿ ಫ್ಯಾಬ್ರಿಕೇಷನ್, ರಾಸಾಯನಿಕ ಉತ್ಪಾದನೆಯ ಉದ್ಯಮಗಳಿಗೆ ಹೆಚ್ಚು ತೊಂದರೆ ಆಗಿದೆ. ಸುವಾಸನೆ ಬೀರುವ ಉತ್ಪನ್ನಗಳ ತಯಾರಿಕಾ ಉದ್ಯಮಕ್ಕೂ ತೊಂದರೆ ಆಗಿದೆ. ಬೆಂಗಳೂರಿನಲ್ಲಿ ಈವರೆಗೆ ಎಲ್ಲಿಯೂ ಉತ್ಪಾದನೆ ಪೂರ್ತಿಯಾಗಿ ನಿಂತಂತೆ ಕಾಣುತ್ತಿಲ್ಲ. ಆದರೆ ಯುದ್ಧವು ಇನ್ನೂ 15–20 ದಿನ ಮುಂದುವರಿದರೆ ಉದ್ಯಮಗಳು ಒಂದೊಂದಾಗಿ ಬಾಗಿಲು ಮುಚ್ಚಬಹುದು' ಎಂದು ಕ್ರಾಸ್ತ ಆತಂಕ ವ್ಯಕ್ತಪಡಿಸಿದರು.

ಸಮರದ ಪರಿಣಾಮವಾಗಿ ಕೊಲ್ಲಿ ರಾಷ್ಟ್ರಗಳಿಗೆ ಆಗುವ ರಫ್ತಿಗೆ ತೊಂದರೆ ಉಂಟಾಗಿದೆ. ಯುರೋಪ್ ಹಾಗೂ ಇತರ ಮಾರುಕಟ್ಟೆಗಳಿಗೆ ರಫ್ತಿಗೆ ಸಮಸ್ಯೆ ಆಗಿಲ್ಲ ಎಂದು ತಿಳಿಸಿದರು.

ಎಲ್‌ಪಿಜಿ ಮೇಲೆ ಹೆಚ್ಚು ಅವಲಂಬಿತರಾಗಿರುವವರು ಕಾರ್ಯಾದೇಶಗಳನ್ನು ಸಮಯಕ್ಕೆ ಸರಿಯಾಗಿ ಪೂರೈಸಲು ಹೆಣಗಾಟ ನಡೆಸುವಂತಾಗಿದೆ ಎಂದು ಎಫ್‌ಕೆಸಿಸಿ ಮಾಜಿ ಅಧ್ಯಕ್ಷ ಉದ್ಯಮಿ ಜೆ.ಆರ್.ಬಂಗೇರ ಹೇಳಿದರು.

ಕೆಲವು ಉದ್ಯಮಿಗಳು ಎಲ್‌ಪಿಜಿಗೆ ಪರ್ಯಾಯವಾಗಿ ವಿದ್ಯುತ್ ಬಳಕೆ ಮಾಡಲು ಆರಂಭಿಸಿದ್ದಾರೆ ಎಂದು ಉಮಾ ರೆಡ್ಡಿ ಮಾಹಿತಿ ನೀಡಿದರು. 'ಸರಕು ಸಾಗಣೆ ವೆಚ್ಚ ಹೆಚ್ಚಾಗುತ್ತಿರುವ ಕಾರಣದಿಂದಾಗಿ ಎಲ್ಲ ಉದ್ಯಮಗಳ ಹಿತಕ್ಕೆ ಧಕ್ಕೆ ಆಗಿದೆ' ಎಂದರು.

'ಎರಡು ವಾರಗಳಲ್ಲಿ ಸರಿಹೋಗಬಹುದು'

ವಾಣಿಜ್ಯ ಬಳಕೆ ಎಲ್‌ಪಿಜಿ ಪೂರೈಕೆಯು ಇನ್ನು ಎರಡು ವಾರಗಳಲ್ಲಿ ಸರಿಹೋಗಬಹುದು ಎಂದು ಉದ್ಯಮಿ ಎಂ.ಜಿ. ಬಾಲಕೃಷ್ಣ ತಿಳಿಸಿದರು. ಬಾಲಕೃಷ್ಣ ಅವರು ವಾಣಿಜ್ಯ ಹಾಗೂ ಮನೆ ಬಳಕೆ ಎಲ್‌ಪಿಜಿ ಪೂರೈಕೆ ವಹಿವಾಟಿನಲ್ಲಿ ಇದ್ದಾರೆ.

ಅನಿಲ ಹೊತ್ತ ಹಡಗುಗಳು ಭಾರತದತ್ತ ಬರುತ್ತಿವೆ. ದೇಶದ ಕಚ್ಚಾ ತೈಲ ಸಂಸ್ಕರಣಾ ಘಟಕಗಳು ಕೂಡ ಎಲ್‌ಪಿಜಿ ಉತ್ಪಾದಿಸುತ್ತಿವೆ. ಕೊಲ್ಲಿ ರಾಷ್ಟ್ರಗಳು ಮಾತ್ರವೇ ಅಲ್ಲದೆ, ಬೇರೆ ಕಡೆಗಳಿಂದಲೂ ಅನಿಲ ಪೂರೈಕೆ ಶುರುವಾಗಿದೆ. ಹೀಗಾಗಿ ಪರಿಸ್ಥಿತಿ ಶೀಘ್ರವೇ ಸರಿಹೋಗಲಿದೆ ಎಂದು ಅವರು ಹೇಳಿದರು.

'ಹೊರ್ಮುಜ್ ನಿಯಂತ್ರಿಸಲು ಒಕ್ಕೂಟ'

ಕೈರೊ (ಎಪಿ): ಹೊರ್ಮುಜ್ ಜಲಸಂಧಿಯನ್ನು ಮುಕ್ತವಾಗಿರಿಸಲು ಏಳು ದೇಶಗಳು ಯುದ್ಧನೌಕೆಗಳನ್ನು ಕಳುಹಿಸಬೇಕೆಂಬ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮನವಿಗೆ ಯಾವುದೇ ದೇಶಗಳಿಂದ ಸಮ್ಮತಿ ಸಿಕ್ಕಿಲ್ಲ.

ಜಗತ್ತಿನ ಐದನೇ ಒಂದು ಭಾಗದಷ್ಟು ತೈಲವನ್ನು ಸಾಗಿಸುವ ಈ ಜಲಮಾರ್ಗವನ್ನು ನಿಯಂತ್ರಿಸಲು ಒಕ್ಕೂಟವೊಂದನ್ನು ರಚಿಸುವ ಬಗ್ಗೆ ಅಮೆರಿಕವು ವಿವಿಧ ದೇಶಗಳೊಂದಿಗೆ ಮಾತುಕತೆ ನಡೆಸುತ್ತಿದೆ. ಆದರೆ, ಮಧ್ಯಪ್ರಾಚ್ಯದ ಕಚ್ಚಾ ತೈಲದ ಮೇಲೆ ಹೆಚ್ಚು ಅವಲಂಬಿತವಾಗಿರುವ ದೇಶಗಳ ಹೆಸರನ್ನು ತಿಳಿಸಲು ಟ್ರಂಪ್ ನಿರಾಕರಿಸಿದ್ದಾರೆ.

'ಈ ದೇಶಗಳು ತಮ್ಮ ಸ್ವಂತ ಪ್ರದೇಶವನ್ನು ರಕ್ಷಿಸಿಕೊಳ್ಳಬೇಕು. ಏಕೆಂದರೆ, ಅದು ಅವರ ಸ್ವಂತ ಪ್ರದೇಶವಾಗಿದೆ. ತೈಲ ಸಾಗಣೆಗೆ ಬೇರೆಯದೇ ಮಾರ್ಗ ಇರುವುದರಿಂದ ಈ ಜಲಮಾರ್ಗವು ಅಮೆರಿಕಕ್ಕೆ ಅಗತ್ಯವಿಲ್ಲ' ಎಂದು ಟ್ರಂಪ್ ಅವರು ಫ್ಲಾರಿಡಾದಿಂದ ವಾಷಿಂಗ್ಟನ್‌ಗೆ ಹಿಂತಿರುಗುವಾಗ ವರದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ.

'ಚೀನಾ ತನ್ನ ತೈಲದ ಶೇ 90ರಷ್ಟು ಪ್ರಮಾಣವನ್ನು ಈ ಜಲಸಂಧಿ ಮೂಲಕ ಪಡೆಯುತ್ತದೆ. ಆದರೆ, ಅಮೆರಿಕ ಕಡಿಮೆ ತೈಲವನ್ನು ಪಡೆಯುತ್ತದೆ' ಎಂದು ಟ್ರಂಪ್ ಹೇಳಿದ್ದಾರೆ. ಆದರೆ, ಒಕ್ಕೂಟಕ್ಕೆ ಚೀನಾ ಸೇರುತ್ತದೆಯೇ ಎಂಬುದರ ಕುರಿತು ಚರ್ಚಿಸಲು ಅವರು ನಿರಾಕರಿಸಿದ್ದಾರೆ.

'ಜಲಸಂಧಿಯನ್ನು ಮತ್ತೆ ತೆರೆಯುವ ಮಹತ್ವದ ಕುರಿತು ಪ್ರಧಾನಿ ಕಿಯರ್ ಸ್ಟಾರ್ಮರ್ ಭಾನುವಾರ ಟ್ರಂಪ್ ಅವರೊಂದಿಗೆ ಚರ್ಚಿಸಿದ್ದಾರೆ. ಕೆನಡಾದ ಪ್ರಧಾನಿ ಅವರೊಂದಿಗೂ ಪ್ರತ್ಯೇಕವಾಗಿ ಮಾತನಾಡಿದ್ದಾರೆ' ಎಂದು ಬ್ರಿಟನ್ ಹೇಳಿದೆ.

'ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳನ್ನು ಹೊರತುಪಡಿಸಿ ಉಳಿದೆಲ್ಲ ದೇಶಗಳಿಗೂ ಜಲಸಂಧಿ ಮುಕ್ತವಾಗಿದೆ' ಎಂದು ಇರಾನ್ ಹೇಳಿದೆ.

ಅಮೆರಿಕ ಜೊತೆ ಮಾತನಾಡಿಲ್ಲ: ಭಾರತ

ನವದೆಹಲಿ (ಪಿಟಿಐ): ಹೊರ್ಮುಜ್ ಜಲಸಂಧಿಯ ಮೂಲಕ ವ್ಯಾಪಾರಿ ಹಡಗುಗಳ ಸುರಕ್ಷಿತ ಸಂಚಾರವನ್ನು ಖಚಿತಪಡಿಸಿಕೊಳ್ಳಲು ಅಮೆರಿಕದ ಜೊತೆ ದ್ವಿಪಕ್ಷೀಯ ಮಾತುಕತೆಯನ್ನು ನಡೆಸಿಲ್ಲ ಎಂದು ಭಾರತ ಹೇಳಿದೆ.

ಆಯಕಟ್ಟಿನ ಪ್ರಮುಖ ಜಲಸಾರಿಗೆಯ ಮಾರ್ಗವನ್ನು ಮುಕ್ತವಾಗಿಡಲು ಯುದ್ಧನೌಕೆಗಳನ್ನು ಕಳಿಸಿಕೊಡುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹಲವು ದೇಶಗಳಿಗೆ ಮನವಿ ಮಾಡಿಕೊಂಡ ಬೆನ್ನಿಗೆ, ವಿದೇಶಾಂಗ ಸಚಿವಾಲಯ ಈ ಹೇಳಿಕೆ ನೀಡಿದೆ.

'ಪೂರ್ವಾನುಮತಿ ಇಲ್ಲದೆ ಇರಾನ್ ಗಡಿ ದಾಟದಿರಿ'

ದುಬೈ (ಪಿಟಿಐ): ಟೆಹರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಪೂರ್ವಾನುಮತಿ ಅಥವಾ ಸ್ಪಷ್ಟ ಸಮನ್ವಯ ಇಲ್ಲದೆ ಯಾವುದೆ ಭೂ ಗಡಿಗಳನ್ನು ಸಮೀಪಿಸುವುದಾಗಲಿ, ದಾಟುವುದಾಗಲಿ ಮಾಡಬಾರದು ಎಂದು ಇರಾನ್‌ನಲ್ಲಿರುವ ಭಾರತೀಯರಿಗೆ ಸೂಚನೆ ನೀಡಲಾಗಿದೆ.

ಭಾರತೀಯ ರಾಯಭಾರ ಕಚೇರಿಯ ಅರಿವಿಗೆ ತರದೆ ಮತ್ತು ಮಾರ್ಗದರ್ಶನವಿಲ್ಲದೆ ಭೂ ಗಡಿಯ ಮೂಲಕ ಇರಾನ್ ದಾಟಲು ಪ್ರಯತ್ನಿಸುವ ಭಾರತೀಯರು ಗಂಭೀರ ವಲಸೆ ಮತ್ತು ಪ್ರಯಾಣದ ತೊಂದರೆಗಳನ್ನು ಎದುರಿಸ ಬೇಕಾಗುತ್ತದೆ ಎಂದು ಅದು ಎಚ್ಚರಿಸಿದೆ.

ಒಂದು ವೇಳೆ ಸಮನ್ವಯವಿಲ್ಲದೆ ಗಡಿ ದಾಟಿದರೆ ನಂತರ ಅವರಿಗೆ ನೆರವು ನೀಡುವ ಸ್ಥಿತಿಯಲ್ಲಿ ತಾವು ಇರುವುದಿಲ್ಲ ಎಂದು ರಾಯಭಾರ ಕಚೇರಿ ತಿಳಿಸಿದೆ. 'ರಾಯಭಾರ ಕಚೇರಿಯು ಭಾರತೀಯ ಸಮುದಾಯದೊಂದಿಗೆ ನಿಯಮಿತ ಸಂಪರ್ಕದಲ್ಲಿದೆ. ಅಗತ್ಯವಿದ್ದ ಕಡೆ ಸಂಘಟಿತ ವ್ಯವಸ್ಥೆಗಳನ್ನು ಕೈಗೊಳ್ಳಲಾಗುತ್ತಿದೆ. ಯಾವುದೆ ಸೂಚನೆ ನೀಡದೆ ಭೂ ಗಡಿಯ ಕಡೆಗೆ ಪ್ರಯಾಣಿಸುವಂತಿಲ್ಲ' ಎಂದು ಕಚೇರಿ ಹೇಳಿದೆ.

ಕಡ್ಡಾಯವಾಗಿ ಸೂಚನೆಗಳನ್ನು ಪಾಲಿಸಲು ಮತ್ತು ಯಾವುದೇ ಪ್ರಯಾಣ ಕೈಗೊಳ್ಳುವಾಗ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿರಿ ಎಂದು ಕಚೇರಿ ವಿನಂತಿಸಿದೆ. ಪ್ರಯಾಣ ಸಂಬಂಧಿ ಪ್ರಶ್ನೆಗಳು ಅಥವಾ ತುರ್ತು ಸಂದರ್ಭದಲ್ಲಿ +98 912 810 9115, +98 912 810 9102, +98 9128109109, +98 993 217 9359 ಅಥವಾ ಇ-ಮೇಲ್: cons.tehrant@mea.gov.in ಸಂಪರ್ಕಿಸುವಂತೆ ಕೇಳಿಕೊಂಡಿದೆ.

ಸುದ್ದಿ 2 ನಿಮಿಷ

ಸಗಟು ಹಣದುಬ್ಬರ ಏರಿಕೆ

ನವದೆಹಲಿ (ಪಿಟಿಐ): ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರವು ಫೆಬ್ರುವರಿ ತಿಂಗಳಿನಲ್ಲಿ ಶೇ 2.13ರಷ್ಟು ದಾಖಲಾಗಿದೆ. ಇದು 11 ತಿಂಗಳ ಗರಿಷ್ಠ ಮಟ್ಟವಾಗಿದೆ.

ತರಕಾರಿಗಳ ಬೆಲೆಯಲ್ಲಿ ಇಳಿಕೆ ಆಗಿದ್ದರೂ, ಆಹಾರ ಮತ್ತು ಆಹಾರೇತರ ಪದಾರ್ಥಗಳ ಬೆಲೆ ಹೆಚ್ಚಳವಾಗಿದೆ. ಇದು ಸಗಟು ಹಣದುಬ್ಬರ ಏರಿಕೆಗೆ ಕಾರಣ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಸಗಟು ಹಣದುಬ್ಬರವು ಪ್ರಸಕ್ತ ವರ್ಷದ ಜನವರಿಯಲ್ಲಿ ಶೇ 1.81ರಷ್ಟು ದಾಖಲಾಗಿತ್ತು. 2025ರ ಫೆಬ್ರುವರಿಯಲ್ಲಿ ಶೇ 2.45ರಷ್ಟಿತ್ತು.

ತಯಾರಿಕಾ ವಲಯದ ವಸ್ತುಗಳು, ಆಹಾರ ಮತ್ತು ಆಹಾರೇತರ ವಸ್ತುಗಳು, ಜವಳಿ ಉತ್ಪನ್ನಗಳ ಬೆಲೆಯಲ್ಲಿ ಹೆಚ್ಚಳವಾಗಿದೆ. ಇದು ಸಗಟು ಹಣದುಬ್ಬರ ಏರಿಕೆಗೆ ಕಾರಣ ಎಂದು ಕೇಂದ್ರ ಕೈಗಾರಿಕಾ ಸಚಿವಾಲಯ ತಿಳಿಸಿದೆ.

ಜನವರಿಯಲ್ಲಿ ಆಹಾರ ಪದಾರ್ಥಗಳ ಬೆಲೆ ಶೇ 1.55ರಷ್ಟು, ಇದು ಫೆಬ್ರುವರಿಯಲ್ಲಿ ಶೇ 2.19ಕ್ಕೆ ಹೆಚ್ಚಳವಾಗಿದೆ. ತಯಾರಿಕಾ ವಲಯದ ಉತ್ಪನ್ನಗಳ ಬೆಲೆಯು ಶೇ 2.86ರಿಂದ ಶೇ 2.92ಕ್ಕೆ ಏರಿಕೆಯಾಗಿದ್ದರೆ, ಆಹಾರೇತರ ಪದಾರ್ಥಗಳ ದರವು ಶೇ 7.58ರಿಂದ ಶೇ 8.80ಕ್ಕೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ದ್ವಿದಳ ಧಾನ್ಯಗಳು, ಆಲೂಗಡ್ಡೆ, ಮೊಟ್ಟೆ, ಮಾಂಸ ಮತ್ತು ಮೀನಿನ ಬೆಲೆಯಲ್ಲಿ ಏರಿಕೆಯಾಗಿದೆ. ಆದರೆ, ತರಕಾರಿಗಳ ಬೆಲೆಯು ಶೇ 6.78ರಿಂದ ಶೇ 4.73ಕ್ಕೆ ಇಳಿದಿದೆ. ಇಂಧನ ಮತ್ತು ವಿದ್ಯುತ್ ಬೆಲೆಯು ಶೇ 4.01ರಿಂದ ಶೇ 3.78ಕ್ಕೆ ಕಡಿಮೆ ಆಗಿದೆ ಎಂದು ತಿಳಿಸಿದೆ.



ಕಚ್ಚಾ ತೈಲದ ಬೆಲೆಯು ನಿರಂತರವಾಗಿ ಏರಿಕೆಯಾದರೆ, ಸಗಟು ಹಣದುಬ್ಬರವು ಇನ್ನಷ್ಟು ಹೆಚ್ಚಳವಾಗಬಹುದು ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ಷೇರುಪೇಟೆ: ತುಸು ಚೇತರಿಕೆ

ಮುಂಬೈ (ಪಿಟಿಐ): ಕಳೆದ ವಾರದ ವಹಿವಾಟಿನಲ್ಲಿ 'ಕರಡಿ ಕುಣಿತ'ಕ್ಕೆ ತತ್ತರಿಸಿದ್ದ ದೇಶದ ಷೇರುಪೇಟೆಯು, ಸೋಮವಾರದ ವಹಿವಾಟಿನಲ್ಲಿ ತುಸು ಚೇತರಿಕೆ ಕಂಡಿವೆ.

ವಾಹನ, ಬ್ಯಾಂಕಿಂಗ್ ಮತ್ತು ಎಫ್‌ಎಂಸಿಜಿ ವಲಯದ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 938 ಅಂಶ (ಶೇ 1.26ರಷ್ಟು) ಏರಿಕೆಯಾಗಿ, 75,502ರಲ್ಲಿ ವಹಿವಾಟು ಅಂತ್ಯಗೊಳಿಸಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 257 ಅಂಶ (ಶೇ 1.11ರಷ್ಟು) ಹೆಚ್ಚಳವಾಗಿ, 23,408ರಲ್ಲಿ ಕೊನೆಗೊಂಡಿದೆ.

'ಹೊರ್ಮುಜ್ ಜಲಸಂಧಿಗೆ ಸಂಬಂಧಿಸಿದ ಬೆಳವಣಿಗೆಗಳು ಅಲ್ಪ ಅವಧಿಯವರೆಗೆ ಹೂಡಿಕೆದಾರರ ಮೇಲೆ ಪರಿಣಾಮ ಬೀರಲಿವೆ. ಅಲ್ಲಿ ಉಂಟಾಗಿರುವ ಅಡಚಣೆ ಕಡಿಮೆಯಾದರೆ ಷೇರುಪೇಟೆಗೆ ಉತ್ತೇಜನ ದೊರೆಯಲಿದೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.41ರಷ್ಟು ಏರಿಕೆಯಾಗಿದ್ದು, ಪ್ರತೀ ಬ್ಯಾರಲ್ ದರವು 104.4 ಡಾಲರ್ ಆಗಿದೆ.

ಅಮೆರಿಕ ಜೊತೆ ವ್ಯಾಪಾರ ಒಪ್ಪಂದ ಮುಂದಕ್ಕೆ

ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಸಹಿ ಬೀಳುವ ದಿನವನ್ನು ಮುಂದೂಡಲಾಗಿದೆ. ಅಮೆರಿಕವು ವಿವಿಧ ದೇಶಗಳ ಮೇಲೆ ವಿಧಿಸಲು ರೂಪಿಸುತ್ತಿರುವ ಹೊಸ ತೆರಿಗೆ ವ್ಯವಸ್ಥೆಯು ಅಂತಿಮ ರೂಪ ಪಡೆದ ನಂತರದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗುತ್ತದೆ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಹಂತದ ಚೌಕಟ್ಟು ಪೂರ್ಣಗೊಂಡಿದೆ ಎಂಬುದನ್ನು ಭಾರತ ಮತ್ತು ಅಮೆರಿಕ ಕಳೆದ ತಿಂಗಳು ಪ್ರಕಟಿಸಿದ್ದವು. ಇದರ ಅನ್ವಯ, ಭಾರತದ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಶೇ 18ಕ್ಕೆ ತಗ್ಗಿಸಲು ಅಮೆರಿಕ ಒಪ್ಪಿತ್ತು.

ಆದರೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬೇರೆ ಬೇರೆ ದೇಶಗಳ ವಿರುದ್ಧ ವಿಧಿಸಿದ್ದ ಪ್ರತಿಸುಂಕದ ವಿಚಾರವಾಗಿ ಅಲ್ಲಿನ ಸುಪ್ರೀಂ ಕೋರ್ಟ್ ತೀರ್ಪು ಪ್ರಕಟಿಸಿದ ನಂತರದಲ್ಲಿ ಅಮೆರಿಕದ ಸುಂಕ ವ್ಯವಸ್ಥೆ ಬದಲಾಗಿದೆ. ತೀರ್ಪಿನ ನಂತರ ಟ್ರಂಪ್ ಅವರು ಎಲ್ಲ ದೇಶಗಳ ಉತ್ಪನ್ನಗಳ ಮೇಲೆ ಶೇ 10ರಷ್ಟು ಸುಂಕ ಜಾರಿಗೊಳಿಸಿದ್ದಾರೆ. ಇದು ಫೆಬ್ರುವರಿ 24ರಿಂದ 150 ದಿನ ಜಾರಿಯಲ್ಲಿರುತ್ತದೆ.

'ಒಪ್ಪಂದಕ್ಕೆ ಮಾರ್ಚ್‌ನಲ್ಲಿ ಸಹಿ ಹಾಕಬೇಕಿತ್ತು. ಆದರೆ ಸಹಿ ಹಾಕುವ ಸಮಯದ ಬಗ್ಗೆ ತೀರ್ಮಾನ ಆದ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ಬಂದಿರಲಿಲ್ಲ. ಈಗ ಕೋರ್ಟ್ ತೀರ್ಪಿನಿಂದಾಗಿ, ಆಗ ಜಾರಿಗೆ ಬಂದಿದ್ದ ಸುಂಕ ಅಸ್ತಿತ್ವದಲ್ಲಿಲ್ಲ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಅಡಿಕೆ ಧಾರಣೆ

ಚಿತ್ರದುರ್ಗ	
ಅಪಿ	50600-51000
ಬೆಟ್ಟೆ	37600-38000
ಕೆಂಪುಗೋಟು	31600-32000
ರಾಶಿ	50100-50500
ಕುಮಟಾ	
ಚಾಲಿ	47089-49290
ಚಿಪ್ಪು	28569-36099
ಕೋಕ	15869-33339
ಫ್ಯಾಕ್ಟರಿ	9109-28629
ಹೊಸಚಾಲಿ	41119-48699
ಪುತ್ತೂರು	
ಕೋಕ	20000-35000
ಹೊಸತು	26000-46000
ಸಾಗರ	
ಬಿಳಿಗೋಟು	20022-33000
ಚಾಲಿ	20305-43309
ಕೋಕ	14156-35800
ಕೆಂಪುಗೋಟು	23999-37199
ರಾಶಿ	36009-59170
ಸಿಪ್ಪೆಗೋಟು	8332-22415
ಶಿವಮೊಗ್ಗ	
ಸರಕು	68200-98596
ಬೆಟ್ಟೆ	50000-63210
ರಾಶಿ	43838-54659
ಗೊರಬಲು	19001-37169
ಸಿದ್ದಾಪುರ	
ಬಿಳಿಗೋಟು	27099-35189
ಚಾಲಿ	41100-46699
ಕೋಕ	22500-33699
ಕೆಂಪುಗೋಟು	28689-34799
ರಾಶಿ	48699-53699
ತಟ್ಟಿಬೆಟ್ಟೆ	38289-51129
ಶಿರಸಿ	
ಬೆಟ್ಟೆ	34169-47248
ಬಿಳಿಗೋಟು	22109-39899
ಚಾಲಿ	44099-48299
ಕೆಂಪುಗೋಟು	23609-37898
ರಾಶಿ	49019-53318
ಯಲ್ಲಾಪುರ	
ಅಪಿ	56470-56515
ಬಿಳಿಗೋಟು	16900-41711
ಚಾಲಿ	38619-48809
ಕೋಕ	14012-32899
ಕೆಂಪುಗೋಟು	25499-36969
ರಾಶಿ	49819-55899
ತಟ್ಟಿಬೆಟ್ಟೆ	36011-49869

ಶಾಸಕರ ಪ್ರಶ್ನೆಗಳಿಗೆ ಉತ್ತರಿಸದ ಮಂತ್ರಿಗಳು: ಇದು ನಿರ್ಲಕ್ಷ್ಯದ ದ್ಯೋತಕವೇ?
ಹೌದು / ಇಲ್ಲ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಧಾರ್ಮಿಕ ಸ್ವಾತಂತ್ರ್ಯ ಕ್ಷೀಣ: ವರದಿಗೆ ಖಂಡನೆ

ನ್ಯೂಯಾರ್ಕ್ (ಪಿಟಿಐ): ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯವು ಕ್ಷೀಣಿಸುತ್ತಿದೆ ಎಂದು ಅಮೆರಿಕ ಸರ್ಕಾರದ ಆಯೋಗವೊಂದು ಹೇಳಿದೆ.

ಅಮೆರಿಕದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಆಯೋಗವು (ಯುಎಸ್‌ಸಿಐಆರ್‌ಎಫ್), ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯವು ವರ್ಷದಿಂದವರ್ಷಕ್ಕೆ ಕ್ಷೀಣಿಸುತ್ತಿದ್ದು, 'ನಿರ್ದಿಷ್ಟ ಕಾಳಜಿಯ ದೇಶ' ಎಂದು ಘೋಷಿಸುವಂತೆ ಶಿಫಾರಸು ಮಾಡಿದೆ.

ಆರ್‌ಎಸ್‌ಎಸ್ ಹಾಗೂ ಗುಪ್ತಚರ ಸಂಸ್ಥೆಯಾದ ಸಂಶೋಧನೆ ಮತ್ತು ವಿಶ್ಲೇಷಣಾ ವಿಭಾಗದ (ಆರ್‌ಎಡಬ್ಲು) ಮೇಲೆ ನಿರ್ಬಂಧ ವಿಧಿಸುವಂತೆಯೂ ಹೇಳಿದೆ.

ಆಯೋಗದ ಈ ವರದಿಯನ್ನು ಖಂಡಿಸಿರುವ ಭಾರತವು, 'ಇದು ಪಕ್ಷಪಾತ ಹಾಗೂ ರಾಜಕೀಯ ಪ್ರೇರಿತ' ಎಂದಿದೆ. 'ಹಲವು ವರ್ಷಗಳಿಂದಲೂ ಅಮೆರಿಕದ ಆಯೋಗವು ಭಾರತದ ವಿರುದ್ಧ ಸಂಕಥನ ರೂಪಿಸುವುದು ನಿರಂತರವಾಗಿ ಮುಂದುವರಿದಿದೆ. ವಸ್ತುನಿಷ್ಠ ಸಂಗತಿಗಳಿಗಿಂತ ಪ್ರಶ್ನಾರ್ಹ ಮೂಲಗಳು ಮತ್ತು ಸೈದ್ಧಾಂತಿಕ ನಿರೂಪಣೆಗಳನ್ನು ಆಧರಿಸಿದೆ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಸೋಮವಾರ ಪ್ರತಿಕ್ರಿಯಿಸಿದ್ದಾರೆ.

₹9.75 ಲಕ್ಷ ಕೋಟಿ ಸಾಲ ರೈಟ್‌ಆಫ್

ನವದೆಹಲಿ (ಪಿಟಿಐ): ಕಳೆದ 11 ಆರ್ಥಿಕ ವರ್ಷಗಳಲ್ಲಿ ದೇಶದಲ್ಲಿನ ಬ್ಯಾಂಕ್‌ಗಳು ಒಟ್ಟು ₹9.75 ಲಕ್ಷ ಕೋಟಿ ಮೊತ್ತದ ಸಾಲವನ್ನು ರೈಟ್‌ಆಫ್ ಮಾಡಿವೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಸಂಸತ್ತಿಗೆ ಸೋಮವಾರ ತಿಳಿಸಿದೆ.

2019–20ರ ಆರ್ಥಿಕ ವರ್ಷದಲ್ಲಿ ರೈಟ್‌ಆಫ್ ಮಾಡಲಾದ ಮೊತ್ತವು ₹1.59 ಲಕ್ಷ ಕೋಟಿಯಷ್ಟಾಗಿತ್ತು. ಇದು 2024–25ರ ವೇಳೆಗೆ ₹47,568 ಕೋಟಿಗೆ ಇಳಿದಿದೆ ಎಂದು ತಿಳಿಸಿದೆ.

ಟೆಹರಾನ್‌ನ ಮೆಹ್ರಾಬಾದ್ ವಿಮಾನ ನಿಲ್ದಾಣದಲ್ಲಿ ಹೊಡೆದುರುಳಿಸಿದ ಇಸ್ರೇಲ್ ಸೇನೆ

ಇಸ್ರೇಲ್ ದಾಳಿ: ಖಮೇನಿ ವಿಮಾನ ಧ್ವಂಸ

ದುಬೈ (ರಾಯಿಟರ್ಸ್/ಎಪಿ): ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಯಲ್ಲಿ ಹತರಾದ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರು ಬಳಸುತ್ತಿದ್ದ ವಿಮಾನವನ್ನು ಟೆಹರಾನ್‌ನ ಮೆಹ್ರಾಬಾದ್ ವಿಮಾನ ನಿಲ್ದಾಣದಲ್ಲಿ ಹೊಡೆದುರುಳಿಸಲಾಗಿದೆ ಎಂದು ಇಸ್ರೇಲಿ ಮಿಲಿಟರಿಯು ಸೋಮವಾರ ಹೇಳಿದೆ.

ಖಮೇನಿ ಮಾತ್ರವಲ್ಲದೇ, ಇರಾನಿನ ಹಿರಿಯ ಅಧಿಕಾರಿಗಳು, ಮಿಲಿಟರಿ ಅಧಿಕಾರಿಗಳು ಪ್ರಾದೇಶಿಕವಾಗಿ ಮತ್ತು ಅಂತರರಾಷ್ಟ್ರೀಯ ಪ್ರಯಾಣಕ್ಕೆ ಈ ವಿಮಾನವನ್ನು ಬಳಸುತ್ತಿದ್ದರು ಎಂದೂ ಇಸ್ರೇಲ್ ಹೇಳಿದೆ.

ಇತ್ತ, ಇರಾನ್ ಕೂಡ ಇಸ್ರೇಲ್ ಮತ್ತು ಕೊಲ್ಲಿ ರಾಷ್ಟ್ರಗಳನ್ನು ಗುರಿಯಾಗಿಸಿ ತನ್ನ ದಾಳಿ ಹೆಚ್ಚಿಸಿದೆ. ತೈಲ ಸಾಗಣೆಯ ಮೇಲೆ ಹಿಡಿತಸಾಧಿಸುವತ್ತ ಹೆಜ್ಜೆ ಇಟ್ಟಿದ್ದು, ಈ ಮೂಲಕ ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಮತ್ತಷ್ಟು ಬಿಗಡಾಯಿಸಿದಂತಾಗಿದೆ.

ಈ ನಡುವೆ ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆಯಾಗಿದ್ದು, ಸೋಮವಾರ ಬ್ರೆಂಟ್ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರಲ್‌ಗೆ ಸುಮಾರು 105 ಡಾಲರ್ ತಲುಪಿದೆ.

ಇರಾನ್‌ನ ತೈಲ ರಫ್ತಿನ ಪ್ರಮುಖ ಕೇಂದ್ರವಾದ ಖಾರ್ಗ್ ದ್ವೀಪದ ಮೇಲೆ ದಾಳಿ ನಡೆಸಲು ಅಮೆರಿಕವು ಯುನೈಟೆಡ್ ಅರಬ್ ಎಮಿರೇಟ್ಸ್‌ನ ಬಂದರುಗಳು ಮತ್ತು ಅಡಗುತಾಣಗಳನ್ನು ಬಳಸಿಕೊಳ್ಳುತ್ತಿದೆ ಎಂದೂ ಇರಾನ್ ಆರೋಪಿಸಿದೆ.

ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿ ದಾಳಿ: 'ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿಗಳನ್ನು ಹಾರಿಸಿದೆ' ಎಂದು ಇಸ್ರೇಲ್ ಸೇನೆ ತಿಳಿಸಿದೆ. ಮಧ್ಯ ಇಸ್ರೇಲ್ ಮತ್ತು ಟೆಲ್ ಅವೀವ್ ಪ್ರದೇಶದ ಮೇಲೆ ಅನೇಕ ದಾಳಿಗಳು ನಡೆದಿವೆ. ಇದರಿಂದ ಸುಮಾರು 23 ಸ್ಥಳಗಳಲ್ಲಿ ಹಾನಿ ಉಂಟಾಗಿದ್ದು, ಒಂದು ಕಡೆ ಸಣ್ಣ ಮಟ್ಟದ ಅಗ್ನಿ ಅವಘಡವೂ ಸಂಭವಿಸಿದೆ.

ಇಸ್ರೇಲ್‌ನ ವಿವಿಧ ಪ್ರದೇಶಗಳನ್ನು ಗುರಿಯಾಗಿಸಿ ಇರಾನ್ ಕ್ಲಸ್ಟರ್ ಬಾಂಬ್‌ಗಳ ಮೂಲಕ ದಾಳಿ ನಡೆಸುತ್ತಿದೆ. ಹಲವು ಬಾಂಬ್‌ಗಳನ್ನು ವಾಯು ರಕ್ಷಣಾ ವ್ಯವಸ್ಥೆಗಳ ಮೂಲಕ ವಿಫಲಗೊಳಿಸಲಾಗಿದೆ ಎಂದೂ ಇಸ್ರೇಲ್ ಮಾಹಿತಿ ನೀಡಿದೆ.

ದುಬೈ ತೈಲ ಟ್ಯಾಂಕರ್ ಮೇಲೆ ಇರಾನ್ ಡ್ರೋನ್ ದಾಳಿ: ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ತೈಲ ಟ್ಯಾಂಕರ್ ಒಂದಕ್ಕೆ ಇರಾನ್‌ನ ಡ್ರೋನ್ ಡಿಕ್ಕಿಯಾದ ಪರಿಣಾಮ ತೀವ್ರ ಬೆಂಕಿ ಕಾಣಿಸಿಕೊಂಡಿದೆ. ಇದರಿಂದ ವಿಮಾನ ನಿಲ್ದಾಣವು ಕೆಲವು ಗಂಟೆ ಎಲ್ಲಾ ವಿಮಾನ ಪ್ರಯಾಣವನ್ನು ರದ್ದುಗೊಳಿಸಿತ್ತು. ಈ ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯುದ್ಧ ನಿಲ್ಲದು: ಇರಾನ್

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ತಮ್ಮ ತಪ್ಪಿನ ಅರಿವಾಗುವವರೆಗೂ ಯುದ್ಧ ನಿಲ್ಲುವುದಿಲ್ಲ ಎಂದು ಇರಾನ್ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅರಘ್ಚಿ ಹೇಳಿದ್ದಾರೆ.

ಯುದ್ಧ ನಿಲ್ಲಿಸಲು ಒಪ್ಪಂದ ಮಾಡಿಕೊಳ್ಳುವಂತೆ ಇರಾನ್ ಬೇಡಿಕೊಳ್ಳುತ್ತಿದೆ ಎಂಬ ವರದಿಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, ನಮ್ಮ ದೇಶ ಮಾತುಕತೆಯನ್ನಾಗಲಿ ಒಪ್ಪಂದವನ್ನಾಗಲಿ ಬಯಸುತ್ತಿಲ್ಲ ಎಂದಿದ್ದಾರೆ.

ಮಿತ್ರ ರಾಷ್ಟ್ರಗಳಿಗೆ ಟ್ರಂಪ್ ಬೆದರಿಕೆ

ಹೊರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿರಿಸಲು ಮಿತ್ರ ರಾಷ್ಟ್ರಗಳ ಬೆಂಬಲ ಕೋರಿದ್ದ ಟ್ರಂಪ್, ಇದೀಗ ಮಿತ್ರ ರಾಷ್ಟ್ರಗಳಿಗೇ ಪರೋಕ್ಷ ಬೆದರಿಕೆ ಒಡ್ಡಿದ್ದಾರೆ. 'ನಮಗೆ ಬೆಂಬಲ ಸಿಗುತ್ತದೆಯೋ ಇಲ್ಲವೋ ಆದರೆ, ಈ ವಿಚಾರವನ್ನು ಮಾತ್ರ ನಾವು ನೆನಪಿನಲ್ಲಿಟ್ಟುಕೊಂಡಿರುತ್ತೇವೆ' ಎಂದು ಮಾರ್ಮಿಕವಾಗಿ ನುಡಿದಿದ್ದಾರೆ. ಈ ಮೂಲಕ ಅಮೆರಿಕಕ್ಕೆ ಬೆಂಬಲ ನೀಡದ ರಾಷ್ಟ್ರಗಳಿಗೆ ಪರೋಕ್ಷ ಬೆದರಿಕೆ ಒಡ್ಡಿದ್ದಾರೆ.

ಐಸಿಯುನಲ್ಲಿ ಬೆಂಕಿ ಅವಘಡ: 10 ಮಂದಿ ಸಾವು

ಒಂದನೇ ಪುಟದಿಂದ...

'ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಅನಾಹುತ ಸಂಭವಿಸಿರುವ ಸಾಧ್ಯತೆಯಿದೆ' ಎಂದು ಅವರು ತಿಳಿಸಿದ್ದಾರೆ.

ಸೋಮವಾರ ಬೆಳಿಗ್ಗೆ 2.30ರಿಂದ 3.30ರ ನಡುವೆ ಬೆಂಕಿ ಅನಾಹುತ ಸಂಭವಿಸಿದ್ದು, ಮಾಹಿತಿ ತಿಳಿದ ತಕ್ಷಣವೇ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿದರು.

₹2 ಲಕ್ಷ ಪರಿಹಾರ: ಪ್ರಧಾನಿ ನರೇಂದ್ರ ಮೋದಿ ಅವರು ಸಂತಾಪ ಸಲ್ಲಿಸಿದ್ದು, ಮೃತಪಟ್ಟವರ ಕುಟುಂಬದ ಹತ್ತಿರದ ಸದಸ್ಯರಿಗೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ (ಪಿಎಂಎನ್‌ಆರ್‌ಎಫ್) ತಲಾ ₹2 ಲಕ್ಷ ಪರಿಹಾರ ಘೋಷಿಸಿದ್ದಾರೆ.

'ಒಡಿಶಾದ ಕಟಕ್‌ನ ಆಸ್ಪತ್ರೆಯಲ್ಲಿ ನಡೆದ ಅಗ್ನಿ ದುರಂತದಿಂದ ತೀವ್ರ ದುಃಖಿತನಾಗಿದ್ದೇನೆ. ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ. ಮೃತಪಟ್ಟ ಕುಟುಂಬದ ಹತ್ತಿರದ ಸದಸ್ಯರಿಗೆ ತಲಾ ₹2 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರ ನೀಡಲಾಗುವುದು' ಎಂದು ಪ್ರಧಾನಿ ಕಚೇರಿಯು 'ಎಕ್ಸ್'ನಲ್ಲಿ ತಿಳಿಸಿದೆ.

ದುರಂತದಲ್ಲಿ ಮೃತಪಟ್ಟ ಕುಟುಂಬದ ಸದಸ್ಯರಿಗೆ ಒಡಿಶಾ ಸರ್ಕಾರದಿಂದ ತಲಾ ₹25 ಲಕ್ಷ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಘೋಷಿಸಿದ್ದಾರೆ.

ನಂತರ ಮುಖ್ಯಮಂತ್ರಿಗೆ ಕರೆ ಮಾಡಿದ ಪ್ರಧಾನಿ ಪರಿಸ್ಥಿತಿ ಕುರಿತಂತೆ ಮಾಹಿತಿ ಪಡೆದುಕೊಂಡರು.

'ದುರಂತದ ಕುರಿತು ಪ್ರಧಾನಿ ಅವರು ನನ್ನ ಜೊತೆಗೆ ದೂರವಾಣಿ ಕರೆ ಮಾಡಿ ವಿಸ್ತೃತವಾಗಿ ಮಾಹಿತಿ ಪಡೆದುಕೊಂಡರು' ಎಂದು ಮುಖ್ಯಮಂತ್ರಿ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ದುರಂತದ ಬಳಿಕ ತುರ್ತು ಪರಿಹಾರ ಕೈಗೊಂಡ ರಾಜ್ಯ ಸರ್ಕಾರದ ಕ್ರಮಕ್ಕೆ ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದ್ದು, ರಕ್ಷಣಾ ಕಾರ್ಯಾಚರಣೆ ಮುಂದುವರಿಸಿದೆ. ಗಾಯಗೊಂಡವರಿಗೆ ವಿಶೇಷ ಚಿಕಿತ್ಸೆ ಒದಗಿಸಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ತೀವ್ರವಾಗಿ ಅಸ್ವಸ್ಥಗೊಂಡ ರೋಗಿಗಳು ದಾಖಲಾಗಿದ್ದ ಆಸ್ಪತ್ರೆಯ ಟ್ರಾಮಾಕೇರ್, ಐಸಿಯು ಹಾಗೂ ಅದಕ್ಕೆ ತಾಗಿಕೊಂಡಿದ್ದ ಐಸಿಯು ವಾರ್ಡ್‌ನಲ್ಲಿ 23 ಮಂದಿ ರೋಗಿಗಳಿದ್ದರು. ಬೆಂಕಿಯ ಕೆನ್ನಾಲಗೆಯಿಂದಾಗಿ 7 ಜನ ಮೃತಪಟ್ಟಿದ್ದು, ಉಳಿದ ಮೂವರು ಉಸಿರುಗಟ್ಟಿ ಮೃತಪಟ್ಟಿದ್ದಾರೆ.



ಒಡಿಶಾದ ಕಟಕ್‌ನಲ್ಲಿರುವ ಎಸ್‌ಸಿಬಿ ವೈದ್ಯಕೀಯ ಕಾಲೇಜಿನಲ್ಲಿ ಸೋಮವಾರ ಅಗ್ನಿ ಅವಘಡ ಸಂಭವಿಸಿದ ಬಳಿಕ ರೋಗಿಗಳು ಆಸ್ಪತ್ರೆಯ ಹೊರಭಾಗದಲ್ಲಿ ಕೂತ ದೃಶ್ಯ –ಪಿಟಿಐ ಚಿತ್ರ

‘ಟೆನ್ಷನ್ ಆಗಬೇಡಿ ಬ್ರೊ...’


ಧ್ರುವ ಸರ್ಜಾ

‘ಅದ್ದೂರಿ’ ಸಿನಿಮಾ ಮುಖಾಂತರ ಚಂದನವನ ಪ್ರವೇಶಿಸಿದ್ದ ಧ್ರುವ ಸರ್ಜಾ ಅವರ ಸಿನಿಮಾಗಳು ಇತ್ತೀಚೆಗೆ ಎರಡು ಮೂರು ವರ್ಷಕ್ಕೊಂದರಂತೆ ಬರುತ್ತಿದೆ. 2021ರಲ್ಲಿ ‘ಪೊಗರು’, ಬಳಿಕ 2024ರಲ್ಲಿ ಧ್ರುವ ಅವರ ‘ಮಾರ್ಟಿನ್’ ತೆರೆಕಂಡಿತು. ಇದಾಗಿ ಒಂದೂವರೆ ವರ್ಷದ ಬಳಿಕ ಅವರ ಹೊಸ ಸಿನಿಮಾ ‘KD’ ಬರುತ್ತಿದೆ. ಈ ವಿಳಂಬದ ಬಗ್ಗೆ ಇತ್ತೀಚೆಗೆ ‘KD’ ವೇದಿಕೆಯಲ್ಲಿ ಧ್ರುವ ಮಾತನಾಡಿದರು.

‘ಏ.30ರಂದು ಸಿನಿಮಾ ಬಿಡುಗಡೆಗೆ ನಾನೂ ಕಾಯುತ್ತಿದ್ದೇನೆ. ‘KD’ ಸಿನಿಮಾ 2 ಗಂಟೆ 23 ನಿಮಿಷವಿದೆ. ಇದರಲ್ಲಿ ಒಂದು ಗಟ್ಟಿಯಾದ ಸಂದೇಶವಿದೆ. ‘KD’ ಎಂಬ ಶೀರ್ಷಿಕೆ ಇಟ್ಟಾಕ್ಷಣ ಇದೊಂದು ಮಾಸ್, ಫೈಟ್ಸ್ ಸಿನಿಮಾ ಎಂದಲ್ಲ. ಇದೊಂದು ಫ್ಯಾಮಿಲಿ ಡ್ರಾಮಾ ಕಥೆ ಹೊಂದಿದೆ. ಅಭಿಮಾನಿಗಳಿಗೆ ಇನ್ನು ಕಾಯಿಸಲ್ಲ. ಸಿನಿಮಾಗಳನ್ನು ಮಾಡುತ್ತಿದ್ದೇನೆ. ‘KD’ ರಿಲೀಸ್ ಆದ ಕೆಲ ತಿಂಗಳುಗಳಲ್ಲೇ ‘ಕ್ರಿಮಿನಲ್’ ಕೂಡಾ ರಿಲೀಸ್ ಆಗಲಿದೆ. ನಮಗೆ ಯಾರಾದರೂ ಸಮಯ ನೀಡುತ್ತಾರೆ ಎಂದರೆ ಬಹಳ ಖುಷಿಯಾಗುತ್ತದೆ. ಭಾನುವಾರ ಅಭಿಮಾನಿಗಳು ಮನೆಗೆ ಬರುವುದು ನಿಲ್ಲಿಸಿದರೆ? ಇಂಥ ದಿನ ಯಾವತ್ತೂ ಬರಬಾರದು ಎಂದು ಪ್ರತಿ ದಿನವೂ ಕಷ್ಟಪಡುತ್ತಿದ್ದೇನೆ. ಟೆನ್ಷನ್ ಆಗಬೇಡಿ ಬ್ರೊ... ಥಿಯೇಟರ್ ಮುಂದೆ ಫಂಕ್ಷನ್ ಮಾಡೋಣ ಬನ್ನಿ...’ ಎಂದಿದ್ದಾರೆ.

ಬರಲಿದೆ ‘KD-2’

‘ಒಳ್ಳೆಯ ಸಿನಿಮಾ ಮಾಡಿದರೆ ಸದ್ಯದ ಮಟ್ಟಿಗೆ ಅತಿ ಹೆಚ್ಚು ಕಲೆಕ್ಷನ್ ಎತ್ತಿಕೊಂಡು ಬರುವ ಮಾಸ್ ಹೀರೊ ಧ್ರುವ’ ಎನ್ನುವ ನಿರ್ದೇಶಕ ಪ್ರೇಮ್, ‘ಸಿನಿಮಾದ ಎರಡನೇ ಭಾಗಕ್ಕೆ ಬೇಕಾಗಿರುವ ಕಥೆ ಕನೆಕ್ಟ್ ಮಾಡಿದ್ದೇವೆ. ನಿರ್ಮಾಪಕರಾದ ವೆಂಕಟ್ ನಾರಾಯಣ್ ಅವರೂ ‘KD’ ಮುಂದುವರಿಸಲು ಹೇಳಿದ್ದಾರೆ. ಶೀಘ್ರದಲ್ಲೇ ಸಿನಿಮಾದೊಳಗಿನ ಸುದೀಪ್ ಅವರ ಪಾತ್ರವನ್ನೂ ಅನಾವರಣಗೊಳಿಸಲಿದ್ದೇವೆ. ಈ ಸಿನಿಮಾದ ಮುಹೂರ್ತದ ಸಂದರ್ಭದಲ್ಲಿ ಧ್ರುವ ‘ಮಾರ್ಟಿನ್’ ಮಾಡುತ್ತಿದ್ದರು. ಅದು ಪೂರ್ಣವಾಗಬೇಕಿತ್ತು. ಜೊತೆಗೆ ಧ್ರುವ ದೇಹದ ತೂಕದಲ್ಲೂ ಬದಲಾವಣೆ ಆಗಬೇಕಿದ್ದ ಕಾರಣ ವಿಳಂಬವಾಯಿತು’ ಎನ್ನುತ್ತಾರೆ.



ಮಾರ್ಚ್ 19ಕ್ಕೆ ಜೀ 5ನಲ್ಲಿ ‘ಲ್ಯಾಂಡ್‌ಲಾರ್ಡ್’

ಜಡೇಶ ಕೆ. ಹಂಪಿ ನಿರ್ದೇಶನದ, ‘ದುನಿಯಾ’ ವಿಜಯ್ ನಟನೆಯ ‘ಲ್ಯಾಂಡ್‌ಲಾರ್ಡ್’ ಸಿನಿಮಾ ಮಾರ್ಚ್ 19ರಿಂದ ಜೀ5ನಲ್ಲಿ ಸ್ಟ್ರೀಮ್ ಆಗಲಿದೆ.

‘ರಾಚಯ್ಯ’ ಎಂಬ ಪಾತ್ರದಲ್ಲಿ ವಿಜಯ್ ನಟಿಸಿದ್ದು, ದಬ್ಬಾಳಿಕೆ, ಮಾಡಿದ ಕೂಲಿಗೆ ಕಾಸು, ಅಸಮಾನತೆ, ಕ್ರಾಂತಿ–ಹೋರಾಟದ ಕಥೆಯನ್ನು ಸಿನಿಮಾ ಹೊಂದಿದೆ. ಈ ಕಥೆ 80–90ರ ದಶಕದಲ್ಲಿ ಚಿತ್ರೀಕರಣಗೊಂಡಿದ್ದು, ಕೋಲಾರ ಭಾಗದ ಕನ್ನಡದಲ್ಲೇ ಸೆರೆಹಿಡಿಯಲಾಗಿದೆ. ನಾಯಕಿಯಾಗಿ ರಚಿತಾ ರಾಮ್ ನಟಿಸಿದ್ದು, ರಾಜ್.ಬಿ.ಶೆಟ್ಟಿ, ಉಮಾಶ್ರೀ, ರಿತನ್ಯಾ, ಶಿಶಿರ್ ಬೈಕಾಡಿ, ರಾಕೇಶ್ ಅಡಿಗ, ಅಚ್ಯುತ್ ಕುಮಾರ್, ಮಿತ್ರ, ಅಭಿಷೇಕ್ ದಾಸ್ ಹೀಗೆ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ. ಸಾರಥಿ ಫಿಲಂಸ್ ಲಾಂಛನದಲ್ಲಿ ಕೆ.ವಿ. ಸತ್ಯಪ್ರಕಾಶ್ ಹಾಗೂ ಹೇಮಂತ್ ಗೌಡ ಕೆ.ಎಸ್ ಈ ಸಿನಿಮಾ ನಿರ್ಮಿಸಿದ್ದಾರೆ.


ಸಲ್ಮಾನ್ ಖಾನ್

‘ಬ್ಯಾಟಲ್ ಆಫ್ ಗಾಲ್ವಾನ್’ ಈಗ ಮಾತೃಭೂಮಿ

ಸಲ್ಮಾನ್ ಖಾನ್ ನಟನೆಯ ಹೊಸ ಸಿನಿಮಾ ‘ಬ್ಯಾಟಲ್ ಆಫ್ ಗಾಲ್ವಾನ್’ ಶೀರ್ಷಿಕೆಯನ್ನು ಚಿತ್ರತಂಡ ಬದಲಾಯಿಸಿದೆ. ಇದೀಗ ಸಿನಿಮಾ ‘ಮಾತೃಭೂಮಿ’ ಎಂಬ ಶೀರ್ಷಿಕೆ ಹೊತ್ತು ಪ್ರೇಕ್ಷಕರೆದುರಿಗೆ ಬರಲಿದೆ. ಈ ಕುರಿತು ಸಲ್ಮಾನ್ ಖಾನ್ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ.

ಭಾರತ ಮತ್ತು ಚೀನಾ ಸೈನಿಕರ ನಡುವೆ 2020ರಲ್ಲಿ ಗಾಲ್ವಾನ್ ಕಣಿವೆಯಲ್ಲಿ ನಡೆದ ಸಂಘರ್ಷದ ಕಥೆಯನ್ನು ಸಿನಿಮಾ ಹೊಂದಿದ್ದು, ‘ಶೂಟ್‌ಔಟ್ ಆ್ಯಟ್ ಲೋಖಂಡ್‌ವಾಲಾ’ ಸಿನಿಮಾ ಖ್ಯಾತಿಯ ಅಪೂರ್ವ ಲಖ್ಯಿಯಾ ನಿರ್ದೇಶಿದ್ದಾರೆ. ಶೀರ್ಷಿಕೆ ಬದಲಾವಣೆಗೆ ಕಾರಣವನ್ನು ಚಿತ್ರತಂಡ ನೀಡಿಲ್ಲ. ‘ಮೇ ವಾರ್ ರೆಸ್ಟ್ ಇನ್ ಪೀಸ್’ ಎಂಬ ಅಡಿಬರಹವಿರುವ ಈ ಸಿನಿಮಾದ ಶೀರ್ಷಿಕೆ ಗೀತೆಯೂ ‘ಮಾತೃಭೂಮಿ’ ಎಂದೇ ಆಗಿತ್ತು. ಇದು ತಿಂಗಳ ಹಿಂದೆ ಬಿಡುಗಡೆಗೊಂಡಿತ್ತು.

ಗಾಲ್ವಾನ್ ಕಣಿವೆಯಲ್ಲಿ ನಡೆದ ಘಟನೆಗಳಿಂದ ಸ್ಫೂರ್ತಿ ಪಡೆದ ಸಿನಿಮಾ ಇದಾಗಿದೆ. ಈ ಘಟನೆಯಲ್ಲಿ ಭಾರತೀಯ ಸೇನೆಯ 20 ಸೈನಿಕರು ಹುತಾತ್ಮರಾಗಿದ್ದರು. 16 ಬಿಹಾರ್ ರೆಜಿಮೆಂಟ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ, ಸಂಘರ್ಷದಲ್ಲಿ ಹುತಾತ್ಮರಾದ ‘ಬಿಕ್ಕುಮಲ್ಲ ಸಂತೋಷ್ ಬಾಬು’ ಅವರ ಪಾತ್ರವನ್ನು ಸಲ್ಮಾನ್ ಖಾನ್ ನಿರ್ವಹಿಸಿದ್ದಾರೆ. ಕಳೆದ ಡಿಸೆಂಬರ್‌ನಲ್ಲಿ ಸಿನಿಮಾದ ಟೀಸರ್ ಬಿಡುಗಡೆಯಾಗಿತ್ತು. ಈ ಸಂದರ್ಭದಲ್ಲಿ ಚೀನಾದ ಗ್ಲೋಬಲ್ ಟೈಮ್ಸ್ ಪತ್ರಿಕೆ ಇದನ್ನು ಟೀಕಿಸಿತ್ತು. ಸಿನಿಮಾವನ್ನು ಸಲ್ಮಾನ್ ಖಾನ್ ಫಿಲ್ಮ್ಸ್ ನಿರ್ಮಾಣ ಮಾಡಿದೆ.


ರಾಗಿಣಿ ದ್ವಿವೇದಿ

‘ಪೊಲೀಸ್ ಕಂಪ್ಲೈಂಟ್’ ಟೀಸರ್ ಬಿಡುಗಡೆ

ವರಲಕ್ಷ್ಮೀ ಶರತ್‌ಕುಮಾರ್ ಹಾಗೂ ರಾಗಿಣಿ ದ್ವಿವೇದಿ ಮುಖ್ಯಭೂಮಿಕೆಯಲ್ಲಿರುವ ‘ಪೊಲೀಸ್ ಕಂಪ್ಲೈಂಟ್’ ಸಿನಿಮಾದ ಟೀಸರ್ ಹಾಗೂ ಹಾಡು ಇತ್ತೀಚೆಗೆ ಬಿಡುಗಡೆಯಾಗಿದೆ.

‘ಅನು’, ‘ದಂಡು’, ‘ಆಪ್ತ’ ಸಿನಿಮಾಗಳನ್ನು ನಿರ್ದೇಶಿಸಿದ್ದ ಸಂಜೀವ ಮಗೋಟಿ ಈ ಸಿನಿಮಾವನ್ನು ನಿರ್ದೇಶಿಸಿದ್ದು, ಎ.ಎಸ್.ಕೆ. ಪ್ರಮೀದಾಶ್ರೀ ಫಿಲಂಸ್ ಬ್ಯಾನರ್‌ನಡಿ ನಿರ್ಮಾಣವಾಗಿದೆ. ಚಿತ್ರದ ಬಹುತೇಕ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಪೂರ್ಣಗೊಳಿಸಿರುವ ಚಿತ್ರತಂಡ ಸಿನಿಮಾ ಬಿಡುಗಡೆಗೆ ಸಿದ್ಧತೆ ಆರಂಭಿಸಿದೆ. ಜೂನ್–ಜುಲೈ ವೇಳೆಗೆ ಸಿನಿಮಾವನ್ನು ತೆರೆಗೆ ತರುವ ಯೋಚನೆಯಲ್ಲಿ ಚಿತ್ರತಂಡವಿದೆ.

ಚಿತ್ರದ ಬಗ್ಗೆ ಮಾಹಿತಿ ನೀಡಿದ ಸಂಜೀವ್, ‘ಇದೊಂದು ಆ್ಯಕ್ಷನ್, ಹಾರರ್-ಥ್ರಿಲ್ಲರ್ ಕಥಾಹಂದರದ ಸಿನಿಮಾ. ನಾವು ಮಾಡಿದ ಕರ್ಮ ಹೇಗೆ ನಮ್ಮನ್ನು ಕಾಡುತ್ತದೆ ಎಂಬ ಒಂದು ಎಳೆಯನ್ನು ಇಟ್ಟುಕೊಂಡು ಸಿನಿಮಾ ಮಾಡಿದ್ದೇವೆ. ಕನ್ನಡ ಮತ್ತು ತೆಲುಗಿನ 50ಕ್ಕೂ ಹೆಚ್ಚಿನ ಕಲಾವಿದರು ಈ ಸಿನಿಮಾದಲ್ಲಿ ನಟಿಸಿದ್ದಾರೆ. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಈ ಸಿನಿಮಾ ನಿರ್ಮಾಣವಾಗಿದ್ದು, ಏಕಕಾಲಕ್ಕೆ ಎರಡೂ ಭಾಷೆಗಳಲ್ಲೂ ಸಿನಿಮಾವನ್ನು ತೆರೆಗೆ ತರುವ ಯೋಜನೆಯಿದೆ’ ಎಂದರು.

‘ನನ್ನ ಸಿನಿಮಾ ಪಯಣದಲ್ಲಿ ಇದೊಂದು ವಿಭಿನ್ನ ಸಿನಿಮಾ. ಇದರಲ್ಲಿ ತಾಯಿ ಮತ್ತು ಮಗುವಿನ ಸಂಬಂಧದ ಸುತ್ತ ಕಥೆಯಿದೆ. ಆ್ಯಕ್ಷನ್, ಹಾರರ್ ಜೊತೆಗೆ ಭಾವನಾತ್ಮಕ ದೃಶ್ಯಗಳೂ ಇವೆ. ಎಲ್ಲಾ ಮಾದರಿಯ ಪ್ರೇಕ್ಷಕರಿಗೆ ಸಿನಿಮಾ ಹತ್ತಿರವಾಗಲಿದೆ’ ಎನ್ನುತ್ತಾರೆ ರಾಗಿಣಿ.

ಚಿತ್ರಕ್ಕೆ ಹರೀಶ್ ಸೊಂಡೇಕೊಪ್ಪ ಛಾಯಾಚಿತ್ರಗ್ರಹಣವಿದೆ. ಚಿತ್ರದಲ್ಲಿ ನವೀನ್ ಚಂದ್ರ, ಕೃಷ್ಣ ಸಾಯಿ ನಾಯಕ ನಟರಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ರವಿಶಂಕರ್, ಶರತ್ ಲೋಹಿತಾಶ್ವ, ಅನಿಲ್ ರಾಜ್, ಸಪ್ತಗಿರಿ, ಪೃಥ್ವಿರಾಜ್, ಜೆಮಿನಿ ಸುರೇಶ್ ಮುಂತಾದ ಕಲಾವಿದರು ನಟಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ಎಲ್‌ಪಿಜಿ ಬದಲಿಗೆ ಸೀಮೆಎಣ್ಣೆ ವಿತರಣೆಗೆ ಚಿಂತನೆ’

ಮುಂಬೈ: ಭಾರತದಲ್ಲಿ ಎಲ್‌ಪಿಜಿ ಸಮಸ್ಯೆ ಉಲ್ಬಣಗೊಳ್ಳುತ್ತಿರುವ ಕಾರಣ, ಕೆಲವು ಪೆಟ್ರೋಲ್ ಮತ್ತು ಡೀಸೆಲ್ ಬಂಕ್‌ಗಳಲ್ಲಿ ಸೀಮೆಎಣ್ಣೆ ವಿತರಿಸಲು ಮಹಾರಾಷ್ಟ್ರ ಸರ್ಕಾರ ಚಿಂತನೆ ನಡೆಸಿದೆ. ಈ ಬಗ್ಗೆ ಆಹಾರ, ನಾಗರಿಕ ಪೂರೈಕೆ ಮತ್ತು ಗ್ರಾಹಕ ರಕ್ಷಣಾ ಸಚಿವ ಛಗನ್ ಭುಜಬಲ್ ಅವರು ವಿಧಾನಸಭೆಗೆ ಸೋಮವಾರ ತಿಳಿಸಿದರು.



‘ಎಲ್‌ಜಿಪಿಗೆ ಪರ್ಯಾಯವಾಗಿ ಸೀಮೆಎಣ್ಣೆ ನೀಡಲು ಚಿಂತನೆ ನಡೆಸುತ್ತಿದ್ದೇವೆ. ಈ ಬಗ್ಗೆ ನಾಗ್ಪುರ ಹೈಕೋರ್ಟ್‌ಗೆ ಮಾರ್ಚ್ 11ರಂದು ಮಾಹಿತಿ ನೀಡಿದ್ದೇವೆ. ಇದರ ಜೊತೆಗೆ ಎಲ್‌ಜಿಪಿ ಪೂರೈಕೆ ಕುರಿತು ಮುಖ್ಯ ಕಾರ್ಯದರ್ಶಿಯ ನೇತೃತ್ವದಲ್ಲಿ ಪರಿಶೀಲನೆಯನ್ನೂ ನಡೆಸಲಾಗಿದೆ’ ಎಂದು ಮಾಹಿತಿ ನೀಡಿದರು.

ವಿಧಾನಸಭೆಯಲ್ಲಿ ಮಾತನಾಡುವ ಮೊದಲು ಸಚಿವರು, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್), ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಮತ್ತು ಭಾರತೀಯ ತೈಲ ಕಾರ್ಪೊರೇಷನ್ ಲಿಮಿಟೆಡ್ (ಐಒಸಿಎಲ್) ಅಧಿಕಾರಿಗಳೊಂದಿಗೆ ಚರ್ಚಿಸಿದ್ದರು.

ಸಂಸತ್ ಭವನ: ಬೂಮ್ ಬ್ಯಾರಿಯರ್‌ನಲ್ಲಿ ತಾಂತ್ರಿಕ ದೋಷ

ನವದೆಹಲಿ (ಪಿಟಿಐ): ಜೋರಾಗಿ ಬೀಸಿದ ಗಾಳಿಯಿಂದ ತಾಂತ್ರಿಕ ದೋಷ ಉಂಟಾಗಿ ಸಂಸತ್‌ನ ಪ್ರವೇಶ ದ್ವಾರದ ಬೂಮ್ ಬ್ಯಾರಿಯರ್ ಸೋಮವಾರ ಕೆಳಗೆ ಬಿದ್ದಿದೆ.

ಸಂಸತ್ ಭವನದ ಸಂಕೀರ್ಣದ ರಕ್ಷಣೆಯ ಜವಾಬ್ದಾರಿ ಹೊತ್ತಿರುವ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದರು. ಇದು ಯಾವುದೇ ಭದ್ರತಾ ಬೆದರಿಕೆಯಲ್ಲ ಎಂಬುದು ಗೊತ್ತಾಗಿದೆ. ಸ್ವಲ್ಪ ಸಮಯದ ನಂತರ ವಿಜಯ್ ಚೌಕ ಬಳಿಯ ಗೇಟ್ ಮೂಲಕ ಸಾಮಾನ್ಯ ವಾಹನಗಳ ಸಂಚಾರ ಪುನರಾರಂಭವಾಯಿತು.

‘ಸಂಕೀರ್ಣದೊಳಗೆ ವಾಹನಗಳು ನೇರವಾಗಿ ಪ್ರವೇಶಿಸುವುದನ್ನು ತಡೆಯುವ ಬೂಮ್ ಬ್ಯಾರಿಯರ್ ಮೇಲಕ್ಕೆ ಹೋಗದೆ ಸ್ವಯಂಚಾಲಿತವಾಗಿ ಕೆಳಗಿಳಿಯಿತು. ಗಾಳಿಯಿಂದಾಗಿ ಈ ಸಮಸ್ಯೆ ಕಾಣಿಸಿಕೊಂಡಿದೆಯೇ ಅಥವಾ ಆ ನಿರ್ದಿಷ್ಟ ಸಮಯದಲ್ಲಿ ಬಂದ ಕಾರಿನ ಪ್ರವೇಶದ ಸ್ಟಿಕ್ಕರ್ ಅನ್ನು ಸ್ಕ್ಯಾನ್ ಮಾಡಲು ವಿಫಲವಾಗಿದೆಯೇ ಎಂಬ ಬಗ್ಗೆ ಸಮಗ್ರ ತನಿಖೆ ನಡೆಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

2023ರ ಡಿಸೆಂಬರ್‌ನಲ್ಲಿ ಭದ್ರತಾ ಉಲ್ಲಂಘನೆಯ ನಂತರ, 2024ರ ಮೇ ತಿಂಗಳಿನಲ್ಲಿ ಸಂಸತ್ ಕಟ್ಟಡದ ಭದ್ರತೆಗಾಗಿ ಸಿಐಎಸ್‌ಎಫ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅರೆಸೈನಿಕ ಪಡೆಯ 3,300 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಬಂಗಾಳ ಸರ್ಕಾರದ ಅರ್ಜಿ ತಿರಸ್ಕರಿಸಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಜಿಲ್ಲೆಯಲ್ಲಿ ಜನವರಿಯಲ್ಲಿ ನಡೆದ ಹಿಂಸಾಚಾರದ ಕುರಿತು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ತನಿಖೆಗೆ ತಡೆ ನೀಡಲು ನಿರಾಕರಿಸಿದ ಕಲ್ಕತ್ತ ಹೈಕೋರ್ಟ್ ಆದೇಶದ ವಿರುದ್ಧ ರಾಜ್ಯ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿತು.



ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠವು ‘ಹೈಕೋರ್ಟ್ ಸಮತೋಲಿತ ದೃಷ್ಟಿಯಿಂದ ನಿರ್ಧಾರ ತೆಗೆದುಕೊಂಡಿದೆ. ಎನ್‌ಐಎ ತನಿಖೆ ವಿರುದ್ಧದ ದೂರುಗಳೊಂದಿಗೆ ನೀವು ಹೈಕೋರ್ಟ್ ಅನ್ನು ಸಂಪರ್ಕಿಸಬಹುದು’ ಎಂದಿತು. ಮುರ್ಶಿದಾಬಾದ್ ನಲ್ಲಿ ಪದೇ ಪದೇ ನಡೆದ ಹಿಂಸಾಚಾರದ ಘಟನೆಗಳ ಸಂಬಂಧ, ಭಯೋತ್ಪಾದಕ ಕೃತ್ಯಗಳ ವಿರುದ್ಧದ ಕಾನೂನಿನಡಿ ತನಿಖೆಗೆ ಕೇಂದ್ರ ಸರ್ಕಾರ ಎನ್‌ಐಎಗೆ ಪ್ರಕರಣವನ್ನು ಹಸ್ತಾಂತರಿಸಿದ್ದು, ತನಿಖೆ ಮುಂದುವರಿದಿದೆ.

‘ಇಶಾನ್ ಆಯ್ಕೆ ಒಳಮನಸ್ಸಿನ ನಿರ್ಧಾರ’

ಟೆಸ್ಟ್ ಕ್ರಿಕೆಟ್ ಆಡುವ ಹಂಬಲವಿದೆ; ಏಕದಿನ ಮಾದರಿ ಹೊಂದಲಿಲ್ಲ: ಟಿ20 ವಿಶ್ವಕಪ್ ವಿಜೇತ ಭಾರತ ತಂಡದ ನಾಯಕ ಸೂರ್ಯಕುಮಾರ್

ನವದೆಹಲಿ (ಪಿಟಿಐ): ‘ಬೀಸಾಟವಾಡುವ ಇಶಾನ್ ಕಿಶನ್ ಅವರು ವಿಶ್ವಕಪ್ ತಂಡದಲ್ಲಿರಬೇಕೆಂದು ಒಳಮನಸ್ಸು ಹೇಳಿತು. ಪಂದ್ಯದ ಗತಿ ಬದಲಿಸುವ ಸಾಮರ್ಥ್ಯ ಅವರಲ್ಲಿದೆ. ತಂಡದ ಪಾಲಿಗೆ ಅವರು ನಿರ್ಣಾಯಕ (ಎಕ್ಸ್ ಫ್ಯಾಕ್ಟರ್) ಆಗಬಲ್ಲರು ಎಂದು ನಾನು ಭಾವಿಸಿದ್ದೆ’ ಎಂಬುದಾಗಿ ಸೂರ್ಯಕುಮಾರ್ ಯಾದವ್ ಹೇಳಿದರು.

ಪಿಟಿಐ ವಿಡಿಯೋಸ್ ಜತೆ ಪಾಡ್‌ಕಾಸ್ಟ್ ಸಂದರ್ಶನದಲ್ಲಿ ಮಾತನಾಡಿದ ಸೂರ್ಯ ಅವರ ಭಾಷೆಯಲ್ಲಿ ಮಧ್ಯೆಮಧ್ಯೆ ಮುಂಬೈನ ಹಿಂದಿ ಸೊಗಡು ಕೂಡ ಕಾಣಿಸಿತು.

‘ನೀವು ಅಂಕಿ ಅಂಶಗಳಿಂದ ಪ್ರೇರಿತರಾದ ನಾಯಕರೇ ಅಥವಾ ಆಂತರ್ಯದ ಮಾತುಕೇಳುವ ನಾಯಕರೇ? ಜಿತೇಶ್ ಶರ್ಮಾ ಅವರ ಬದಲಿಗೆ ಇಶಾನ್ ಕಿಶನ್ ಅವರನ್ನು ಆಯ್ಕೆ ಮಾಡಲು ಏನು ಕಾರಣವಾಯಿತು’ ಎಂಬ ಪ್ರಶ್ನೆ ಎದುರಾಯಿತು. ‘ಇದು ಪೂರ್ಣವಾಗಿ ನನ್ನ ಒಳಮನಸ್ಸಿನ ನಿರ್ಧಾರ. ಜಿತೇಶ್‌ಗೆ ಸಂಬಂಧಿಸಿ ಅದು ಕಠಿಣ ನಿರ್ಧಾರ. ಆಗ ಅವರು (ಜಿತೇಶ್) ಒಂದು ವರ್ಷದಿಂದ ತಂಡದ ಜೊತೆಗಿದ್ದರು. ಚೆನ್ನಾಗಿ ಆಡುತ್ತಲೂ ಇದ್ದರು’ ಎಂದು ಸೂರ್ಯ ವಿವರಿಸಿದರು.


ಭಾರತ ಟಿ20 ಕ್ರಿಕೆಟ್ ತಂಡದ ನಾಯಕ ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ ಹಾಗೂ ಇಶಾನ್ ಕಿಶನ್ — ಪಿಟಿಐ ಸಂಗ್ರಹ ಚಿತ್ರ

‘ಜಿತೇಶ್ ಅವರನ್ನು ಕೈಬಿಟ್ಟು ಇಶಾನ್ ಅವರನ್ನು ಆಯ್ಕೆ ಮಾಡಿದಾಗ ಬೇಸರವೂ ಆಗಿತ್ತು. ಆದರೆ ಆರಂಭದಲ್ಲೇ ಮಿಂಚಿನ ಆಟವಾಡುವ ಬ್ಯಾಟರ್ ಒಬ್ಬರು ನಮಗೆ ಅಗತ್ಯವಿದ್ದರು. ಅಂಥ ವೇಳೆ ಯಾರಾದರೊಬ್ಬರು ಸ್ಥಾನ ಕಳೆದುಕೊಳ್ಳಬೇಕಾಗುತ್ತದೆ’ ಎಂದರು

27 ವರ್ಷ ವಯಸ್ಸಿನ ಇಶಾನ್ ನಿರಾಸೆ ಮೂಡಿಸಲಿಲ್ಲ. ಟೂರ್ನಿಯಲ್ಲಿ 190ರ ಸ್ಟ್ರೈಕ್‌ರೇಟ್‌ನಲ್ಲಿ 317 ರನ್ ಗಳಿಸಿದ್ದರು.

ಸಂಜು ಸ್ಯಾಮ್ಸನ್ ಅವರ ಆಟವನ್ನೂ ಸೂರ್ಯ ಶ್ಲಾಘಿಸಿದರು. ‘ಸಂಜು ತಂಡಕ್ಕೆ ಮರಳಿದ ನಂತರ ಅಲೆ ನಮ್ಮ ಕಡೆಗೆ ತಿರುಗಿತು. ಸಂಜು ಆಯ್ಕೆ ಸಂಪೂರ್ಣವಾಗಿ ತಂತ್ರಗಾರಿಕೆಯ ನಿರ್ಧಾರವಾಗಿತ್ತು. ಏಕೆಂದರೆ ಆಗ ತಂಡದ ಅಗ್ರಸರದಿಯಲ್ಲಿ ಇಬ್ಬರು ಎಡಗೈ ಆಟಗಾರರು ಇದ್ದರು’ ಎಂದು ಅವರು ಅಭಿಷೇಕ್ ಶರ್ಮಾ ಮತ್ತು ಇಶಾನ್ ಅವರನ್ನು ಉಲ್ಲೇಖಿಸಿ ಹೇಳಿದರು.

‘ಎದುರಾಳಿ ತಂಡದ ಬೌಲರ್‌ಗಳಿಗೆ ನೆರವಾಗಬಾರದು ಎಂಬುದು ನಮ್ಮ ನಿರ್ಧಾರದ ಹಿಂದಿನ ತರ್ಕ. ಸಂಜು ಅವರ ಆಯ್ಕೆ ನಿರ್ಧಾರ ಸರಿಯಾದ ವೇಳೆಗೇ ಆಯಿತು. ಅವರು ಆ ಸಾಧನೆಗೆ ಅರ್ಹರೂ ಆಗಿದ್ದರು’ ಎಂದರು.

ಸರಣಿಯ ಆಟಗಾರನಾದ ಸಂಜು ಫೈನಲ್ ಮತ್ತು ಸೆಮಿಫೈನಲ್ ಪಂದ್ಯಗಳಲ್ಲಿ ತಲಾ 89 ರನ್ ಹೊಡೆದಿದ್ದರು.

‘ಟಿ20 ಕ್ರಿಕೆಟ್ ನನ್ನ ಭದ್ರ ಕೋಟೆ’

ಟೆಸ್ಟ್ ಕ್ರಿಕೆಟ್ ಆಡುವ ಹಂಬಲವಿದೆ. ಏಕದಿನ ಕ್ರಿಕೆಟ್ ನನಗೆ ಹೇಳಿಸಿದ್ದಲ್ಲ. ಅಂತಿಮವಾಗಿ ನಾನು ಟಿ20 ಮಾದರಿಗೇ ಹೊಂದಿಕೊಂಡಿದ್ದೇನೆ....’

–ಇದು ಟಿ20 ವಿಶ್ವಕಪ್ ಗೆದ್ದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರ ಅನಿಸಿಕೆ.

ವಿಶ್ವಕಪ್ ಗೆದ್ದುಕೊಂಡ ಖುಷಿ ಅವರ ಮಾತುಗಳಲ್ಲಿ ವ್ಯಕ್ತವಾಯಿತು. ಆದರೆ ಟೆಸ್ಟ್ ಕ್ರಿಕೆಟ್ ಆಡಲು ಆಗದಿರುವುದಕ್ಕೆ ನಿರಾಸೆಯನ್ನೂ ವ್ಯಕ್ತಪಡಿಸಿದರು.

ಒಂದು ಟೆಸ್ಟ್ ಪಂದ್ಯ ಮಾತ್ರ ಆಡಿರುವುದದನ್ನು ನೆನಪಿಸಿದಾಗ ಅವರು ಸಂದರ್ಶಕನಿಗೆ ಥಟ್ಟನೇ ಹೇಳಿದರು– ‘ಆಡಿದ್ದು ಒಂದೇ ಇನಿಂಗ್ಸ್’!. 2023ರಲ್ಲಿ ನಾಗ್ಪುರದಲ್ಲಿ ಆಸ್ಟ್ರೇಲಿಯಾ ವಿರುದ್ಧ ಅವರು ಏಕೈಕ ಟೆಸ್ಟ್ ಆಡಿದ್ದರು. ಒಂದೇ ಇನಿಂಗ್ಸ್ ಆಡಿದ್ದು 8 ರನ್ ಗಳಿಸಿದ್ದರು.

‘ನಮ್ಮ ಹಣೆಯಲ್ಲಿ ಏನು ಬರೆದಿದೆಯೊ ಅದನ್ನಷ್ಟೇ ಪಡೆಯಲು ಸಾಧ್ಯ. ನಾನೂ ದೀರ್ಘಾವಧಿ ಕ್ರಿಕೆಟ್ ಆಡಿ ಬೆಳೆದವನು. 10–12 ವರ್ಷ ರಣಜಿ ಟ್ರೋಫಿಯಲ್ಲಿ ಆಡಿದ್ದೆ’ ಎಂದರು.

‘ಆದರೆ ಸೀಮಿತ ಓವರುಗಳ ಕ್ರಿಕೆಟ್ ಆಡುವಾಗ ನನ್ನ ಒಲವು ಆ ಕಡೆ ವಾಲಿತು. ನಂತರ ನಾನು ಈ ಮಾದರಿ (ಟಿ20) ಆಡತೊಡಗಿದೆ. ಏಕದಿನ ಕ್ರಿಕೆಟ್‌ನಲ್ಲೂ ಸಾಕಷ್ಟು ಪ್ರಯತ್ನ ಮಾಡಿದೆ. ಆದರೆ ಹೆಚ್ಚೇನೂ ಸಾಧಿಸಲಾಗಲಿಲ್ಲ. ಟಿ20 ಮಾದರಿಗೆ ನನ್ನ ಆಟ ಹೊಂದಿಕೊಂಡಿತು’ ಎಂದು ಹೇಳಿದರು.

ಸೂರ್ಯ ಅವರು ಏಕದಿನ ಮಾದರಿಯಲ್ಲಿ ಕೊನೆಯ ಬಾರಿ ಆಡಿದ್ದು, ಆಸ್ಟ್ರೇಲಿಯಾ ವಿರುದ್ಧ 2023ರ ವಿಶ್ವಕಪ್ ಫೈನಲ್‌ನಲ್ಲಿ. ಆ ಪಂದ್ಯದಲ್ಲಿ 28 ಎಸೆತಗಳಲ್ಲಿ 18 ರನ್ ಗಳಿಸಿದ್ದರು. ಭಾರತ ಫೈನಲ್‌ನಲ್ಲಿ ಸೋತಿತ್ತು.

‘ಏಕದಿನ ಕ್ರಿಕೆಟ್‌ಗೆ ತನ್ನದೇ ಆದ ಕಳೆಯಿದೆ. ಟಿ20 ಮಾದರಿಗೂ ಅದರದ್ದೇ ವರ್ಚಸ್ಸು ಇದೆ’ ಎಂದು ಸೂರ್ಯ ಅವರು ಪ್ರಶ್ನೆಯೊಂದಕ್ಕೆ ಜಾಣ್ಮೆಯಿಂದ ಉತ್ತರಿಸಿದರು.

ಆಯುಷ್, ತನ್ವಿ ಮೇಲೆ ನಿರೀಕ್ಷೆ

ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಇಂದಿನಿಂದ

ಆರ್ಲಿಯನ್ಸ್ (ಫ್ರಾನ್ಸ್), (ಪಿಟಿಐ): ಭಾರತದ ಯುವ ತಾರೆಗಳಾದ ಆಯುಷ್ ಶೆಟ್ಟಿ ಮತ್ತು ತನ್ವಿ ಶರ್ಮಾ ಅವರು ಮಂಗಳವಾರ ಇಲ್ಲಿ ಆರಂಭವಾಗುವ ಆರ್ಲಿಯನ್ಸ್ ಮಾಸ್ಟರ್ಸ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ. ಅನುಭವಿ ಆಟಗಾರ ಎಚ್.ಎಸ್. ಪ್ರಣಯ್ ಅವರು ಭುಜದ ಗಾಯದಿಂದಾಗಿ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

33 ವರ್ಷದ ಪ್ರಣಯ್ ಅವರು ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಚೌ ಟಿಯೆನ್ ಚೆನ್ (ತೈವಾನ್) ಅವರನ್ನು ಎದುರಿಸಬೇಕಿತ್ತು. ಕಳೆದ ವಾರ ನಡೆದ ಸ್ವಿಸ್ ಓಪನ್ ಟೂರ್ನಿಯ ವೇಳೆಯೇ ಅವರು ನೋವಿನಿಂದ ಬಳಲುತ್ತಿದ್ದರು. ಬಾಸೆಲ್‌ನಲ್ಲಿ ಜಪಾನ್‌ನ ಕೋಕಿ ವತಾನಬೆ ವಿರುದ್ಧದ ಪಂದ್ಯದಿಂದ ಅವರು ಹಿಂದೆ ಸರಿದಿದ್ದರು.

‘ಸ್ವಿಸ್ ಓಪನ್‌ಗೆ ಪ್ರಯಾಣಿಸಿದ ನಂತರ ಭುಜದ ನೋವು ಹೆಚ್ಚಾಯಿತು. ನಮಗೆ ಕಾರಣ ತಿಳಿದಿರಲಿಲ್ಲ. ಆದ್ದರಿಂದ ಸ್ಪರ್ಧೆಯಿಂದ ಹಿಂದೆ ಸರಿಯಲು ನಿರ್ಧರಿಸಿದೆ. ಸ್ಕ್ಯಾನಿಂಗ್ ವೇಳೆ ಸಣ್ಣ ಸಮಸ್ಯೆ ಇರುವುದು ಗೊತ್ತಾಗಿದೆ. ಶೀಘ್ರದಲ್ಲೇ ಚೇತರಿಸಿಕೊಳ್ಳುವೆ’ ಎಂದು ಪ್ರಣಯ್ ಪ್ರತಿಕ್ರಿಯಿಸಿದ್ದಾರೆ. ಏ.7 ರಿಂದ 12ರವರೆಗೆ ಚೀನಾದ ನಿಂಗ್ಬೊದಲ್ಲಿ ನಡೆಯಲಿರುವ ಏಷ್ಯನ್ ಚಾಂಪಿಯನ್‌ಷಿಪ್‌ಗೆ ಮರಳುವ ಗುರಿ ಹೊಂದಿದ್ದಾರೆ.

₹2.30 ಕೋಟಿ ಬಹುಮಾನ ಮೊತ್ತ ಒಳಗೊಂಡಿರುವ ಟೂರ್ನಿಯಲ್ಲಿ ವಿಶ್ವದ 25ನೇ ಶ್ರೇಯಾಂಕದ ಆಯುಷ್ ಅವರು ತೈವಾನ್‌ನ ಲೀ ಚಿಯಾ ಹಾವೊ ವಿರುದ್ಧ ಅಭಿಯಾನ ಆರಂಭಿಸುವರು. 30ನೇ ಕ್ರಮಾಂಕದ ಕಿದಂಬಿ ಶ್ರೀಕಾಂತ್ ಅವರು ಆರಂಭಿಕ ಸುತ್ತಿನಲ್ಲಿ


ಕರ್ನಾಟಕದ ಆಯುಷ್ ಶೆಟ್ಟಿ

ಡೆನ್ಮಾರ್ಕ್‌ನ ಮ್ಯಾಗ್ನಸ್ ಜೋಹಾನ್ಸೆನ್ ಅವರನ್ನು ಎದುರಿಸಲಿದ್ದಾರೆ.

ಸ್ವಿಸ್ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದ ತರುಣ್ ಮನ್ನೆಪಲ್ಲಿ ಅವರು ತೈವಾನ್ ವಾಂಗ್ ಟ್ಸು ವೈ ವಿರುದ್ಧ ಕಣಕ್ಕಿಳಿಯಲಿದ್ದಾರೆ. 42ನೇ ಶ್ರೇಯಾಂಕದ ಕಿರಣ್ ಜಾರ್ಜ್ ಅವರು ಮೂರನೇ ಶ್ರೇಯಾಂಕದ ಜಪಾನ್‌ನ ಕೆಂಟಾ ನಿಶಿಮೊಟೊ ಅವರನ್ನು ಎದುರಿಸಲಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ತನ್ವಿ ಅವರು ಥಾಯ್ಲೆಂಡ್‌ನ ಸುಪಾನಿಡಾ ಕಟೆಥಾಂಗ್ ಎದುರು ಅಭಿಯಾನ ಪ್ರಾರಂಭಿಸುವರು. ಮಾಳವಿಕಾ ಬನ್ಸೋಡ್ ಅವರು ತೈವಾನ್‌ನ ಸುಂಗ್ ಶುವೋ ಯುನ್ ಅವರನ್ನು ಎದುರಿಸುವರು. ಎಡ ಮೊಣಕಾಲಿನ ಗಾಯದಿಂದ ಚೇತರಿಸಿಕೊಂಡಿರುವ ಬನ್ಸೋಡ್ ಅವರು ಹಲವು ತಿಂಗಳ ಬಳಿಕ ಸ್ಪರ್ಧಾಕಣಕ್ಕೆ ಮರಳುತ್ತಿದ್ದಾರೆ.

ಹಾಕಿ ನೇಷನ್ಸ್ ಕಪ್‌ನಲ್ಲಿ ಭಾರತ ವನಿತೆಯರು ಕಣಕ್ಕೆ

ಲೂಸಾನ್ (ಸ್ವಿಟ್ಜರ್ಲೆಂಡ್), (ಪಿಟಿಐ): ಜೂನ್ 15ರಿಂದ 21ರವರೆಗೆ ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ನಡೆಯಲಿರುವ ಎಫ್‌ಐಎಚ್ ಹಾಕಿ ನೇಷನ್ಸ್ ಕಪ್ ಟೂರ್ನಿಯಲ್ಲಿ ಭಾರತ ವನಿತೆಯರ ತಂಡ ಕಣಕ್ಕಿಳಿಯಲಿದೆ.

ಭಾರತ ತಂಡವು ಕಳೆದ ಆವೃತ್ತಿಯ ಪ್ರೊ ಲೀಗ್‌ನಲ್ಲಿ ಕಳಪೆ ಪ್ರದರ್ಶನ ನೀಡಿದ ಬಳಿಕ ಎಫ್‌ಐಎಚ್‌ನ ಎರಡನೇ ಸ್ತರವಾದ ಎಫ್‌ಐಎಚ್ ನೇಷನ್ಸ್ ಕಪ್‌ಗೆ ಹಿಂಬಡ್ತಿ ಪಡೆದಿತ್ತು. 2024–25ರ ಪ್ರೊ ಲೀಗ್‌ನ ಅಂಕಪಟ್ಟಿಯಲ್ಲಿ ಒಂಬತ್ತು ತಂಡಗಳ ಪೈಕಿ ಭಾರತ ಕೊನೆಯ ಸ್ಥಾನ ಪಡೆದಿತ್ತು.

2021ರಲ್ಲಿ ನೇಷನ್ಸ್ ಕಪ್ ಟೂರ್ನಿ ಆರಂಭಿಸಲಾಗಿತ್ತು. ಟೂರ್ನಿಯ ವಿಜೇತ ತಂಡವು ಮುಂದಿನ ಋತುವಿಗೆ ಪ್ರೊ ಲೀಗ್‌ಗೆ ಅರ್ಹತೆ ಪಡೆಯುತ್ತದೆ. ಭಾರತದೊಂದಿಗೆ ಆತಿಥೇಯ ನ್ಯೂಜಿಲೆಂಡ್, ಅಮೆರಿಕ, ಜಪಾನ್, ಕೊರಿಯಾ, ಚಿಲಿ, ಸ್ಕಾಟ್ಲೆಂಡ್ ಮತ್ತು ಫ್ರಾನ್ಸ್ ತಂಡಗಳು ಟೂರ್ನಿಯಲ್ಲಿ ಕಣಕ್ಕಿಳಿಯಲಿವೆ.

ಪುರುಷರ ಟೂರ್ನಿಯು ಕೇಪ್‌ಟೌನ್‌ನಲ್ಲಿ ನಡೆಯಲಿದೆ. ಅದರಲ್ಲಿ ಆತಿಥೇಯ ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್, ಫ್ರಾನ್ಸ್, ಕೊರಿಯಾ, ಜಪಾನ್, ವೇಲ್ಸ್, ಮಲೇಷ್ಯಾ ಜೊತೆಗೆ ಹಾಕಿ ಪ್ರೊ ಲೀಗ್‌ನಿಂದ ಹಿಂಬಡ್ತಿ ಪಡೆದ ಐರ್ಲೆಂಡ್, ‘ಹಾಕಿ ನೇಷನ್ಸ್ ಕಪ್ 2’ ಮೂಲಕ ಬಡ್ತಿ ಪಡೆದ ಸ್ಕಾಟ್ಲೆಂಡ್ ತಂಡಗಳು ಸ್ಪರ್ಧಿಸಲಿವೆ. ಈ ಟೂರ್ನಿಯು ಜೂನ್ 11ರಿಂದ 20 ರವರೆಗೆ ನಡೆಯಲಿದೆ.

ಸೈಕ್ಲಿಂಗ್ ಅಸೋಸಿಯೇಷನ್: ರಾಜು ಬಿರಾದಾರ ಆಯ್ಕೆ

ಪ್ರಜಾವಾಣಿ ವಾರ್ತೆ



ವಿಜಯಪುರ: ಕರ್ನಾಟಕ ರಾಜ್ಯ ಅಮೆಚೂರ್ ಸೈಕ್ಲಿಂಗ್ ಅಸೋಸಿಯೇಷನ್ ಅಧ್ಯಕ್ಷರಾಗಿ ವಿಜಯಪುರದ ಅನುಭವಿ ಸೈಕ್ಲಿಸ್ಟ್ ರಾಜು ಬಿರಾದಾರ ಅವರು 2026–2030ರ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಜಮಖಂಡಿಯಲ್ಲಿ ಈಚೆಗೆ ನಡೆದ ಅಸೋಸಿಯೇಷನ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ರಾಜು ಅವರನ್ನು ಎರಡನೇ ಬಾರಿಗೆ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಗೋಲು ಸಂಭ್ರಮ

ಐಎಸ್‌ಎಲ್ ಚಿತ್ರ


ಪಂಜಾಬ್‌ನ ಲುಧಿಯಾನದಲ್ಲಿ ಸೋಮವಾರ ನಡೆದ ಐಎಸ್‌ಎಲ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಗೋಲು ದಾಖಲಿಸಿದ ಗೋವಾ ಎಫ್‌ಸಿ ತಂಡದ ಆಟಗಾರರು ಸಂಭ್ರಮಿಸಿದರು. ಪಂಜಾಬ್ ಎಫ್‌ಸಿ ವಿರುದ್ಧದ ಪಂದ್ಯವು 1–1ರಲ್ಲಿ ಡ್ರಾಗೊಂಡಿತು

ಮನೋಜ್ ಭಾಂಡಗೆ ಮಿಂಚಿನ ಶತಕ

ಬೆಂಗಳೂರು: ಮನೋಜ್ ಭಾಂಡಗೆ ಅವರ ಮಿಂಚಿನ ಶತಕದ ಬಲದಿಂದ ಎಜಿಒಆರ್‌ಸಿ ತಂಡವು ಕೆಎಸ್‌ಸಿಎ ಗ್ರೂಪ್ 2 ಡಿವಿಷನ್ 1 ಲೀಗ್ ಕಮ್ ನಾಕೌಟ್ ಟೂರ್ನಿಯ ಪಂದ್ಯದಲ್ಲಿ ಸೋಮವಾರ 8 ವಿಕೆಟ್‌ಗಳಿಂದ ರೈಲ್ವೆ ಇನ್‌ಸ್ಟಿಟ್ಯೂಟ್ (ದಕ್ಷಿಣ) ಹುಬ್ಬಳ್ಳಿ ತಂಡವನ್ನು ಮಣಿಸಿತು.

ಮದನ್ ಮೋಹನಕೃಷ್ಣ (72; 36 ಎಸೆತ) ಅವರ ಬಿರುಸಿನ ಆಟದಿಂದ ರೈಲ್ವೆ ಇನ್‌ಸ್ಟಿಟ್ಯೂಟ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 146 ರನ್ ಗಳಿಸಿತು. ಮನೋಜ್ (ಔಟಾಗದೇ 101; 36 ಎಸೆತ, 4x7, 6x10) ಅವರ ಬ್ಯಾಟಿಂಗ್ ಬಲದಿಂದ ಎಜಿಒಆರ್‌ಸಿ ತಂಡ 45 ಎಸೆತಗಳಿರುವಂತೆ ಗುರಿ ತಲುಪಿತು.

ಇನ್ನೊಂದು ಪಂದ್ಯದಲ್ಲಿ ಕೇಂದ್ರ ಅಬಕಾರಿ ಮತ್ತು ಕಸ್ಟಮ್ಸ್ ತಂಡವು 4 ವಿಕೆಟ್‌ಗಳಿಂದ ಡಿಇಎಲ್‌ಎಲ್ ಕ್ರಿಕೆಟ್ ಕ್ಲಬ್ ತಂಡದ ವಿರುದ್ಧ ಗೆಲುವು ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ರೈಲ್ವೆ ಇನ್‌ಸ್ಟಿಟ್ಯೂಟ್, ಹುಬ್ಬಳ್ಳಿ: 20 ಓವರ್‌ಗಳಲ್ಲಿ 8ಕ್ಕೆ 146 (ಮದನ್ ಮೋಹನಕೃಷ್ಣ 72; ದರ್ಶನ್ ಎಂ.ಆರ್. 16ಕ್ಕೆ4). ಎಜಿಒಆರ್‌ಸಿ: 12.3 ಓವರ್‌ಗಳಲ್ಲಿ 2ಕ್ಕೆ 147 (ಮನೋಜ್ ಭಾಂಡಗೆ ಅಜೇಯ 101).

ಡಿಇಎಲ್‌ಎಲ್ ಕ್ರಿಕೆಟ್ ಕ್ಲಬ್: 20 ಓವರ್‌ಗಳಲ್ಲಿ 6ಕ್ಕೆ 171 (ವಿನಯ್ ಆರ್. ಎಸ್. 32, ಧನು ಔಟಾಗದೇ 34; ಸುರೇಶ್ ಎಚ್. ಕರಣಿ 31ಕ್ಕೆ2). ಕೇಂದ್ರ ಅಬಕಾರಿ ಮತ್ತು ಕಸ್ಟಮ್ಸ್: 19.3 ಓವರ್‌ಗಳಲ್ಲಿ 6ಕ್ಕೆ 172 (ಆರ್.ಸಮರ್ಥ್ 43, ತಿಪ್ಪಾರೆಡ್ಡಿ ಔಟಾಗದೇ 35; ರಾಜೇಶ್ ಎ. 27ಕ್ಕೆ2).

ಕ್ಯಾಂಡಿಡೇಟ್ಸ್ ಟೂರ್ನಿ: ತಾಣ ಬದಲಿಲ್ಲ

ನವದೆಹಲಿ (ಪಿಟಿಐ): ಸಂಘರ್ಷಕ್ಕೆ ಸಿಲುಕಿರುವ ಪಶ್ಚಿಮ ಏಷ್ಯಾಕ್ಕೆ ಹೊಂದಿಕೊಂಡಿರುವ ಸೈಪ್ರಸ್‌ನಲ್ಲಿ ಪ್ರತಿಷ್ಠಿತ ಫಿಡೆ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ ಇದೇ 28ರಿಂದ ನಡೆಯಬೇಕಿದೆ. ಈ ಟೂರ್ನಿಯ ತಾಣ ಬದಲಾವಣೆಯ ಸಾಧ್ಯತೆಯನ್ನು ಅಂತರರಾಷ್ಟ್ರೀಯ ಚೆಸ್ ಫೆಡರೇಷನ್ (ಫಿಡೆ) ತಳ್ಳಿಹಾಕಿದೆ.

ಭಾರತದ ತಾರೆ ಕೋನೇರು ಹಂಪಿ ಈ ಟೂರ್ನಿಯಿಂದ ಹಿಂದೆಸರಿಯುವ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ ಎನ್ನಲಾಗಿದೆ.

ಈ ಟೂರ್ನಿಯ ಪುರುಷರ ವಿಭಾಗದಲ್ಲಿ ವಿಜೇತರಾಗುವ ಆಟಗಾರ, ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರಿಗೆ ಸವಾಲು ಹಾಕುವ ಅವಕಾಶ ಪಡೆಯುತ್ತಾರೆ. ಮಹಿಳಾ ವಿಭಾಗದಲ್ಲಿ ಚಾಂಪಿಯನ್ ಆಗುವ ಆಟಗಾರ್ತಿ, ವಿಶ್ವ ಚಾಂಪಿಯನ್ ಚೀನಾದ ಜು ವೆಂಜುನ್ ಅವರಿಗೆ ಚಾಲೆಂಜರ್ ಆಗಲಿದ್ದಾರೆ.

ಈ ತಿಂಗಳ ಆರಂಭದಲ್ಲಿ ಸೈಪ್ರಸ್‌ನಲ್ಲಿರುವ ಬ್ರಿಟಿಷ್ ವಾಯುನೆಲೆಯ ಮೇಲೆ ಡ್ರೋನ್ ದಾಳಿ ನಡೆದಿತ್ತು. ಸೈಪ್ರಸ್ ದೇಶವು ಮೆಡಿಟರೇನಿಯನ್ ಸಾಗರದಲ್ಲಿ ಮೂರನೇ ಅತಿ ದೊಡ್ಡ ದ್ವೀಪವಾಗಿದೆ.

‘ನಮ್ಮ ಯೋಜನೆಗಳು ಬದಲಾಗಿಲ್ಲ. ನಾವು ಕ್ಯಾಂಡಿಡೇಟ್ಸ್ ಟೂರ್ನಿಗೆ ಅಂತಿಮ ಹಂತದ ಸಿದ್ಧತೆ ಮಾಡುತ್ತಿದ್ದೇವೆ. ಯುದ್ಧಕೇಂದ್ರವಾದ ಇರಾನ್, ಕೊಲ್ಲಿ ರಾಷ್ಟ್ರಗಳಿಂದ ಸೈಪ್ರಸ್ ದೂರವಿಲ್ಲ ನಿಜ. ಆದರೆ, ಈ ದೇಶ ಯಾವುದೇ ರೀತಿ ಯುದ್ಧದಲ್ಲಿ ಭಾಗಿಯಾಗಿಲ್ಲ. ಇಲ್ಲಿ ಅಪಾಯದ ಸಾಧ್ಯತೆ ಕ್ಷೀಣವಾಗಿದೆ’ ಎಂದು ಫಿಡೆ ಸಿಇಒ ಎಮಿಲ್ ಸುತ್ತೋವ್‌ಸ್ಕಿ ‘ಚೆಸ್‌ಬೇಸ್’ ವೆಬ್‌ಸೈಟ್‌ಗೆ ತಿಳಿಸಿದ್ದಾರೆ.

ಪುರುಷರ ವಿಭಾಗದ ಎಂಟು ಮಂದಿಯಲ್ಲಿ ಆರ್.ಪ್ರಜ್ಞಾನಂದ ಅವರು ಕಣದಲ್ಲಿರುವ ಭಾರತದ ಏಕೈಕ ಆಟಗಾರ ಎನಿಸಿದ್ದಾರೆ. ಮಹಿಳೆಯರ ವಿಭಾಗದಲ್ಲಿ ವಿಶ್ವಕಪ್ ಚಾಂಪಿಯನ್ ದಿವ್ಯಾ ದೇಶಮುಖ್, ಹಂಪಿ ಮತ್ತು ಆರ್.ವೈಶಾಲಿ ಅವರು ಸ್ಪರ್ಧಿಸುವ ಅವಕಾಶ ಪಡೆದಿದ್ದಾರೆ.

ಟಿ.ಟಿ: ಸೆಮಿಯಲ್ಲಿ ಸೋತ ವನಿತೆಯರು

ಇಂದೋರ್ (ಪಿಟಿಐ): ಕರ್ನಾಟಕ ಮಹಿಳೆಯರ ತಂಡವು 87ನೇ ಯುಟಿಟಿ ಸೀನಿಯರ್ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ನಲ್ಲಿ ಸೋಮವಾರ 1–3ರಿಂದ ಆರ್‌ಬಿಐ ತಂಡದ ಎದುರು ಪರಾಭವಗೊಂಡಿತು.

ಆರ್‌ಬಿಐ ತಂಡದ ದಿಯಾ ಚಿತಳೆ ಹಾಗೂ ಐಹಿಕಾ ಮುಖರ್ಜಿ ಅವರು ಕ್ರಮವಾಗಿ ಕುಶಿ ವಿಶ್ವನಾಥ್ ಹಾಗೂ ತನಿಷ್ಕಾ ಕಪಿಲ್ ಕಾಲಭೈರವ ವಿರುದ್ಧ ನೇರ ಸೆಟ್‌ಗಳಲ್ಲಿ ಗೆಲುವು ಸಾಧಿಸಿದರು. ಕರ್ನಾಟಕದ ತೃಪ್ತಿ ಪುರೋಹಿತ್ ಅವರು 3–2ರಿಂದ ನಿಖತ್ ಬಾನು ಅವರನ್ನು ಮಣಿಸಿ, ಅಂತರವನ್ನು 2–1ಕ್ಕೆ ಇಳಿಸಿದರು. ಆದರೆ, ರಿವರ್ಸ್ ಪಂದ್ಯದಲ್ಲಿ ದಿಯಾ 3–1ರಿಂದ ತನಿಷ್ಕಾ ಅವರನ್ನು ಸೋಲಿಸಿದರು.

ಆರ್‌ಬಿಐ ತಂಡವು ಪ್ರಶಸ್ತಿ ಸುತ್ತಿನಲ್ಲಿ ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರೊಮೋಷನ್ ಬೋರ್ಡ್ (ಪಿಎಸ್‌ಪಿಬಿ) ತಂಡವನ್ನು ಎದುರಿಸಲಿದೆ. ಪಿಎಸ್‌ಪಿಬಿ ತಂಡವು ಇನ್ನೊಂದು ಸೆಮಿಫೈನಲ್‌ನಲ್ಲಿ 3–0ಯಿಂದ ಉತ್ತರ ಪ್ರದೇಶ ತಂಡವನ್ನು ಮಣಿಸಿತ್ತು.

ಐಪಿಎಲ್‌ಗೆ ‘ಚಿನ್ನಸ್ವಾಮಿ’ ಆತಿಥ್ಯ

ರಾಜ್ಯ ಸರ್ಕಾರದ ಒಪ್ಪಿಗೆ • 28ರಂದು ಬೆಂಗಳೂರಿನಲ್ಲಿ ಆರ್‌ಸಿಬಿ– ಸನ್‌ರೈಸರ್ಸ್ ಉದ್ಘಾಟನಾ ಪಂದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 2026ನೇ ಸಾಲಿನ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಗಳನ್ನು ಆಯೋಜಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ (ಕೆಎಸ್‌ಸಿಎ) ರಾಜ್ಯ ಸರ್ಕಾರವು ಸೋಮವಾರ ಅಧಿಕೃತವಾಗಿ ಅನುಮತಿ ನೀಡಿದೆ.

2025ರ ಜೂನ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವ ವೇಳೆ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟ ನಂತರ ಇಲ್ಲಿ ಐಪಿಎಲ್ ಪಂದ್ಯಗಳು ನಡೆಯುವ ಬಗ್ಗೆ ಇದ್ದ ಅನಿಶ್ಚಿತತೆಗಳು ಇದರಿಂದಾಗಿ ದೂರವಾಗಿವೆ.

ಈ ಬಾರಿಯ ವೇಳಾಪಟ್ಟಿಯ ಪ್ರಕಾರ ಈ ಕ್ರೀಡಾಂಗಣದಲ್ಲಿ ಇದೇ ತಿಂಗಳ 28ರಂದು ಐಪಿಎಲ್‌ನ 19ನೇ ಆವೃತ್ತಿಯ ಉದ್ಘಾಟನಾ ಪಂದ್ಯ ನಡೆಯಲಿದ್ದು, ಹಾಲಿ ಚಾಂಪಿಯನ್ ಆರ್‌ಸಿಬಿ, ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ.

‘ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದೇ 13ರಂದು ಅಣಕು ಅವಲೋಕನ ನಡೆಸಿದ ತಜ್ಞರ ಸಮಿತಿಯು ಇಲ್ಲಿ ನಡೆದಿರುವ ನವೀಕರಣ ಕಾಮಗಾರಿ ಮತ್ತು ಪಂದ್ಯಪೂರ್ವ ಸಿದ್ಧತೆಗಳ ಬಗ್ಗೆ ಸಂಪೂರ್ಣ ತೃಪ್ತಿ ವ್ಯಕ್ತಪಡಿಸಿದೆ’ ಎಂದು ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ‘ಪ್ರಜಾವಾಣಿ’ಗೆ ತಿಳಿಸಿದರು.

ಪಂದ್ಯಗಳನ್ನು ನಡೆಸಲು ಅನುಮತಿ ದೊರಕಿದರೂ, ತಜ್ಞರ ಸಮಿತಿ ಮತ್ತು ಪೊಲೀಸ್ ಇಲಾಖೆಯು ಕಾರ್ಯಾಚರಣೆ ಮತ್ತು ಜನಸಂದಣಿ ನಿರ್ವಹಣೆಗೆ ಸಂಬಂಧಿಸಿ ಕೆಎಸ್‌ಸಿಎಗೆ ಕೆಲವು ಪ್ರಮಾಣಿತ ಕಾರ್ಯಾಚರಣೆ ವಿಧಾನಗಳನ್ನು (ಎಸ್‌ಒಪಿ) ಪಾಲಿಸಲು ಸೂಚಿಸಿದೆ.

ಮೊದಲ ಪಂದ್ಯಕ್ಕೆ ಮುನ್ನ ಸಂಸ್ಥೆಯು, ಮಾರ್ಚ್ 26ರ ಆಸುಪಾಸಿನಲ್ಲಿ 2–3 ಬಾರಿ ಅಣಕು ಕಾರ್ಯಾಚರಣೆ ನಡೆಸುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು.

‘ಆರ್‌ಸಿಬಿ ಪಂದ್ಯಗಳ ಟಿಕೆಟ್ ಹೊಂದಿರುವವರಿಗೆ ಉಚಿತ ಪ್ರಯಾಣ ವ್ಯವಸ್ಥೆ ಮಾಡಲಿರುವ ಮೆಟ್ರೊ ನಿಗಮವು, ಮುಂದಿನ ದಿನಗಳಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯ ಪಂದ್ಯಗಳ ಆತಿಥ್ಯದ ವೇಳೆಗೂ ಕೆಎಸ್‌ಸಿಎ ಜೊತೆ ಪಾಲುದಾರಿಕೆ ವಹಿಸಲಿದೆ’ ಎಂದು ಮೆನನ್ ವಿಶ್ವಾಸ ವ್ಯಕ್ತಪಡಿಸಿದರು.

ಅನ್‌ಬಾಕ್ಸ್ ಕಾರ್ಯಕ್ರಮ: ಆರ್‌ಸಿಬಿಯ ಅನ್‌ಬಾಕ್ಸ್ ಕಾರ್ಯಕ್ರಮವೂ ಇಲ್ಲಿ ನಡೆಯಲಿದೆ. ಮೊದಲ ಹಂತದ ವೇಳಾಪಟ್ಟಿಯಲ್ಲಿ ಆರ್‌ಸಿಬಿಯ ಎರಡು ಪಂದ್ಯಗಳು ಈ ಕ್ರೀಡಾಂಗಣದಲ್ಲಿ ನಡೆಯುತ್ತಿದೆ. ಏಪ್ರಿಲ್ 5ರಂದು ಇಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ತವರಿನ ಏಳು ಪಂದ್ಯಗಳ ಪೈಕಿ ಆರ್‌ಸಿಬಿ ತಂಡವು ಐದು ಪಂದ್ಯಗಳನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲಿದೆ. ಉಳಿದ ಎರಡು ಪಂದ್ಯಗಳನ್ನು ರಾಯಪುರದ ಶಹೀದ್ ವೀರ್ ನಾರಾಯಣ ಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಆಡಲು ನಿರ್ಧರಿಸಿದೆ.

ಆರ್‌ಸಿಬಿ ಆಟಗಾರರು ಮಂಗಳವಾರ ಇಲ್ಲಿ ತಂಡವನ್ನು ಸೇರಿಕೊಳ್ಳಲಿದ್ದು, ಬುಧವಾರ ತರಬೇತಿ ಶಿಬಿರ ಆರಂಭವಾಗುವ ನಿರೀಕ್ಷೆಯಿದೆ.



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಸೋಮವಾರ ಕಂಡಿದ್ದು ಹೀಗೆ... ಚಿತ್ರ: ಬಿ.ಕೆ.ಜನಾರ್ದನ

ಗೃಹ ಸಚಿವರೊಂದಿಗೆ ಭಾಗೀದಾರರ ಸಭೆ

ಗೃಹ ಸಚಿವ ಜಿ.ಪರಮೇಶ್ವರ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ವಿಧಾನಸೌದದಲ್ಲಿ ತಜ್ಞರ ಸಮಿತಿಯ ಜೊತೆಗೆ ಕೆಎಸ್‌ಸಿಎ, ಆರ್‌ಸಿಬಿ ಮತ್ತು ಕಾರ್ಯಕ್ರಮ ಆಯೋಜಕರಾದ ಡಿಎನ್‌ಎ ಪ್ರತಿನಿಧಿಗಳ ಸಭೆ ನಡೆಯಿತು. ಸಭೆಯ ನಂತರ ಸರ್ಕಾರದ ಅನುಮತಿ ದೊರಕಿದೆ ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಹೇಳಿಕೆಯಲ್ಲಿ ತಿಳಿಸಿದ್ದಾರೆ. ‘ಅನುಮತಿ ನೀಡುವಲ್ಲಿ ಸಚಿವ ಪರಮೇಶ್ವರ ಅವರ ನೇತೃತ್ವ, ಮಾರ್ಗದರ್ಶನ ಮತ್ತು ಬೆಂಬಲಕ್ಕೆ ಕೆಎಸ್‌ಸಿಎ ಕೃತಜ್ಞತೆ ಸಲ್ಲಿಸುತ್ತದೆ’ ಎಂದು ಅವರು ಹೇಳಿದ್ದಾರೆ. ತಜ್ಞರ ಸಮಿತಿ ಮುಖ್ಯಸ್ಥ ಮಹೇಶ್ವರ ರಾವ್, ಸದಸ್ಯ ಕಾರ್ಯದರ್ಶಿಯಾಗಿರುವ ಪೊಲೀಸ್ ಆಯುಕ್ತ ಸೀಮಾಂತಕುಮಾರ್ ಸಿಂಗ್ ಮತ್ತು ಸದಸ್ಯರಿಗೂ ಕೃತಜ್ಞತೆ ತಿಳಿಸಿದ್ದಾರೆ.

ಧೋನಿ ಮಾರ್ಗದರ್ಶನಕ್ಕೆ ಸಂಜು ಕಾತರ



ಎಂ.ಎಸ್. ಧೋನಿ



ಸಂಜು ಸ್ಯಾಮ್ಸನ್

ತಿರುವನಂತಪುರ (ಪಿಟಿಐ): ಮುಂಬರುವ ಐಪಿಎಲ್‌ನಲ್ಲಿ ಸಿಎಸ್‌ಕೆ ಪರ ಆಡುವ ವೇಳೆ ‘ಕ್ಯಾಪ್ಟನ್ ಕೂಲ್’ ಎಂ.ಎಸ್. ಧೋನಿ ಅವರಿಂದ ಅನುಭವಗಳನ್ನು ಪಡೆಯುವುದಾಗಿ ಟಿ20 ವಿಶ್ವಕಪ್‌ನಲ್ಲಿ ಟೂರ್ನಿಯ ಆಟಗಾರನಾದ ಸಂಜು ಸ್ಯಾಮ್ಸನ್ ಸೋಮವಾರ ಇಲ್ಲಿ ತಿಳಿಸಿದರು.

ಐಪಿಎಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಸಾಕಷ್ಟು ವರ್ಷ ಕಳೆದಿರುವ ಸಂಜು ಹಾಲಿ ಋತುವಿನಿಂದ ಸಿಎಸ್‌ಕೆ ಪೋಷಾಕು ಧರಿಸಲಿದ್ದಾರೆ. ರಾಯಲ್ಸ್ ಮತ್ತು ಸೂಪರ್ ಕಿಂಗ್ಸ್ ತಂಡಗಳು ಮಾರ್ಚ್ 30ರಂದು ಗುವಾಹಟಿಯಲ್ಲಿ ಮುಖಾಮುಖಿ ಆಗಲಿವೆ.

‘ನಾನು ಮಹೀ ಭಾಯಿ (ಧೋನಿ) ಜೊತೆ ದೂರವಾಣಿಯಲ್ಲಿ ಸಮಾಲೋಚನೆ ನಡೆಸಿದ್ದೇನೆ. ಆದರೆ ಅವರ ಜೊತೆ ತಂಡದ ಭಾಗವಾಗಿ ಆಡುವುದು ಅಪಾರ ಸಂತಸ ನೀಡುತ್ತದೆ. ಇದು ನನಗೆ ದೊರೆತ ಕಲಿಕೆಯ ಅವಕಾಶ ಎಂದೇ ಭಾವಿಸಿದ್ದೇನೆ’ ಎಂದು ಸ್ಯಾಮ್ಸನ್ ಸುದ್ದಿಗಾರರಿಗೆ ತಿಳಿಸಿದರು.

ಇಂಡಿಯನ್ ವೆಲ್ಸ್ ಟೆನಿಸ್: ಮೆಡ್ವೆಡೇವ್, ರಿಬಾಕಿನಾಗೆ ನಿರಾಸೆ

ಸಿನ್ನರ್, ಸಬಲೆಂಕಾ ಮುಡಿಗೆ ಕಿರೀಟ

ಇಂಡಿಯನ್ ವೆಲ್ಸ್ (ಅಮೆರಿಕ), (ಎಪಿ): ಇಟಲಿಯ ಯಾನಿಕ್ ಸಿನ್ನರ್ ಮತ್ತು ಬೆಲರೂಸ್‌ನ ಅರಿನಾ ಸಬಲೆಂಕಾ ಅವರು ಭಾನುವಾರ ಇಂಡಿಯನ್ ವೆಲ್ಸ್ ಎಟಿಪಿ ಮಾಸ್ಟರ್ಸ್ 1000 ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ವಿಶ್ವದ ಎರಡನೇ ಕ್ರಮಾಂಕದ ಸಿನ್ನರ್ ಅವರು ರೋಚಕ ಫೈನಲ್ ಹಣಾಹಣಿಯಲ್ಲಿ 7-6 (6), 7-6 (4) ರಿಂದ ಡೇನಿಯಲ್ ಮೆಡ್ವೆಡೇವ್ ಅವರನ್ನು ಮಣಿಸಿದರು. ಈ ಟೂರ್ನಿಯಲ್ಲಿ ಅವರು ಒಂದೂ ಸೆಟ್ ಕಳೆದುಕೊಳ್ಳದೆ ಪಾರಮ್ಯ ಮೆರೆದರು.

24 ವರ್ಷದ ಸಿನ್ನರ್ ಅವರು ಮೆಡ್ವೆಡೇವ್ ವಿರುದ್ಧದ ಕೊನೆಯ 10 ಮುಖಾಮುಖಿಯಲ್ಲಿ ಒಂಬತ್ತನೇ ಬಾರಿ ಜಯಗಳಿಸಿ, ಕ್ಯಾಲಿಫೋರ್ನಿಯಾ ಮರುಭೂಮಿಯಲ್ಲಿ ತನ್ನ ಮೊದಲ ಪ್ರಶಸ್ತಿಯನ್ನು ಗೆದ್ದರು. ಅಮೋಘ ಲಯದಲ್ಲಿದ್ದ ರಷ್ಯಾದ ಮೆಡ್ವೆಡೇವ್ ಅವರು ಸೆಮಿಫೈನಲ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲೋಸ್ ಅಲ್ಕರಾಜ್ (ಸ್ಪೇನ್) ಅವರಿಗೆ ಆಘಾತ ನೀಡಿದ್ದರು.

ನಾಲ್ಕು ಗ್ರ್ಯಾನ್‌ಸ್ಲಾಮ್ ಕಿರೀಟಗಳಿಗೆ ಒಡೆಯನಾಗಿರುವ ಸಿನ್ನರ್ 2026ರ ಋತುವಿನಲ್ಲಿ ಮೊದಲ ಪ್ರಶಸ್ತಿಗೆ ಮುತ್ತಿಕ್ಕಿದರು. ಎರಡನೇ ಸೆಟ್‌ನ ಟೈ ಬ್ರೇಕರ್‌ನಲ್ಲಿ 0-4 ಹಿನ್ನಡೆಯಿಂದ ಚೇತರಿಸಿಕೊಂಡು ಗೆಲುವಿನ ನಗೆ ಬೀರಿದರು. ಇದರೊಂದಿಗೆ ಎಟಿಪಿ ಸರಣಿಯಲ್ಲಿ ಮೆಡ್ವೆಡೇವ್ ಅವರ ಸತತ 9 ಪಂದ್ಯಗಳ ಗೆಲುವಿನ ಓಟಕ್ಕೆ ತಡೆಬಿತ್ತು. ಅವರು ಕಳೆದ ತಿಂಗಳು ದುಬೈ ಓಪನ್ ಪ್ರಶಸ್ತಿ ಗೆದ್ದಿದ್ದರು.



ಪ್ರಶಸ್ತಿಯೊಂದಿಗೆ ಯಾನಿಕ್ ಸಿನ್ನರ್ ಎಎಫ್‌ಪಿ ಚಿತ್ರ

ಸಿನ್ನರ್ ಅವರು ಎಟಿಪಿಯ ಆರೂ ಹಾರ್ಡ್‌ಕೋರ್ಟ್ ಮಾಸ್ಟರ್ಸ್ 1000 ಪ್ರಶಸ್ತಿ ಗೆದ್ದ ಮೂರನೇ ಆಟಗಾರ ಎಂಬ ಹಿರಿಮೆಗೆ ಪಾತ್ರರಾದರು. ಈ ಮೊದಲು ದಿಗ್ಗಜರಾದ ರೋಜರ್ ಫೆಡರರ್ ಮತ್ತು ನೊವಾಕ್ ಜೊಕೊವಿಕ್ ಈ ಸಾಧನೆ ಮಾಡಿದ್ದಾರೆ.

ಸಬಲೆಂಕಾಗೆ ಕಿರೀಟ: ಅಗ್ರ ಶ್ರೇಯಾಂಕದ ಸಬಲೆಂಕಾ ಆರಂಭಿಕ ಸೆಟ್‌ನ ಹಿನ್ನಡೆಯಿಂದ ಚೇತರಿಸಿಕೊಂಡು 3-6, 6-3, 7-6 (6) ರಿಂದ ಕಜಾಕಸ್ತಾನದ ಎಲೆನಾ ರಿಬಾಕಿನಾ ಅವರನ್ನು ಮಣಿಸಿದರು. 2023 ಮತ್ತು 2025 ರಲ್ಲಿ ರನ್ನರ್ ಅಪ್ ಆಗಿದ್ದ ಸಬಲೆಂಕಾ ಇಲ್ಲಿ ಮೊದಲ ಬಾರಿ ಪ್ರಶಸ್ತಿಗೆ ಮುತ್ತಿಕ್ಕಿದರು.

ಉಭಯ ಆಟಗಾರ್ತಿಯರ 16ನೇ ಬಾರಿ ಮುಖಾಮುಖಿ ಇದಾಗಿದ್ದು, ಸಬಲೆಂಕಾ ಈಗ 9-7 ಮುನ್ನಡೆಯನ್ನು ಸಾಧಿಸಿದ್ದಾರೆ. 2025ರ ಡಬ್ಲ್ಯುಟಿಎ ಫೈನಲ್ಸ್ ಚಾಂಪಿಯನ್‌ಷಿಪ್ ಮತ್ತು ಆಸ್ಟ್ರೇಲಿಯನ್ ಓಪನ್ ಟೂರ್ನಿಗಳ ಫೈನಲ್‌ನಲ್ಲಿ ರಿಬಾಕಿನಾ ವಿರುದ್ಧದ ಸೋಲಿಗೆ ಬೆಲರೂಸ್‌ನ ಆಟಗಾರ್ತಿ ಇಲ್ಲಿ ಮುಯ್ಯಿ ತೀರಿಸಿಕೊಂಡರು.

ಸಿಎಸ್‌ಕೆಗೆ ಫೋಸ್ಟರ್ ಫೀಲ್ಡಿಂಗ್ ಕೋಚ್



ಚೆನ್ನೈ (ಪಿಟಿಐ): ಇಂಗ್ಲೆಂಡ್‌ನ ಮಾಜಿ ವಿಕೆಟ್‌ಕೀಪರ್- ಬ್ಯಾಟರ್ ಜೇಮ್ಸ್ ಫೋಸ್ಟರ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡುವ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಫೀಲ್ಡಿಂಗ್ ಕೋಚ್ ಆಗಿ ಸೋಮವಾರ ನೇಮಕಗೊಂಡಿದ್ದಾರೆ.

ನ್ಯೂಜಿಲೆಂಡ್‌ನ ಸ್ಟೀಫನ್ ಫ್ಲೆಮಿಂಗ್ ನೇತೃತ್ವದ ಕೋಚಿಂಗ್ ಸಿಬ್ಬಂದಿ ತಂಡವನ್ನು ಫೋಸ್ಟರ್ ಸೇರಿಕೊಳ್ಳಲಿದ್ದಾರೆ. ಮೈಕೆಲ್ ಹಸ್ಸಿ ಬ್ಯಾಟಿಂಗ್ ಕೋಚ್ ಆಗಿ ಮತ್ತು ಎರಿಕ್ ಸಿಮನ್ಸ್ ಅವರು ಬೌಲಿಂಗ್ ಕೋಚ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

45 ವರ್ಷದ ಫೋಸ್ಟರ್ ಅವರು 2001ರಿಂದ 2009ರ ನಡುವೆ ಏಳು ಟೆಸ್ಟ್, 11 ಏಕದಿನ ಮತ್ತು ಐದು ಟಿ20 ಪಂದ್ಯಗಳನ್ನು ಇಂಗ್ಲೆಂಡ್ ತಂಡಕ್ಕೆ ಆಡಿದ್ದಾರೆ.